ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಬುಧವಾರ ೨೦ನೇ ಜೂನ್ ೧೯೮೦, ಜ್ಯೇಷ್ಠ ೩೦, ೧೯೦೨ ಶಕ

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೯-೦೦ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಎಸ್.ಎಂ. ಕೃಷ್ಣ) ಪೀಠವನ್ನು ಅಲಂಕರಿಸಿದರು]

ಅಧ್ಯಕ್ಷರು.—ಸದನದ ಒಟ್ಟಾರೆ ಅಭಿಪ್ರಾಯವನ್ನು ನಿನ್ನೆ ತೆಗೆದುಕೊಂಡು ಇವತ್ತು ಸದನ ಬೆಳಿಗ್ಗೆ ೯ ಗಂಟೆಗೆ ಸೇರುವುದೆಂದು ನಿಶ್ಚಯಿಸಲಾಗಿದೆ. ನಾನು ೯ ಗಂಟೆಗೆ ಬಂದೆ ಸುಮಾರು ೧೫ ನಿಮಿಷ ಸದನದ ಗಂಟೆ ಹೊಡೆಯಬೇಕಾಗಿ ಬಂತು. ವಿಧಾನಸಭಾ ಭವನದ ಹತ್ತಿರ ಗಂಟೆ ಹೊಡೆಯು ವುದಲ್ಲದೆ ಎಲ್. ಎಚ್.ನ ಹತ್ತಿರ ಕೂಡ ಒಂದು ಗಂಟೆಯನ್ನು ಹಾಕಿಸಿ ಎಂದು ಒಬ್ಬರು ನನಗೆ ಸಜೆಷನ್ ಕೊಟ್ಟರು. ಮಾನ್ಯ ಸದಸ್ಯರು ಚರ್ಚೆಯಲ್ಲಿ ಭಾಗವಹಿಸಬೇಕೆಂಬ ಕಾತುರತೆ ಚರ್ಚೆ ಸಮಯದಲ್ಲಿ ಕಾಣುತ್ತದೆ ಆದರೆ ಸದನ ಪ್ರಾರಂಭವಾಗುವಾಗ ಸದನ ಮುಗಿಯುವಾಗ ಯಾವ ತರಹ ಸದನದ ನಡವಳಿಕೆಗಳ ಬಗ್ಗೆ ಆಸಕ್ತಿ ವಹಿಸತಕ್ಕಂಥಾದ್ದು ಮತ್ತು ನಮಗೆ ನಾವೇ ಅದನ್ನು ದಕ್ಕಿಸಿಕೊಳ್ಳ ಬೇಕಾಗಿರತಕ್ಕಂತಹ ಜವಾಬ್ದಾರಿ ಇದೆ. ಇದನ್ನು ನಮ್ರತೆಯಿಂದ ಸೂಚನೆ ಮಾಡಲು ಇಚ್ಛೆಪಡುತ್ತೇನೆ

ವಿತ್ತೀಯ ಕಾರ್ಯಕಲಾಪಗಳು

೧೯೮೦-೮೧ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ ಸಾಮಾನ್ಯ ಚರ್ಚೆ

(ಶಿಕ್ಷಣ ಯುವಜನ ಸೇವಾ ಮತ್ತು ಕನ್ನಡ ಸಂಸ್ಕೃತಿ ಇಲಾಖೆ)

ಶ್ರೀ ಪಿ. ಎಸ್. ರಾಣೆ.—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಶಿಕ್ಷಣ ಸಚಿವರು ಮಂಡಿಸಿರುವಂತಹ ಶಿಕ್ಷಣ ಇಲಾಖೆಯ ಮತ್ತು ಯುವಜನ ಸೇವಾ ಇಲಾಖೆಯ ಹಾಗೂ ಕನ್ನಡ ಸಂಸ್ಕೃತಿ ಇಲಾಖೆಯ ಬೇಡಿಕೆಗಳನ್ನು ಬೆಂಬಲಿಸುತ್ತಾ ಒಂದೆರಡು ವಿಚಾರಗಳನ್ನು ಹೇಳುತ್ತೇನೆ. ಪ್ರಪಂಚದಲ್ಲಿಯೇ ಅತಿ ದೊಡ್ಡದಾದಂತಹ ಪ್ರಜಾಪ್ರಭುತ್ವದ ರಾಷ್ಟ್ರವಾದ ಭಾರತದಲ್ಲಿ ಸಾಕ್ಷರತೆಯ ಪ್ರಮಾಣ ಶೇಕಡ ೩೦ರಷ್ಟು ಮಾತ್ರ. ಅಂದರೆ ಸುಮಾರು ೪೦ ರಿಂದ ೪೫ ಕೋಟಿ ಜನರು ಇವತ್ತು ನಿರಕ್ಷರಸ್ಥರಾಗಿದ್ದಾರೆ. ಈ ಸಂಖ್ಯೆ ಅಮೇರಿಕ ಮತ್ತು ಸೋವಿಯತ್ ರಾಷ್ಟ್ರದ ಜನಸಂಖ್ಯೆಗಿಂತಲೂ ಹೆಚ್ಚಾಗಿದೆ ಎನ್ನುವುದನ್ನು ತಿಳಿದುಕೊಂಡರೆ ನಾವು ನಿಜವಾಗಿಯೂ ೪ ದಶಕಗಳ ಹಿಂದಿನ ಸ್ಥಿತಿಗೆ ತಲುಪುತ್ತಿದ್ದೇವೆಂದು ಅನ್ನಿಸುತ್ತದೆ. ರಾಷ್ಟ್ರದಲ್ಲಿ ಹೆಚ್ಚು ಅನಕ್ಷರಸ್ಥರು ಇದ್ದರೆ ಪ್ರಜಾಪ್ರಭುತ್ವದ ಆಚರಣೆ ಅಸಾಧ್ಯವಾಗುತ್ತದೆ ಅಷ್ಟೇ ಅಲ್ಲ ಅದು ಅರ್ಥ ಹೀನವಾಗುತ್ತದೆ. ಇವತ್ತು ನಿರಕ್ಷರಿಗಳ ಸಂಖ್ಯಾಬಲದಿಂದ ಈ ಭಾರತ ದೇಶವನ್ನು ನಿರಕ್ಷರಿಗಳ ಒಂದು ದೊಡ್ಡ ದೇಶ ಎಂದು ಹೇಳಬೇಕಾಗಿದೆ. ಈ ನಿರಕ್ಷರಿಗಳನ್ನು ಬಿಟ್ಟು ಸಾಕ್ಷರಿಗಳ ದೊಡ್ಡ ದೇಶವೆಂದು ಹೇಳುವುದು ಹೆಚ್ಚುಗಾರಿಕೆ ಏನೂ ಅಲ್ಲ. ಇದೊಂದು ದುರ್ದೈವದ ಸಂಗತಿ ಮತ್ತು ಒಂದು ದುರಂತ ಸಾಕ್ಷರತೆಯಲ್ಲಿ ನಮ್ಮ ಭಾರತ ಎಲ್ಲಾ ರೀತಿಯಲ್ಲೂ ಹಿಂದುಳಿದಿದೆ ಎಂದು ಹೇಳ ಬೇಕಾಗಿದೆ. ಈ ನಿರಕ್ಷರತೆಯನ್ನು ಹೋಗಲಾಡಿಸಲು, ಸ್ವಾಭಿಮಾನ ಮೂಡಿಸುವಂಥ ಯಾವ ಕಾರ್ಯಕ್ರಮಗಳನ್ನು ನಾವು ಹಾಕಿಕೊಳ್ಳಬೇಕೆಂದು ಬಹಳ ಗಂಭೀರವಾಗಿ ಯೋಚನೆ ಮಾಡಬೇಕಾಗಿದೆ. ನಮ್ಮ ಹಿರಿಯರು ಗಳಿಸಿಕೊಟ್ಟಂಥ ಸ್ವತಂತ್ರ ಭಾರತದಲ್ಲಿ ಸುಮಾರು ೩೦-೪೫ ಕೋಟಿ ನಿರಕ್ಷರಿಗಳಿದ್ದಾರೆ ಏಕೆಂದರೆ ನಾವು ಈ ಮುಗ್ಧ ಪ್ರಜೆಗಳ ಮೌಢ್ಯತೆಯನ್ನು ಪೋಷಿಸಿಕೊಂಡು ಬರುತ್ತಿದ್ದೇವೆ. ಈ ಪ್ರಜೆಗಳನ್ನು ನಮ್ಮ ರಾಷ್ಟ್ರದಲ್ಲಿರತಕ್ಕ ವಿಚ್ಛಿದ್ರಕಾರಕ ಮತ್ತು ವಿನಾಶಕಾರಕ ದುಷ್ಟ ಶಕ್ತಿಗಳು

ಸಂಪೂರ್ಣವಾಗಿ ಶೋಷಣೆ ಮಾಡುವುದಕ್ಕೆ ಅವಕಾಶವನ್ನು ಇಂದು ಕೊಟ್ಟಿದ್ದೇವೆ. ನಾನು ಈ ಮಾತನ್ನು ಹೇಳಿದರೆ ಇದು ಅತಿಶಯೋಕ್ತಿಯಾಗಲಾರದು. ಇವತ್ತು ಈ ನಿರಕ್ಷರಿಗಳು ನಮ್ಮ ದೇಶದಲ್ಲಿ ಈ ಸ್ವತಂತ್ರ ಭಾರತದಲ್ಲಿ ಪರಾವಲಂಬಿಗಳಾಗಿದ್ದಾರೆ. ಇವರು ಪ್ರತಿದಿನವೂ ಭಯದ ಒಂದು ನೆರಳಿನಲ್ಲಿ ಬದುಕುತ್ತಿದ್ದಾರೆ. ಅಷ್ಟೇ ಅಲ್ಲ ಈ ಮುಗ್ಧ ಜನರಿಗೆ ಜೀವನ ಮಾಡಲು ಮುಕ್ತ ಅವಕಾಶವನ್ನು ಕಲ್ಪಿಸುವುದಕ್ಕೆ ನಮಗೆ ಇವತ್ತಿನವರೆಗೂ ಸಾಧ್ಯವಾಗಿಲ್ಲ ಎಂಬುದನ್ನು ನಾವು ನೀವೆಲ್ಲರೂ ಒಪ್ಪಿಕೊಳ್ಳಬೇಕಾಗಿದೆ. ಇಂಥ ಪರಿಸ್ಥಿತಿಯಲ್ಲಿ ಸಾಕ್ಷರತೆಯ ಪ್ರಮಾಣವನ್ನು ಹೆಚ್ಚು ಮಾಡಲಿಕ್ಕೆ ಸಾಧ್ಯವೇ? ಅಥವಾ ಈ ವಿಚ್ಛಿದ್ರಕಾರಕ ಶಕ್ತಿಗಳನ್ನು, ವಿನಾಶಕಾರಕ ಶಕ್ತಿಗಳನ್ನು ದೂರ ಮಾಡುವುದಕ್ಕೆ ಸಾಧ್ಯವೆ? ಎಂದರೆ ಇವೆಲ್ಲಕ್ಕೂ ಉತ್ತರ ಸಿಕ್ಕತಕ್ಕದ್ದು ಜನತೆಯಲ್ಲಿ ಸಾಕ್ಷರತೆ ಹೆಚ್ಚಾಗಬೇಕೆನ್ನುವುದು. ಸಾಕ್ಷರತೆ ಹೆಚ್ಚಾದರೆ ಮಾತ್ರ ಇವರಿಗೆ ಮುಕ್ತಿ ಸಿಕ್ಕತಕ್ಕದ್ದು. ಸಾಕ್ಷರತೆ ಹೆಚ್ಚಾಗಬೇಕಾದರೆ ಮೂಲಭೂತವಾಗಿ ಶಿಕ್ಷಣ. ಈ ವಯಸ್ಕರ ಶಿಕ್ಷಣದ ಬಗ್ಗೆ ಯಾರೂ ಕೂಡ ಲಕ್ಷ್ಯವನ್ನು ವಹಿಸುತ್ತಿಲ್ಲ. ಈ ಶಿಕ್ಷಣ ಇಲಾಖೆ ದುರ್ಲಕ್ಷ್ಯಕ್ಕೆ ಒಳಗಾಗಿರತಕ್ಕ ಇಲಾಖೆ ಎಂದು ನನಗನಿಸುತ್ತದೆ. ನಾವು ಹೆಚ್ಚಿಗೆ ಕಾಳಜಿಯನ್ನು ವಹಿಸಬೇಕಾಗಿಲ್ಲ ಎನ್ನತಕ್ಕ ಉದಾಸೀನ ಭಾವನೆ ಈ ಜನಸಮುದಾಯದಲ್ಲಿ, ಸರ್ಕಾರದ ಆಡಳಿತವನ್ನು ನಡೆಸುವವರಲ್ಲಿ, ಈ ದೇಶದಲ್ಲಿರುವಂಥ ಸಾಕ್ಷರತಾ ಜನರ ಮನಸ್ಸಿನಲ್ಲಿ ಮೂಡಿದೆ. ನಾವು ಇವತ್ತು ಈ ನಿರಕ್ಷರರ ಬಗ್ಗೆ ಇರತಕ್ಕ ನಿರ್ಲಕ್ಷ್ಯತನವನ್ನು ನಿರ್ಲಕ್ಷ್ಯ ಮನೋಭಾವನೆಯನ್ನು ಬಿಟ್ಟು ಇವರ ಸಾಕ್ಷರತೆಯ ಬಗ್ಗೆ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕಾಗಿದೆ. ನಮ್ಮ ಬೇಜವಾಬ್ದಾರಿತನವನ್ನು ಬಿಟ್ಟು ಕೆಲಸ ಮಾಡಬೇಕಾಗಿದೆ. ಅಂತರರಾಷ್ಟ್ರೀಯ ಸಾಕ್ಷರತಾ ಆಚರಣೆಯ ಸಂದರ್ಭದಲ್ಲಿ ನಿರಕ್ಷರರನ್ನು ಸಾಕ್ಷರರನ್ನಾಗಿ ಮಾಡತಕ್ಕ ಆಂಧೋಳನ ಏನಿದೆ ಅದು ಜನರ ಆಂಧೋಳನವಾಗಬೇಕು. ಈ ನಿರಕ್ಷರರಲ್ಲೂ ಕೂಡ ಅನೇಕರೀತಿಯ ಭಾವನೆಗಳಿವೆ. ಆ ಭಾವನೆಗಳಿಗೆ ನಾವು ಸ್ಪಂಧಿಸಿ ಸಾಕ್ಷರತಾ ಆಂಧೋಳನವನ್ನು ಮಾಡಬೇಕಾಗಿದೆ. ಈ ನಿರಕ್ಷಕರಿಗಳು ಏನು ತಮ್ಮ ಬದುಕಿಗಾಗಿ ದೊಡ್ಡ ಸಂಘರ್ಷವನ್ನು ಮಾಡುತ್ತಿದ್ದಾರೆ, ಅವರಿಗೆ ಜೀವವನ್ನು ತುಂಬುವುದಕ್ಕಾಗಿ ನಾವು ಇಂದು ಅಕ್ಷರ ಜ್ಞಾನವನ್ನು ಅವರಲ್ಲಿ ತುಂಬಬೇಕಾಗಿದೆ. ಈ ದಿಸೆಯಲ್ಲಿ ರಾಷ್ಟ್ರದಲ್ಲಿ, ರಾಜ್ಯದಲ್ಲಿ ಇರತಕ್ಕ ಪ್ರತಿಯೊಬ್ಬ ಜವಾಬ್ದಾರಿಯುತ ನಾಗರೀಕನೂ ತನ್ನ ಕೈಲಾದಷ್ಟು ಅಳಿಲು ಸೇವೆಯನ್ನು ಮಾಡಿದರೆ, ತನ್ನ ಕೈಲಾದಷ್ಟು ಉಪಕಾರವನ್ನು ಮಾಡಿದರೆ, ನೆರೆಹೊರೆಯಲ್ಲಿರತಕ್ಕ ನಿರಕ್ಷರಿಗಳನ್ನು ಸಾಕ್ಷರರನ್ನಾಗಿ ಮಾಡಲಿಕ್ಕೆ ಪ್ರಯತ್ನ ಮಾಡಿದರೆ ಅದಕ್ಕಿಂತಲೂ ದೊಡ್ಡ ಕೊಡುಗೆ ಬೇರೊಂದಿಲ್ಲ. ಇಂಥ ಕೊಡುಗೆಯನ್ನು ಒಂದು ಮಹಾನ್ ಕೊಡುಗೆ ಎಂದು ಹೇಳಿದರೆ ಅದು ಅತಿಶಯೋಕ್ತಿಯಾಗಲಾರದೆಂದು ನನ್ನ ಭಾವನೆ. ಈ ದಿಸೆಯಲ್ಲಿ ಈಗಾಗಲೇ ನಮ್ಮ ರಾಜ್ಯ ಸರ್ಕಾರ ಒಂದು ಉತ್ತಮ ಕಾರ್ಯಕ್ರಮವನ್ನು ಹಾಕಿಕೊಂಡಿದೆ ಎಂದು ನಾನು ತಿಳಿದಿದ್ದೇನೆ. ಜ್ಞಾನ–ವಿಜ್ಞಾನ ಸಮಿತಿ ಎಂದು ರಾಜ್ಯಮಟ್ಟದಲ್ಲಿ ಒಂದು ಸಮಿತಿ ನೇಮಕವಾಗಿದ್ದು ಅದಕ್ಕೆ ನಮ್ಮ ಈ ಸದನದ ಮಾನ್ಯ ಸಭಾಧ್ಯಕ್ಷರೇ ಅಧ್ಯಕ್ಷರಾಗಿದ್ದಾರೆ. ಇದೇರೀತಿ ನಮ್ಮ ರಾಷ್ಟ್ರಮಟ್ಟದಲ್ಲೂ ಕೂಡ ಒಂದು ಸಮಿತಿಯನ್ನು ನೇಮಕ ಮಾಡಲಾಗಿದೆ.

ಮಾನ್ಯ ಅಧ್ಯಕ್ಷರೆ, ನಮ್ಮ ಮಾನ್ಯ ಶಿಕ್ಷಣ ಮಂತ್ರಿಗಳು ಸಮಾಜವಾದದ ಹಿನ್ನೆಲೆಯಲ್ಲಿ ಬಂದಿರುವವರು. ಸಮಾಜ ಸುಧಾರಣೆಯನ್ನು ಯಾವರೀತಿ ಮಾಡಬಹುದೆಂಬುದನ್ನು ತಮ್ಮ ಅನುಭವದಿಂದಲೇ ಕಂಡ ಕೊಂಡಿರುವವರು. ಜನರ ಅಭಿವೃದ್ಧಿಗೋಸ್ಕರ ಘಣವನ್ನು ತೊಟ್ಟಿರುವವರು.

ಈ ಒಂದು ದಿಸೆಯಲ್ಲಿ ಅವರು ಸಾಕ್ಷರತಾ ಆಂಧೋಲನವನ್ನು ಅಥವಾ ಈ ಒಂದು ಯೋಜನೆಯನ್ನು ಅಂತರಾಷ್ಟ್ರೀಯ ಸಾಕ್ಷರತಾ ದಿವಸದಲ್ಲಿ ಹಮ್ಮಿಕೊಂಡಿದ್ದಾರೆ. ಬೇರೆ ಎಲ್ಲಾ ಯೋಜನೆಗಳಂತೆ ಇದು ಆಗಿದೆ ಜನತಾ ಆಂಧೋಳನವಾಗಿ ಸಂಪೂರ್ಣವಾಗಿ ಇದರ ಬಗ್ಗೆ ಪ್ರಯತ್ನ ಮಾಡುತ್ತಾರೆಂದು ನನಗೆ ವಿಶ್ವಾಸವಿದೆ. ಅವರ ಜೊತೆಗೆ ಸುದೈವದಿಂದ ಈ ಇಲಾಖೆಗೆ ದಕ್ಷ ಮತ್ತು ಉತ್ಸಾಹದಿಂದಿರುವ ಅಧಿಕಾರಿಗಳು ದೊರಕಿದ್ದಾರೆ. ಕಲ್ಲಿನ ಗಣಿಯ ಜೊತೆಯಲ್ಲಿ ಹೋರಾಟಮಾಡಿ ಅಲ್ಲಿಂದ ವರ್ಗಾವಣೆ ಮಾಡಿಕೊಂಡು ಬಂದಿರುವ ಈ ಅಧಿಕಾರಿಗಳು ಮುಗ್ಧ ಮನಸ್ಸಿನ ನಿರಕ್ಷರತೆಯವರೊಂದಿಗೆ ಹೋರಾಟ ಮಾಡಬೇಕಾಗಿದೆ. ಅದರಲ್ಲಿ ಇವರು ಯಶಸ್ವಿಯಾಗುತ್ತಾರೆಂಬ ವಿಶ್ವಾಸ ನನಗಿದೆ.

ಇನ್ನು ನಾನು ಪ್ರಾಥಮಿಕ ಶಿಕ್ಷಣದ ಬಗ್ಗೆ ಹೇಳಬೇಕಾದರೆ ಈ ಶಿಕ್ಷಣ ಎಲ್ಲಾ ಹಂತಗಳಲ್ಲಿಯೂ ಪ್ರಾಥಮಿಕ ಶಿಕ್ಷಣಕ್ಕೆ ಅತಿ ಹೆಚ್ಚಿನ ಒಂದು ಮಹತ್ವ ಬರುತ್ತದೆ. ಈ ಶಿಕ್ಷಣಕ್ಕೆ ಭದ್ರವಾದಂಥ ಒಂದು ಭುನಾದಿಯನ್ನು ಹಾಕುವಂಥ ಕೆಲಸ ಪ್ರಾಥಮಿಕ ಶಿಕ್ಷಣದ ಹಂತದಲ್ಲಿ ನಾವು ಮಾಡಬೇಕಾಗಿದೆ. ಪ್ರಜಾಪ್ರಭುತ್ವದ ವಿಶಾಲವಾದಂಥ ಒಂದು ರಾಷ್ಟ್ರದಲ್ಲಿ ಕಡ್ಡಾಯ ಶಿಕ್ಷಣವನ್ನು ಕಲಿಸಬೇಕಾಗಿದೆಯೆಂದು ಎಲ್ಲಾ ಯೋಜನೆಗಳನ್ನು ಹಾಕಿಕೊಂಡಿದ್ದಾರೆ. ಆದರೆ ಇವತ್ತು ಕಡ್ಡಾಯದ ಯೋಜನೆ ಇದು ಒಂದು ಬಲಾತ್ಕಾರದ ಯೋಜನೆಯಾಗಿ ಮಾರ್ಪಾಟಾಗಿದೆ ಎಂದು ಹೇಳಿದರೆ ಅದರಲ್ಲೇನು ತಪ್ಪಿಲ್ಲ ಮತ್ತು ಅದನ್ನು ಎಲ್ಲರೂ ಒಪ್ಪುತ್ತಾರೆ. ಇವತ್ತು ಪ್ರಾಥಮಿಕ ಶಾಲೆಗೆ ಹೋಗುತ್ತಿರುವಂಥ ಮಕ್ಕಳ

ಸ್ಥಿತಿಯನ್ನು ನೋಡಿದರೆ, ಅವರು ಬೆನ್ನ ಮೇಲೆ ಹೊತ್ತುಕೊಂಡು ಹೋಗುವಂಥ ಶಾಲಾ ಬ್ಯಾಗನ್ನು ನೋಡಿದರೆ ಅದು ದೊಡ್ಡ ಹೊರೆಯನ್ನೇ ಹೊತ್ತುಕೊಂಡು ಹೋಗುತ್ತಿರುವಂತಿದೆ. ಪ್ರಾಥಮಿಕ ಶಾಲೆಗೆ ಹೋಗುವಂಥ ಮಕ್ಕಳು ಸುಮಾರಾಗಿ ಪುಸ್ತಕಗಳು, ಲಂಚ್ ಬಾಕ್ಸ್, ಕಂಪಾಸ್ ಬಾಕ್ಸ್ ವಾಟರ್ ಕ್ಯಾನ್ ಇವೆಲ್ಲವನ್ನು ಹೊರುವ ಭಾರ ಸುಮಾರು ೪ ರಿಂದ ೬ ಕಿಲೋವರೆಗೆ ಇರುತ್ತದೆ. ೬ ರಿಂದ ೧೦ ವರ್ಷದ ಬಾಲಕ ಈ ರೀತಿ ವರ್ಷವರ್ಷ ಹೆಚ್ಚುತ್ತಿರುವ ಭಾರವನ್ನು ಹೊತ್ತು, ಕೊಂಡು ಹೋದರೆ ಅವನ ಮನಸ್ಸಿನ ಸ್ಥಿತಿ ಏನಾಗುತ್ತದೆಂಬುದನ್ನು ತಾವು ವಿಚಾರ ಮಾಡಬೇಕಾಗುತ್ತದೆ. ಇವತ್ತು ಏನಾಗಿದೆ ಎಂದರೆ ಒಂದು ಯಾಂತ್ರಿಕ ರೀತಿಯಲ್ಲಿ ನಾವು ಶಿಕ್ಷಣವನ್ನು ಕೊಡುತ್ತಿದ್ದೇವೆ. ಸರ್ಕಾರದವರು ಒಂದು ರೀತಿಯಿಂದ ಒಳಸಂಚು ನೀಡಿ ಮಕ್ಕಳನ್ನು ದಮನ ಮಾಡುವಂಥ ಪದ್ಧತಿಯನ್ನು ನಮ್ಮಿಂದ ನಾವೇ ಮಾಡುತ್ತಿದ್ದೇವೆಂದು ಹೇಳಬೇಕಾಗುತ್ತದೆ. ಏತಕ್ಕೆಂದರೆ ಇವತ್ತು ಮಕ್ಕಳು ನಿಜಕ್ಕೂ ಶಿಕ್ಷಣದ ಒಂದು ವ್ಯಾಪ್ತಿಯಲ್ಲಿ ಬರುತ್ತಾರೆ. ಮಕ್ಕಳ ಮನಸ್ಸು ಸುಪ್ತವಾಗಿರುವಾಗ ಅವರ ಪ್ರತಿಭೆ ಬೆಳೆಯಬೇಕೆಂದು ಹೇಳುವಾಗ ಅರಳ ಬೇಕಾದಂಥ ಮಕ್ಕಳ ಮನಸ್ಸು ಮುದುಡುವಂತೆ ಪ್ರಾಥಮಿಕ ಶಾಲಾ ಹಂತದಲ್ಲಿಯೇ ಮಾಡುತ್ತಿದ್ದೇವೆ. ಪ್ರತಿಯೊಬ್ಬ ಬಾಲಕನೂ ಸಹ ತಾನು ತನ್ನ ಮಟ್ಟಕ್ಕೆ ಎಷ್ಟು ಪುಸ್ತಕಗಳನ್ನು ಓದುತ್ತಾನೆ, ಎಷ್ಟು ನೋಟ್ ಬುಕ್‌ಗಳನ್ನು ಬರೆಯುತ್ತಾನೆ, ಯಾವರೀತಿ ಹೋಮ್ ವರ್ಕ್ ಮಾಡುತ್ತಿದ್ದಾನೆ ಎನ್ನುವುದನ್ನು ವಿಚಾರ ಮಾಡಬೇಕೇ ಹೊರತಾಗಿ ಮಕ್ಕಳ ಮುಗ್ಧ ಮನಸ್ಸಿನಿಂದ ಸ್ವಚ್ಛಂದವಾಗಿ ವಿಹರಿಸುವಂಥ ವಾತಾವರಣದಲ್ಲಿ ಚಲಿಸುವಂತೆ ಪ್ರಾಮಾಣಿಕವಾದ ಪ್ರಯತ್ನ ಮಾಡತಕ್ಕಂಥ ಕೆಲಸ ಇವತ್ತು ಆಗಬೇಕಾಗಿದೆ.

ಇವತ್ತು ಶಾಲೆಗೆ ಹೋಗುತ್ತಿರುವಂಥ ಬಾಲ ಕಾರ್ಮಿಕರನ್ನು ನೋಡಿದರೆ ಶಿಕ್ಷಣದ ಉದ್ದೇಶ ಸಫಲವಾಗುವುದಿಲ್ಲವೆಂಬುದು ಪ್ರಾಮಾಣಿಕವಾದ ನಂಬಿಕೆಯಾಗಿದೆ. ಇವತ್ತು ನಮ್ಮ ಮಕ್ಕಳನ್ನು ಬಲತ್ಕಾರವಾಗಿ ಶಿಕ್ಷಣಕ್ಕೆ ಹೂಡುವುದನ್ನು ದೂರಮಾಡಬೇಕು. ಶಿಕ್ಷಣದ ಪದ್ಧತಿಯನ್ನು ಸಂಖ್ಯಾ ಬಾಹುಳ್ಯದ ಮೇಲೆ ನೋಡುತ್ತಿದ್ದೇವೆ. ಶಿಕ್ಷಣದ ಸುಧಾರಣೆಯನ್ನು ಯಾವುದೇ ಸರ್ಕಾರ ಬಂದು ನಡೆಸಿದರೂ ಸಹ ಎಷ್ಟೋ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆಂದು ಹೇಳುತ್ತಾರೆ. ಹೊಸ ಶಾಲಾ ಕಟ್ಟಡಗಳನ್ನು ಕಟ್ಟಿಸಿ ಶಿಕ್ಷಣಕ್ಕೆ ಸಹಾಯ ಮಾಡಿದ್ದೇವೆಂದು ಹೇಳುವುದು ಕೇವಲ ಸಂಖ್ಯಾಬಾಹುಳ್ಯದಮೇಲೆ ಗಮನ ಕೊಟ್ಟಂತಾಗುತ್ತದೆ. ಇದರಲ್ಲಿ ಯಾವ ರೀತಿಯ ಗುಣಮಟ್ಟವನ್ನು ಕಾಪಾಡುವುದರ ಬಗ್ಗೆ ವಿಚಾರ ಮಾಡಿದಂತಿಲ್ಲ. ಆದ್ದರಿಂದ ಈ ದೇಶ ಈ ರಾಷ್ಟ್ರವನ್ನು ಒಂದು ಬಲಾಢ್ಯ ರಾಷ್ಟ್ರವನ್ನಾಗಿ ನಿರ್ಮಾಣ ಮಾಡಲು ಅಂಥ ಒಂದು ಜನತೆಯನ್ನು ನಿರ್ಮಾಣ ಮಾಡ ಬೇಕಾದಂಥ ಶಿಕ್ಷಣದ ವ್ಯವಸ್ಥೆ ಏನಾಗಿದೆ ಎಂದರೆ ಆಶಾಢಭೂತಿ ಯುವಕರನ್ನು ನಿರ್ಮಾಣ ಮಾಡು ವಂಥದ್ದಾಗಿದೆ ಎಂದು ಹೇಳಬೇಕಾಗಿದೆ.

೯–೩೦ ಎ.ಎಂ.

ಏಕೆಂದರೆ ಇವತ್ತು ಈ ಮಗುವಿಗೆ ಏನು ನಾವು ಬಲತ್ಕಾರದಿಂದ ಶಿಕ್ಷಣ ಕೊಡಿಸುತ್ತಿದ್ದೇವೆ ಇದರಿಂದ ಮಗು ಕನಸು ಕಾಣುವುದಕ್ಕೆ ಅವಕಾಶ ಕೊಡುವುದಿಲ್ಲ. ಮಗು ಮುಕ್ತವಾಗಿ ಸ್ವಚ್ಛಂದವಾಗಿ ವಿಹರಿಸು ವುದಕ್ಕೆ ಅವಕಾಶ ಕೊಡುವುದಿಲ್ಲ, ತನ್ನ ಸುತ್ತಮುತ್ತ ಏನು ಇದೆ ಎಂದು ಸಂಶೋಧನೆ ಮಾಡು ವುದಕ್ಕೆ ಅವಕಾಶ ಕೊಡುವುದಿಲ್ಲ. ಇವತ್ತು ಎಲ್ಲರೂ ಆಸಕ್ತರಾಗಿರುವುದು ಏನೆಂದರೆ ಶಾಲೆಗಳಲ್ಲಿ ಪೋರ್ಷನ್ ಪೂರ್ತಿ ಮಾಡಿದರೆ ಹೇಗೆ, ಸಿಲಬಸ್ ಪೂರ್ತಿ ಮಾಡಿದರೆ ಹೇಗೆ ಎಂದು, ಪೂರ್ತಿ ಮಾಡ ದಿದ್ದರೆ ಪಾಲಕರು ದೂರುತ್ತಾರೆ. ಅದೇ ಪಾಲಕರು ತಮ್ಮ ಮಗು ತನ್ನ ಸುತ್ತಮುತ್ತಲಿನ ಪರಿಸರ ವನ್ನು ತಿಳಿದುಕೊಂಡಿದೆಯೆ ಪ್ರಶ್ನೆಗಳನ್ನು ಕೇಳುತ್ತದೆಯೆ, ಸ್ವಚ್ಛಂದವಾಗಿ ತನ್ನ ಸುತ್ತಮುತ್ತಲಿನ ಪರಿಸರದ ಬಗ್ಗೆ ಆಸಕ್ತಿ ತೋರಿಸುತ್ತದೆಯೇ ಎಂದು ಹೇಳುವಂತಹ ದೂರನ್ನು ಕೊಡುವುದಿಲ್ಲ. ಆದುದರಿಂದ ಶಿಕ್ಷಣ ಪದ್ಧತಿ ಯಾಂತ್ರಿಕವಾದ ಶಿಕ್ಷಣ ಪದ್ಧತಿಯಾಗಿದೆ ಎಂದರೆ ತಪ್ಪಾಗುವುದಿಲ್ಲ. ಇವತ್ತು ಏನಾಗಿದೆ ಎಂದರೆ ಲಾರ್ಡ್ ಮ್ಯಾಕಲೆಯವರ ಕಾರಕೂನರನ್ನು ಸೃಷ್ಟಿಸುವಂತಹ ಶಿಕ್ಷಣ ಪದ್ಧತಿ ಏನಿದೆ ಅದನ್ನೇ ಅಲ್ಪಸ್ವಲ್ಪ ಬದಲಾವಣೆ ಮಾಡಿ ತೇಪೆ ಹಚ್ಚಿಕೊಂಡು ಮುಂದುವರಿಸಿಕೊಂಡು ಹೋಗುತ್ತಿದ್ದೇವೆ. ಇದು ಈ ನಾಡಿನ ದೌರ್ಭಾಗ್ಯವೆಂದು ಹೇಳಬೇಕಾಗಿದೆ. ಪಾಲಕರಾಗಿರಲಿ ಶಿಕ್ಷಕರಾಗಿರಲಿ, ಸಮಾಜವಾಗಿರಲಿ ಮಗು ಪರೀಕ್ಷೆಯಲ್ಲಿ ಎಷ್ಟು ಅಂಕಗಳನ್ನು ಗಳಿಸಿದೆ ಎಂಬ ಕಡೆಗೆ ಗಮನ ಕೊಡುತ್ತಿದ್ದಾರೆ. ಬೆಳಗಿನಿಂದ ಸಂಜೆಯವರೆಗೆ, ಬೆಳಿಗ್ಗೆ ಮಗು ಕಣ್ಣು ತೆರೆಯುವ ಮೊದಲೇ ಎಬ್ಬಿಸಿ ಬಲಾತ್ಕಾರದಿಂದ ಶಾಲೆಗೆ ಕಳುಹಿಸಿ ಸಂಜೆ ಬಂದನಂತರ ಟ್ಯೂಷನ್, ಹೋಂವರ್ಕ್ ಎಂದು ಬಲಾತ್ಕಾರದಿಂದ ಹೊರೆ ಹೇರುವ ವಾತಾವರಣ ಇದೆ. ಆ ವಾತಾವರಣ ಬದಲಾವಣೆಯಾಗಬೇಕಾಗಿದೆ. ಕೇವಲ ಶಿಕ್ಷಣಕ್ಕೆ ತೇಪೆ ಹಚ್ಚುವ ಕೆಲಸ ಮಾಡಿದರೆ ಅದರಿಂದ ಯಾವುದೇ ಸಾರ್ಥಕತೆ ಆಗುವುದಿಲ್ಲವೆಂದು

ನನ್ನ ಬಲವಾದ ನಂಬಿಕೆ. ಮಕ್ಕಳನ್ನು ಪುಸ್ತಕಗಳ ಹುಳುಗಳನ್ನಾಗಿ ಮಾಡಿ, ಮಕ್ಕಳ ಅಮೂಲ್ಯವಾದ ಕಾಲ ಏನಿದೆ ಅದನ್ನು ನಿಷ್ಕ್ರಿಯವಾಗಿ ಕಳೆಯುವುದಕ್ಕೆ ಅವಕಾಶ ಕೊಡುತ್ತೇವೆ. ಮಕ್ಕಳಲ್ಲಿ ಸೃಜನಶೀಲತೆ ಉಂಟಾಗುವಂತಹ ವಾತಾವರಣವನ್ನು ಕಲ್ಪಿಸುತ್ತಿಲ್ಲ. ಅದಕ್ಕೆ ಮಹಾತ್ಮಾ ಗಾಂಧಿಯವರು ಹೇಳಿದಂತೆ ಏನು ಜೀವನ ಶಿಕ್ಷಣ ಪದ್ಧತಿ ಇದೆ ಅದನ್ನು ಅಳವಡಿಸುವುದಕ್ಕೆ ಕೆಲವು ಮಾರ್ಪಾಡುಗಳನ್ನು ಮಾಡಬೇಕಾಗಿದೆ. ಗಾಂಧೀಜಿಯವರ ಹೆಸರಿನಲ್ಲಿ ಎಲ್ಲಾ ಅಧಿಕಾರ ಅನುಭವಿಸುವ ಜನ ಶಿಕ್ಷಣದ ವಿಷಯದಲ್ಲಿ ಆಗಲೀ ಇನ್ನಾವುದೇ ವಿಷಯದಲ್ಲಿ ಆಗಲೀ ಗಾಂಧೀಜಿ ಬಗ್ಗೆ ತನ್ನ ಹೆಗ್ಗಳಿಕೆ ಎಂದು ತಿಳಿದುಕೊಂಡಿದ್ದಾರೆ. ಇವತ್ತು ಸಮಾಜದಲ್ಲಿರುವಂತಹ ಜವಾಬ್ದಾರಿಯುತ ಜನ ತಮ್ಮ ಜವಾಬ್ದಾರಿಯಿಂದ ನುಣುಚಿಕೊಳ್ಳುವ ಕೆಲಸ ಮಾಡುತ್ತಿದ್ದಾರೆ, ಶಿಕ್ಷಕರು ತಮ್ಮ ಕೆಲಸವನ್ನು ಸುಲಭ ಮಾಡಿಕೊಳ್ಳುವ ವ್ಯವಸ್ಥೆ ಮಾಡುತ್ತಿದ್ದಾರೆ. ಈ ಶಿಕ್ಷಣದ ವ್ಯವಸ್ಥೆಯಲ್ಲಿ ಶಿಕ್ಷಕ ನಿರ್ಣಾಯಕ ಪಾತ್ರವನ್ನು ವಹಿಸುತ್ತಿಲ್ಲ. ಮೇಲಿನಿಂದ ಬಂದಂತಹ ನಿರ್ಣಯಂಗಳನ್ನು ಅನುಷ್ಠಾನ ಮಾಡುವ ಜವಾಬ್ದಾರಿ ಶಿಕ್ಷಕರದ್ದಾಗಿದೆ ಪ್ರಾಥಮಿಕ ಶಿಕ್ಷಣದ ಹಂತದಲ್ಲಿ ಶಿಕ್ಷಣದ ಮಟ್ಟ ಕುಸಿದಿರುವುದಕ್ಕೆ ಇನ್ನೊಂದು ಕಾರಣ ಇದೆ. ನಾವು ಯಾವ ರೀತಿ ಕೆ.ಎಸ್.ಆರ್.ಟಿ.ಸಿ. ಬಸ್ಸಿನಲ್ಲಿ ಕೆಲಸ ಮಾಡುತ್ತೇವೆ ಅದೇ ರೀತಿ ಪ್ರಾಥಮಿಕ ಶಿಕ್ಷಕರು ಕಲಿಸುವುದನ್ನು ಬಿಟ್ಟು ಉಳಿದೆಲ್ಲ ಸರ್ಕಾರಿ ಕೆಲಸ ಮಾಡುತ್ತಾರೆ. ಸೆನ್ಸಸ್ ಬಂದರೆ ಕೋಳಿ, ಆಡು, ಮನುಷ್ಯರಿಂದ ಹಿಡಿದು ಎಲ್ಲಾ ರೀತಿಯ ಸೆನ್ಸಸ್ ಮಾಡುತ್ತಾರೆ. ಒಂದು ಲೆಕ್ಕಾಚಾರ ತೆಗೆದುಕೊಂಡರೆ ವರ್ಷದಲ್ಲಿ ೪–೫ ತಿಂಗಳು ಮಾತ್ರ ಶಿಕ್ಷಕರಾಗಿ ಕೆಲಸ ಮಾಡುವುದನ್ನು ಕಾಣುತ್ತೇವೆ. ಅವರ ಕಾಲವೆಲ್ಲ ಇತರೆ ಕೆಲಸಕ್ಕೆ ವ್ಯಯವಾಗುತ್ತಿದೆ. ಇದು ಆಗಬಾರದು ಅದಕ್ಕೆ ಬೇರೆ ವ್ಯವಸ್ಥೆ ಮಾಡುವ ಕೆಲಸ ಆಗಬೇಕು ಪ್ರಾಥಮಿಕ ಶಿಕ್ಷಕರು ಶಿಕ್ಷಣಕ್ಕೆ ತಮ್ಮ ಪೂರ್ಣ ಅವಧಿಯನ್ನು ಮೀಸಲಾಗಿಡುವ ವ್ಯವಸ್ಥೆ ಆಗಬೇಕು ಶಿಕ್ಷಣ ಮಂತ್ರಿಗಳು ಇತರ ಇಲಾಖೆಗಳೊಡನೆ ಚರ್ಚೆ ಮಾಡಿ ಶಿಕ್ಷಕರು ಅಂದರೆ ಸೆನ್ಸಸ್ ಮಾಡುವ ಯಂತ್ರಗಳಲ್ಲವೆಂದು ಸ್ಪಷ್ಟವಾಗಿ ತಿಳಿಸಬೇಕು.

ಮಾಧ್ಯಮಿಕ ಶಾಲೆಯ ಬಗ್ಗೆ ಮಾತನಾಡುವಾಗ ತಾವು ಮುಂಗಡ ಪತ್ರದಲ್ಲಿ ಪ್ರೌಢ ಶಿಕ್ಷಣ ಮಟ್ಟದಲ್ಲಿ ವೃತ್ತಿಪರ ಶಿಕ್ಷಣ ನೀಡುವುದನ್ನು ಅಳವಡಿಸಿದ್ದೇವೆಂದು ಏನು ಹೇಳಿದ್ದೀರಿ ಇದು ಸಂತೋಷದ ವಿಷಯ. ಪ್ರೌಢ ಶಿಕ್ಷಣದಲ್ಲಿ ವೃತ್ತಿಪರ ಶಿಕ್ಷಣವನ್ನು ಸೇರಿಸಿರುವುದು ನಾವು ಮಾತ್ರಕ್ಕೆ ಎಂದೂ ಕೂಡಾ ಸಂಶಯ ಬರುತ್ತದೆ. ಈ ಯೋಜನೆ ಅಡಿಯಲ್ಲಿ ೧೦೦ ಶಾಲೆಗಳಿಗೆ ಪ್ರತಿ ಶಾಲೆಗೆ ೨ ಸಾವಿರ ವೆಚ್ಚ ಮಾಡಿ ಇದನ್ನು ಜಾರಿಗೆ ತರುವ ಒಂದು ಯೋಜನೆ. ಇದರಿಂದ ಎಷ್ಟು ವೃತ್ತಿಗಳನ್ನು ನಾವು ಮಕ್ಕಳಿಗೆ ಪ್ರೌಢಶಾಲೆಯಲ್ಲಿ ತೆಗೆಸುವುದಕ್ಕಾಗುತ್ತದೆಂದು ಯೋಚನೆ ಮಾಡಬೇಕು. ೧೦ ಪ್ಲಸ್ ೨ ಸಿಸ್ಟಮ್‌ನಲ್ಲಿ ವೃತ್ತಿಪರ ಶಿಕ್ಷಣವನ್ನು ಅಳವಡಿಸಲಾಗಿದೆ. ಅದು ಕೇಂದ್ರ ಸರ್ಕಾರ ಪುರಸ್ಕೃತ ಯೋಜನೆ ಇದೆ.

ಈ ಯೋಜನೆಯಿಂದ ನಿಜಕ್ಕೂ ಅನೇಕ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಪ್ರಯೋಜನ ಆಗಿದೆ ಎಂದು ಹೇಳಬೇಕಾಗುತ್ತದೆ. ಆದರೆ ಒಂದು ದುರ್ದೈವ ಎಂದರೆ, ಕಳೆದ ೨ ವರ್ಷದಲ್ಲಿ ಕರ್ನಾಟಕ ರಾಜ್ಯ ಕನ್ಸೂಮರ್ಸ್ ಸಹಕಾರಿ ಫೆಡರೇಷನ್ ಈ ಯೋಜನೆ ಅಡಿಯಲ್ಲಿ ಸಮೀಪ ೧ ಕೋಟಿ ಮೌಲ್ಯದ ಉಪಕರಣಗಳನ್ನು ಪೂರೈಸುವ ಜವಾಬ್ದಾರಿ ಹೊತ್ತುಕೊಂಡಿತ್ತು. ಈ ಬಗ್ಗೆ ಸರ್ಕಾರದ ಗಮನಕ್ಕೆ ಈಗಾಗಲೇ ಬಂದಿದೆ. ಅತ್ಯಂತ ಕಳಪೆಮಟ್ಟದ ಸಲಕರಣೆಗಳನ್ನು ಇವರು ಪೂರೈಸಿದ್ದಾರೆ. ಅಷ್ಟೇ ಅಲ್ಲದೇ, ಮಾರ್ಕೆಟ್ ರೇಟ್‌ಗಿಂತ ಒಂದಕ್ಕೆ ಹತ್ತುಪಟ್ಟು ರೇಟ್ ಹಾಕಿ ಅವರು ಸಲಕರಣೆಗಳನ್ನು ಪೂರೈಸಿದ್ದಾರೆ. ಇದರಲ್ಲಿ ತುಂಬಾ ಅವ್ಯವಹಾರ ನಡೆದಿದೆ ಎಂದು ಸರ್ಕಾರದ ಗಮನಕ್ಕೆ ಬಂದಿದೆ. ಸರ್ಕಾರ ಇದರ ಬಗ್ಗೆ ವಿಚಾರ ಮಾಡುತ್ತದೆಂದು ಹೇಳಿದೆ. ಈ ವಿಚಾರದಲ್ಲಿ ತಪ್ಪಿತಸ್ಥರು ಯಾರೇ ಇದ್ದರೂ ಸಹಕಾರಿ ಸಂಘ ತಪ್ಪು ಮಾಡಿದೆ ಎಂದು ಅದನ್ನು ತಿದ್ದಿಕೊಳ್ಳುವಂತೆ ಮಾಡುವುದು ಬೇಡ. ಅಂಥಹವರಿಗೆ ಶಿಕ್ಷೆ ಕೊಡುವ ಕೆಲಸ ಬೇಗ ಆಗಬೇಕು. ಇಲ್ಲಿ ನಾನು ತಾಂತ್ರಿಕ ಶಿಕ್ಷಣದ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕಾಗುತ್ತದೆ. ಕಳೆದ ೫ ವರ್ಷಗಳಲ್ಲಿ ಹಿಂದಿನ ಸರ್ಕಾರ ಎಲ್ಲಿ ಬೇಕೆಂದರಲ್ಲಿ ಹಾಗೂ ಬೇಡದ ಕಡೆಗೂ ಕೂಡಾ ತಾಂತ್ರಿಕ ಶಿಕ್ಷಣ ಸಂಸ್ಥೆಗಳನ್ನು ತೆರೆಯುವುದಕ್ಕೆ ಪರವಾನಿಗೆ ಕೊಟ್ಟಿದೆ. ಆದರಿಂದ ಏನಾಯಿತು ಎಂದರೆ ಅನೇಕ ಪಾಲಿಟೆಕ್ನಿಕ್‌ಗಳಲ್ಲಿ ಬೇಕಾದ ವ್ಯವಸ್ಥೆ ಇಲ್ಲದೇ ಉಪಾಧ್ಯಾಯರು ಇಲ್ಲದೇ ವಿದ್ಯಾರ್ಥಿಗಳನ್ನು ಶೋಷಣೆ ಮಾಡುವ ಕೆಲಸ ನಡೆಯಿತು. ಹಿಂದೆ ಸರ್ಕಾರ ಈ ಬಗ್ಗೆ ಒಂದು ಸಮಿತಿ ರಚನೆ ಮಾಡಿ ಇದೆಲ್ಲಾ ತನಿಖೆ ಮಾಡಲು ನಿರ್ಧರಿಸಿತು. ಆ ಸಮಿತಿಯ ವರದಿ ಸರ್ಕಾರಕ್ಕೆ ಬಂದಿದೆಯೇ ? ಯಾವುದೇ ವ್ಯವಸ್ಥೆ ಇಲ್ಲದ ಶಿಕ್ಷಣ ಸಂಸ್ಥೆಗಳನ್ನು ಮುಚ್ಚುವುದರಲ್ಲಾಗಲೀ ಅಥವಾ ಅದನ್ನು ಸರಿ ಮಾಡುವುದರ ಬಗ್ಗೆ ಯಾಗಲೀ ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ ಎಂದು ಮಾನ್ಯ ಸಚಿವರು ತಿಳಿಸಬೇಕೆಂದು ಹೇಳುತ್ತೇನೆ. ಉದಾಹರಣೆಗೆ ನನ್ನ ಕ್ಷೇತ್ರದ ಉಳಿಗಾಂ ಎಂಬಲ್ಲಿ ಒಂದು ಪಾಲಿಟೆಕ್ನಿಕ್ ಸಂಸ್ಥೆ ಇದೆ. ಆ ಸಂಸ್ಥೆಯ ಮಕ್ಕಳು ಪ್ರಯೋಗ ಮಾಡಬೇಕಾದರೆ ಅವರು

ಬೆಳಗಾಂಗೆ ಹೋಗಬೇಕು. ಕಳೆದ ಸಾಲಿನ ವಾರ್ಷಿಕ ಪರೀಕ್ಷೆ ಕಟ್ಟುವುದಕ್ಕೆ ಆ ಮಕ್ಕಳಿಗೆ ಕಷ್ಟವಾಯಿತು. ಅವರು ಚಳುವಳಿ ಮಾಡಿದ ನಂತರ ಏನೋ ಒಂದು ವ್ಯವಸ್ಥೆ ಮಾಡಿ ಅವರನ್ನು ಪರೀಕ್ಷೆಗೆ ಕೂಡಿಸಲಾಯಿತು. ಆಶ್ಚರ್ಯ ಏನೆಂದರೆ ಅಂತಹ ಕಡೆ ಕೂಡಾ ೧೦೦ಕ್ಕೆ ೧೦೦ ರಿಸಲ್ಟ್ ಬರುತ್ತದೆ. ಅಲ್ಲಿ ಗ್ರಾಮೀಣ ಭಾಗದಲ್ಲಿ ಒಂದೇ ಒಂದು ಖಾಸಗೀ ಶಿಕ್ಷಣ ಸಂಸ್ಥೆ ಇದ್ದಾಗ ಕೂಡಾ ತಾಂತ್ರಿಕ ಶಿಕ್ಷಣ ಇಲಾಖೆಯವರು ಏನು ತಪ್ಪು ಮಾಡಿದ್ದಾರೆಂದರೆ ಅಲ್ಲೂ ಕೂಡಾ ಒಂದು ಪರೀಕ್ಷಾ ಕೇಂದ್ರವನ್ನು ಕೊಟ್ಟಿದ್ದಾರೆ. ಹೀಗೆ ಪ್ರತಿಯೊಂದು ಖಾಸಗೀ ಸಂಸ್ಥೆಗೂ ಒಂದೊಂದು ಪರೀಕ್ಷಾ ಕೇಂದ್ರ ಕೊಟ್ಟರೆ ಶಿಕ್ಷಣ ಮಟ್ಟವನ್ನು ಕಾಯುವುದಕ್ಕೆ ಹೇಗೆ ಆಗುತ್ತದೆಂದು ಹೇಳಬೇಕು. ಇನ್ನು ಕಪ್ಪು ಹಲಗೆ ಯೋಜನೆಯಲ್ಲಿ ನನ್ನ ಕ್ಷೇತ್ರದ ಸೂಪಾ ತಾಲ್ಲೂಕಿನಲ್ಲಿ ಸುಮಾರು ೭೭ ಶಾಲಾ ಕೊಠಡಿ ಮಾಡಬೇಕು ಮತ್ತು ೪೦ಕ್ಕಿಂತಲೂ ಹೆಚ್ಚು ಶಿಕ್ಷಕರನ್ನು ನೇಮಿಸಬೇಕೆಂದು ಹೇಳಿ ಕೇಂದ್ರ ಸರ್ಕಾರದ ಪುರಸ್ಕೃತ ಯೋಜನೆಯಲ್ಲಿ ಅವಕಾಶ ಕಲ್ಪಿಸಲಾಗಿತ್ತು. ಆದರೆ ಜಿಲ್ಲಾ ಪರಿಷತ್ತಿನವರು ಏನು ಮಾಡಿದ್ದಾರೆಂದರೆ ೨೯ ಮರಾಠೀ ಶಿಕ್ಷಕರನ್ನು ನೇಮಿಸುವುದನ್ನು ಬಿಟ್ಟು ಬೇರೆ ಇರುವ ಶಿಕ್ಷಕರನ್ನೇ ಹೊಂದಾಣಿಕೆ ಮಾಡುವ ಕಾರ್ಯ ಮಾಡಿದ್ದಾರೆ. ಅದೇ ರೀತಿಯಲ್ಲಿ ಜಿಲ್ಲಾ ಪರಿಷತ್ತು ಹಿಂದಿ ಶಿಕ್ಷಕರನ್ನು ಹೊಸದಾಗಿ ನೇಮಕ ಮಾಡಬೇಕೆಂದು ಇದ್ದರೂ ಹಿಂದೆ ಇರುವ ಶಿಕ್ಷಕರನ್ನು ಹೊಂದಾಣಿಕೆ ಮಾಡಿದ್ದಾರೆ. ಯಾವ ರೀತಿ ಉದ್ದೇಶವನ್ನು ಇಟ್ಟುಕೊಂಡು ಯೋಜನೆಯನ್ನು ಮಾಡಿದ್ದಾರೋ ಆ ಉದ್ದೇಶ ಸಫಲವಾಗಲಿಲ್ಲ. ಮಾನ್ಯ ಸಚಿವರು ಒಂದು ಭಾವನೆಯನ್ನು ತಾಳಿದ್ದಾರೆ. ಜಿಲ್ಲಾ ಪರಿಷತ್‌ನಿಂದ ಶಿಕ್ಷಣ ಯೋಜನೆಯನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ಅದನ್ನು ಆದಷ್ಟು ತೀವ್ರವಾಗಿ ಮಾಡಬೇಕು. ಏಕೆಂದರೆ ಜಿಲ್ಲಾ ಪರಿಷತ್‌ನಲ್ಲಿ ಶಿಕ್ಷಣವನ್ನು ಇಟ್ಟರೆ ಅದು ಈಗಲೇ ಮುಳುಗಿಹೋಗಿದೆ, ಅದನ್ನು ಇನ್ನು ಬಿಟ್ಟರೆ ಅದು ನೆಲಕಚ್ಚಿ ಹೋಗುತ್ತದೆ. ಇನ್ನು ಒಂದೆರಡು ವರ್ಷಗಳಲ್ಲಿ ಅದನ್ನು ಮೇಲೆ ಏರಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಸಂಪೂರ್ಣವಾಗಿ ಕೀಳು ರಾಜಕೀಯ ಮಾಡುವುದು ಜಿಲ್ಲಾ ಪರಿಷತ್‌ನ ಹವ್ಯಾಸವಾಗಿದೆ, ಕೊನೆಯದಾಗಿ ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ ಆದಷ್ಟು ಬೇಗ ಶಿಕ್ಷಣವನ್ನು ಜಿಲ್ಲಾಪರಿಷತ್‌ನಿಂದ ಬಿಡುಗಡೆ ಮಾಡಬೇಕು. ಇಷ್ಟು ಸಮಯ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಮಾತನಾಡಬೇಕೆಂಬ ಆಕಾಂಕ್ಷೆಯುಳ್ಳ ಬಹಳ ಸದಸ್ಯರಿದ್ದಾರೆ. ಆದ್ದರಿಂದ ಸಮಯವನ್ನು ನಾನು ನಿರ್ಧಾರ ಮಾಡಬೇಕಾಗುತ್ತದೆ. ದಯವಿಟ್ಟು ಸದಸ್ಯರುಗಳು ಸಹಕರಿಸಬೇಕು. ಇನ್ನು ಮೇಲೆ ಒಬ್ಬೊಬ್ಬ ಸದಸ್ಯರು ೧೦ ನಿಮಿಷಗಳ ಕಾಲ ಮಾತ್ರ ಮಾತನಾಡಬೇಕು. ಅದು ಮಾನ್ಯ ವಾಟಾಳ್‌ನಾಗರಾಜ್‌ರವರಿಂದಲೇ ಪ್ರಾರಂಭವಾಗಲಿ.

† ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ).—ಮಾನ್ಯ ಅಧ್ಯಕ್ಷರೆ, ಇವೊತ್ತು ಮಾನ್ಯ ಮಂತ್ರಿಗಳು ಮಂಡಿಸಿರತಕ್ಕ ಬೇಡಿಕೆಗಳಲ್ಲಿ ನಾನು ಕನ್ನಡ ಕಲೆ ಮತ್ತು ಸಂಸ್ಕೃತಿಯ ಬಗ್ಗೆ ಕೆಲವು ವಿಚಾರಗಳನ್ನು ಮಾತನಾಡಬೇಕೆಂದು ಇದ್ದೇನೆ. ಮಾನ್ಯ ಮಂತ್ರಿಗಳು ಈ ಬಗ್ಗೆ ಅತ್ಯಂತ ಜವಾಬ್ದಾರಿಯಿಂದ ಕೆಲಸವನ್ನು ಮಾಡುತ್ತಾರೆಂದು ನಾನಾದರೂ ಅಂದುಕೊಂಡಿದ್ದೇನೆ. ಕನ್ನಡ ಮತ್ತು ಸಂಸ್ಕೃತಿ ಅಭಿವೃದ್ಧಿಯ ಬಗ್ಗೆ ಒಬ್ಬರು ಸಚಿವರೇ ಇರಬೇಕಾಗಿತ್ತೆಂದು ನನ್ನ ಅಭಿಪ್ರಾಯ. ಕನ್ನಡವನ್ನು ಯಾವುದೋ ಒಂದು ಇಲಾಖೆಗೆ ಸೇರಿಸತಕ್ಕದ್ದು ಸರಿಯಾದುದಲ್ಲ. ಇಡೀ ಸಮಗ್ರ ನಾಡಿನ ಚಿಂತನೆ, ಕಲೆ, ಸಂಸ್ಕೃತಿ, ಸಾಹಿತ್ಯ, ಗಡಿ ಸಮಸ್ಯೆ, ಹೊರನಾಡು ಕನ್ನಡಿಗರ ಎಲ್ಲಾ ಸಮಸ್ಯೆಗಳು ಬರುವುದರಿಂದ ವಿಶೇಷವಾಗಿ ಸಂಸ್ಕೃತಿ ಇಲಾಖೆಗೆ ಮಾನ್ಯ ರಂಗನಾಥರವರೇ ಮಂತ್ರಿಗಳಾಗುವುದಕ್ಕೆ ಸಮರ್ಥರಾಗಿದ್ದಾರೆ. ಎಲ್ಲಾ ಇಲಾಖೆಯನ್ನು ಬಿಟ್ಟು ಕನ್ನಡವನ್ನು ಬೆಳೆಸುವುದಕ್ಕೆ ಕನ್ನಡ ಭಾಷೆಯನ್ನು ಬೆಳೆಸುವ ಬಗ್ಗೆ ಮಾನ್ಯ ವೀರೇಂದ್ರಪಾಟೀಲ್‌ರವರ ಸರ್ಕಾರ ಕನ್ನಡ ಆಡಳಿತದ ಬಗ್ಗೆ ಒಬ್ಬರು ಸಚಿವರನ್ನು ಈ ಇಲಾಖೆಗೆ ನೇಮಿಸಬೇಕಾಗಿತ್ತು. ಹಾಗೆ ಮಾಡಿದ್ದರೆ ಕನ್ನಡಕ್ಕೆ ಗೌರವ ಬಂದಹಾಗೆ ಆಗುತ್ತಿತ್ತು ಅದು ಸಾರ್ಥಕವಾಗುತ್ತಿತ್ತು ಎನ್ನುವ ಮಾತನ್ನು ಹೇಳುತ್ತಿದ್ದೇನೆ. ಕನ್ನಡ ಆಡಳಿತ ಭಾಷೆ ಈ ರಾಜ್ಯದಲ್ಲಿ ಸಮರ್ಪಕವಾಗಿ ನಡೆದಿಲ್ಲ. ನಾವು ಕನ್ನಡವನ್ನು ಬರೀ ಆಡಳಿತ ಭಾಷೆಯನ್ನಾಗಿ ಮಾಡಿದ್ದೇವೆಂದು ಹೇಳುತ್ತಿದ್ದೇವೆಯೇ ಹೊರತು ಆಡಳಿತ ಭಾಷೆ ನಿಜವಾಗಿಯೂ ಸಮಗ್ರವಾಗಿ ನಡೆದಿಲ್ಲ. ಆದಿ ಕವಿ ಪಂಪಾರವರಿಂದ ಹಿಡಿದು ರಾಷ್ಟ್ರಕವಿ ಕುವೆಂಪುರವರ ವರೆಗೆ ಕನ್ನಡನಾಡಿನ ಭವ್ಯ ಪರಂಪರೆ ಬೆಳೆದು ಬಂದಿದೆ. ಕನ್ನಡಕ್ಕೆ ಕನ್ನಡ ಭಾಷೆಗೆ ಕನ್ನಡ ನುಡಿಗೆ ಕನ್ನಡ ನಾಡಿಗೆ ಅನೇಕ ಜನರು ಬಲಿದಾನ ಮತ್ತು ತ್ಯಾಗ ಮಾಡಿ ದುಡಿದಿದ್ದಾರೆ. ಇವತ್ತು ಕನ್ನಡದ ಪರಿಸ್ಥಿತಿ ಯಾವ ರೀತಿ ಇದೆಯೆಂದು ನೋಡಿದಾಗ ಕನ್ನಡ ನಶಿಸಿ, ನಾಶವಾಗುತ್ತಿದೆ ಎಂದೆನಿಸುತ್ತಿದೆ. ಕನ್ನಡದ ಬೆಳವಣಿಗೆಯ ಬಗ್ಗೆ ಒಂದು ವಿಶೇಷವಾದ ಸಮಗ್ರವಾದ ಒಂದು ಯೋಜನೆಯನ್ನು ಅತ್ಯಂತ ಆಮೂಲಾಗ್ರವಾಗಿ ಮಾಡತಕ್ಕದ್ದು ಸರ್ಕಾರದ ಕರ್ತವ್ಯ. ಎಲ್ಲಾದರೂ ಇರು, ಎಂತಾದರೂ ಇರು

ನೀ ಕನ್ನಡವಾಗಿರು ಎಂದು ರಾಷ್ಟ್ರಕವಿ ಕುವೆಂಪುರವರು ಮನಸ್ಸಿನಲ್ಲಿ ಹೃದಯದಲ್ಲಿ ಹೆಜ್ಜೆ ಹೆಜ್ಜೆಗೂ ಈ ನಾಡಿನ ಮೂಲೆ ಮೂಲೆಗೂ ಉದ್ದ ಅಗಲಕ್ಕೂ ಕನ್ನಡ ಕನ್ನಡ ಎನ್ನತಕ್ಕ ಜಾಮ ಎಚ್ಚರಿಕೆಯನ್ನು ಕೊಟ್ಟು ನಾಡಿನ ಜನತೆಗೆ ಹೊಸ ಚೈತನ್ಯವನ್ನು ತುಂಬಿದ್ದಾರೆ. ಕನ್ನಡ ನಾಡಿನಲ್ಲಿ ಕನ್ನಡದ ಬಗ್ಗೆ ಅತ್ಯಂತ ಶೋಚನೀಯವಾದ ಪರಿಸ್ಥಿತಿ ಇದೆ. ''ಸಿರಿಗನ್ನಡಂ ಗೆಲ್ಗೆ'' ಅದು ಹೋಗಿ 'ಸಿರಿಗನ್ನಡಂ ಗತಿ' ಇವತ್ತು ಆ ಪರಿಸ್ಥಿತಿ ಆಗಿದೆ. ನಮ್ಮಲ್ಲಿರುವ ಸಚಿವರನ್ನು ಕನ್ನಡದಲ್ಲಿ ಮಾತನಾಡಿ ಅಂದರೆ ನಾನು ಉರ್ದುವಿನಲ್ಲೇ ಮಾತನಾಡುತ್ತೇನೆ ಎನ್ನುವಷ್ಟು ಮಟ್ಟಕ್ಕೆ ಬಂದಿದ್ದಾರೆ. ಮಂತ್ರಿಗಳು ಕನ್ನಡ ಸಾಹಿತ್ಯ ಬೂಸಾ ಎನ್ನತಕ್ಕ ಮಟ್ಟಕ್ಕೆ ಬಂದಿದ್ದಾರೆ.

ಅವರ ಬಾಯಲ್ಲಿ ಕನ್ನಡಕ್ಕೆ ಅವಹೇಳನ, ಕನ್ನಡಕ್ಕೆ ಅಗೌರವ. ಇಂತಹ ಪರಿಸ್ಥಿತಿ ಇದೆ. ಎಲ್ಲಿಯ ವರೆಗೆ ಹೊರಟಿದ್ದಾರೆಂದರೆ ಕನ್ನಡ ಎಂದರೇ ಮೂಗು ಮುರಿಯುವಷ್ಟು ಅವಹೇಳನ. ಕನ್ನಡ ಓದಿದವರು ಕೀಳುದರ್ಜೆ, ನಾಲ್ಕನೇ ದರ್ಜೆ ಪ್ರಜೆ ಎನ್ನುವ ನೀತಿ ನಿರೂಪಣೆ ಆಗುತ್ತಿದೆ. ಅವರಿಗೆ ಕನ್ನಡ ಬೇಕಾಗಿಲ್ಲ. ತಮಗೆ ಹೇಳುತ್ತೇನೆ ಅಧ್ಯಕ್ಷರೇ. ತಾವು ಬೆಳಿಗ್ಗೆ ಗಾಳಿ ಸೇವನೆಗೆ ತಿರುಗಾಡಲು ಹೊರಟಾಗ ತಾವು ನೋಡಿರಬಹುದು. ಕೆಲವು ಶ್ರೀಮಂತರು ತಮ್ಮ ನಾಯಿಯನ್ನೂ ಇಂಗ್ಲೀಷಿನಲ್ಲಿ ಮಾತನಾಡಿಸುತ್ತಾರೆ. ನಾಯಿಗಳಿಗೂ ಕೂಡಾ ಇಂಗ್ಲೀಷ್ ನಾಯಿಯನ್ನು ಕನ್ನಡದಲ್ಲಿ ಕರೆಯುವುದಕ್ಕೆ ನಮ್ಮ ಕೆಲವು ಶ್ರೀಮಂತರು ಇಲ್ಲ, ದೊಡ್ಡ ದೊಡ್ಡ ಅಧಿಕಾರಿಗಳು ಇಲ್ಲ.

ಶ್ರೀ ಕೆ. ಹೆಚ್. ರಂಗನಾಥ್.—ಅವರು ಮಾತನಾಡುತ್ತಾರೆ, ಆದರೆ ಆ ನಾಯಿಗಳು ಮಾತನಾಡುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಕನ್ನಡದಲ್ಲಿ ಕರೆಯುವ ಸೌಜನ್ಯ ಕೂಡಾ ಅವರಿಗೆ ಇಲ್ಲ.

ಅಧ್ಯಕ್ಷರು.—ನಾಯಿಗಳು ತಮ್ಮ ಭಾಷೆಯಲ್ಲಿ ತಾವು ಉತ್ತರ ಕೊಡುತ್ತವೆ.

ಶ್ರೀ ಆರ್. ಎನ್. ನಾಯಕ್.—ಇಂಗ್ಲೀಷ್ ಭಾಷೆಯನ್ನು ನಾಯಿಗಳೂ ಕಲಿಯುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಕನ್ನಡ ಮಾಧ್ಯಮ ಈ ರಾಜ್ಯದಲ್ಲಿ ಬೆಳೆಯಬೇಕು. ಇದು ಎಲ್ಲರ ಮನಸ್ಸಿನಲ್ಲೂ ಬರಬೇಕು. ನಾನು ಈ ಸಭೆಯಲ್ಲಿ ಒಂದು ಪ್ರಶ್ನೆಯನ್ನು ಕೇಳಿದೆ ಅಧ್ಯಕ್ಷರೇ. ನನಗೆ ಸಮಗ್ರವಾದ, ಅರ್ಥಗರ್ಭಿತವಾದ ಒಂದು ಉತ್ತರ ತಮ್ಮಿಂದ ಸರ್ಕಾರದ ಮೂಲಕ ಬರಬೇಕಾಗಿದೆ. ಸರ್ಕಾರದ ಎಷ್ಟು ಜನ ಮಂತ್ರಿಗಳು ತಮ್ಮ ಮಕ್ಕಳನ್ನು ಮೊಮ್ಮಕ್ಕಳನ್ನು ಕನ್ನಡ ಮಾಧ್ಯಮದ ಶಾಲೆಗಳಿಗೆ ಸೇರಿಸಿದ್ದಾರೆ ? ಎಷ್ಟು ಜನ ಅಧಿಕಾರಿಗಳು ತಮ್ಮ ಮಕ್ಕಳನ್ನು ಕನ್ನಡ ಮಾಧ್ಯಮದ ಶಾಲೆಗೆ ಸೇರಿಸಿದ್ದಾರೆ. ನಾವು ಈ ರಾಜ್ಯವನ್ನು ನಡೆಸತಕ್ಕ ಜನ, ನಮ್ಮ ಮಕ್ಕಳನ್ನು, ಮೊಮ್ಮಕ್ಕಳನ್ನು ಎಷ್ಟು ಜನ ಕನ್ನಡ ಶಾಲೆಗೆ ಸೇರಿಸಿದ್ದೇವೆ. ಮೊದಲು ನಾವು ಹೃದಯವನ್ನು ಬಿಚ್ಚಿ ಅಗ್ನಿ ಪರೀಕ್ಷೆಗೆ ಹೋಗಬೇಕು. ಆಮೇಲೆ ನಾವು ಜನರಿಗೆ ಹೇಳೋಣ. ನನಗೆ ತಿಳಿದ ಮಟ್ಟಿಗೆ ನೂರಕ್ಕೆ ತೊಂಬತ್ತು ಭಾಗ ರಾಜಕಾರಣಿಗಳು, ಮಂತ್ರಿಗಳು, ಅಧಿಕಾರಿಗಳು ತಮ್ಮ ಮಕ್ಕಳನ್ನು ಇಂಗ್ಲೀಷ್ ಮಾಧ್ಯಮಕ್ಕೆ ಸೇರಿಸಿದ್ದಾರೆ. ನಮ್ಮ ರಾಜ್ಯದ ಆಡಳಿತ ಯಾರ ಕೈಗೆ ಸಿಕ್ಕಿದೆ ಎಂದರೆ ನೂರಕ್ಕೆ ಎಂಬತ್ತು ಭಾಗ ಐ ಎ ಎಸ್ ಐ ಪಿ ಎಸ್, ಅಧಿಕಾರಿಗಳು ಕನ್ನಡ ಬಾರದವರಿದ್ದಾರೆ. ಅವರು ಈ ರಾಜ್ಯದಲ್ಲಿ ಕನ್ನಡದಲ್ಲಿ ಆಡಳಿತ ಮಾಡುತ್ತಾರೆನ್ನುವ ನಿರೀಕ್ಷೆ ನಮಗೆ ಅತ್ಯಂತ ದೂರದಲ್ಲಿ ಇದೆ. ಆದುದರಿಂದ ಇವತ್ತು ಸಮಗ್ರವಾಗಿ ಕನ್ನಡ ಬಾರದಿರುವವರು ಅಧಿಕಾರಿಗಳಾಗಬಾರದು. ಕನ್ನಡ ಬರದೇ ಇರುವವರಿಗೆ ಕೆಲಸ ಸಿಗಬಾರದು ಎನ್ನುವ ಒಂದು ಪರಿಣಾಮಕಾರಿಯಾದ ಕಾರ್ಯಕ್ರಮವನ್ನು ಹಾಕಲೇಬೇಕಾಗಿದೆ. ಅದನ್ನು ಹಾಕದಿದ್ದರೆ ಕಷ್ಟವಾಗುತ್ತದೆ. ತಮಗೆ ಒಂದು ವಿಷಯವನ್ನು ಹೇಳುತ್ತೇನೆ. ನಮ್ಮ ನಾಡಿನ ಕವಿಗಳಾದ ನಿಸ್ಸಾರ್ ಅಹ್ಮದ್ ಅವರು ಸಾಹಿತ್ಯ ಅಕೆಡಮಿಯ ಅಧ್ಯಕ್ಷರಾಗಿದ್ದರು. ಅವರನ್ನು ವರ್ಗಾವರ್ಗಿಯಲ್ಲಿ ಕಸ ಗುಡಿಸಿದ ಹಾಗೆ ಬೆಂಗಳೂರಿನಿಂದ ತೆಗೆದು ಚಿತ್ರದುರ್ಗಕ್ಕೆ ಹಾಕಿದ್ದಾರೆ. ಅವರು ಈ ರಾಜ್ಯದ ಒಬ್ಬ ಶ್ರೇಷ್ಠ ಕವಿ. ಅಂತಹವರಿಗೆ ಕಸ ಗುಡಿಸಿದ ಹಾಗೆ ಹೊರಗಟ್ಟಿದ್ದಾರೆ. ಆಧುನಿಕ ಕವಿತ್ವದಲ್ಲಿ ನಾಡಿಗೇ ಹೊಸ ಸಾಹಿತ್ಯ ಕೊಟ್ಟ ಧೀಮಂತ ಕವಿ ಈ ರಾಜ್ಯದಲ್ಲಿ ಕನ್ನಡದ ಬೆಳವಣಿಗೆ ಬಗ್ಗೆ ಪರಿಣಾಮಕಾರಿ ಕಾರ್ಯಕ್ರಮಗಳನ್ನು ಕೈಗೊಳ್ಳದೇ ಇದ್ದರೆ ಇನ್ನು ಹತ್ತು ವರ್ಷಗಳಲ್ಲಿ ಕನ್ನಡ ಕಣ್ಮರೆಯಾಗುತ್ತದೆ. ಸ್ವಾಭಾವಿಕ ಅಭಿಪ್ರಾಯವನ್ನು ನಾನು ತಮಗೆ ಹೇಳುತ್ತಿದ್ದೇನೆ. ರಾಜ್ಯದ ಯಾವ ಮೂಲೆಯಿಂದ ಯಾವ ಮೂಲೆಗೆ ಹೋಗಿ ನೋಡಿದರೂ ಸರ್ಕಾರದ ಆಡಳಿತ ಸಮಗ್ರವಾಗಿ ಕನ್ನಡದಲ್ಲಿ ಇಲ್ಲ. ಹಿಂದೆ ಸರ್ಕಾರದಲ್ಲಿ ಒಂದು ಆಜ್ಞೆ ಇತ್ತು. ಕನ್ನಡದಲ್ಲಿ ಬೆರಳಚ್ಚು ಬರಬೇಕು, ಕನ್ನಡದಲ್ಲಿ ಪ್ರತಿಯೊಬ್ಬರೂ ಟಿಪ್ಪಣಿ ಬರೆಯಬೇಕು, ಕನ್ನಡದಲ್ಲಿ ಕಾನೂನು ಭಾಷಾಂತರ ಆಗಬೇಕು ಎಂದು ಆಜ್ಞೆಗಳಾಗಿದ್ದವು. ಇವತ್ತು ಈ ಒಂದೊಂದೂ ಘೋಷಣೆಗಳು ಕಸದ ಬುಟ್ಟಿಯಲ್ಲಿ ಇದೆಯೇ ಹೊರತು ಅವು ಜಾರಿಗೆ ಬಂದಿಲ್ಲ. ಮಂಡಲ ಪಂಚಾಯಿತಿಯಿಂದ ಹಿಡಿದು ಶಾಸನ ಸಭೆಯವರೆಗೂ ಕನ್ನಡದಲ್ಲಿ

ಆಡಳಿತ ನಡೆಸತಕ್ಕ ದಿಟ್ಟ ನಿಲುವನ್ನು ಸರ್ಕಾರ ತೆಗೆದುಕೊಳ್ಳಬೇಕು. ಒಂದು ವಿಷಯ ತಮ್ಮ ಗಮನಕ್ಕೆ ತರುತ್ತೇನೆ. ಉತ್ತರ ಪ್ರದೇಶದಲ್ಲಿ ಸಮಾಜವಾದ ಚಳುವಳಿ ಆದ ನಂತರ ಅಧಿಕಾರಕ್ಕೆ ಬಂದ ಮುಖ್ಯ ಮಂತ್ರಿಗಳು ಸಮಗ್ರವಾಗಿ ಇಂಗ್ಲೀಷ್. ಆಡಳಿತದಲ್ಲಿ ಇರಬಾರದು ಎಂದು ಹೇಳಿ ಇಂಗ್ಲೀಷನ್ನು ಅಲ್ಲಿ ತೆಗೆದು ಆಡಳಿತಕ್ಕೆ ಒಂದು ಹೊಸ ರೂಪವನ್ನು ತಂದಿದ್ದಾರೆ. ನಿನ್ನೆ ಮಾನ್ಯ ಇದಿನಬ್ಬನವರು ಮಾತ ನಾಡುತ್ತಾ ಹೇಳಿದರು. ತಾವು ಬೇರೆ ರಾಜ್ಯಗಳಿಗೆ ಪ್ರವಾಸ ಹೋದಾಗ ನೋಡಿ, ಆ ಶಾಸನ ಸಭೆಗಳಲ್ಲಿ ಸಮಗ್ರವಾಗಿ ಅವರವರ ಆಡಳಿತ ಭಾಷೆಯಲ್ಲಿ ಚರ್ಚೆ ನಡೆಯುತ್ತದೆ. ಆಡಳಿತ ಸಹ ಅವರವರ ಭಾಷೆ ಗಳಲ್ಲಿಯೇ ನಡೆಯುತ್ತದೆ. ತಮಿಳುನಾಡಿನಲ್ಲಾಗಲೀ, ಆಂಧ್ರ ಪ್ರದೇಶದಲ್ಲಾಗಲಿ, ಇಂಗ್ಲೀಷ್‌ನಲ್ಲಿ ಮಾತನಾಡಿದರೆ ಅದು ಅಗೌರವ ಎನ್ನುವ ಭಾವನೆಯನ್ನು ಅವರು ಇಟ್ಟುಕೊಂಡಿದ್ದಾರೆ. ಆದರೆ ನಮ್ಮ ಶಾಸನ ಸಭೆಯಲ್ಲಿ ಕನ್ನಡದಲ್ಲಿ ಮಾತನಾಡಿದರೆ ಕೆಟ್ಟ ರೀತಿಯಿಂದ ಅಂದುಕೊಂಡು ಅಗೌರವವೆಂದು ತಿಳಿದು ಕೊಂಡಿದ್ದಾರೆ. ಇದು ಸರಿಯಾದುದಲ್ಲವೆಂಬುದನ್ನು ನಾನು ತಮ್ಮ ಗಮನಕ್ಕೆ ಈಗಾಗಲೇ ತಂದಿದ್ದೇನೆ. ಇಂಗ್ಲೀಷ್ ಪ್ರತಿಗಳನ್ನು ಹರಿದು ಹಾಕಿ ಅದನ್ನು ಎಸೆದಿರತಕ್ಕ ವಿಚಾರ ತಮಗೆ ಗೊತ್ತಿದೆ, ಅದು ತಮ್ಮ ಗಮನಕ್ಕೆ ಬಂದಿದೆ. ರಾಜ್ಯದ ಆಡಳಿತ ಸಮಗ್ರವಾಗಿ ಕನ್ನಡದಲ್ಲಿಯೇ ನಡೆಯಬೇಕಾದರೆ ಅದಕ್ಕೊಂದು ಹೊಸ ಯೋಜನೆಯನ್ನು ತಯಾರು ಮಾಡಬೇಕು, ಕನ್ನಡ ಅಭಿವೃದ್ಧಿ, ಕನ್ನಡದ ನೀತಿ ಕನ್ನಡ ಸಂಸ್ಕೃತಿ, ಕನ್ನಡದ ಕಲೆ ನಾಶವಾಗುತ್ತಿದೆ. ಕನ್ನಡ ಇಡೀ ದೇಶದಲ್ಲಿಯೇ ಅತ್ಯಂತ ಉನ್ನತ ಮಟ್ಟದ ಮಟ್ಟಕ್ಕೆ ಬಂದಿತ್ತು. ನಮ್ಮಲ್ಲಿ ಅಕಾಡೆಮಿಗಳಿವೆ. ಸಂಗೀತ ನಾಟಕ ಅಕಾಡೆಮಿ ಇದೆ, ಸಾಹಿತ್ಯ ಅಕಾಡೆಮಿ ಇದೆ ನೃತ್ಯ ಅಕಾಡೆಮಿ ಇದೆ. ಇವು ಯಾವುದಕ್ಕೋಸ್ಕರ ಇವೆ? ನನಗನಿಸುತ್ತದೆ ಇವು ಹೆಸರಿಗೆ ಮಾತ್ರ ಇವೆ. ಈ ಅಕಾಡೆಮಿಗಳಿಗೆ ಎಷ್ಟು ಸ್ವಾತಂತ್ರ್ಯವಿರಬೇಕೋ ಅದಿಲ್ಲ. ಎಷ್ಟು ಸ್ವಾಯತ್ತತೆ ಇರಬೇಕೋ ಅದಿಲ್ಲ. ಅಲ್ಲಿಗೆ ಒಬ್ಬ ಸದಸ್ಯರನ್ನು ನಾಮಕರಣ ಮಾಡಿಕೊಳ್ಳಬೇಕಾದರೆ ಸಾಹಿತ್ಯದ ಗಂಧವೇ ಇಲ್ಲದೇ ಇರತಕ್ಕವರನ್ನು ಸಾಹಿತ್ಯ ಅಕಾಡೆಮಿಗೆ ಹಾಕುತ್ತಾರೆ. ಇದು ನಡೆದಿರ ತಕ್ಕದ್ದು. ಸಂಗೀತದ ಗಂಧವೇ ಗೊತ್ತಿಲ್ಲದೇ ಇರತಕ್ಕವರನ್ನು ಸಂಗೀತ ಅಕಾಡೆಮಿಗೆ ಸದಸ್ಯರನ್ನಾಗಿ ಮಾಡುತ್ತಾರೆ. ನೃತ್ಯದ ಗಂಧವೇ ಗೊತ್ತಿಲ್ಲದೆ ಇರತಕ್ಕವರನ್ನು ನೃತ್ಯದ ಅಕಾಡೆಮಿಗೆ ಹಾಕುತ್ತಾರೆ. ದೊಡ್ಡ ಹಿರಿಯ ಮೇಧಾವಿಗಳಾದ ಹಾಮಾ ನಾಯಕ್‌ರವರು ಹೇಳಿದರು, ಸ್ವಾತಂತ್ರ್ಯಹರಣವಾ ಗುತ್ತಿದೆ, ಅಕಾಡೆಮಿಗಳಿಗೆ ಸ್ವಾಯತ್ತತೆ ಇಲ್ಲ ಎಂದು ಅಕಾಡೆಮಿಗಳನ್ನು ಕಾಲುಕಸಕ್ಕಿಂತ ಕಡೆಯಾಗಿ ಸರ್ಕಾರ ಕಾಣುತ್ತಿದೆಯೆಂದು ಹೇಳಿದರು. ಅಕಾಡೆಮಿಗಳನ್ನು ಮಾಡುವ ಉದ್ದೇಶವಾದರೂ ಏನು? ಆ ಅಕಾಡೆಮಿಗಳಿಗೆ ಸ್ವಾಯತ್ತತೆಯನ್ನು ಕೊಟ್ಟು ಅವುಗಳನ್ನು ಕೆಲಸ ಮಾಡಲಿಕ್ಕೆ ಬಿಡುವ ನೀತಿ ಸರ್ಕಾರದ್ದು ಇರಬೇಕು, ಅದನ್ನು ಬಿಟ್ಟು ಸರ್ಕಾರ ಇವುಗಳನ್ನು ತನ್ನ ಗುಲಾಮಗಿರಿ ಸಂಸ್ಥೆಗಳನ್ನಾಗಿ ಮಾಡಿಕೊಳ್ಳಬಾರದು. ಇನ್ನು ಮುಂದಾದರೂ ಮಾನ್ಯ ರಂಗನಾಥ್‌ರವರು ಹೊಸ ಚಿಂತನೆಯನ್ನು ಮಾಡುತ್ತಾರೆಂದು ನಾನು ಅಂದುಕೊಂಡಿದ್ದೇನೆ. ಅಕಾಡೆಮಿಗಳಿಗೆ ಸ್ವಾತಂತ್ರ್ಯ, ಸ್ವಾಯತ್ತತೆ ಬರ ಬೇಕು ಆ ನಿಲುವು ಸರ್ಕಾರದ್ದು ಆಗಬೇಕೆಂದು ನಾನು ತಮ್ಮಲ್ಲಿ ಅತ್ಯಂತ ವಿನಯದಿಂದ ಪ್ರಾರ್ಥನೆ ಮಾಡಿ ಕೊಳ್ಳುತ್ತೇನೆ. ಕರ್ನಾಟಕದಲ್ಲಿ ಗೋಕಾಕ್ ಚಳುವಳಿ ನಡೆಯಿತು. ಅದರ ಪರಿಣಾಮವಾಗಿ ಸರ್ಕಾರ ಏನೋ ಒಂದು ನಿರ್ಧಾರ ಮಾಡಿತು. ಕನ್ನಡ ಆಡಳಿತ ಭಾಷೆಯಾಗಲಿಕ್ಕೆ ಗೋಕಾಕ್ ಚಳುವಳಿ ಒಂದು ಹೊಸ ರೂಪ ಕೊಟ್ಟಿತು. ಕನ್ನಡದ ಜಾಗೃತಿ ಕನ್ನಡದ ಬೆಳವಣಿಗೆಯ ಬಗ್ಗೆ ಆ ಚಳುವಳಿ ಕೆಲಸ ಮಾಡಿತೇ ವಿನಾ ಸರ್ಕಾರ ಸರಿಯಾದ ನಿಲುವನ್ನು ಸರಿಯಾದ ಕಾರ್ಯಕ್ರಮವನ್ನು ಕೈಗೊಳ್ಳಲಿಲ್ಲ. ಗಡಿನಾಡಿನ ಕನ್ನಡಿಗರ ಪರಿಸ್ಥಿತಿ ಬಹಳ ಶೋಚನೀಯವಾದ ಪರಿಸ್ಥಿತಿ ಇದೆ. ಕಾಸರಗೋಡಿನ ಕನ್ನಡಿಗರು ಕರ್ನಾಟಕಕ್ಕೆ ಬಂದರೆ ಅವರಿಗೆ ಶಾಲಾ ಕಾಲೇಜುಗಳಲ್ಲಿ ಪ್ರವೇಶ ಇಲ್ಲ. ಅಷ್ಟು ದುಃಖದಿಂದ ಅವರು ಇದ್ದಾರೆ. ನಿನ್ನೆ ಕಾಸರಗೋಡಿನಿಂದ ಒಬ್ಬರು ಬಂದಿದ್ದರು ಅವರು ನನಗೆ ಕಾಲೇಜಿನಲ್ಲಿ ಅವಕಾಶ ಸಿಗಲಿಲ್ಲವೆಂದು ಕಣ್ಣೀರು ಸುರಿಸುತ್ತಾ ಹೋದರು. ಇಂತಹ ಒಂದು ಪ್ರಸಂಗ ನಮ್ಮ ರಾಜ್ಯದಲ್ಲಿದೆ. ಸರ್ಕಾರ ಹೊರನಾಡ ಕನ್ನಡಿಗರಬಗ್ಗೆ ಒಂದು ನೀತಿಯನ್ನು ಪ್ರಕಟಣೆ ಮಾಡಬೇಕು. ಯಾರ್‍ಯಾರು ಹೊರ ನಾಡಿನ ಕನ್ನಡಿಗರು ತಾಯಿ ನುಡಿಗಾಗಿ ಹಾತೊರೆಯುತ್ತಿದ್ದಾರೆ ಅಂತಹ ಜನರಿಗೆ ವೈದ್ಯಕೀಯ ಕಾಲೇಜು ಗಳಲ್ಲಿ ತಾಂತ್ರಿಕ ಕಾಲೇಜುಗಳಲ್ಲಿ ಯಾವುದೇ ಕಾಲೇಜುಗಳಲ್ಲಿ ಆಗಲಿ ಅವರಿಗೆ ವಿಶೇಷವಾದ ಮನ್ನಣೆ ಯನ್ನು ಕೊಡತಕ್ಕದ್ದು ಸರ್ಕಾರದ ಕರ್ತವ್ಯ. ಕನ್ನಡನಾಡಿಗೆ ಕರ್ನಾಟಕದ ಏಕೀಕರಣಕ್ಕೆ ದುಡಿದಂತಹ ಅನೇಕ ಜನ ಈ ಸಭೆಯಲ್ಲಿದ್ದವರನ್ನು ನಾವು ನೋಡಿದ್ದೇವೆ, ತಾವು ನೋಡಿದ್ದೀರಿ. ದುಡಿದಂತಹ ಅನೇಕ ಜನರನ್ನು ಸ್ಮರಿಸಿಕೊಳ್ಳುವಂತಹ ಯೋಜನೆಗಳು ನಮ್ಮಲ್ಲಿ ಇವತ್ತು ಇಲ್ಲ ಬಳ್ಳಾರಿಯನ್ನು ಕರ್ನಾಟಕಕ್ಕೆ ಸೇರಿಸಿಕೊಳ್ಳುವುದಕ್ಕೆ ಅಷ್ಟೊಂದು ದೊಡ್ಡ ಹೋರಾಟ ಮಾಡಿದ್ದಾರೆ. ಅವರನ್ನು ನಾವು ಇವತ್ತು ಗುರುತಿಸಿಲ್ಲ, ಅವರನ್ನು ಗುರುತಿಸಿ, ಅವರು ಇಲ್ಲದಿದ್ದರೆ ಅವರ ಸಂಸಾರಗಳಿಗೆ ಗೌರವಧನ ಕೊಡುವಂತಹ ವ್ಯವಸ್ಥೆ ಮಾಡಬೇಕು. ಸರ್ಕಾರ ಅವರ ಇರಲಿ ಇಲ್ಲದಿರಲಿ ಅವರ ಮನೆಯವರಿಗೆ

ಪ್ರತಿ ತಿಂಗಳು ಗೌರವಧನ ಕೊಡತಕ್ಕ ವ್ಯವಸ್ಥೆಯನ್ನು ಮಾಡಬೇಕು. ಬಳ್ಳಾರಿ ಕರ್ನಾಟಕಕ್ಕೆ ಬರಬೇಕೆಂದು ದುಡಿದಂತಹ ಅನೇಕ ಜನ ಇದ್ದಾರೆ. ಅವರನ್ನು ಗುರುತಿಸಿ ಅವರಿಗೆ ಗೌರವಧನ ಕೊಡುವ ಯೋಜನೆಯನ್ನು ಹಾಕಿ ಕೊಳ್ಳಿ. ಕನ್ನಡ ರಂಗಭೂಮಿ ಒಂದು ಕಾಲದಲ್ಲಿ ಅದು ನಾಡಿನಲ್ಲಿ ಏತಕ್ಕೆ ಇಡೀ ಭಾರತ ದೇಶದಲ್ಲಿಯೇ ಪ್ರಖ್ಯಾತಿಯನ್ನು ಗಳಿಸಿತ್ತು. ಕನ್ನಡ ರಂಗಭೂಮಿಯಲ್ಲಿ ದುಡಿದಂತಹ ಸಂಬ್ಬಯ್ಯನಾಯ್ಡು, ದೊಡ ನಾಟಕ ಕಂಪನಿಯನ್ನು ಪ್ರಾರಂಭ ಮಾಡಿದ್ದರು, ಅದೇ ರೀತಿ ಗುಬ್ಬಿ ವೀರಣ್ಣನವರು, ವರದಚಾರ್ಯರು, ಪೀರ್ ಸಾಹೇಬರು ಕನ್ನಡ ರಂಗಭೂಮಿಯಲ್ಲಿ ಸಾಕಷ್ಟು ಸೇವೆ ಸಲ್ಲಿಸಿದ್ದಾರೆ. ಒಂದಲ್ಲ ಒಂದು ರೀತಿ ಹಳೆಯ ವಿಜಯನಗರ ಸಾಮ್ರಾಜ್ಯದಲ್ಲಿ ಕಂಡಂತಹ ಕನ್ನಡದ ಸಾಮ್ರಾಜ್ಯವನ್ನು ಬೆಳೆಸಿದ್ದಾರೆ. ಇವತ್ತು ಕನ್ನಡ ರಂಗಭೂಮಿ ನೆಲ ಕಚ್ಚಿದೆ. ಕನ್ನಡ ರಂಗಭೂಮಿಯನ್ನು ಉಳಿಸುವುದಕ್ಕೆ ಸರ್ಕಾರ ಹೊಸ ಯೋಜನೆಯನ್ನು ತಯಾರು ಮಾಡಿ. ಹೊಸ ನಾಟಕ ಬರೆದು ಆಡುವವರಿಗೆ ಕನಿಷ್ಟ ಮಟ್ಟಕ್ಕೆ ೧ ಲಕ್ಷ ರೂಪಾಯಿಗಳನ್ನು ಕೊಟ್ಟು ರಾಜ್ಯದಲ್ಲಿ ಕನ್ನಡ ರಂಗಭೂಮಿ ಬೆಳೆಯುವುದಕ್ಕೆ ವಿಶೇಷವಾದ ಯೋಜನೆಯನ್ನು ಮಾಡಬೇಕಾಗಿದೆ. ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲಿಯೂ ಕನ್ನಡ ರಂಗ ಮಂದಿರಗಳಾಗಬೇಕು. ಕನ್ನಡಿಗರ ಮತ್ತು ಕನ್ನಡ ಕ್ಕೋಸ್ಕರ, ಕನ್ನಡನಾಡಿಗೋಸ್ಕರ ದುಡಿದಂತಹವರ ಹೆಸರುಗಳನ್ನು ಆ ರಂಗ ಮಂದಿರಕ್ಕೆ ಇಟ್ಟು ಹೊಸ ನವ ಚೈತನ್ಯ ಬರುವಂತೆ ಮಾಡಬೇಕೆಂದು ಮಾನ್ಯ ಮಂತ್ರಿಗಳಿಗೆ ಅತ್ಯಂತ ವಿನಯದಿಂದ ಹೇಳುತ್ತಿದ್ದೇನೆ.

ಇವತ್ತು ಭಾಷೆಯ ಬೆಳವಣಿಗೆ ಬಗ್ಗೆ ನಾವು ತೀರಾ ಹಿಂದೆ ಇದ್ದೇವೆ. ಇದೇ ರೀತಿ ನಡೆದರೆ ಇನ್ನು ಹತ್ತು ವರ್ಷಗಳಲ್ಲಿ ನಮ್ಮ ಭಾಷೆ ಮಾಯವಾಗಿ ಶೋಚನೀಯ ಪರಿಸ್ಥಿತಿಯನ್ನು ಅನುಭವಿಸಬೇಕಾಗುತ್ತದೆ. ಹೊರಗಡೆಯಿಂದ ವಲಸೆ ಬರತಕ್ಕಂಥ ಜನ ಏನಿದ್ದಾರೆ, ಅವರು ತಮಿಳುನಾಡಿನಿಂದ ಆಂಧ್ರದಿಂದ, ಕೇರಳದಿಂದ ಬರುತ್ತಿದ್ದಾರೆ. ೧೯೫೬ ರಲ್ಲಿ ಕರ್ನಾಟಕದ ಏಕೀಕರಣ ಆಯಿತು. ಏಕೀಕರಣ ಆದಮೇಲೆ ಅಲ್ಲಿಂದ ಇಲ್ಲಿಯವರೆಗೆ ಕರ್ನಾಟಕಕ್ಕೆ ಹೀಗೆ ಬಂದಿರತಕ್ಕ ಜನ ನನ್ನ ಅಂದಾಜು ಪ್ರಕಾರ ಕನಿಷ್ಟ ಒಂದು ಕೋಟಿ ಜನ ಬಂದಿದ್ದಾರೆ. ಕನಿಷ್ಟ ೭೦ ಲಕ್ಷ ಜನ ಮತದಾರರು ಆಗಿದ್ದಾರೆ. ನಮ್ಮ ಸಂಸ್ಕೃತಿ ಮೇಲೆ, ನಮ್ಮ ಸಾಹಿತ್ಯದ ಮೇಲೆ, ನಮ್ಮ ಆರ್ಥಿಕ ರಂಗದ ಮೇಲೆ ಅಪಾರವಾದ ಪೆಟ್ಟು ಬೀಳುತ್ತಿದೆ. ಈ ವಲಸೆಯನ್ನು ತಡೆಯದೇ ಇದ್ದರೆ ಇನ್ನು ಹತ್ತು ವರ್ಷಗಳಲ್ಲಿ ಕನ್ನಡಿಗರೇ ಆದ ನಾವು ಇಲ್ಲಿ ಅಲ್ಪಸಂಖ್ಯಾತರಾಗಿ ಬಹು ಸಂಖ್ಯಾತರು ಬೇರೆಯವರು ಬರಬೇಕಾದ ಪರಿಸ್ಥಿತಿ ಬರುತ್ತದೆ. ಅಲ್ಲಿಗೆ ಒಂದು ಹೊಸ ಯುಗವೇ ಪ್ರಾರಂಭವಾಗುತ್ತದೆ. ಹಾಗಾದರೆ ಅಸ್ಸಾಂ ಚಳುವಳಿ ಕರ್ನಾಟಕದಲ್ಲೂ ಆದೀತು ಎಂದು ಎಚ್ಚರಿಕೆಯನ್ನು ನಾನು ಕೊಡುತ್ತಿದ್ದೇನೆ. ಅಸ್ಸಾಂ ಪರಿಸ್ಥಿತಿ ಏನಾಯಿತು ? ಅಂತಹ ಪರಿಸ್ಥಿತಿ ಕರ್ನಾಟಕದಲ್ಲಿ ಉದ್ಭವವಾಗುತ್ತದೆ ಆದ್ದರಿಂದ ನಾನು ತಮ್ಮನ್ನು ಅತ್ಯಂತ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ಸರ್ಕಾರ ಒಂದು ಕಾನೂನನ್ನು ಹೊರಡಿಸಿ ಹೊರಗಡೆಯಿಂದ ಬರತಕ್ಕವರನ್ನು ತಡೆಹಿಡಿಯುವುದಕ್ಕೆ ಒಂದು ಸಮಗ್ರವಾದ ಯೋಜನೆಯನ್ನು, ಒಂದು ನೀತಿಯನ್ನು ನಿರೂಪಣೆ ಮಾಡಬೇಕು. ಅದನ್ನು ಮಾಡಲಿಲ್ಲವೆಂದರೆ ಇನ್ನು ಹತ್ತು ವರ್ಷಗಳಲ್ಲಿ ಕರ್ನಾಟಕ ಬಹಳ ಅತ್ಯಂತ ಶೋಚನೀಯ ಪರಿಸ್ಥಿತಿಗೆ ಸಿಲುಕುತ್ತದೆ ಎಂಬ ಮಾತನ್ನು ಹೇಳುತ್ತೇನೆ. ಇದರ ಬಗ್ಗೆ ಸರ್ಕಾರ ಕಟ್ಟುನಿಟ್ಟಾಗಿ, ಪರಿಣಾಮಕಾರಿಯಾಗಿ, ಪ್ರಾಮಾಣಿಕವಾಗಿ ಈ ಕೆಲಸವನ್ನು ಮಾಡಬೇಕಾಗಿದೆ. ಇಲ್ಲದಿದ್ದರೆ ಕರ್ನಾಟಕದ ಪರಿಸ್ಥಿತಿ ಅತ್ಯಂತ ಶೋಚನೀಯವಾಗುತ್ತದೆ 'ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು' ಎಂದು ಎಷ್ಟು ಸುಂದರವಾಗಿ ಶ್ರೀ ಹುಯಿಲಗೋಳ ನಾರಾಯಣರಾಯರು ಹೇಳಿ ಈ ನಾಡನ್ನು ಕಟ್ಟಿದರು. 'ಬಾರಿಸು ಕನ್ನಡ ಡಿಂಡಿಮವ, ಓ ಕರ್ನಾಟಕ ಹೃದಯ ಶಿವ' ಎಂದು ರಾಷ್ಟ್ರಕವಿ ಶ್ರೀ ಕುವೆಂಪು ಅವರು ಹೆಜ್ಜೆಹೆಜ್ಜೆಗೂ ಈ ನಾಡಿನ ಉದ್ದಗಲಕ್ಕೂ ಕನ್ನಡದ ಸ್ಫೂರ್ತಿಯನ್ನು ತಂದು, ನಾಡಿನ ಶಕ್ತಿಯನ್ನು ಬೆಳೆಸಿ ಈ ನಾಡಿಗಾಗಿ ಒಂದು ಹೊಸ ಚೈತನ್ಯವನ್ನು ಹೊಸ ರೂಪವನ್ನು ಕೊಟ್ಟಂಥ ನಾಡಿನ ಮಹಾಕವಿ. 'ಎಲ್ಲಾದರೂ ಇರು ಎಂತಾದರೂ ಇರು ಎಂದೆಂದಿಗೂ ನೀ ಕನ್ನಡವಾಗಿರು. ನೀ ಮೆಟ್ಟುವ ನೆಲ ಅದೇ ಕರ್ನಾಟಕ, ನೀ ಕುಡಿಯುವ ನೀರ್ ಕಾವೇರಿ, ನೀನೇರುವ ಮಲೆ ಸಹ್ಯಾದ್ರಿ ಎಂದು ಎಂತಹ ಮಾತುಗಳನ್ನಾಗಿ ಸ್ಫೂರ್ತಿಯನ್ನು ತಂದಿದ್ದಾರೆ ಈ ನಾಡಿನ ಮಹಾಕವಿಗಳು ಇಂತಹ ನಾಡನ್ನು ಕಟ್ಟುವುದಕ್ಕೆ ಸರ್ಕಾರ ಕಡ್ಡಾಯವಾಗಿ ಕನ್ನಡವನ್ನು ಉಳಿಸುವುದಕ್ಕೆ ತಾವು ನಿಲ್ಲಬೇಕು ಎಂಬ ಮಾತನ್ನು ಹೇಳುತ್ತೇನೆ. ದಿವಂಗತ ಶ್ರೀ ಕೆಂಗಲ್ ಹನುಮಂತಯ್ಯನವರು ತಮ್ಮ ಆಡಳಿತದಲ್ಲಿ ಕನಸನ್ನು ಕಂಡರು, ಸಿರಿಗನ್ನಡ ನಾಡನ್ನು ಕಂಡರು, ನಾಡಿನ ಅಭ್ಯುದಯವನ್ನು ನೋಡಿದರು ಮಹಾಭಾರತ ರಾಮಾಯಣಗಳನ್ನು ಅವರು ಮುದ್ರಣ ಮಾಡಿ ಅತ್ಯಂತ ಸುಲಭದರದಲ್ಲಿ ಜನರಿಗೆ ದೊರಕಬೇಕು ಎಂದು ಎಲ್ಲವನ್ನೂ ಮುದ್ರಿಸಿ ಜನಕ್ಕೆ ಕೊಟ್ಟರು. ಶ್ರೀ ರಾಮಾಯಣ ದರ್ಶನಂ ಅನ್ನು ಬರೆದಂಥ ರಾಷ್ಟ್ರಕವಿ ಕುವೆಂಪು, ನಂತರ ಎಲ್ಲಾ ದೊಡ್ಡ ದೊಡ್ಡ ಸಾಹಿತಿಗಳು ಬೇಂದ್ರೆ, ಕಾರಂತ ಮೊದಲಾದವರ ಶ್ರೇಷ್ಠ ಸಾಹಿತ್ಯವನ್ನು, ಅವರ ಕವಿತ್ವವನ್ನು ಮುದ್ರಣ ಮಾಡಿಸಿ ಎಲ್ಲರಿಗೂ ಬಹಳ ಕಡಿಮೆ ದರದಲ್ಲಿ ಸಿಗುವ ರೀತಿಯಲ್ಲಿ ರಾಜ್ಯ

ಸರ್ಕಾರ ಹೊಸ ಯೋಜನೆಯನ್ನು ಮಾಡಲಿ ಈ ನಾಡಿಗೆ ಹೊಸ ರೂಪವನ್ನು ಕೊಡಲಿ ಎಂಬ ಮಾತನ್ನು ತಮ್ಮ ಮೂಲಕ ಹೇಳಿ ಒಂದು ವಿಷಯವನ್ನು ತಮಗೆ ಹೇಳುತ್ತೇನೆ. ಕನ್ನಡ ಆಡಳಿತ ಭಾಷೆಯಾಗಿ ಇವತ್ತು ಬಂದಿದ್ದಲ್ಲ. ಟಿಪ್ಪೂಸುಲ್ತಾನ್ ಕಾಲದಲ್ಲೂ ಕನ್ನಡ ಆಡಳಿತ ಭಾಷೆಯಾಗಿ ಇತ್ತು. ಇದು ಶ್ರೀ ಅಜೀಜ್‌ಸೇಠ್ ಅವರಿಗೆ ಗೊತ್ತಿದೆಯೋ ಇಲ್ಲವೋ. ಟಿಪ್ಪೂಸುಲ್ತಾನನ ಕಾಲದಲ್ಲಿ ಕನ್ನಡ ಇತ್ತು ಆದರೆ ಶ್ರೀ ಅಜೀಜ್‌ಸೇಠ್ ಅವರು ಈಗ ಇದನ್ನು ವಿರೋಧ ಮಾಡುತ್ತಿದ್ದಾರೆ. ಇಂಗ್ಲೀಷರ ಕಾಲದಲ್ಲಿ ಕನ್ನಡ' ಎಂದು ಎಲ್ಲವನ್ನೂ ನೋಡಿ ಒಂದು ಹೊಸ ಪುಸ್ತಕವನ್ನು ಬರೆದಿದ್ದಾರೆ ಹಿರಿಯ ಸಾಹಿತಿಗಳಾದ ಶ್ರೀ ಮಹದೇವ ಬಣಕಾರ್ ಅವರು. ಆ ಪುಸ್ತಕವನ್ನು ತಾವು ತರಿಸಿ ನೋಡಿ. ಆಗಿನಿಂದಲೇ ಕನ್ನಡ ಇತ್ತು. ಇದನ್ನು ಇಂದು ನಾಶಗೊಳಿಸತಕ್ಕ ಅಂಚಿಗೆ ನಾವು ಹೋಗಬಾರದು; ಕನ್ನಡ ಬೆಳವಣಿಗೆಗೆ ಸಮಗ್ರವಾದಂಥ ಚಿಂತನೆ ಸರ್ಕಾರದಲ್ಲಿ ಬರಬೇಕು ಮತ್ತು ಮಂತ್ರಿಗಳು, ರಾಜಕಾರಣಿಗಳ ಹೃದಯದಲ್ಲಿ ಕನ್ನಡ ಬೆಳಸತಕ್ಕಂಥ ನೀತಿ ಬರಬೇಕೆಂದು ಹೇಳಿ ಮಾನ್ಯ ಅಧ್ಯಕ್ಷರೇ, ತಾವು ಗಂಟೆ ಬಾರಿಸಿದ ತಕ್ಷಣ ನನ್ನ ಮಾತಿನ ಧಾಟಿಯೇ ಬದಲಾವಣೆ ಆಯಿತು ತಾವು ಇನ್ನೂ ಐದು ನಿಮಿಷ ಕೊಟ್ಟಿದ್ದರೂ ನಾನು ಮಾತನಾಡುತ್ತಿದ್ದೆ. ಆದ್ದರಿಂದ ತಾವು ಅತ್ಯಂತ ಕಡಿಮೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿರುವುದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

೧೦-೦೦ ಎ.ಎಂ.

† ಶ್ರೀ ಆರ್. ದಯಾನಂದರಾವ್ (ಗಾಂಧಿನಗರ).— ಮಾನ್ಯ ಅಧ್ಯಕ್ಷರೇ, ಈ ದಿವಸ ಶಿಕ್ಷಣದ ಬಗ್ಗೆ ಈ ಸದನದಲ್ಲಿ ಏನು ಬೇಡಿಕೆಯನ್ನು ತಂದಿದ್ದಾರೆ, ಇದನ್ನು ಸ್ವಾಗತಿಸುತ್ತಾ ಕೆಲವು ವಿಷಯಗಳನ್ನು ತಮ್ಮ ಮುಂದೆ ಇಡುವುದಕ್ಕೆ ಇಷ್ಟಪಡುತ್ತೇನೆ ನನ್ನ ಕ್ಷೇತ್ರದಲ್ಲಿ ಕೆಲವು ಪ್ರಾಥಮಿಕ ಶಾಲೆಗಳು, ಅದರಲ್ಲೂ ಬಾಲಕಿಯರ ಪ್ರೌಢಶಾಲೆಗಳು ಇವೆ. ಅಲ್ಲಿ ಸುಮಾರು ೪-೫ ವರ್ಷಗಳಿಂದ ಸರಿಯಾದ ಕಟ್ಟಡಗಳು ಇಲ್ಲ. ಅಲ್ಲಿ ಬಾಲಕಿಯರು ಮರದ ಕೆಳಗೆ ಪಾಠವನ್ನು ಕಲಿಯುತ್ತಿದ್ದಾರೆ. ಇದರ ಬಗ್ಗೆ ನಾನು ಹೋದ ಸಲ ಮಂತ್ರಿಗಳಿಗೂ ಪತ್ರ ಬರೆದಿದ್ದೇನೆ, ಅದಕ್ಕೆ ಅವರು ಈಗ ದುಡ್ಡು ಇಲ್ಲವೆಂದು ಹೇಳಿದ್ದಾರೆ. ಆದ್ದರಿಂದ ಮುಂದಿನ ಸಲದ ಬಜೆಟ್‌ನಲ್ಲಾದರೂ ಶೇಷಾದ್ರಿಪುರಂನಲ್ಲಿರುವ ಬಾಲಕಿಯರ ಪ್ರೌಢಶಾಲೆ ಬಗ್ಗೆ ದುಡ್ಡನ್ನು ಕೊಡಬೇಕು. ಅಲ್ಲಿ ಬಾಲಕಿಯರು ಮರದ ಕೆಳಗಡೆ ಪಾಠವನ್ನು ಕಲಿಯುತ್ತಿದ್ದಾರೆ. ಇಷ್ಟಲ್ಲದೆ, ಇವತ್ತಿನ ದಿವಸ ನಗರದಲ್ಲಿ ಕ್ಯಾಪಿಟೇಷನ್ ಶುಲ್ಕದ ಬಗ್ಗೆ ಕೆಲವು ಮಾತುಗಳನ್ನು ಆಡುವುದಕ್ಕೆ ಇಷ್ಟಪಡುತ್ತೇನೆ. ಈಗಾಗಲೇ ತಮಗೆ ಗೊತ್ತಿರುವಹಾಗೆ, ನರ್ಸರಿಯಿಂದ ಹಿಡಿದು, ಹೈಸ್ಕೂಲ್‌ವರೆಗೂ ಡೊನೇಷನ್ ಎಂದು ಕಲೆಕ್ಟ್ ಮಾಡುತ್ತಿದ್ದಾರೆ. ಹೈಸ್ಕೂಲು ಆದಮೇಲೆ, ಕಾಲೇಜಿನಲ್ಲಿ ಕ್ಯಾಪಿಟೇಷನ್ ಎಂದು ಶುರು ಮಾಡಿದ್ದಾರೆ. ಈ ಒಂದು ಶಿಕ್ಷಣ ಕ್ಷೇತ್ರ ಒಂದು ಲಂಚಾವತಾರ ಕ್ಷೇತ್ರವಾಗಿದೆ. ಇದರ ಬಗ್ಗೆ ಮಂತ್ರಿಗಳು ದೀರ್ಘವಾಗಿ ಯೋಚನೆ ಮಾಡಬೇಕಾಗಿದೆ. ನಮ್ಮ ಮಂತ್ರಿಗಳು ಎಲ್ಲರಿಗೂ ಗೊತ್ತಿರುವಹಾಗೆ, ಸಮಾಜವಾದದ ದಾರಿಯಲ್ಲಿ ಇರತಕ್ಕವರು. ಇವತ್ತು ನಮ್ಮ ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ನಾವು ಗೆದ್ದು ಬಂದಲ್ಲಿ ಕ್ಯಾಪಿಟೇಷನ್ ಫೀಜನ್ನು ತೆಗೆದುಹಾಕುತ್ತೇವೆಂದು ಹೇಳಿದ್ದೆವು, ಅದರಲ್ಲಿ ಮಂತ್ರಿಗಳೂ ಒಬ್ಬರು ಸದಸ್ಯರು ಆಗಿದ್ದಾರೆ ಇವತ್ತು ಮೆಡಿಕಲ್ ಕಾಲೇಜುಗಳಲ್ಲಿ ತಾವು ನೋಡಿದರೆ, ೫ ಲಕ್ಷ ರೂಪಾಯಿ ಕೊಡದೇ ಹೋದರೆ ಸೀಟು ಇಲ್ಲ. ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಸೀಟು ಶುಲ್ಕ ೭೫ ಸಾವಿರ ರೂಪಾಯಿವರೆಗೂ ಹೋಗಿದೆ. ಬಡ ವಿದ್ಯಾರ್ಥಿಗಳಿಗೆ ನಾವು ಇವತ್ತು ಯಾವ ರೀತಿ ನ್ಯಾಯವನ್ನು ಕೊಡಬೇಕಾಗಿದೆ ಎಂಬುದನ್ನು ನೋಡಬೇಕಾಗಿದೆ. ಇಂತಹ ವಿದ್ಯಾರ್ಥಿನಿಲಯ ಒಂದು ಬಿಸಿನೆಸ್ ವಿದ್ಯಾರ್ಥಿನಿಲಯಗಳಾಗಿ ಮಾರ್ಪಾಟಾಗಿವೆ. ಸರ್ಕಾರ ಇದರ ಬಗ್ಗೆ ದೀರ್ಘವಾಗಿ ಯೋಚನೆ ಮಾಡಬೇಕಾಗಿದೆ. ಮತ್ತು ನಿನ್ನೆ ನಮ್ಮ ಮಂತ್ರಿಗಳು, ನಮ್ಮ ಸ್ನೇಹಿತರು ಪ್ರಶ್ನೆ ಹಾಕಿದಾಗ, ಈ ಕ್ಯಾಪಿಟೇಷನ್ ಕಾಲೇಜುಗಳನ್ನು ರಾಷ್ಟ್ರೀಕರಣ ಏಕೆ ಮಾಡಬಾರದು ಎಂದು ಹೇಳಿದಾಗ, ಅಷ್ಟೊಂದು ಹಣ ಸರ್ಕಾರದಲ್ಲಿ ಇಲ್ಲವೆಂದು ಮಂತ್ರಿಗಳು ಹೇಳಿದರು. ಆದರೆ ದೇವರಾಜ ಅರಸುರವರ ಸರ್ಕಾರ ಇದ್ದಾಗ ಬಸ್‌ಗಳನ್ನು ರಾಷ್ಟ್ರೀಕರಣ ಮಾಡಿದರು. ಇದಕ್ಕೆ ಯಾವ ರೀತಿಯಾದ ಪರಿಹಾರ ಕೊಟ್ಟರೂ, ಅವರು ಕೋರ್ಟಿಗೆ ಹೋದರು. ಅದೇರೀತಿ ಈ ಕ್ಯಾಪಿಟೇಷನ್ ಬೆಳೆಯುತ್ತಿದೆ. ಇದನ್ನು ನಿಲ್ಲಿಸಬೇಕಾದರೆ, ಬೆಂಗಳೂರುನಗರದಲ್ಲಿ ಇದು ಒಂದು ದೊಡ್ಡ ಬಿಸಿನೆಸ್ ಆಗಿದೆ. ಒಂದು ಸಂಸಾರದಲ್ಲಿ ಮೂರು ಮಕ್ಕಳು ಇದ್ದರೆ, ಆ ಮಕ್ಕಳನ್ನು ಅವರು ಇವತ್ತು ಸಾಕಬೇಕಾದರೂ ಅವರು ಲಂಚ ಹೊಡೆಯಲೇ ಬೇಕಾಗುತ್ತದೆ. ಲಂಚವನ್ನು ಹೊಡೆಯಲೂ ನಾವು ಒಂದು ಆದೇಶವನ್ನು ತರಬೇಕಾಗುತ್ತದೆ. ಇಲ್ಲದೇ ಹೋದರೆ ಅವರು ಯಾವರೀತಿ ತಮ್ಮ ಮಕ್ಕಳನ್ನು ಸ್ಕೂಲಿಗೆ ಸೇರಿಸುವುದಕ್ಕೆ ಆಗುತ್ತದೆ ?

ನರ್ಸರಿ ಶಾಲೆಗಳಲ್ಲಿ ೫ ಸಾವಿರದಿಂದ ೧೦ ಸಾವಿರ ರೂಪಾಯಿಗಳವರೆಗೆ ಡೊನೇಷನ್ ತೆಗೆದುಕೊಳ್ಳುತ್ತಿದ್ದಾರೆ. ಇದರಲ್ಲಿ ಅಧಿಕಾರಿಗಳೂ ಸಹ ಅಲ್ಲಿನ ಪ್ರಿನ್ಸಿಪಾಲರುಗಳ ಜೊತೆ ಶಾಮೀಲಾಗಿದ್ದಾರೆ. ನಮ್ಮ ಮಂತ್ರಿಗಳ ಹೆಸರು ಬಹಳ ಚೆನ್ನಾಗಿದೆ. ಒಳ್ಳೆಯ ವ್ಯಕ್ತಿಗಳು. ಇಡೀ ಕರ್ನಾಟಕದಲ್ಲಿ ಅವರಿಗೆ ಗೌರವ ಇದೆ. ಆದರೆ ಈಗ ಏತಕ್ಕೆ ಅವರು ಇಷ್ಟೊಂದು ಸಡಿಲ ಬಿಟ್ಟಿದ್ದಾರೋ ಗೊತ್ತಿಲ್ಲ. ನಾನು ಅವರಲ್ಲಿ ಕೇಳಿಕೊಳ್ಳುವುದೆಂದರೆ, ನಾವೆಲ್ಲಾ ನಿಮ್ಮ ಹಿಂದೆ ಇದ್ದೇವೆ, ನಮ್ಮ ಕಾಂಗ್ರೆಸ್ ಪಕ್ಷದ ಹೆಸರು ಉಳಿಸಬೇಕಾಗಿದೆ. ರಾಜೀವ್‌ಗಾಂಧಿಯವರ ಹೆಸರು ಉಳಿಸಬೇಕಾಗಿದೆ. ಆದುದರಿಂದ ತಾವು ಈ ಒಂದು ಶಿಕ್ಷಣ ಕ್ಷೇತ್ರದಲ್ಲಿ ನಡೆಯುತ್ತಿರತಕ್ಕ ಲಂಚಾವತಾರವನ್ನು ತಡೆಗಟ್ಟಬೇಕು. ನನ್ನ ಕ್ಷೇತ್ರದಲ್ಲಿರುವ ಶೇಷಾದ್ರಿಪುರಂ ಹೈಸ್ಕೂಲಿನಲ್ಲಿ ಎಲ್ಲಾ ರಾಜಕಾರಣಿಗಳು ಇದ್ದಾರೆ. ನಾನು ಅವರ ಹೆಸರನ್ನು ಹೇಳುವುದಕ್ಕೆ ಇಚ್ಛೆಪಡುವುದಿಲ್ಲ. ಅವರು ಅಲ್ಲೇ ಅಕ್ಕಪಕ್ಕದಲ್ಲಿರುವ ಮಕ್ಕಳಿಗೆ ಸೀಟನ್ನು ಕೊಡುತ್ತಿಲ್ಲ. ದೂರದಲ್ಲಿರತಕ್ಕಂಥ, ದುಡ್ಡಿರತಕ್ಕಂಥ, ಚಿಕ್ಕಪೇಟೆ ಮತ್ತು ಬಳೆಪೇಟೆಗಳಲ್ಲಿ ಇರತಕ್ಕಂಥ ಸೇಟುಗಳ ಮಕ್ಕಳನ್ನು ಕರೆಯಿಸಿ ಅವರಿಂದ ದುಡ್ಡನ್ನು ವಸೂಲು ಮಾಡಿ ಸೀಟನ್ನು ಕೊಡುತ್ತಿದ್ದಾರೆ. ಇದೇ ರೀತಿ ನಡೆಯುತ್ತಿದೆ. ಇದರಿಂದ ಭಾರೀ ಅನ್ಯಾಯ ಆಗುತ್ತಿದೆ. ಮಾನ್ಯ ಮಂತ್ರಿಗಳು ಇದರ ಬಗ್ಗೆ ಯೋಚನೆ ಮಾಡಿ ಒಂದು ಕಮಿಟಿಯನ್ನು ನೇಮಕ ಮಾಡಿ, ಈ ಭ್ರಷ್ಟಾಚಾರವನ್ನು ತೊಲಗಿಸಬೇಕೆಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ, ತಮಗೆ ಹೃತ್ಪೂರ್ವಕವಾದ ವಂದನೆಗಳನ್ನು ಸಲ್ಲಿಸುತ್ತಾ ನನ್ನ ಎರಡು ಮಾತನ್ನು ಮುಗಿಸುತ್ತೇನೆ.

† ಶ್ರೀ ಹರ್ಷಕುಮಾರ್ ಗೌಡ (ಚಾಮರಾಜ).—ಸನ್ಮಾನ್ಯ ಅಧ್ಯಕ್ಷರೇ, ಈ ದಿನ ನಾವು ವಿದ್ಯಾ ಇಲಾಖೆಯ ಬೇಡಿಕೆಯ ಮೇಲಿನ ಚರ್ಚೆಯಲ್ಲಿ ಭಾಗವಹಿಸುತ್ತಾ, ಮಾನ್ಯ ಮಂತ್ರಿಗಳು ಏನು ಬೇಡಿಕೆಗಳನ್ನು ಇಟ್ಟಿದ್ದಾರೆ ಅದನ್ನು ಅನುಮೋದಿಸುತ್ತಾ, ಅನಿವಾರ್ಯವಾಗಿ ಕೆಲವು ಕಹಿಯಾದ ಸಲಹೆಗಳನ್ನು ಸರಕಾರಕ್ಕೆ ಕೊಡಬಯಸುತ್ತೇನೆ. ರಾಜ್ಯದ ಜನತೆಯ ಜನಾಂಗದ ಭವಿಷ್ಯತ್ತಿನ ಜವಾಬ್ದಾರಿಯನ್ನು ಹೊತ್ತಂಥ ವಿದ್ಯಾ ಇಲಾಖೆ, ಅದರ ಶಿಕ್ಷಣ ನೀತಿ, ಅದರ ಸ್ಥಿತಿಗತಿಗಳು ಅದರ ದಿವಾಳಿತನ, ಇವುಗಳಿಂದ ಅತ್ಯಂತ ದುರಂತದ ಹಂತವನ್ನು ತಲುಪಿದೆ. ಇಂಥ ಒಂದು ಭ್ರಷ್ಟ ವ್ಯವಸ್ಥೆಯ ಮಧ್ಯದಲ್ಲಿ ನಾವು ಇವತ್ತು ನಿಂತು ಮಾತನಾಡುತ್ತಾ ಅದರಲ್ಲೂ ಕೂಡಾ ಸಮಾಜವಾದಿ ಪರಂಪರೆಯಿಂದ ಬಂದಂಥ ಸಮರ್ಥದಕ್ಷ ಮಂತ್ರಿಗಳು ಇವತ್ತು ಅಂತಹ ವ್ಯವಸ್ಥೆಯನ್ನು ಸಮರ್ಥಿಸಿಕೊಂಡು ಹೋಗುವಂತಹ ಅನಿವಾರ್ಯ ಪರಿಸ್ಥಿತಿಯಲ್ಲಿದ್ದಾರೆ ಎಂದು ನಾನು ಭಾವಿಸುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್ (ವಿದ್ಯಾ ಸಚಿವರು).— ನಾನು ಈ ದಿವಾಳಿತನ ಇದನ್ನೆಲ್ಲಾ ಯಾವತ್ತು ಸಮರ್ಥಿಸಿದ್ದೆ ?

ಶ್ರೀ ಹರ್ಷಕುಮಾರ್ ಗೌಡ.—ಸಮರ್ಥಿಸಿದ್ದೀರಿ ಎಂದು ಹೇಳಲಿಲ್ಲ. ಸಮರ್ಥಿಸುವ ಅನಿವಾರ್ಯ ಪರಿಸ್ಥಿತಿಯಲ್ಲಿದ್ದೀರಿ, ಎಂದು ಹೇಳಿದ್ದೇನೆ. ಏತಕ್ಕೆ ಹೇಳಿದೆ ಎಂದರೆ, ಕಳೆದ ಸರಕಾರದ ಒಂದು ಪಾಪದ ಕೂಸಾದ ಈ ಶಿಕ್ಷಣ ನೀತಿ ಏನಿದೆ ಅದರ ಫಲವಾಗಿ ಹೆಂಡ ಮತ್ತು ಸಾರಾಯಿ ಲೈಸೆನ್ಸ್ ಅಥವಾ ಪರ್ಮಿಟ್ ಕೊಡುವ ರೀತಿಯಲ್ಲಿ ಶಾಲಾ ಕಾಲೇಜುಗಳನ್ನು ಕೊಟ್ಟಿರುವಂತಹ ಒಂದು ವ್ಯವಸ್ಥೆ ಇವೊತ್ತು ಇದೆ.

ಇಡೀ ರಾಜ್ಯಾದ್ಯಂತ ಪೋಷಕ ಬಾಂಧವರ ಮಕ್ಕಳು ತತ್ತರಿಸಿ ಹೋಗುವಂತಹ ಭ್ರಷ್ಟ ವ್ಯವಸ್ಥೆಯನ್ನು ನಾವು ನೋಡುತ್ತಿದ್ದೇವೆ. ಸುದ್ದಿ ಮಾಧ್ಯಮಗಳ ಮೂಲಕ ನಾವು ನೋಡಬಹುದು. ಪ್ರತಿ ನಿತ್ಯ ಸುದ್ದಿ ಮಾಧ್ಯಮಗಳು ಸರ್ಕಾರಕ್ಕೆ ಒತ್ತಾಯ ಮಾಡುತ್ತಿವೆ. ಮತ್ತು ಶಾಸಕರು ಜನತೆಯ ಮನೆಗಳಿಗೆ ಹೋದಾಗ ನಮ್ಮ ಮಕ್ಕಳಿಗೆ ಡೊನೇಶನ್ ಇಲ್ಲದೆ ಸೀಟ್ ಕೊಡಿಸಬೇಕೆನ್ನುವ ಒತ್ತಾಯವನ್ನು ಮಾಡುತ್ತಿರುವಂತಹ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾರೆ. ಒಂದು ಕಡೆ ರೇಷನ್ ಅಂಗಡಿಗಳ ತರಹ ಸರ್ಕಾರಿ ಶಾಲೆಗಳನ್ನು ತೆಗೆಯುವುದು ಇನ್ನು ಒಂದು ಕಡೆ ಖಾಸಗೀ ಶಾಲೆಗಳಿಗೆ ಪರ್ಮಿಷನ್ ಕೊಡುವುದು ಇಂತಹ ಒಂದು ದ್ವಂದ್ವ ನೀತಿ ಕೂಡ ಇದಕ್ಕೆ ಕಾರಣವಾಗಿದೆ. ರಾಜ್ಯದಲ್ಲಿ ಖಾಸಗೀ ಶಾಲೆಗಳನ್ನು ಬಲಿಷ್ಟವಾಗಿ ಬೆಳೆಸತಕ್ಕಂಥ ವಾತಾವರಣ ಇದೆ. ಅದರ ಜೊತೆ ಜೊತೆಯಲ್ಲಿಯೇ ಬಳಲಿ ಬೇಸತ್ತು ಬೆಂಡಾಗಿರುವ ಸರ್ಕಾರಿ ಶಾಲೆಗಳು ಅತ್ಯಂತ ದುರಂತಮಯ ಅವ್ಯವಹಾರಗಳ ಒಂದು ರೂಪವನ್ನು ತಲುಪಿರುವುದನ್ನು ನಾವು ಕಾಣುತ್ತಿದ್ದೇವೆ. ಇಡೀ ರಾಜ್ಯದಲ್ಲಿ ಈ ಒಂದು ವ್ಯವಸ್ಥೆ ಒಂದು ವ್ಯಾಪಾರವಾಗಿ ಒಂದು ದಂಧೆಯಾಗಿ, ಒಂದು ಶೋಷಣೆ ರೂಪವಾಗಿ ಬೆಳೆಯುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಈ ಒಂದು ಉದ್ದಿಮೆ ಬಗ್ಗೆ ನಾನು ಮಾನ್ಯ ಮಂತ್ರಿಗಳಿಗೆ ಪರೋಕ್ಷವಾಗಿ ಒಂದು ಸಲಹೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಸರ್ಕಾರ ಸಾರಿಗೆ ನೀತಿಯನ್ನು ರೂಪಿಸಿದ್ದಾರೆ. ಒಂದು ಕಡೆ ರಾಷ್ಟ್ರೀಕರಣ ವ್ಯವಸ್ಥೆಯಾಗಬೇಕು ಸಾರಿಗೆ ನೀತಿಯಲ್ಲಿ ಇವತ್ತು ನಾವು ಗ್ರಾಹಕರಿಗೆ ಹೆಚ್ಚಿನ ಸೇವೆಯನ್ನು ಮಾಡ

ಬೇಕೆಂದು ಹೇಳುತ್ತಿದ್ದೇವೆ. ಅದರಂತೆ ವಿದ್ಯೆ ದಾನ ಒಂದು ಪವಿತ್ರವಾದ ದಾನ. ಈ ವ್ಯವಸ್ಥೆಯು ವಿದ್ಯಾ ಕ್ಷೇತ್ರದಲ್ಲಿಯೂ, ಕೂಡ ದ್ವಂದ್ವ ನೀತಿಯನ್ನು ಬಿಟ್ಟು ತಾವು ಯಾವುದಾದರೂ ಒಂದು ನಿರ್ಧಾರಕ್ಕೆ ಬನ್ನಿ. ಇಲ್ಲಾ ಈ ರಾಜ್ಯದಲ್ಲಿ ಹೆಂಡ ಸಾರಾಯಿ ಅಬಕಾರಿ ನೀತಿಯಂತೆ ಹೆಂಡ ಸಾರಾಯಿಯನ್ನು ಪ್ರತಿ ವರ್ಷಕ್ಕೆ ಒಂದು ಸಾರಿ ಹರಾಜು ಹಾಕುವಂತೆ ಇವುಗಳನ್ನು ಹಾಕಿ ಈ ಸಾರಿ ಬೆಂಗಳೂರಿನಲ್ಲಿ ೭ ಕೋಟಿ ರೂಪಾಯಿಗಳು ಬಂದಿದೆ ಹಾಗೆಯೇ ನರ್ಸರಿ ಶಾಲೆಗಳನ್ನು ಪ್ರಾಥಮಿಕ ಶಾಲೆಗಳನ್ನು ಪ್ರೌಢ ಶಾಲೆಗಳನ್ನು ಪಿ.ಯು.ಸಿ, ಕಾಲೇಜು ಮೆಡಿಕಲ್ ಮತ್ತು ಇಂಜಿನೀಯರಿಂಗ್ ತಾಂತ್ರಿಕ ಶಿಕ್ಷಣ ಐ.ಟಿ.ಐ. ಇತ್ಯಾದಿಗಳನ್ನು ವರ್ಷಕ್ಕೆ ಒಂದು ಸಾರಿ ಹರಾಜು ಹಾಕಿದರೆ ಇಡೀ ಉದ್ಯಮ ಲಾಭದಾಯಕವಾಗಿ ಬೆಳೆದು ಸರ್ಕಾರಕ್ಕೆ ಆದಾಯ ಬರುತ್ತದೆ. ಇದರಿಂದ ರಾಜ್ಯದಲ್ಲಿ ಸುಮಾರು ೨೦೦ ಕೋಟಿ ರೂಪಾಯಿಗಳಿಗೂ ಅಧಿಕ ಲಾಭ ಬರುವಂತಹ ವ್ಯವಸ್ಥೆಯಾಗುತ್ತದೆ. ನಾನು ಬಹಳ ನೊಂದ ಮನಸ್ಸಿನಿಂದ ಈ ಮಾತನ್ನು ಹೇಳುತ್ತಿದ್ದೇನೆ. ಪರೋಕ್ಷವಾಗಿ ಜನರ ರಕ್ತ ಹೀರುವಂತಹ ಈ ಒಂದು ವ್ಯವಸ್ಥೆಯನ್ನು ನಾವು ಒಪ್ಪಿಕೊಂಡು ಕುಳಿತಿದ್ದೇವೆ. ಒಬ್ಬ ಶಾಸಕರಾಗಿ ಪಟ್ಟಣ ಪ್ರದೇಶಗಳ ಶಾಸಕರು ಯಾರ್ಯಾರು ಇದ್ದಾರೋ ಅವರೆಲ್ಲ ಪ್ರತಿನಿತ್ಯ ಅವಮಾನವನ್ನು ಎದುರಿಸುತ್ತಿದ್ದೇವೆ. ಅವರು ಯಾರೇ ಶಾಸಕರು ಇರಬಹುದು, ಅವರು ಸಮಾಜದಲ್ಲಿ ಎಷ್ಟೇ ಪ್ರಭಾವದವರು ಇದ್ದರೂ ಅವರನ್ನು ಜನತೆ ಒಂದು ರೀತಿ ಅಸ್ಪೃಶ್ಯ ರೀತಿಯಲ್ಲಿ ನೋಡುವಂತಹ ಮನೋಭಾವನೆ ಈ ಶೈಕ್ಷಣಿಕ ಸಂಸ್ಥೆಗಳಲ್ಲಿ ನಡೆಯುತ್ತಿದೆ. ನಾನು ಏತಕ್ಕೆ ಇದನ್ನು ಮಾನ್ಯ ಮಂತ್ರಿಗಳಿಗೆ ಪರೋಕ್ಷವಾಗಿ ಹೇಳುತ್ತಿದ್ದೇನೆ ಎಂದರೆ ಯಾವ ಒಂದು ದುರಂತಮಯ ವ್ಯವಸ್ಥೆಯನ್ನು ನಾವು ತಲುಪಿದ್ದೇವೆ ಎನ್ನುವುದಕ್ಕೆ ಒಂದು ಉದಾಹರಣೆ ಇದೆ. ಮೈಸೂರು ನಗರದಲ್ಲಿ ಒಂದರಲ್ಲಿಯೇ ತಮಗೆ ೧೦೦ ಕೋಟಿ ರೂಪಾಯಿಗಳಿಗೂ ಅಧಿಕ ಲಾಭ ಲೂಟಿಯಾಗತಕ್ಕಂಥಾದ್ದು ಇದೆ. ಈ ವಿದ್ಯೆ ಶೋಷಣೆಯಾಗಿ ನೂರು ಕೋಟಿ ರೂಪಾಯಿಗಳವರೆಗೂ ಲೂಟಿಯಾಗಿದೆ. ಬೆಂಗಳೂರು ನಗರದಲ್ಲಿ ೧೦೦ ಕೋಟಿ ರೂಪಾಯಿಗಳಿಗೂ ಅಧಿಕ ಲೂಟಿಯಾಗುತ್ತಿದೆ, ಮೆಡಿಕಲ್ ಮತ್ತು ಇಂಜಿನೀಯರಿಂಗ್ ಮತ್ತು ತಾಂತ್ರಿಕ ಶಿಕ್ಷಣದಿಂದ ಸುಮಾರು ೨೦೦ ಕೋಟಿ ರೂಪಾಯಿಗಳು ಪರೋಕ್ಷವಾಗಿ ಜನರಿಂದ ಲೂಟಿಯಾಗಿ ಹಗಲು ದರೋಡೆ ಮಾಡುವ ವ್ಯವಸ್ಥೆಯನ್ನು ನಾವು ನೋಡುತ್ತಿದ್ದೇವೆ. ಇದನ್ನು ತಪ್ಪಿಸುವುದಕ್ಕೆ ಪ್ರಾಮಾಣಿಕವಾದ ಪ್ರಯತ್ನವನ್ನು, ಯಾವ ಸಮಾಜವಾದದ ಹಿತಚಿಂತನೆಯನ್ನು ಹೊಂದಿರುವ ವಿದ್ಯಾ ಇಲಾಖೆಯ ಸಚಿವರು ಇದ್ದಾರೆ ಅವರು ಈ ಒಂದು ಅಧಿಕಾರವನ್ನು ಪಡೆದಿರುವಂತಹ ಸಂದರ್ಭದಲ್ಲಿ ಅವರು ಇದನ್ನು ಸಮರ್ಥ ರೀತಿಯಲ್ಲಿ ತಮ್ಮ ಇಲಾಖೆಯನ್ನು ನಡೆಸಿಕೊಂಡು ಹೋಗುವಂತೆ ನಾನು ಒತ್ತಾಯ ಮಾಡುತ್ತೇನೆ. ಜೊತೆಗೆ ನನ್ನ ಕ್ಷೇತ್ರದಲ್ಲಿ ಜಿಲ್ಲಾ ಪರಿಷತ್ತಿನ ಒಂದು ಪ್ರಭಾವ ಯಾವರೀತಿ ಇದೆ ಎಂದು ಹೇಳುತ್ತೇನೆ ನಮ್ಮ ಕ್ಷೇತ್ರದಲ್ಲಿ ಕುಂಬಾರಕೊಪ್ಪಲು ಎಂದು ಹೇಳಿ ಒಂದು ಅರೆ ಗ್ರಾಮೀಣ ಪ್ರದೇಶ ಇದೆ. ಅಲ್ಲಿ ಈಗಾಗಲೇ ಒಂದು ಸರಕಾರಿ ಶಾಲೆ ಇದೆ. ಅದರ ಜೊತೆಗೆ ಈಗ ಒಂದು ಖಾಸಗಿ ಶಾಲೆಗೆ ಮತ್ತು ಮತ್ತೊಂದು ಸರಕಾರಿ ಶಾಲೆಗೆ ಅನುಮತಿ ಕೊಡುವ ವ್ಯವಸ್ಥೆಯನ್ನು ಜಿಲ್ಲಾಪರಿಷತ್ತಿನವರು ಮಾಡಿದ್ದಾರೆ. ಖಾಸಗೀ ಶಾಲೆಗೆ ಈಗಾಗಲೇ ವಿದ್ಯಾರ್ಥಿಗಳನ್ನು ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಆದರೆ ಸರಕಾರಿ ಶಾಲೆಗೆ ಯಾವುದೇ ಒಂದು ಅವಕಾಶ ಮಾಡಿಕೊಡದೆ ಸ್ಥಗಿತ ಮಾಡಿದ್ದಾರೆ. ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗಿದೆ. ಇದನ್ನು ಸರಿಪಡಿಸಬೇಕೆಂದು ಮಾನ್ಯ ಮಂತ್ರಿಗಳನ್ನು ಒತ್ತಾಯಿಸುತ್ತೇನೆ. ಪ್ರತಿಷ್ಠಿತವಾದಂಥ ನಮ್ಮ ಮೈಸೂರು ವಿಶ್ವವಿದ್ಯಾನಿಲಯ ಇಂದು ಯಾವುದೇ ಲಂಗುಲಗಾಮಿಲ್ಲದ ಪರಿಸ್ಥಿತಿಗೆ ಬಂದಿದೆ. ಅಲ್ಲಿನ ಉಪಕುಲಪತಿಗಳ ಮೇಲೆ ಈ ಒಂದು ವ್ಯವಸ್ಥೆ ಉಂಟಾಗಿದೆ. ಪ್ರತಿನಿತ್ಯ ಸಂಚಾರ ಮಾಡುವ ಸಂಚಾರಿ ಉಪಕುಲಪತಿಗಳನ್ನು ನಾವು ನೋಡುತ್ತಿದ್ದೇವೆ. ಅವರು ಯಾವುದೇ ಸಾರ್ವಜನಿಕರಿಗಾಗಲೀ, ವಿದ್ಯಾರ್ಥಿಗಳಿಗಾಗಲೀ, ಸಿಬ್ಬಂದಿಗಳಿಗಾಗಲೀ, ಸಿಗದೇ ಇರತಕ್ಕಂಥ ವ್ಯವಸ್ಥೆಯನ್ನು ನಾವು ನೋಡುತ್ತಿದ್ದೇವೆ. ವಿದ್ಯಾ ಕ್ಷೇತ್ರದಲ್ಲಿ ಉತ್ಪಾದನೆಯಾಗತಕ್ಕ ವಸ್ತುಗಳು ಯಾರು ಎಂದರೆ, ಅಲ್ಲಿ ಪದವಿ ಪಡೆದು ಹೊರಬರತಕ್ಕ ಯುವಕರು.

(ಶ್ರೀಯುತ ಸ್ವಾಮಿರಾವ್ ಅವರು ಅಧ್ಯಕ್ಷರ ಪೀಠದಲ್ಲಿ ಉಪಸ್ಥಿತರಾದರು)

ನಮ್ಮ ಸಮಾಜದಲ್ಲಿ ಕೇವಲ ಎರಡು ಶತಮಾತ್ರ ಅಂದರೆ ಕೇವಲ ೧೦ ಪರ್ಸೆಂಟಿನಷ್ಟು ಜನ ಯುವಕರು ಮಾತ್ರ ಅಂಗೀಕಾರ ಆಗುವಂತಹ ವ್ಯವಸ್ಥೆ ಇದೆ. ಇನ್ನುಳಿದ ಶೇಕಡಾ ೯೦ ರಷ್ಟು ಜನ ಯುವಕರು ಯಾವುದೇ ಮೊಹಲ್ಲಾಕ್ಕೆ ಹೋಗಲಿ. ಯಾವುದೇ ಬೀದಿಗೆ ಹೋಗಲಿ, ಮೂಲೆಗಳಲ್ಲಿ ನಿಂತುಕೊಂಡು ನಿರುದ್ಯೋಗ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ, ಇದು ವಿದ್ಯಾ ಇಲಾಖೆಯ ನೀತಿಯು, ಶಿಕ್ಷಣ ನೀತಿಯ ಕೊರತೆಯ ಅಭಾವದಿಂದ ಆಗಿರುವಂತಹ ಒಂದು ವ್ಯವಸ್ಥೆಯಾಗಿದೆ. ಈ ವ್ಯವಸ್ಥೆಯಿಂದ ಇವತ್ತು ಸಮಾಜದಲ್ಲಿ ಹಲವಾರು ರೀತಿಯ ಕ್ಷೋಭೆಗಳನ್ನು ಎದುರಿಸತಕ್ಕಂಥ ಹಂತವನ್ನು ನಾವು ತಲುಪಿದ್ದೇವೆ. ಇದರಿಂದ ಲಾ ಅಂಡ್ ಆರ್ಡರ್ ಪ್ರಾಬ್ಲಂನ್ನೂ ಕೂಡಾ ಎದುರಿಸುತ್ತಿದ್ದೇವೆ. ಕೊನೆಯ

ದಾಗಿ ವಿದ್ಯಾ ವಿಕಾಸ ಯೋಜನೆ ಬಗ್ಗೆ ಹೇಳುವುದಾದರೆ, ಸಮಾಜದ ದುರ್ಬಲವರ್ಗಗಳ ಪರವಾಗಿ ಬಡ ಜನತೆಯ ಪರವಾಗಿ ತಾವು ಈ ಯೋಜನೆಯನ್ನು ಹಾಕಿಕೊಂಡಿದ್ದೀರಿ. ಒಂದರಿಂದ ೪ನೇ ತರಗತಿಯವರೆಗೆ ಓದುತ್ತಿರುವ ವಿದ್ಯಾರ್ಥಿಗಳಿಗೆ ಉಚಿತ ಪಠ್ಯಪುಸ್ತಕಗಳ ಸರಬರಾಜು. ಜೊತೆಗೆ ಒಂದು ಮತ್ತು ಎರಡನೇ ತರಗತಿಗಳಲ್ಲಿ ಓದುತ್ತಿರುವ ಮಕ್ಕಳಿಗೆ ಉಚಿತ ಸಮವಸ್ತ್ರ ಸರಬರಾಜು ಮಾಡುವ ವ್ಯವಸ್ಥೆ, ಮೂರರಿಂದ ಏಳನೇ ತರಗತಿಯವರೆಗೆ ಓದುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಹೆಣ್ಣುಮಕ್ಕಳಿಗೆ ಉಚಿತ ಸಮವಸ್ತ್ರ ಕೊಡುವ ವ್ಯವಸ್ಥೆಗೆ ಸರಕಾರ ಸುಮಾರು ೫ ಕೋಟಿ ರೂಪಾಯಿಗಳನ್ನು ಕೊಡುವ ವ್ಯವಸ್ಥೆ ಇದೆ. ಈ ಒಂದು ಬಾಬಿಗೆ ೧೦ ಕೋಟಿ ರೂಪಾಯಿಗಳಾದರೂ ಇಲ್ಲದೇ ಹೋದರೆ ಇದನ್ನು ಯಾವರೀತಿ ನಿಭಾಯಿಸುವುದಕ್ಕೆ ಸಾಧ್ಯ ಆಗುತ್ತದೆ ಎಂಬುದು ಒಂದು ಸಂದೇಹ ಇದು ಸಂಪೂರ್ಣವಾಗಿ ಕಾರ್ಯಗತವಾಗುವಂತೆ ಹಣದ ವ್ಯವಸ್ಥೆಯನ್ನು ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ನಾನು ಒತ್ತಾಯಿಸುತ್ತೇನೆ. ಕೊನೆಯದಾಗಿ ಈ ಒಂದು ರಾಷ್ಟ್ರದಲ್ಲಿ, ನಾಡಿನಲ್ಲಿ. ಇದು ಧರ್ಮನಿರಪೇಕ್ಷ ರಾಷ್ಟ್ರ, ಇದು ಜಾತ್ಯಾತೀತ ರಾಷ್ಟ್ರ ಎಂದು ನಾವು ಹೇಳಬಹುದು. ಆದರೆ ಎಲ್ಲವನ್ನೂ ನಾವು ಒಪ್ಪಿಕೊಂಡು ಹೋಗುವ ವ್ಯವಸ್ಥೆಯನ್ನು ಆಧರಿಸಿಕೊಂಡು ಇರಬೇಕಾದರೆ, ಎಲ್ಲಾ ಧರ್ಮಗಳನ್ನೂ. ಎಲ್ಲಾ ಭಾಷೆಗಳನ್ನೂ, ಎಲ್ಲಾ ಜಾತಿ ಮತ್ತು ಜನಾಂಗಗಳನ್ನು ಪ್ರೀತಿ ಮತ್ತು ವಿಶ್ವಾಸಗಳಿಂದ ಗೌರವಿಸುವಂತಹ ಒಂದು ಮನೋಭಾವನೆಯನ್ನು ಬೆಳೆಸುವಂತಹ ವಿದ್ಯಾಭ್ಯಾಸವನ್ನು ಕೊಡುವಂತಹ ವ್ಯವಸ್ಥೆ ಆಗಬೇಕೆಂದು, ಈ ದಿಕ್ಕಿನಲ್ಲಿ ಪ್ರಾಮಾಣಿಕವಾದ ಪ್ರಯತ್ನವನ್ನು ನಾವು ಮಾಡಬೇಕೆಂದು ಹೇಳಿ ಇಲ್ಲಿ ಒತ್ತಾಯಿಸುತ್ತೇನೆ. ಶಿಕ್ಷಣಕ್ಷೇತ್ರದಲ್ಲಿ ಖಾಲಿ ಇರುವಂತಹ ಹುದ್ದೆಗಳನ್ನು ಅತ್ಯಂತ ಶೀಘ್ರವಾಗಿ ಭರ್ತಿ ಮಾಡುವ ಮೂಲಕ ಈ ಕ್ಷೇತ್ರದ ಪ್ರಗತಿಯನ್ನು ಸಾಧಿಸಬೇಕೆಂದು ಕೂಡಾ ನಾನು ತಮ್ಮಲ್ಲಿ ಒತ್ತಾಯಿಸುತ್ತೇನೆ. ಕೊನೆಯದಾಗಿ ಕನ್ನಡ ನಾಡು ಮತ್ತು ನುಡಿಯ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಕನ್ನಡ ನಾಡಿನ ಇತಿಹಾಸ, ಪರಂಪರೆ ಮತ್ತು ಸಂಸ್ಕೃತಿಯನ್ನು ಉಳಿಸಿ ಬೆಳೆಸಿಕೊಳ್ಳುವಂತಹ ಒಂದು ವ್ಯವಸ್ಥೆ ಮಾಡುವುದಕ್ಕೋಸ್ಕರ, ನಮ್ಮ ರಾಜ್ಯಪಾಲರ ಭಾಷಣದಲ್ಲಿ ಮತ್ತು ನಮ್ಮ ಹಣಕಾಸಿನ ಒಂದು ಬೇಡಿಕೆಯ ಸಂದರ್ಭದಲ್ಲಿ, ಕರ್ನಾಟಕ ರಾಜ್ಯದ ಹಂಪೆಯಲ್ಲಿ ಕನ್ನಡ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡುತ್ತೇವೆಂದು ಸರಕಾರದವರು ಹೇಳಿದ್ದಾರೆ. ಇವತ್ತು ನಾನು ಮಾನ್ಯ ಮಂತ್ರಿಗಳನ್ನು ಒತ್ತಾಯ ಮಾಡುತ್ತೇನೆ.

ಅತ್ಯಂತ ಶೀಘ್ರದಲ್ಲಿ ಮತ್ತು ತುರ್ತಾಗಿ ಹಂಪಿಯಲ್ಲಿ ಕನ್ನಡ ವಿಶ್ವವಿದ್ಯಾನಿಲಯವನ್ನು ಆರಂಭ ಮಾಡುವುದಕ್ಕೆ ಪ್ರಯತ್ನವನ್ನು ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಕೊನೆಯದಾಗಿ ರಾಜ್ಯದಲ್ಲಿ ಸಮಸ್ತ ಜನರ ಶೋಷಣೆಯು ಏನು ಆಗುತ್ತಾ ಇದೆ ಅದನ್ನು ತಪ್ಪಿಸುವಂಥ ಶಕ್ತಿ ಮತ್ತು ಧೈರ್ಯವನ್ನು ತಮಗೆ ಭಗವಂತನು ತಂದುಕೊಡಲಿ ಎಂದು ಭಗವಂತನಲ್ಲಿ ಪ್ರಾರ್ಥನೆ ಮಾಡುತ್ತಾ ತಾವುಗಳು ಶಿಕ್ಷಣ ಇಲಾಖೆಯ ಕುರಿತು ಇಟ್ಟ ಬೇಡಿಕೆಗಳನ್ನು ನಾನು ಅನುಮೋದಿಸುತ್ತಾ, ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟ ಅಧ್ಯಕ್ಷರಿಗೆ ನನ್ನ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀಮತಿ ಚಂದ್ರಪ್ರಭಾ ಅರಸ್ (ಹುಣಸೂರು).—ಸನ್ಮಾನ್ಯ ಸಭಾಧ್ಯಕ್ಷರೆ, ಇವೊತ್ತು ಶಿಕ್ಷಣ ಇಲಾಖೆಯ ಬೇಡಿಕೆಗಳ ಮೇಲೆ ಇಟ್ಟಿರುವ ಬೇಡಿಕೆಗಳ ಮೇಲೆ ಮಾತನಾಡಲು ನನಗೆ ಕೆಲವು ನಿಮಿಷಗಳ ಅವಕಾಶವನ್ನು ಕೊಟ್ಟಿದ್ದೀರಿ. ಈ ಇಲಾಖೆ ಕುರಿತು ಇಡೀ ದಿವಸವೆಲ್ಲಾ ಮಾತನಾಡಿದರೂ ಮುಗಿಯಲಾರದಷ್ಟು ಸಮಸ್ಯೆಗಳು ಅಂತೆಯೇ ಕೊಡುವ ಸಲಹೆಗಳೂ ಕೂಡ ಇವೆ. ಆದರೆ ನಾನು ಕೆಲವೇ ಕೆಲವು ವಿಚಾರಗಳನ್ನು ಸಂಕ್ಷಿಪ್ತವಾಗಿ ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ನಾಡಿನಲ್ಲಿ ಸಾಕ್ಷರತೆ ಕೇವಲ ಶೇಕಡಾ ೩೮ರಷ್ಟು ಮಾತ್ರ ಇದೆ. ಇಂಥ ನಾಡಿನಲ್ಲಿ ಶಿಕ್ಷಣಕ್ಕೆ ಎಲ್ಲಾ ರೀತಿಯ ಪರಿಸರ ನಿರ್ಮಾಣವಾಗಿದ್ದರೂ ಕೂಡ ಅವುಗಳ ಉಪಯೋಗವನ್ನು ಸೂಕ್ತ ರೀತಿಯಲ್ಲಿ ಮಾಡಿಕೊಳ್ಳುತಕ್ಕಂಥ ಮಾರ್ಗಗಳು ಯಾವುವು ಇವೆ, ಅವುಗಳನ್ನು ನಾವು ಇನ್ನೂ ಸರಳೀಕರಣಗೊಳಿಸಬೇಕಾಗುತ್ತದೆ ಎಂದು ನಾನು ಅಭಿಪ್ರಾಯ ಪಡುತ್ತೇನೆ. ಹಿಂದಿನ ಗುರುಕುಲ ಪದ್ಧತಿಯನ್ನು ನಾವು ನೋಡಿದ್ದೇವೆ. ಆಗ ಗುರುವಿನ ಬಳಿಯಲ್ಲಿ ಶಿಷ್ಯರುಗಳು ಶಿಕ್ಷಣವನ್ನು ಪಡೆಯುತ್ತಾ ಇದ್ದರು. ವಿದ್ಯಾರ್ಥಿಗಳು ಅಲ್ಲಿಯೇ ತಮ್ಮ ದಿನಚರಿಗಳನ್ನು ಮಾಡಿ ಮುಗಿಸಿಕೊಂಡು ಗುರುಗಳು ಹೇಳಿದಂಥ ಕೆಲಸಗಳನ್ನು ಮಾಡಿಕೊಟ್ಟು ಅವರಲ್ಲಿ ಭಯ-ಭಕ್ತಿ, ನಯ-ವಿನಯತೆ ಮತ್ತು ಪ್ರೀತಿ ವಿಶ್ವಾಸಗಳನ್ನು, ಗೌರವಗಳನ್ನು ತೋರಿಸಿ ಗುರುಗಳಿಂದ ಒಳ್ಳೆಯ ಶಿಕ್ಷಣವನ್ನು ಪಡೆಯುತಕ್ಕಂಥ ಒಂದು ಪದ್ಧತಿ ಇತ್ತು. ಹೀಗಾಗಿ ಗುರುಶಿಷ್ಯರಲ್ಲಿ ಒಂದು ರೀತಿಯ ಮಧುರ ಬಾಂಧವ್ಯ ಅನ್ಯೋನ್ಯತೆ ಇರುತ್ತಿತ್ತು. ಆದರೆ ಇಂದಿನ ನಮ್ಮ ಶಿಕ್ಷಣ ಪದ್ಧತಿಯಲ್ಲಿ ಮಕ್ಕಳ ಸ್ಕೂಲ್ ಮನೆಯಲ್ಲಿಯೇ ಅಲ್ಲವೇ ? ಎಂಬ ಇಂಥ ಮಾತಿನ ರೀತ್ಯಾ ಮಕ್ಕಳ ತಾಯಂದಿರು ಮೊದಲ ಗುರು ಆಗತಕ್ಕಂಥ ಸಂದರ್ಭ ಇದೆ. ಕಾರಣ

ಮಕ್ಕಳ ತಮ್ಮ ಶೈಶವಾವಸ್ಥೆಯಲ್ಲಿರುತ್ತಾರೆ. ಇಂದಿನ ನಮ್ಮ ಸಾಮಾಜಿಕ ಮತ್ತು ಕೌಟುಂಬಿಕ ನೀತಿ, ಪದ್ಧತಿ ಹಾಗೂ ಪರಿಸರ ಯಾವ ರೀತಿಯಲ್ಲಿ ಬದಲಾವಣೆಯಾಗಿದೆ ಆ ಪ್ರಕಾರವಾಗಿ ಸಣ್ಣ ಸಣ್ಣ ಕುಟುಂಬಗಳಾಗಿವ್ವಾವೆ. ತಾಯಂದಿರು ಗ್ರಾಮಾಂತರ ಪ್ರದೇಶಗಳಲ್ಲಿ ಜೀವನೋಪಾಯಕ್ಕಾಗಿ ಹೊಲ ಗದ್ದೆಗಳಿಗೆ ಕೆಲಸ ಮಾಡುವುದಕ್ಕೆ ಹೋಗ ಬೇಕಾಗುತ್ತದೆ. ನಗರ ಪ್ರದೇಶಗಳಲ್ಲಿಯೂ ಕೂಡ ಉದ್ಯೋಗಾವಕಾಶಗಳನ್ನು ದೊರಕಿಸಿಕೊಂಡು ಕರ್ತವ್ಯ ನಿರತರಾಗ ಬೇಕಾಗಿದೆ. ಹಿಂದಿನ ಏಕ ಕುಟುಂಬ ಪದ್ಧತಿಯಲ್ಲಿದ್ದಂತೆ ಮನೆಯಲ್ಲಿ ತಾತ–ಅಜ್ಜ ಅಜ್ಜಿಯಂದಿರು, ಹಿರಿಯರು ಮಕ್ಕಳನ್ನು ನೋಡಿಕೊಳ್ಳುತ್ತಿದ್ದ ಒಂದು ಪರಿಸರ ಇಂದು ಇಲ್ಲವಾಗಿದೆ. ಹೀಗಾಗಿ ಎರಡು ವರ್ಷಗಳು ಆದ ಕೂಡಲೆ ಮಕ್ಕಳನ್ನು ಕಿಂಡರ್‌ಗಾರ್ಟನ್–ಶಿಶುವಿಹಾರಗಳಲ್ಲಿ ಬಿಡಬೇಕಾದಂಥ ಒಂದು ಸನ್ನಿವೇಶ ಬಂದಿದೆ. ಆದುದರಿಂದ ಸರಕಾರದವರು ಎಲ್ಲಾ ವಿದ್ಯಾ ಸಂಸ್ಥೆಗಳನ್ನು ಈ ಮಟ್ಟದಿಂದಲೇ ಪ್ರಾರಂಭ ಮಾಡುವುದಕ್ಕೆ ಅಸಾಧ್ಯವಾದಂಥ ಒಂದು ಪರಿಸ್ಥಿತಿ ಇರುವುದರಿಂದ ಖಾಸಗೀ ಶಿಶುವಿಹಾರಗಳು, ಬಾಲವಾಡಿಗಳು ಮತ್ತು ಪ್ರೈಮರಿ ಶಾಲೆಗಳು ಹೆಚ್ಚಿನ ಸಂಖ್ಯೆಯಲ್ಲಿ ಉದ್ಭವವಾಗುವುದಕ್ಕೆ ಕಾರಣ ವಾಗಿದೆ. ಈ ನಿಟ್ಟಿನಲ್ಲಿ ಸರಕಾರವೇ ಇಡೀ ಶಿಕ್ಷಣ ವ್ಯವಸ್ಥೆಯನ್ನು ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯವಾಗದಿರಬಹುದು. ಆದರೆ ಖಾಸಗೀ ಕ್ಷೇತ್ರದಲ್ಲಿ ಶಿಕ್ಷಣದ ಒಂದು ರೀತಿಯ ವ್ಯವಸ್ಥೆಯು ಏನು ಬೆಳೆಯುತ್ತಾ ಇದೆ ಇದರಬಗ್ಗೆ ಸರಿಯಾದ ಒಂದುನೀತಿ ಸಂಹಿತೆ ಮತ್ತು ನಿಯಂತ್ರಣವು ಸರಕಾರದ ಪತಿಯಿಂದ ಇಲ್ಲದೇ ಹೋದರೆ ಮುಂದೆ ಈ ದಿಸೆಯಲ್ಲಿ ಕಷ್ಟವಾಗುತ್ತದೆ, ಇಂದಿನ ಶಿಕ್ಷಣ ಪದ್ಧತಿಯಲ್ಲಿ ನಗರ ಪ್ರದೇಶಗಳಲ್ಲಿ ಪಟ್ಟಣ ಪ್ರದೇಶಗಳಲ್ಲಿ, ಸಾಕಷ್ಟು ಪ್ರಮಾಣದಲ್ಲಿ ಹಣಕಾಸಿನ ವ್ಯವಸ್ಥೆ ಬೇಕಾಗುತ್ತದೆ. ಅವುಗಳಿಗೆ ಒಳ್ಳೆಯ ಸುವಸ್ಥಿತವಾದ ಕೊಠಡಿಗಳು ಬೇಕಾಗುತ್ತವೆ. ಹಾಗೆಯೇ ಸಿಬ್ಬಂದಿ ಇತ್ಯಾದಿ ಅವಶ್ಯಕ ವೆಚ್ಚಗಳಿಗಾಗಿ ಹಣಕಾಸಿನ ಲಭ್ಯತೆ ಬೇಕಾಗುತ್ತದೆ. ಮತ್ತು ಶೈಕ್ಷಣಿಕ ಸಾಮಾಗ್ರಿಗಳನ್ನು ಅವುಗಳು ಹೊಂದಿರಬೇಕಾಗುತ್ತದೆ. ಇದು ಸೂಕ್ತ ರೀತಿಯಲ್ಲಿ ಸರಕಾರಿ ವ್ಯವಸ್ಥೆಯಾಗಿರದ ಕಾರಣದಿಂದಾಗಿ ಖಾಸಗೀಯವರು ಹಣ ತೊಡಗಿಸಿ ಶಿಕ್ಷಣವನ್ನು ಒಂದು ರೀತಿಯಲ್ಲಿ ವ್ಯವಹಾರವಾಗಿ ಮಾಡಿಕೊಂಡಿದ್ದಾರೆ. ಇಲ್ಲಿ ಎಲ್ಲಾ ಶಿಕ್ಷಣ ಸಂಸ್ಥೆಗಳು ಹಾಗೆ ಎಂದು ಹೇಳಲಾಗು ವುದಿಲ್ಲ. ನಾವು ನೋಡಿದ ಪ್ರಕಾರ ಹಿಂದೆ ಹಳ್ಳಿಗಳಲ್ಲಿ ಪಟ್ಟಣಗಳಲ್ಲಿ ಈ ರೀತಿಯ ಶಿಕ್ಷಣ ಪದ್ಧತಿಯು ಇರಲಿಲ್ಲ. ಹಿಂದೆ ೪–೫ ವರ್ಷಗಳು ಆದ ಕೂಡಲೇ ತಮ್ಮ ಹತ್ತಿರ ಪ್ರದೇಶಗಳಲ್ಲಿನ ಸರಕಾರಿ ಶಾಲೆಗಳಿಗೆ ಮಕ್ಕಳನ್ನು ಸೇರಿಸುತ್ತಾ ಇದ್ದರು. ಅಲ್ಲಿ ಕೆಲವು ಸಂದರ್ಭಗಳಲ್ಲಿ ಒಬ್ಬರೇ ಶಿಕ್ಷಕರು ೪–೫ ತರಗತಿಗಳನ್ನು ನೋಡಿಕೊಳ್ಳಬೇಕಾದಂಥ ಪರಿಸ್ಥಿತಿಯೂ ಇರುತ್ತಿತ್ತು. ಅಂಥ ಶಾಲೆಗಳಿಗೆ ಕಟ್ಟಡ, ಕೊಠಡಿಗಳನ್ನು ಏನು ಪ್ರಾರಂಭದಲ್ಲಿ ಒದಗಿಸುತ್ತಾ ಇದ್ದರು ಅವನ್ನು ಮುಂದೆ ಹೆಚ್ಚಿಸುವುದಕ್ಕಾಗಲೀ ರಿಪೇರಿ ಮಾಡುವುದಕ್ಕಾಗಲೀ ಅಷ್ಟಾಗಿ ಮನಸ್ಸು ಮಾಡುತ್ತಾ ಇರಲಿಲ್ಲ. ಏನಾದರೂ ಒಂದು ಶಾಲೆ ಕಟ್ಟಡ ದುರುಸ್ತಿಗೆ ಒಳಪಡಬೇಕಾದರೆ ಅದನ್ನು ಲೋಕೋಪಯೋಗಿ ಇಲಾಖೆಗೆ ತಿಳಿಸಬೇಕಾಗುತ್ತಾ ಇತ್ತು. ಅಲ್ಲಿ ಈ ಬಗ್ಗೆ ಹಣಕಾಸು ಸರಕಾರದವರು ಕೊಟ್ಟಿರುತ್ತಾರೋ ಇಲ್ಲವೋ, ಅವರೂ ಕೂಡ ಸಕಾಲದಲ್ಲಿ ಆ ಬಗ್ಗೆ ಮನಸ್ಸು ಮಾಡದೇ ಕಟ್ಟಡಗಳು ದುರವಸ್ಥೆಯಲ್ಲಿಯೇ ನಡೆದುಕೊಂಡು ಹೋಗುವಂಥ ಪರಿಸ್ಥಿತಿ ಇದೆ. ಎಷ್ಟೋ ಶಾಲಾ ಕಟ್ಟಡಗಳು ಬೀಳುವಂಥ ಪರಿಸ್ಥಿತಿಯನ್ನು ತಲುಪಿವೆ. ಇತ್ತೀಚೆಗೆ ಈ ವಿದ್ಯಾಭ್ಯಾಸ ವಿಚಾರದಲ್ಲಿ ಕಪ್ಪುಹಲಗೆ ಯೋಜನೆ ಬಂದಿದೆ. ಹೀಗೆ ಆ ಯೋಜನೆಯನ್ನು ಕೊಡುವಾಗ ಒಮ್ಮೆ ಹಣಕಾಸನ್ನು ಒದಗಿಸುವಂಥ ನೀತಿಯನ್ನು ಹಾಕಿಕೊಂಡಿದ್ದಾರೆ. ಅನಂತರ ಕೊಡಬೇಕಾದಂಥ ಸಾಮಾಗ್ರಿಗಳ ಬಗ್ಗೆ, ಅಧ್ಯಾಪಕರುಗಳು ಮತ್ತು ಅವರು ಸಂಬಳ ಸಾರಿಗೆಗಳ ಬಗ್ಗೆ ಯಾವುದೇ ಒಂದು ಸ್ಪಷ್ಟವಾದ ನೀತಿಯನ್ನು ಹಾಕಿಕೊಂಡಿಲ್ಲ ಅದರಿಂದಾಗಿ ಮೊದಲು ಕೇವಲ ಪಟ್ಟಣ, ಜಿಲ್ಲಾ ಪ್ರದೇಶಗಳಲ್ಲಿ, ನಗರ ಪ್ರದೇಶಗಳಲ್ಲಿ ಇದ್ದ ಕಾನ್ವೆಂಟ್ ಪದ್ಧತಿಯು ತಾಲ್ಲೂಕು ಮಟ್ಟಕ್ಕೆ ಬರುತ್ತಾ ಇದೆ. ಅದೊಂದು ಮಹಾಪೂರ ರೀತಿಯಲ್ಲಿ ವಿಸ್ತಾರಗೊಳ್ಳುತ್ತಾ ಇದೆ. ಗ್ರಾಮಾಂತರ ಪ್ರದೇಶಗಳಲ್ಲಿ ಸಣ್ಣ ರೈತರೂ ಕೂಲಿಗಾರರ ಮಕ್ಕಳು ಮುಂತಾಗಿ ಎಲ್ಲಾ ವರ್ಗದ ಜನರೂ ಕಾನ್ವೆಂಟ್ ಸ್ಕೂಲ್‌ಗಳಿಗೆ ಅನಿವಾರ್ಯ ಎಂಬ ರೀತಿಯಲ್ಲಿ ಹೋಗುತ್ತಾ ಇದ್ದಾರೆ. ಅದೇ ರೀತಿಯಲ್ಲಿ ಇಂಥ ಶಿಕ್ಷಣ ವ್ಯವಸ್ಥೆಗೆ ಪಠ್ಯಪುಸ್ತಕಗಳ ಒಂದು ನೀತಿಯನ್ನು ನಾವು ಏನು ಇಟ್ಟಿದ್ದೇವೆ ಅಂದರೆ ಪ್ರೈಮರಿ ಮತ್ತು ನರ್ಸರಿ ಸ್ಕೂಲ್‌ಗಳಿಗೆ ಹೋಗತಕ್ಕಂಥ ಮಕ್ಕಳೂ ಕೂಡ ತಮ್ಮ ವಯಸ್ಸಿನ ಬಲವನ್ನು ಶಕ್ತಿಯನ್ನು ಮೀರಿ ಬೆನ್ನ ಹಿಂದೆ ಪುಸ್ತಕದ ದೊಡ್ಡ ಮೂಟೆಯನ್ನು ಹೊತ್ತುಕೊಂಡು ಹೋಗತಕ್ಕಂಥ ಒಂದು ದುಸ್ಥಿತಿಯು ನಿರ್ಮಾಣ ವಾಗಿದೆ. ಇದರ ಪರಿಣಾಮವಾಗಿ ಮಕ್ಕಳ ಬೆನ್ನ ಮೂಳೆ ಬಾಗಿ ಮಕ್ಕಳ ದೈಹಿಕ ಬೆಳವಣಿಗೆ ಕುಂಠಿತವಾಗುತ್ತಿದೆ ಎಂದು ತಜ್ಞ ವೈದ್ಯರುಗಳು ಹೇಳುತ್ತಿದ್ದಾರೆ. ಮಾನಸಿಕವಾಗಿಯೂ ಈ ಕಾನ್ವೆಂಟ್ ಶಿಕ್ಷಣ ವಯಸ್ಸಿಗೆ ಅನುಗುಣವಾಗಿಲ್ಲ. ಹಾಗಾದರೆ ಇಷ್ಟೊಂದು ಪುಸ್ತಕಗಳ ಹೊರೆ ಆ ಮಕ್ಕಳಿಗೆ ಅವಶ್ಯಕವಾಗಿದೆಯೋ ಎಂಬ ಪ್ರಶ್ನೆ ನಮ್ಮ ಮುಂದಿದೆ. ಶಿಕ್ಷಣವನ್ನು ಪಡೆಯುವುದು

ಅಂದರೆ ಕೇವಲ, ಕನ್ನಡ, ಹಿಂದಿ ಇಂಗ್ಲೀಷ್ ಶಬ್ದಗಳು, ವ್ಯಾಕರಣಗಳನ್ನು ಕಲಿಯುವುದು ಮಾತ್ರವಲ್ಲ. ಸಮಗ್ರವಾದ ಶಿಕ್ಷಣ ಅಂದರೆ ಮಕ್ಕಳ ಸರ್ವತೋಮುಖ ಬೆಳವಣಿಗೆಯಾಗಬೇಕು. ಅವರ ವ್ಯಕ್ತಿತ್ವದ ವಿಕಸನವಾಗಬೇಕು ಮಕ್ಕಳಿಗೆ ಭಾಷೆ ಮತ್ತು ವ್ಯಾಕರಣವನ್ನು ಹೇಳಿಕೊಡುವುದರ ಜೊತೆಯಲ್ಲಿಯೇ ನೀತಿ ಬೋಧಗಳನ್ನು, ಔದಾರ್ಯ ಮತ್ತು ಪರರ ಬಗ್ಗೆ ಪ್ರೀತಿ ವಿಶ್ವಾಸಗಳನ್ನು, ಶಿಷ್ಟ ಸಂಹಿತೆಗಳನ್ನು ಸತ್ಸಂಪ್ರದಾಯಗಳನ್ನು ಮತ್ತು ಉತ್ತಮ ನಾಗರೀಕರನ್ನಾಗಿ ಮಾಡುವ ಹಿತಚಿಂತನೆಗಳನ್ನು ಅಲ್ಲಿ ಕಲಿಸಬೇಕಾಗುತ್ತದೆ. ಮಕ್ಕಳು ತಮ್ಮ ಪ್ರಥಮ ವಿದ್ಯಾಭ್ಯಾಸದ ಹಂತದಲ್ಲಿ ಸರ್ವತೋಮುಖ ಬೆಳವಣಿಗೆ ಬೇಕಾದಂಥ ಶಿಕ್ಷಣವನ್ನು ಪಡೆದುಕೊಳ್ಳುವಂಥ ಪರಿಸ್ಥಿತಿಯು ಇರಬೇಕು. ಆದರೆ ನಾವು ಅಂಥ ವಾತಾವರಣವನ್ನು ರೂಪಿಸಿಕೊಂಡಿದ್ದೇವೆಯೇ ಎಂಬ ಬಗ್ಗೆ ನೋಡಿದರೆ ಇಂದಿನ ವರ್ಷಗಳಲ್ಲಿ ನಾವು ಕೇವಲ ತಾಂತ್ರಿಕತೆಗೆ ಹೆಚ್ಚಿನ ಒತ್ತನ್ನು ಕೊಡುತ್ತಾ ಇದ್ದೇವೆ ಅನ್ನಿಸುತ್ತದೆ. ಮಕ್ಕಳು ಓದಬೇಕು, ಎಲ್ಲಾ ರೀತಿಯಲ್ಲಿಯೂ ಒಳ್ಳೆಯ ಅಂಕಗಳನ್ನು ಗಳಿಸಬೇಕು. ಏಕೆಂದರೆ ಈಗ ಸ್ಪರ್ಧೆ ಏರ್ಪಡುತ್ತಿದೆ. ಇಂಜಿನೀಯರಿಂಗ್, ವೈದ್ಯಕೀಯ ಮುಂತಾಗಿ ದೊಡ್ಡ ದೊಡ್ಡ ಶಿಕ್ಷಣವನ್ನು ಪಡೆಯಬೇಕೆಂಬ ಮನೋಭಾವನೆ ಉದ್ಭವವಾಗಿದೆ. ಹೀಗಾಗಿ ಪೋಷಕರು ತಾಂತ್ರಿಕ ಜೀವನವನ್ನು ಅವರ ಶೈಶವಾವಸ್ಥೆಯಲ್ಲಿಯೇ ಅಳವಡಿಸುವುದಕ್ಕೆ ಪ್ರಯತ್ನ ಮಾಡುತ್ತಾ ಇದ್ದಾರೆ.

ಆದರೂ ಇದು ನಿಜವಾಗಿಯೂ ಅಗತ್ಯವೋ ಏನು ಎಂದು ನಾವು ನಾವೇ ಪ್ರಶ್ನೆಯನ್ನು ಹಾಕಿಕೊಳ್ಳಬೇಕಾಗುತ್ತದೆ ಶಿಕ್ಷಣ ಕೇವಲ ಸರ್ಕಾರಕ್ಕಾಗಲಿ ಕೇವಲ ಪೋಷಕರಿಗಾಗಲೀ, ಕೇವಲ ಪ್ರಾಧ್ಯಾಪಕರಿಗೆ ಆಗಲೀ ಮೀಸಲಾದಂಥ ಒಂದು ಪರಿಸರ ಅಲ್ಲ. ಇದು ಸಮಗ್ರವಾಗಿ ಇಡೀ ಸಮಾಜಕ್ಕೆ ಸೇರಿದಂಥ ಒಂದು ಸಮಸ್ಯೆ ಆಗಿರುವುದರಿಂದ ಇದರಲ್ಲಿ ಪೋಷಕರ ಪಾತ್ರ ಇದೆ, ಗುರುಗಳ ಪಾತ್ರ ಇದೆ, ಸರ್ಕಾರದ ಪಾತ್ರವೂ ಇದೆ. ಈ ಸಮಾಜವನ್ನು ರೂಪಿಸುವಲ್ಲಿ ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು ಎಂದು ನಾವು ಏನು ಹೇಳುತ್ತೇವೆ, ಅವರನ್ನು ನಾಗರೀಕರನ್ನಾಗಿ ಮಾಡತಕ್ಕಂಥ ಜವಾಬ್ದಾರಿ ನಮ್ಮ ಮೇಲಿದೆ. ಆ ಒಂದು ಸಮಗ್ರ ಶಿಕ್ಷಣದ ನೀತಿಯನ್ನು ಮಾಡತಕ್ಕಂಥ ವಿಚಾರದಲ್ಲಿ ನಮ್ಮ ಸನ್ಮಾನ್ಯ ಸಚಿವರು ಒಂದು ಉನ್ನತ ಮಟ್ಟದ ಸಮಿತಿಯನ್ನು ಶಿಕ್ಷಣ ತಜ್ಞರನ್ನೊಳಗೊಂಡಂಥ ಒಳ್ಳೆಯ ಪ್ರಾಧ್ಯಾಪಕರು ಅಥವಾ ವಿಶ್ವವಿದ್ಯಾನಿಲಯದ ಉಪಕುಲಪತಿಗಳನ್ನು ಒಳಗೊಂಡಂಥ ಮತ್ತು ತಮ್ಮನ್ನು ಒಳಗೊಂಡಂಥ ಒಂದು ಸಣ್ಣ ಸಮಿತಿಯನ್ನು ಮಾಡಿ. ಅದಕ್ಕಾಗಿ ಕೇವಲ ಕೆಲವೊಂದು ರೂಪರೇಷಗಳನ್ನು ಕೆಲವೊಂದು ಕ್ರಾಂತಿಕಾರವಾದ ಬದಲಾವಣೆಗಳನ್ನು ತರತಕ್ಕಂಥ ಪ್ರಯತ್ನವನ್ನು ಮಾಡಬೇಕೆಂದು ಅಂಥ ಒಂದು ದಿಟ್ಟ ಹೆಜ್ಜೆಯನ್ನು, ಆ ನಿಲುವನ್ನು ತೆಗೆದುಕೊಂಡರೆ ಇವೊತ್ತು ಅಲ್ಲ ಬಿದ್ದರೂ ಅದರ ಒಂದು ಫಲಿತಾಂಶ, ಪ್ರತಿಫಲ ಮುಂದಕ್ಕೆ ಆದರೂ ಒಳ್ಳೆಯದು ಆಗಬಹುದು ಎಂದು ನನಗನ್ನಿಸುತ್ತದೆ. ಏಕೆಂದರೆ ನಮ್ಮ ಮಕ್ಕಳು ಶಾಲೆಗೆ ಹೋಗುವ ವಯಸ್ಸಿನಲ್ಲಿದ್ದಾರೆ. ಈಗಾಗಲೇ ಪ್ರೌಢಶಾಲೆಯನ್ನು ಮೀರಿ ಕಾಲೇಜುಗಳಿಗೆ ಬಂದಿದ್ದಾರೆ. ನಾನು ಕೇಳುತ್ತಿದ್ದೇನೆ ಶಿಕ್ಷಣ ಪದ್ಧತಿ ಹೇಗೆ ಎಂದು ಹೇಳಿದರೆ ಗುರುಗಳಿಗೂ ಅವರಿಗೂ ಸಂಪರ್ಕ ಇರುವುದಿಲ್ಲ ಒಂದು, ಮತ್ತೊಂದು It is out dated. ಇವತ್ತಿನ ದಿನಗಳಿಗೆ ಬೇಕಾದಂಥ ಶಿಕ್ಷಣ ಪದ್ಧತಿ ನಮ್ಮಲ್ಲಿ ಇಲ್ಲ. ಬಹಳ ವರ್ಷಗಳ ಹಿಂದೆ ಏನು ಇತ್ತು, ಅಥವಾ ನಮ್ಮ ನಿಜ ಜೀವನಕ್ಕೆ ಆದಕ್ಕೂ ಬಹಳ ಅಂತರವಿರತಕ್ಕಂಥ ಒಂದು ಪದ್ಧತಿಯನ್ನು ನಾವು ಅಳವಡಿಸಿಕೊಂಡಿದ್ದೇವೆ. ಇದರಿಂದ ಯಾವ ಉಪಯೋಗ ಕೂಡಾ ಆಗುವುದಿಲ್ಲ ಎನ್ನುವ ಮಾತನ್ನು ಹೇಳುವುದನ್ನು ಕೇಳಿದ್ದೇನೆ. ಇದು ನಿಜವಿದ್ದರೂ ಇರಬಹುದು ಏಕೆಂದರೆ ಇವತ್ತು ನಾವು ವೈಜ್ಞಾನಿಕ ಯುಗದಲ್ಲಿ ನಾವು ಪರಿಸರಕ್ಕೂ ದೂರವಾಗಿದ್ದೇವೆ. ವೈಜ್ಞಾನಿಕಕ್ಕೂ ದೂರವಾಗಿದ್ದೇವೆ ಕೇವಲ ತಾಂತ್ರಿಕವಾದ ಮೌಲ್ಯಗಳನ್ನು ದೂರೀಕರಿಸಿದಂಥ ಈ ಶಿಕ್ಷಣ ಪದ್ಧತಿಯಲ್ಲಿ ನಮ್ಮ ಮಕ್ಕಳ ಸರ್ವತೋಮುಖ ಬೆಳವಣಿಗೆ ಅಥವಾ ಸರ್ವತೋಮುಖ ವಿಕಾಸಕ್ಕೆ ಅಂಥ ಪೂರಕವಾದಂಥ ಶಿಕ್ಷಣ ನಮ್ಮಲ್ಲಿ ದೊರೆಯುತ್ತಾ ಇಲ್ಲ ಎನ್ನುವ ಮಾತನ್ನು ನಾನು

೧೦-೩೦ ಎ. ಎಂ.

ಬಹಳ ವಿಷಾದದಿಂದ ಹೇಳಬೇಕಾಗಿದೆ. ಆದರೆ ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಈ ಡೊನೇಷನ್ ಹಾವಳಿ ಕೇವಲ ಇಂಜಿನಿಯರಿಂಗ್ ಅಥವಾ ಉನ್ನತ ಮಟ್ಟದ ಶಿಕ್ಷಣ ಮತ್ತು ಕಾಲೇಜುಗಳಿಗೆ ತಗುಲಿದಂಥ ಪಿಡುಗು ಏನು ಇತ್ತು, ಆ ಪಿಡುಗು ಈಗ ನರ್ಸರಿ ಶಾಲೆಗಳಿಂದಲೂ ಪ್ರಾರಂಭವಾಗಿದೆ. ಅಲ್ಲಿ ಹೋಗಿ ಕ್ಯೂ ನಿಂತು ತಂದೆತಾಯಿಗಳು ಹತಾಶರಾಗಿ, ಅವಸ್ಥೆ ಪಟ್ಟು ಅವರು ಕೇಳುವಷ್ಟು ಮೂರ-ನಾಲ್ಕು-ಐದು ಸಾವಿರ ರೂಪಾಯಿವರೆಗೂ ಕೂಡಾ ಡೊನೇಷನ್‌ಗಳನ್ನು ಕೊಟ್ಟು, ಮಕ್ಕಳನ್ನು ಅಲ್ಲಿ ಕ್ಯೂ ನಿಲ್ಲಿಸುತ್ತಾರೆ. ಇನ್ನೂ ಕೆಲವು ಶಾಲೆಗಳಿಗೆ ಮಗು ಹುಟ್ಟುವ ಮೊದಲೇ ಹೆಣ್ಣೋ ಅಥವಾ ಗಂಡೋ ಎಂದು ತಿಳಿಯಪಡಿಸುವುದಕ್ಕಿಂತ ಮುಂಚೆಯೇ ಸೀಟುಗಳನ್ನು

ಕಾದಿರಿಸಬೇಕಾದಂಥ ಪ್ರಸಂಗ ಕೂಡ ಬಂದಿದೆ. ಆದರೆ ಇಷ್ಟೊಂದು ಒತ್ತಡ ಏತಕ್ಕೆ ? ಸರ್ಕಾರದ ಶಾಲಾ ಕಾಲೇಜುಗಳು ಸರ್ಕಾರಿ ಸಂಸ್ಥೆಗಳು ಏನು ಇವೆ, ಹಳ್ಳಿಗಾಡಿನಲ್ಲಾಗಲೀ, ಗ್ರಾಮಾಂತರ ಪ್ರದೇಶಗಳಲ್ಲಿಯಾಗಲೀ, ಅದಕ್ಕೆ ಸೂಕುನಿಂಗ್ಗಲು ಬಡಿಮೆಯಾಗಿದೆ. ಪೋಷಕರು ಎಲ್ಲರೂ ಒಂದು ಭಾವನೆಯನ್ನು ಬೆಳೆಸಿಕೊಂಡಿದ್ದಾರೆ. ಕಾನ್‌ವೆಂಟ್‌ಗಳಾಗಲೀ, ಖಾಸಗಿ ಸಂಸ್ಥೆಗಳಿಗೆ ಹೋದರೆ ಅಲ್ಲಿ ಶಿಸ್ತು ಇದೆ, ಅಲ್ಲಿ ಡಿಸಿಪ್ಲಿನ್ ಇದೆ, ಒಳ್ಳೆಯ ಬೋಧನೆಯನ್ನು ಮಾಡುತ್ತಾರೆ. ಅಲ್ಲಿ ಒಳ್ಳೆಯ ಗುರುಗಳನ್ನು ಇಟ್ಟಿದ್ದಾರೆ. ಟೀಚರ್‌ಗಳನ್ನು ಇಟ್ಟಿದ್ದಾರೆ, ನಮ್ಮ ಮಕ್ಕಳುಗಳಿಗೆ ಎಷ್ಟೇ ಹಣ ಖರ್ಚಾಗಲೀ ಅಲ್ಲಿಯೇ ಅವರನ್ನು ಓದಿಸಬೇಕು ಎನ್ನುವ ಒಂದು ಭಾವನೆಯನ್ನು ಪೋಷಕರು ಬೆಳೆಸಿಕೊಂಡಿದ್ದಾರೆ. ಅದು ಅಷ್ಟೇನೂ ಅಗತ್ಯವಿಲ್ಲ ಎಂದು ನನಗನ್ನಿಸುತ್ತದೆ. ಏತಕ್ಕೆ ಹೇಳುತ್ತಿದ್ದೇನೆಂದರೆ ಸರ್ಕಾರಿ ಶಾಲೆಗಳು ಎಂದರೆ ದೊಡ್ಡಿಗಳು ಇದ್ದ ಹಾಗೆ. ಗುರುಗಳು ಸರಿಯಾಗಿ ಇಲ್ಲ, ಅವರು ಹೇಳಿಕೊಡತಕ್ಕಂಥ ಪಾಠದ ಗುಣಮಟ್ಟ ಸರಿಯಾಗಿಲ್ಲ, ಅಲ್ಲಿ ಪೀಠೋಪಕರಣ ವ್ಯವಸ್ಥೆ ಇಲ್ಲ, ಕಟ್ಟಡ ಸುಸ್ಥಿತಿಯಲ್ಲಿ ಇಲ್ಲ. ಆದ್ದರಿಂದ ನಮ್ಮ ಮಕ್ಕಳನ್ನು ಇಲ್ಲಿಗೇ ಕಳುಹಿಸಬೇಕು ಎನ್ನುವ ಒಂದು ಭಾವನೆ, ಒತ್ತಡ ಇದೆ ಎನ್ನತಕ್ಕಂಥ ದೃಷ್ಟಿಯಿಂದ ಖಾಸಗಿ ಶಾಲೆಗಳಲ್ಲಿ ಇಷ್ಟೊಂದು ಹೆಚ್ಚಿನ ಒತ್ತಡವನ್ನು ನಾವು ಕಾಣುತ್ತಿದ್ದೇವೆ. ಉದಾಹರಣೆಗೆ ನಮ್ಮ ತಾಲ್ಲೂಕಿನಲ್ಲಿ ಒಂದು ಕಾನ್‌ವೆಂಟ್ ಇದೆ. ಒಂದೂವರೆ ಎರಡೂವರೆ ಸಾವಿರ ಮಕ್ಕಳು ಆ ಕಾನ್‌ವೆಂಟ್ ಶಾಲೆಗೆ ಗ್ರಾಮಾಂತರ ಪ್ರದೇಶಗಳಿಂದ ಬರುತ್ತಿದ್ದಾರೆ. ಗ್ರಾಮಾಂತರ ಪ್ರದೇಶದಲ್ಲಿರತಕ್ಕಂಥ ಪ್ರಾಥಮಿಕ ಮಾಧ್ಯಮಿಕ ಶಾಲೆಗಳು ಇವತ್ತು ಕೇವಲ ಕೆಲವೇ ಮಕ್ಕಳುಗಳನ್ನೊಳಗೊಂಡು ನಡೆಯುತ್ತಿವೆ. ಕೇಳಿದರೆ ಕೆಲವು ಶಾಲೆಗಳಲ್ಲಿ ಪಾಠಗಳು ಸರಿಯಿಲ್ಲ ಎಂದು ಹೇಳುತ್ತಾರೆ. ಗುರುಗಳು ಇಲ್ಲ, ಅಧ್ಯಾಪಕರು ಇಲ್ಲ ಹೀಗಾಗಿ ಕೆಲವು ಶಾಲೆಗಳು ಖಾಲಿ ಇವೆ. ಇನ್ನು ಕೆಲವು ಕಡೆ ಬಿಲ್ಡಿಂಗ್‌ನಲ್ಲಿ ಹೆಚ್ಚಿನ ಕೋಣೆಗಳು ಇಲ್ಲ. ಈ ರೀತಿಯಾದ ಒಂದು ಧೋರಣೆಯಿಂದಾಗಿ ಹಿಂದೆ ಏನು ಸಮಾಜದಲ್ಲಿ ಗುರುಗಳಿಗೆ ಅಥವಾ ಅಧ್ಯಾಪಕರಿಗೆ ಒಂದು ಹಳ್ಳಿಯಲ್ಲಿ ಮಾಸ್ತರು ಬಂದಿದ್ದಾರೆ ಎಂದರೆ ಅವರಿಗೆ ಎಲ್ಲಾ ರೀತಿಯ ಗೌರವ, ಸಂತೃಪ್ತ ಜೀವನ ಮತ್ತು ಮಕ್ಕಳಿಗೆ ನಾನು ಶಿಕ್ಷಣವನ್ನು ಬೋಧನೆ ಮಾಡುತ್ತಿದ್ದೇನೆ ಎನ್ನತಕ್ಕಂಥ ಸಾಮಾಜಿಕ ಕರ್ತವ್ಯ ಎಂದು ಏನು ಅವತ್ತು ಹೇಳುತ್ತಿದ್ದೆವೋ ಇವತ್ತು ಆ ಒಂದು ಧೋರಣೆಯಲ್ಲಿ ಬದಲಾವಣೆಯಾಗಿದೆ. ಹತ್ತಾರು ವರ್ಷಗಳಿಂದ ಇರತಕ್ಕಂಥದ್ದು ಒಂದು. ನಂತರ ಅವರೂ ಇವತ್ತಿನ ರಾಜಕೀಯ ಹಿನ್ನೆಲೆಯಲ್ಲಿ ಕೂಡಾ ರಾಜಕೀಯವನ್ನು ಮಾಡುವುದಕ್ಕೆ ಹೊರಟಿದ್ದಾರೆ. ವರ್ಗಾವರ್ಗಿ ವಿಷಯದಲ್ಲಿ ಕೆಲವು ನೀತಿ ಸಂಹಿತೆಗಳನ್ನು ರೂಪಿಸದೇ ಹೋದರೆ ಬಹಳ ತೊಂದರೆಯಾಗುತ್ತದೆ. ಒಂದು ಜಿಲ್ಲೆಯಿಂದ ಇನ್ನೊಂದು ಜಿಲ್ಲೆಗೆ, ಅಂತರ್ ಜಿಲ್ಲಾ ಮಟ್ಟದಿಂದ ಇನ್ನೊಂದು ಅಂತರ್ ಜಿಲ್ಲಾ ಮಟ್ಟಕ್ಕೆ, ಒಂದು ತಾಲ್ಲೂಕಿನಿಂದ ಇನ್ನೊಂದು ತಾಲ್ಲೂಕಿಗೆ, ಬದಲಾವಣೆ ಮಾಡತಕ್ಕ ಅವಶ್ಯಕ. ಇಂತಹ ವರ್ಗಾವರ್ಗಿ ನೀತಿಯನ್ನು ಹಾಕಿಕೊಳ್ಳಬೇಕಾಗುತ್ತದೆ ೧೦ ವರ್ಷ ಒಬ್ಬ ಉಪಾಧ್ಯಾಯ ಅಲ್ಲೇ ಇದ್ದರೆ ಬಹಳ ಕಷ್ಟವಾಗುತ್ತದೆ. ಐದು ಅಥವಾ ಆರು ವರ್ಷಕ್ಕೊಮ್ಮೆಯಾದರೂ ಒಂದು ಕಡೆಯಿಂದ ಇನ್ನೊಂದು ಕಡೆಗೆ ವರ್ಗಾವಣೆ ಮಾಡಬೇಕು. ಅವರನ್ನು ಸೆನ್ಸಸ್ ಕೆಲಸಕ್ಕಾಗಿ ಸೇವೆಯನ್ನು ಉಪಯೋಗಿಸಿಕೊಳ್ಳುತ್ತಿರುವ ಕಾರಣಕ್ಕಾಗಿ ವರ್ಗ ಮಾಡದೇ ಇರಬಹುದು. ಉನ್ನತ ಮಟ್ಟದಲ್ಲಿ ಶಿಕ್ಷಣ ಸಂಸ್ಥೆಗಳು ವ್ಯವಹಾರಿಕ ಹಾಗೂ ವ್ಯಾಪಾರಿಕ ಕೇಂದ್ರಗಳಾಗಿವೆ. ಅದನ್ನು ತಪ್ಪಿಸಬೇಕು. ಫೀಸ್ ಎಂದರೆ ಶುಲ್ಕ ಅತೀ ಅಗತ್ಯವಾಗಿ ಇರುತ್ತದೆ. ನಿಜ ಅವರುಗಳಿಗೆ ತಾಂತ್ರಿಕ ಸಿಬ್ಬಂದಿ ಬೇಕು, ಸಾಮಗ್ರಿಗಳು ಬೇಕು, ಸಲಕರಣೆಗಳು ಬೇಕು, ಕಟ್ಟಡ ಅವಶ್ಯಕ. ಎಲ್ಲಾ ಇದ್ದು ಇದು ಕೇವಲ ವ್ಯವಹಾರಿಕ ಹಾಗೂ ವ್ಯಾಪಾರ ರೀತಿಯಲ್ಲಿ ಪ್ರತಿ ಒಂದು ಉನ್ನತ ಮಟ್ಟದ ಶಿಕ್ಷಣ ಮುಂದುವರಿದರೆ ಅದು ಹರಾಜಾಗಿ ಹೋಗುತ್ತದೆ. ಇದಕ್ಕೆ ಪೋಷಕರು, ಜವಾಬ್ದಾರಿ ಆಗುತ್ತಾರೆ. ಆಡಳಿತ ನಡೆಸುವ ಸರ್ಕಾರ, ಶಿಕ್ಷಣ ಇಲಾಖೆ ಕೂಡ ಜವಾಬ್ದಾರಿ ಆಗುತ್ತದೆ. ನನಗೆ ಇನ್ನೂ ಐದು ನಿಮಿಷ ಕಾಲಾವಕಾಶಬೇಕು. ಇನ್ನೂ ಕೆಲವು ವಿಷಯಗಳನ್ನು ಹೇಳಬೇಕು. ರಿಸರ್ವೇಷನ್ ಪಾಲಿಸಿ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ನಮ್ಮ ಸಂವಿಧಾನದ ಪ್ರಕಾರ ನಾವು ಏನು ಶೇಕಡಾ ೧೮ ಭಾಗ ರಿಸರ್ವೇಷನ್ ಅನ್ನು ಪರಿಶಿಷ್ಟ ಜಾತಿ ಹಾಗೂ ಪಂಗಡಕ್ಕೆ ಕೊಡಬೇಕೆಂದು ಒಂದು ಪಾಲಿಸಿಯನ್ನು ಮಾಡಿದ್ದೇವೆ. ಅದು ಪ್ರಾಥಮಿಕ ಶಾಲೆಗಳಲ್ಲಿ, ಪ್ರೌಢ ಶಾಲೆಗಳಲ್ಲಿ, ಕಾಲೇಜುಗಳಲ್ಲಿ ಮತ್ತು ಉದ್ಯಮಗಳಲ್ಲಿ, ಸರ್ಕಾರದ ಉದ್ಯಮಗಳಲ್ಲಿ ಇದನ್ನು ಕೊಡಬೇಕೆಂದು ಮಾಡಿದ್ದೇವೆ. ನಾನು ಸಮಾಜ ಕಲ್ಯಾಣ ಇಲಾಖೆಯ ಸಚಿವೆಯಾಗಿ ಕೆಲವು ತಿಂಗಳುಗಳ ಕಾಲ ಕೆಲಸ ಮಾಡಿದ್ದೇನೆ. ಎಸ್.ಸಿ. ಎಸ್.ಟಿ. ಮಕ್ಕಳಿಗೆ ಹಾಸ್ಟೆಲ್, ಬ್ಯಾಕ್‌ವರ್ಡ್ ಕ್ಲಾಸ್ ಮಕ್ಕಳಿಗೆ ಹಾಸ್ಟೆಲ್ ಮತ್ತು ಬೇರೆ ಹಾಸ್ಟೆಲ್ ಜನರಲ್ ಹಾಸ್ಟೆಲ್ ಎಂದು ಮಾಡಿದ್ದಾರೆ. ಈ ರೀತಿ ಬೇರೆ ಇಡತಕ್ಕ ವ್ಯವಸ್ಥೆ ಇದೆ. ನನ್ನ ಸ್ವಂತ ಅಭಿಪ್ರಾಯವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಬೇರೆ ಬೇರೆ

ವ್ಯವಸ್ಥೆ ಇರುವ ಈ ಪದ್ಧತಿ ದೂರವಾಗಬೇಕು. ಜಾತ್ಯಾತೀತ ರಾಷ್ಟ್ರವೆಂದು ನಾವು ಸಂವಿಧಾನದಲ್ಲಿ ಅಳವಡಿಸಿಕೊಂಡಿದ್ದೇವೆ. ಅದು ಸಹಕಾರ ರೂಪವಾಗಿ ಬರಬೇಕಾಗಿದೆ. ರೆಸಿಡೆನ್ಸಿಯಲ್ ಸ್ಕೂಲ್ಸ್ ಎಂದು ಮಾಡಿ ಮಕ್ಕಳನ್ನು ಒಟ್ಟಿಗೆ ಒಂದೇ ಪರಿಸರದಲ್ಲಿ ಓಡಿಸುವ ವ್ಯವಸ್ಥೆ ಮಾಡಬೇಕು. ಈ ಶಿಕ್ಷಣವನ್ನು ನೀವು ಕೊಡುವುದಾದರೆ ಒಳ್ಳೆಯದು. ಜಿಲ್ಲೆಗೆ ಒಂದರಂತೆ ರೆಸಿಡೆನ್ಸಿಯಲ್ ಸ್ಕೂಲ್ ಎಂದು ಪ್ರಾರಂಭ ಮಾಡುವುದಕ್ಕೆ ಹೆಜ್ಜೆ ಇಡಬೇಕು ಎಂದು ಸನ್ಮಾನ್ಯ ಸಚಿವರಲ್ಲಿ ಒಂದು ಮನವಿಯನ್ನು ಮಾಡುತ್ತೇನೆ. ಈ ವರ್ಷ ಪ್ರಪ್ರಥಮವಾಗಿ ಈ ಅವಕಾಶ ಮಾಡಿ ಕೊಡುವುದಾದರೆ ಖಂಡಿತವಾಗಿ ಇದು ಒಳ್ಳೆಯ ಪದ್ಧತಿ ಆಗುತ್ತದೆ ಮತ್ತು ಮಕ್ಕಳು ಬೆರೆತು ಅವರನ್ನು ಸಮಾನಾಂತರವಾಗಿ ಬೆಳೆಸುವುದಕ್ಕೆ ಅನುಕೂಲವಾಗುತ್ತದೆ. ಎಲ್ಲರಿಗೂ ಒಂದೇ ಹಾಸ್ಟೆಲ್, ವ್ಯವಸ್ಥೆ, ಎಲ್ಲಾ ಸೌಲಭ್ಯಗಳನ್ನು ಒದಗಿಸುವುದಾದರೆ ಮಕ್ಕಳಲ್ಲಿ ಭೇದ ಭಾವ ಹೋಗಿ, ಅವರು ಬೆಳೆದಂತಹ ವಾತಾವರಣದಲ್ಲಿ ಒಳ್ಳೆಯ ಸತ್ಪ್ರಜೆಗಳಾಗಿ ಉತ್ತಮವಾದ ಬಾಳನ್ನು ಸೌಹಾರ್ದದಿಂದ ಬೆಳೆಸಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ತಾಂತ್ರಿಕ ಕಾಲೇಜಿನಲ್ಲಿ ಅಂದರೆ ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳಲ್ಲಿ ತಾವು ಗ್ರಾಮಾಂತರ ಮಟ್ಟದಿಂದ ಬಂದಂತಹ ಮಕ್ಕಳಿಗೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕು. ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿ ಇರತಕ್ಕ ಸೌಲಭ್ಯ ಗ್ರಾಮಾಂತರ ಮಟ್ಟದಲ್ಲಿ ಇಲ್ಲ. ಅಂದರೆ ಟ್ಯೂಷನ್ ಆಗಲಿ, ಉಪಕರಣಗಳಾಗಲೀ, ಹಾಗೂ ಇನ್ನಿತರ ಸೌಲಭ್ಯಗಳು ದೊರೆಯದ ಕಾರಣ ಅವರು ಬಹಳ ಕಷ್ಟಪಟ್ಟು ಓದಿದರೂ ಕೂಡ ೫೦ ಅಥವಾ ೬೦ ಅಂಕಗಳನ್ನು ಗಳಿಸುತ್ತಾರೆ. ತಾಂತ್ರಿಕ ಕಾಲೇಜಿಗೆ ಪ್ರವೇಶ ದೊರಕುವುದು ಬಹಳ ಕಷ್ಟವಾಗುತ್ತದೆ. ಅವರು ನಗರ ಪ್ರದೇಶದ ವಿದ್ಯಾರ್ಥಿಗಳ ಜೊತೆ ಸ್ಪರ್ಧೆ ಮಾಡುವುದು ಕಷ್ಟವಾಗುತ್ತದೆ. ಗ್ರಾಮಾಂತರ ಪ್ರದೇಶದಿಂದ ಬಂದ ಮಕ್ಕಳನ್ನು, ಅವರು ಪಡೆದುಕೊಂಡಂತಹ ಜೂನಿಯರ್ ಕಾಲೇಜು ಸರ್ಟಿಫಿಕೇಟ್‌ನಿಂದ ಅವರು ಯಾವ ಪ್ರದೇಶದಲ್ಲಿ ಓದಿದ್ದಾರೆ ಎಂದು ಪತ್ತೆ ಮಾಡುವುದಕ್ಕೆ ಸುಲಭವಾಗುತ್ತದೆ. ತಾವು ಇಂತಹವರಿಗೆ ಮೀಸಲಾತಿ ಕೊಡಬೇಕು. ರೈತ ಮಕ್ಕಳಿಗೆ, ಗ್ರಾಮಾಂತರ ಮಟ್ಟದ ಸರ್ಕಾರ ಇಂತಿಷ್ಟು ರೇಷಿಯೋ ಎಂದು ಮಾಡಿ ಶೇಕಡ ೫೦ ಭಾಗವನ್ನಾದರೂ ಒದಗಿಸಿ ಕೊಡಲು ಪ್ರಯತ್ನ ಮಾಡಬೇಕು. ಅದರಲ್ಲಿ ಮೆರಿಟ್ ನೋಡಿ ಉತ್ತಮ ದರ್ಜೆಯಲ್ಲಿ ಗ್ರಾಮಾಂತರ ಮಟ್ಟದಲ್ಲಿ ಯಾರು ಪಾಸ್ ಆಗಿದ್ದಾರೆ, ಯಾರು ಉತ್ತಮ ತರಗತಿಗಳನ್ನು ಗಳಿಸಿದ್ದಾರೆ ಆ ಮಕ್ಕಳಿಗೆ ಈ ಒಂದು ತಾಂತ್ರಿಕ ಮತ್ತು ಉನ್ನತ ಮಟ್ಟದ ಶಿಕ್ಷಣಕ್ಕೆ ಆರಿಸಬೇಕೆಂದು ನಾನು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಮತ್ತು ಈ ಮೆಡಿಕಲ್ ಕಾಲೇಜುಗಳನ್ನು ಪ್ರತಿಯೊಂದು ಜಿಲ್ಲೆಗೂ ಕೂಡ ಕೊಡತಕ್ಕಂಥದ್ದು ಅವುಗಳನ್ನು ವ್ಯಾಪಾರಿ ಕೇಂದ್ರಗಳನ್ನಾಗಿ ಬೆಳೆಸತಕ್ಕಂಥಾದ್ದು ಅದರಲ್ಲೂ ಜಾತೀ ಹೆಸರಿನಲ್ಲಿ ಈ ಕಾಲೇಜುಗಳನ್ನು ಕೊಡತಕ್ಕಂಥ ನೀತಿಯನ್ನು ಸಮಾಜದಲ್ಲಿ ತಂದೆತಾಯಿಗಳಾಗಲಿ, ನಾವಾಗಲಿ ಉಗ್ರವಾಗಿ ಖಂಡಿಸಬೇಕಾಗುತ್ತದೆ ಮತ್ತು ನಮ್ಮ ಸರ್ಕಾರದ ನೀತಿ ಅದು ಆಗಿರಬಾರದು ಈಗ ಮಾನ್ಯ ಸದಸ್ಯರಾದ ಹರ್ಷಕುಮಾರಗೌಡರು ಹೇಳಿದರು ಸಮಾಜದಲ್ಲಿ ಹೆಂಡ ಸಾರಾಯಿ ಸಾಂಕ್ರಾಮಿಕ ಪಿಡುಗು ಆಗಿದೆಯೋ ಅದಕ್ಕಿಂತ ಹೆಚ್ಚಿನ ಪಿಡುಗು ಹಣದ ದಾಹ ಈ ವ್ಯಾಪಾರಿ ಸಂಸ್ಥೆಗಳು ಖಾಸಗಿ ಕಾಲೇಜುಗಳನ್ನು ತೆರೆಯತಕ್ಕಂಥ ಪಿಡುಗು ನಮ್ಮ ರಾಜ್ಯದಲ್ಲಿ ಆಗಿದೆ. ಇನ್ನಿತರ ಕಡೆಗಳಲ್ಲಿ ಎಷ್ಟು ಆಗಿದೆಯೋ ಗೊತ್ತಿಲ್ಲ. ಆದರೆ ನಮ್ಮ ರಾಜ್ಯದಲ್ಲಿ ಅತ್ಯಂತ ದಾರುಣ ಸ್ಥಿತಿಯಲ್ಲಿ ಇದು ಬೆಳೆದುಕೊಂಡು ಹೋಗುತ್ತಿದೆ ಇದಕ್ಕೆ ತಡೆಹಿಡಿಯಲಿಕ್ಕೆ ಬೇಕಾದಂಥ ಸಂದರ್ಭ ಇದೆ ಏಕೆಂದರೆ, ವ್ಯಾಪಾರೀ ಮನೋಭಾವವನ್ನು ನಾವು ಯಾವಾಗ ಶಿಕ್ಷಣ ಕ್ಷೇತ್ರದಲ್ಲಿ ಅದರಲ್ಲೂ ವಿದ್ಯಾರ್ಥಿ ದಿಸೆಯಲ್ಲಿ ನಾವು ಅವರಿಗೆ ಕಲಿಸುತ್ತೇವೋ ಮುಂದೆ ಅವರು ನಿಜವಾಗಿ ಉತ್ತಮ ಪ್ರಜೆಗಳಾಗಿ. ಉತ್ತಮ ಪ್ರಜಾ ಸೇವಕರಾಗಿ ಅಥವಾ ವೈದ್ಯರಾಗಿ, ಇಂಜನಿಯರುಗಳಾಗಿ ಸೇವೆಯನ್ನು ಸಲ್ಲಿಸುತ್ತಾರೆ ಎಂದು ನಿರೀಕ್ಷೆ ಮಾಡುವುದು ಬಹಳ ಮೂರ್ಖತನ ಏಕೆಂದರೆ, ಅವನು ೫ ಲಕ್ಷ ೧೦ ಲಕ್ಷ ಖರ್ಚುಮಾಡಿ ಮೆಡಿಕಲ್ ಸೀಟ್ ತೆಗೆದುಕೊಂಡಿರುತ್ತಾನೆ. ೫-೬ ವರ್ಷ ಉನ್ನತ ಶಿಕ್ಷಣವನ್ನು ಮುಗಿಸಬೇಕಾದರೆ ಇನ್ನೊಂದು ಹತ್ತಾರು ಲಕ್ಷ ಖರ್ಚಾಗಿ ಬಿಟ್ಟಿರುತ್ತದೆ. ಇಷ್ಟು ಖರ್ಚು ಮಾಡಿ ಅವರು ಬಂದಕೂಡಲೇ ಖಾಸಗೀ ನರ್ಸಿಂಗ್‌ಹೋಂಗಳಲ್ಲಾಗಲಿ ಖಾಸಗೀ ಕ್ಲಿನಿಕ್ ಆಗಲಿ ಅಥವಾ ಸರ್ಕಾರಿ ಉದ್ಯೋಗದಲ್ಲಾಗಲಿ ಅವರಿಗೆ ಅವಕಾಶಕೊಟ್ಟರೆ ಅವರು ಹೇಗೆಯೋ ಗಳಿಸಬೇಕು ಎನ್ನುವುದು ಅವರ ಮನಸ್ಸಿನ ಧರ್ಮವಾಗಿರುತ್ತದೆಯೇ ವಿನಹ ನಿಜವಾಗಿ ರೋಗಿಗಳ ಶುಶ್ರೂಷೆ ಮಾಡಬೇಕು ಅಥವಾ ವೈದ್ಯಕೀಯ ಜ್ಞಾನಕ್ಕೆ ತಕ್ಕಹಾಗೆ ನನ್ನ ಪ್ರಾಮಾಣಿಕ ಸೇವೆಯನ್ನು ಮಾಡಬೇಕು ಎನ್ನತಕ್ಕಂಥ ಮನೋಭಾವನೆ ಕಳಕಳಿ ಖಂಡಿತ ಇರುವುದಕ್ಕೆ ಸಾಧ್ಯವಿಲ್ಲ ಆದುದರಿಂದ ಈ ಉನ್ನತ ಸಂಸ್ಥೆಗಳಲ್ಲಿ ಡೊನೇಶನ್ ಕ್ಯಾಪಿಟೇಷನ್ ಎನ್ನುವ ಹೆಸರನ್ನು ತೆಗೆದು ಶುಲ್ಕ ತೆಗೆದುಕೊಳ್ಳಲಿ ಹಿಂದಿನ ಕಾಲದಲ್ಲಿ ಗುರುಗಳಿಗೆ ಕಾಣಿಕೆ ಕೊಡುತ್ತಿದ್ದರು. ಏಕಲವ್ಯ ತನ್ನ ಗುರುಗಳಿಗೆ ಕಾಣಿಕೆಯನ್ನು ಯಾವರೀತಿ ಕೊಟ್ಟ ಎನ್ನುವುದನ್ನು ತಾವೆಲ್ಲರೂ ತಿಳಿದುಕೊಂಡಿದ್ದೀರಿ. ಅತ್ಯಗತ್ಯ ಖರ್ಚುಗಳಿಗೆ ಮಾತ್ರ ಪ್ರತಿವರ್ಷ ಶುಲ್ಕ ಎಂದು ವಿಧಿಸಬಹುದೇ ಹೊರತು ಇನ್ನೊಂದು ರೀತಿ ೫—೧೦ ಲಕ್ಷ

ತೆಗೆದುಕೊಳ್ಳುವುದು ಇದು ಹಗಲು ದರೋಡೆ. ಈ ಕಾಣಿಕೆಗಳನ್ನು ತಪ್ಪಿಸಿ ಅತ್ಯಗತ್ಯವಾಗಿ ಬೇಕಾದಂಥ ವೆಚ್ಚಕ್ಕೆ ಮಾತ್ರ ಶುಲ್ಕ ಎಂದು ವಿಧಿಸತಕ್ಕಂಥ ಸರ್ವ ರೀತಿಯಲ್ಲಿ ಒಳ್ಳೆಯದು ಈ ಮಾರ್ಪಾಡು ತರತಕ್ಕಂಥ ಶಿಕ್ಷಣದ ಸಮಗ್ರ ನೀತಿಯನ್ನು ಬದಲಾಯಿಸಬೇಕು ಎನ್ನುವ ಮನೋಭಾವನೆಯನ್ನು ಇಟ್ಟುಕೊಳ್ಳಬೇಕಾಗುತ್ತದೆ ಎನ್ನುವ ಮಾತನ್ನು ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಈ ಹಿಂದಿನವರ್ಷ ಅಂತರರಾಷ್ಟ್ರೀಯ ಮಹಿಳಾವರ್ಷ ಆಗಿತ್ತು ಆದರೆ ಮಹಿಳಾ ಕಾಲೇಜಾಗಲಿ, ಮಹಿಳಾ ವಿಶ್ವವಿದ್ಯಾನಿಲಯವಾಗಲಿ ನಮ್ಮ ನಾಡಿನಲ್ಲಿ ಇಲ್ಲ. ಈಗಲೂ ಕೂಡ ತಡವಾಗಿಲ್ಲ ನಮ್ಮ ಘನಸರ್ಕಾರ, ಶಿಕ್ಷಣ ಸಚಿವರು, ಅದರಲ್ಲೂ ಸಮಾಜವಾದಿ ವೇದಿಕೆಯ ಮುಂದಾಳುಗಳಾಗಿ ಮತ್ತು ಹೆಣ್ಣುಮಕ್ಕಳ ಬಗ್ಗೆ ಕಳಕಳಿಯನ್ನು ಹೊಂದಿದವರಾಗಿದ್ದೀರಿ ನಮ್ಮ ರಾಜ್ಯದಲ್ಲಿ ಶೇಕಡಾವಾರು ಅಕ್ಷರಸ್ಥರ ಸಂಖ್ಯೆ ಬಹಳ ಕಡಿಮೆ ಇದೆ. ಅದರಲ್ಲೂ ಹೆಣ್ಣುಮಕ್ಕಳ ಸಂಖ್ಯೆ ಅತಿ ಕಡಿಮೆಯಾಗಿದೆ ಆದುದರಿಂದ ಹೆಣ್ಣು ಮಕ್ಕಳ ವಿಶ್ವವಿದ್ಯಾನಿಲಯ ಮಾಡುವುದಕ್ಕೆ ನಮ್ಮ ಸರ್ಕಾರ ಈ ವರ್ಷ ಮನಸ್ಸು ಮಾಡಬೇಕು ಎಂದು ಕಳಕಳಿಯಿಂದ ಅವರಲ್ಲಿ ಬೇಡಿಕೊಳ್ಳುತ್ತಾ ಇದ್ದೇನೆ. ಇನ್ನು ಕಿತ್ತೂರುರಾಣಿ ಚೆನ್ನಮ್ಮಾಜಿ ನಮ್ಮ ನಾಡಿನ ಚರಿತ್ರಾರ್ಹ ಮಹಿಳೆ ಬೈಲಹೊಂಗಲದಲ್ಲಿ ಸಾಕಷ್ಟು ಸ್ಥಳಾವಕಾಶ ಇದೆ, ಈಗಾಗಲೇ ಕೆಲವೊಂದು ತಾಂತ್ರಿಕವಾಗಿ ಸ್ಯಾಂಕ್ಷನ್ ಮಾಡಿ ಮಂಜೂರಾತಿ ಕೊಟ್ಟಿದ್ದಾರೆ ಎಂದು ಕೇಳ್ಪಟ್ಟೆ. ಅಲ್ಲಿ ಒಂದು ಮಹಿಳಾ ವಿಶ್ವವಿದ್ಯಾನಿಲಯ ತೆಗೆಯುವುದಕ್ಕೆ ಸರ್ಕಾರ ಮನಸ್ಸು ಮಾಡಬೇಕು. ಏಕೆಂದರೆ ಅಲ್ಲಿ ಸ್ಥಳಾವಕಾಶ ಇದೆ, ಚರಿತ್ರಾರ್ಹವಾದಂಥ ಸ್ಥಳ ಇದೆ. ಲೈಬ್ರರಿ, ಕ್ರೀಡಾಂಗಣ ಆಡಿಟೋರಿಯಂ ಬಯಲುಮಂದಿರ ಇನ್ನಿತರ ಸೌಕರ್ಯವನ್ನು ಕಲ್ಪಿಸಿ. ಸುತ್ತಲೂ ಕಾಂಪೌಂಡ್ ಹಾಕಿ ವ್ಯವಸ್ಥೆ ಮಾಡುವುದಕ್ಕೆ ಸರ್ವರೀತಿಯಲ್ಲೂ ಅಲ್ಲಿ ಅನುಕೂಲತೆಗಳು ಇರುವುದರಿಂದ ಈ ಸೌಕರ್ಯಗಳನ್ನು ಕಲ್ಪಿಸಿಕೊಡತಕ್ಕ ಕೆಲಸವನ್ನು ಘನಸರ್ಕಾರ ಮಾಡಬೇಕು. ಮತ್ತು ಮಹಿಳಾ ವರ್ಷದಲ್ಲಿ ಮಹಿಳಾ ವಿಶ್ವವಿದ್ಯಾನಿಲಯ ತೆರೆಯುವುದಕ್ಕೆ ಅವಕಾಶ ಮಾಡಿಕೊಡುತ್ತಾರೆ, ಅದಕ್ಕೆ ಮಾನ್ಯ ಸಚಿವರು ಭರವಸೆ ಕೊಡಬೇಕು ಎಂದು ತಮ್ಮ ಮೂಲಕ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇನ್ನೂ ಹೇಳಬೇಕಾದ ಅಂಶಗಳು ಬೇಕಾದಷ್ಟು ಇವೆ. ಇದುವರೆಗೂ ಸದನದ ಸದಸ್ಯರು ಮತ್ತು ಸಚಿವರು ಹಾಗೂ ಮಾನ್ಯ ಅಧ್ಯಕ್ಷರು ನನಗೆ ಅವಕಾಶ ಕೊಟ್ಟು ಈ ಎರಡು ಮಾತುಗಳನ್ನು ಹೇಳಲಿಕ್ಕೆ ಅವಕಾಶಕೊಟ್ಟ ತಮ್ಮೆಲ್ಲರಿಗೂ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ).—ಸನ್ಮಾನ್ಯ ಸಭಾಧ್ಯಕ್ಷರೇ ಮಾನ್ಯ ಮಂತ್ರಿಗಳು ಮಂಡಿಸಿರತಕ್ಕ ಬೇಡಿಕೆಗಳಿಗೆ ಬೆಂಬಲ ಸೂಚಿಸಿ ಕೆಲವು ಸಲಹೆಗಳನ್ನು ಕೊಡಲಿಕ್ಕೆ ಇಚ್ಛೆಪಡುತ್ತೇನೆ. ಈಗಾಗಲೇ ಬೆಳಿಗ್ಗೆಯಿಂದ ಮತ್ತು ನಿನ್ನೆಯಿಂದ ನಡೆದಿರತಕ್ಕಂಥ ವಿಚಾರವನ್ನು ನೋಡಿದಾಗ ಬಹುಶಃ ನನಗೆ ೧೫–೨೦ ನಿಮಿಷಗಳ ಮೇಲೆ ತಾವು ಸಮಯ ಕೊಡುವುದಿಲ್ಲ ಎಂಬ ಅನಿಸಿಕೆಯನ್ನು ಮುಂದಿಟ್ಟುಕೊಂಡು...

ಶ್ರೀ ವಾಟಾಳ್ ನಾಗರಾಜ್.—೧೫ ನಿಮಿಷಕ್ಕಿಂತ ಜಾಸ್ತಿ ಕೊಟ್ಟರೆ ನಾನು ಮತ್ತೆ ಮಾತನಾಡುತ್ತೇನೆ ಏಕೆಂದರೆ ನನಗೆ ಕೊಟ್ಟಿರುವುದು ಹದಿನೈದೇ ನಿಮಿಷ ತಾವು ಬೇರೆಯವರಿಗೆ ಏನಾದರೂ ಜಾಸ್ತಿ ಕೊಟ್ಟರೆ ನಾನು ಮತ್ತೆ ಮಾತನಾಡುತ್ತೇನೆ.

ಶ್ರೀ ಎಲ್.ಆರ್. ಶಿವರಾಮೇಗೌಡ.—ಅಧ್ಯಕ್ಷರೆ, ನಾನು ಪ್ರಪ್ರಥಮವಾಗಿ ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ನನಗೆ ಸ್ವಾತಂತ್ರ್ಯ ಬಂದಾಗಿನಿಂದಲೂ ೧೯೪೭ನೇ ಇಸವಿಯವರೆಗೆ ಶಿಕ್ಷಣ ವ್ಯವಸ್ಥೆ ಸರಿಯಾಗಿಲ್ಲ ಅದನ್ನು ಸರಿಪಡಿಸಲಿಕ್ಕೆ ಸರ್ಕಾರ ಕಾಳಜಿ ವಹಿಸಿದರೂ ಅದು ಸರಿಯಾಗುತ್ತಿಲ್ಲ ಎನ್ನುವುದನ್ನು ನಾವು ನೋಡುತ್ತಿದ್ದೇವೆ ೧೯೮೭–೮೮ರಲ್ಲಿ ಮಂಡಲ್ ಪಂಚಾಯತ್ ಮತ್ತು ಜಿಲ್ಲಾಪರಿಷತ್‌ಗಳು ಅಧಿಕಾರಕ್ಕೆ ಬಂದಮೇಲೆ ಈ ಒಂದು ಪ್ರಾಥಮಿಕ ಶಿಕ್ಷಣ ಇಲಾಖೆಯನ್ನು ಜಿಲ್ಲಾ ಪರಿಷತ್‌ಗೆ ವರ್ಗಾವಣೆ ಮಾಡಿದರು. ಅಲ್ಲಿಗೆ ಈ ಒಂದು ವರ್ಗಾವಣೆ ಮಾಡಿದಮೇಲೆ ಏನಾಗಿದೆ ಅಂದರೆ ಇದರ ವ್ಯವಸ್ಥೆ ಏನಾಗಿತ್ತು ಎಂದು ಮುಂಚೆ ಕಳವಳ ವ್ಯಕ್ತ ಮಾಡುತ್ತಿದ್ದೆವು, ಶಿಕ್ಷಣ ವ್ಯವಸ್ಥೆ ಈ ರೀತಿ ಇದೆ ಎಂದು ಏನು ಹೇಳುತ್ತಿದ್ದೆವು, ಅದಕ್ಕಿಂತಲೂ ಅಧೋ ಗತಿಗೆ ಇಳಿದಿದೆ ಎಂದು ಹೇಳಿದರೆ ತಪ್ಪಾಗಲಾರದು ಈ ಒಂದು ಹಿನ್ನೆಲೆಯಲ್ಲಿ ಕೆಲವಾರು ವಿಚಾರಗಳನ್ನು ತಮ್ಮ ಮೂಲಕ ತಿಳಿಸಲಿಕ್ಕೆ ಇಷ್ಟಪಡುತ್ತೇನೆ. ನಾನು ಸರ್ಕಾರಕ್ಕೆ ಈ ಸಂದರ್ಭದಲ್ಲಿ ಒತ್ತಾಯ ಏನು ಮಾಡುತ್ತೇನೆಂದರೆ, ಈ ಜಿಲ್ಲಾ ಪರಿಷತ್‌ನಿಂದ ಈ ಇಲಾಖೆಯನ್ನು ಮೊದಲು ಕಿತ್ತುಕೊಳ್ಳಬೇಕು, ವಾಪಸ್ಸು ಪಡೆದುಕೊಳ್ಳಬೇಕು ಎಂದು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಗ್ರಾಮೀಣ ಪ್ರದೇಶದಲ್ಲಿ ಶಿಕ್ಷಣ ವ್ಯವಸ್ಥೆ ಇವೊತ್ತು ಸಂಪೂರ್ಣವಾಗಿ ಹಾಳಾಗಿ

ಹೋಗುತ್ತಿದೆ ಆದ್ದರಿಂದ ಆ ಒಂದು ಅಧಿಕಾರವನ್ನು ಸರ್ಕಾರ ವಾಪಸ್ಸು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ ಇನ್ನು ಜಿಲ್ಲಾಪರಿಷತ್ ಮೂಲಕ ಶಿಕ್ಷಣ ಕೊಡತಕ್ಕ ಬಗ್ಗೆ ಏನು ವ್ಯವಸ್ಥೆ ಇದೆ, ಅದರ ಬಗ್ಗೆ ಹೇಳಬೇಕೆಂದರೆ ಹೈಸ್ಕೂಲುಗಳನ್ನು ಕೊಡತಕ್ಕದ್ದು ಕಾನ್‌ವೆಂಟ್ ಸ್ಕೂಲುಗಳನ್ನು ಕೊಡತಕ್ಕದ್ದು ಯಾವುದೇ ಆಗಲಿ ಪಕ್ಷಗಳ ಮೇಲೆ ನಡೆಯುತ್ತಿದೆ ಯಾರು ಕಾಂಗ್ರೆಸ್ ಅಧ್ಯಕ್ಷರು ಇರುತ್ತಾರೆ ಅಲ್ಲಿ ಕಾಂಗ್ರೆಸ್ ಸಂಸ್ಥೆಗಳು ನಡೆಯುತ್ತವೆ ಯಾರು ಜನತಾದಳದ ಅಧ್ಯಕ್ಷರು ಇರುತ್ತಾರೆ ಅಲ್ಲಿ ಜನತಾದಳದ ಸಂಸ್ಥೆಗಳು ನಡೆಯುತ್ತವೆ, ಯಾರು ಜನತಾ ಅಧ್ಯಕ್ಷರು ಇರುತ್ತಾರೆ ಅಲ್ಲಿ ಜನತಾದಳದ ಜನತಾ ಸಂಸ್ಥೆಗಳು ನಡೆಯುತ್ತವೆ ಈ ರೀತಿ ಅಲ್ಲಿ ಆಗತಕ್ಕ ವ್ಯವಸ್ಥೆ ತಪ್ಪಬೇಕು ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ ಈಗ ಜಿಲ್ಲಾಪರಿಷತ್ತುಗಳಿಂದ ಶಿಕ್ಷಕರಿಗೆ ಬಹಳ ತೊಂದರೆಯಾಗಿದೆ. ಒಬ್ಬ ಶಿಕ್ಷಕನನ್ನು ನಾಲ್ಕಾರು ಸಾರಿ ವರ್ಗಾವಣೆ ಮಾಡಿರುವ ವ್ಯವಸ್ಥೆಯನ್ನು ನಾವು ಜಿಲ್ಲಾಪರಿಷತ್‌ನಲ್ಲಿ ನೋಡುತ್ತಿದ್ದೇವೆ ಮೂರು ನಾಲ್ಕು ತಿಂಗಳುಗಳಲ್ಲಿ ಅವನಿಗೆ ನಾಲ್ಕಾರು ಸಾರಿ ವರ್ಗ ಮಾಡಿರುವುದನ್ನು ನಾವು ಮನಗಾಣುತ್ತೇವೆ. ಇನ್ನು ಹೈಸ್ಕೂಲುಗಳನ್ನು ಕೊಡುವ ಬಗ್ಗೆ ಹೇಳುವುದಾದರೆ ಜಿಲ್ಲಾಪರಿಷತ್‌ನಿಂದ ನನ್ನ ತಾಲ್ಲೂಕಿಗೆ ಒಂದು ಗರ್ಲ್ಸ್ ಹೈಸ್ಕೂಲು ಕೊಟ್ಟಿದ್ದಾರೆ ಸುಮಾರು ಎರಡೂವರೆ ವರ್ಷ ಆಯಿತು ಅಲ್ಲಿಗೆ ಒಬ್ಬರು ಹೆಡಮ್ ಕೊಟ್ಟಿದ್ದಾರೆಯೋ ವಿನಹ ಇನ್ನೂವರೆಗೂ ಅಲ್ಲಿ ಏನು ಸವಲತ್ತುಗಳನ್ನು ಕೊಡಬೇಕಾಗಿತ್ತು ಅದನ್ನು ಕೊಟ್ಟಿಲ್ಲ ಆದ್ದರಿಂದ. ಇದರ ಬಗ್ಗೆ ಕಡಿವಾಣ ಹಾಕದೇ ಇದ್ದರೆ, ಏನೂ ಪ್ರಯೋಜನ ಆಗುವುದಿಲ್ಲವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ರಮಾನಾಥ್ ರೈ.—ನಮ್ಮಲ್ಲಿ ೮೯ ಪ್ರೌಢಶಾಲೆಗಳು ಜಿಲ್ಲಾಪರಿಷತ್ ಅನುಮತಿ ಕೊಟ್ಟು ಪ್ರಾರಂಭವಾಗಿವೆ ಆದರೆ ಸರ್ಕಾರದಿಂದ ಮಾನ್ಯತೆ ಸಿಕ್ಕಿಲ್ಲ.

ಶ್ರೀ ಎಲ್. ಆರ್. ಶಿವರಾಮೇಗೌಡ,—ಇವೊತ್ತು ಜಿಲ್ಲಾ ಪರಿಷತ್ ಅಧೀನದಲ್ಲಿ ಶಿಕ್ಷಣ ವ್ಯವಸ್ಥೆ ಏನು ನಡೆಯುತ್ತಿದೆ ಅದು ಬದಲಾವಣೆಯಾಗಬೇಕು. ಶಿಕ್ಷಣ ವ್ಯವಸ್ಥೆ ಸಂಪೂರ್ಣವಾಗಿ ಏನಾಗಿದೆ ಎಂದರೆ, ಯಾರು ಪ್ರಧಾನರ ಹಿಂದೆ ಹೋಗುತ್ತಾರ, ಯಾರು ಜಿಲ್ಲಾ ಪರಿಷತ್ ಸದಸ್ಯರ ಹಿಂದೆ ಹೋಗುತ್ತಾರೆ, ಯಾರು ಮಂಡಲ್ ಪಂಚಾಯತ್ ಸದಸ್ಯರ ಹಿಂದೆ ಹೋಗುತ್ತಾರೆ ಅವರ ಏಜೆಂಟರುಗಳಿಗೆ ಶಿಕ್ಷಣ ಹರಿದು ಹಂಚಿ ಹೋಗುತ್ತಿದೆ. ಇವೊತ್ತು ಯಾವ ಉಪಾಧ್ಯಾಯರುಗಳು ಜಿಲ್ಲಾ ಪರಿಷತ್ ಸದಸ್ಯರ ಸಂಬಂಧವನ್ನು ಇಟ್ಟುಕೊಂಡಿರುವುದಿಲ್ಲ ಅಂತಹವರಿಗೆ ಗ್ರಾಮಾಂತರ ಪ್ರದೇಶದಲ್ಲಿ ಕಿರುಕುಳ ಕೊಡುವಂತಾದ್ದು ನಡೆಯುತ್ತಿದೆ. ಆದ್ದರಿಂದ. ಇಂಥ ವ್ಯವಸ್ಥೆ ತಪ್ಪಿ ಮೊದಲಿದ್ದ ವ್ಯವಸ್ಥೆ ಆಗಬೇಕೆಂದು ಹೇಳುತ್ತೇನೆ. ಇನ್ನು ಎಷ್ಟೋ ಹಳ್ಳಿಗಳಲ್ಲಿ ಸ್ಕೂಲುಗಳ ಬಾಗಿಲುಗಳನ್ನು ತೆರೆಯಲಿಕ್ಕೆ ಮಾಷ್ಟರುಗಳು ಇಲ್ಲ. ನನಗೆ ತಿಳಿದಮಟ್ಟಿಗೆ ರಾಜ್ಯದಲ್ಲಿ ೨೪ ಸಾವಿರ ಉಪಾಧ್ಯಾಯರ ಹುದ್ದೆಗಳು ಖಾಲಿ ಇವೆ ಎಂದು ಅಂಕಿ ಅಂಶಗಳಿಂದ ತಿಳಿದಿರತಕ್ಕ ವಿಚಾರ. ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಶಿಕ್ಷಣಕ್ಕೆ ಪ್ರಥಮ ಆದತೆ ಕೊಡದೇ ಹೋದಮೇಲೆ ಈ ಪ್ರಜಾಪ್ರಭುತ್ವ ವ್ಯವಸ್ಥೆ ಏತಕ್ಕೆ ಬೇಕು. ಇವೊತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಶಿಕ್ಷಣದ ಮಟ್ಟ ಎಷ್ಟರ ಮಟ್ಟಿಗೆ ಕೆಟ್ಟಿದೆ ಅಂದರೆ ಅದನ್ನು ಹೇಳಲಿಕ್ಕೆ ಆಗುವುದಿಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ಎಸ್‌ಎಸ್‌ಎಲ್‌ಸಿ ಅಥವಾ ಬಿ.ಎ. ಪಾಸ್ ಮಾಡಿರತಕ್ಕವನಿಗೆ ಇಂಗ್ಲೀಷ್‌ನಲ್ಲಿ ಒಂದು ಲೀವ್‌ಲೆಟರ್ ಬರೆಯಲಿಕ್ಕೆ ಬರುವುದಿಲ್ಲ ಅದೇ ಕಾನ್‌ವೆಂಟ್‌ನಲ್ಲಿ ಓದತಕ್ಕ ಎರಡನೇಕ್ಲಾಸ್ ಹುಡುಗನ ಜೊತೆ ಫೈಟ್ ಮಾಡಲಿಕ್ಕೆ ಬರುವುದಿಲ್ಲ. ಇವೊತ್ತು ಪರಿಸ್ಥಿತಿ ಆ ರೀತಿ ಇದೆ.

ಶ್ರೀ ಕೆ. ಶಿವಮೂರ್ತಿ.—ಗ್ರಾಮಾಂತರ ಪ್ರದೇಶದಲ್ಲಿ ಓದತಕ್ಕವರು ಬಿ.ಎ. ಕನ್ನಡದಲ್ಲಿ ಓದಿರುತ್ತಾರೆ. ಆದ್ದರಿಂದ, ಅವರು ಕನ್ನಡದಲ್ಲಿ ಬರೆದರೆ ಸಾಕು.

ಶ್ರೀ ಎಲ್. ಆರ್. ಶಿವರಾಮೇಗೌಡ.—ಅವನಿಗೆ ಇಂಗ್ಲೀಷ್ ಸಹ ಒಂದು ಸಬ್ಜೆಕ್ಟ್ ಇರುತ್ತದೆ. ಅವನು ಹತ್ತಾರು ವರ್ಷ ಇಂಗ್ಲೀಷ್ ಓದಿದರೂ ಸಹ ಒಂದು ಲೆಟರ್ ಇಂಗ್ಲೀಷ್‌ನಲ್ಲಿ ಬರೆಯಲಿಕ್ಕೆ ಬರುವುದಿಲ್ಲ. ಶಿಕ್ಷಣ ವ್ಯವಸ್ಥೆ ಎಷ್ಟರಮಟ್ಟಿಗೆ ಹಾಳಾಗುತ್ತಿದೆ ಎನ್ನುವುದಕ್ಕೆ ನಾನು ಈ ಮಾತನ್ನು ಹೇಳುತ್ತಿದ್ದೇನೆ ಇನ್ನು ನನ್ನ ತಾಲ್ಲೂಕಿನಲ್ಲಿ ಹೈಸ್ಕೂಲು ಏನಿದೆ ಅಲ್ಲಿ ಸುಮಾರು ನಾಲ್ಕು ವರ್ಷಗಳಿಂದ ಉಪಾಧ್ಯಾಯರುಗಳು ಇಲ್ಲ. ಆ ಶಾಲೆಯ ಪರಿಸ್ಥಿತಿ ಏನಾಗಿದೆ ಎಂಬುದನ್ನು ನಾನು ಹೇಳುತ್ತೇನೆ. ಸರಕಾರಕ್ಕೆ ಮತ್ತು ಸಂಬಂಧಪಟ್ಟ ಮಂತ್ರಿಗಳಿಗೆ ಈ ಬಗ್ಗೆ ಪತ್ರ ಬರೆದಿದ್ದೇನೆ. ಮೊನ್ನೆ ೧೫ ದಿವಸಗಳ ಹಿಂದೆ ಅಲ್ಲಿಗ ಒಬ್ಬ ಟೀಚರ್ ಅನ್ನು ಟ್ರಾನ್ಸ್‌ಫರ್ ಮಾಡಿದ್ದಾರೆ. ಅಲ್ಲಿ ಕಳೆದ ೪ ವರ್ಷದಿಂದ ಟೀಚರ್‌ಗಳು ಇಲ್ಲದೆ ಅಲ್ಲಿನ ಪರಿಸ್ಥಿತಿ ಏನಾಗಿತ್ತು ಎಂಬುದನ್ನು ಯೋಚನೆ ಮಾಡಬೇಕು ಹತ್ತಾರು ವರ್ಷಗಳಿಂದ ಡಿ.ಎಲ್.ಆರ್.ಸಿ, ಸಮಿತಿಗಳನ್ನು ಮಾಡಿದರು ಆದರೆ ಟೀಚರ್ ಅನ್ನು ಆಯ್ಕೆ ಮಾಡಿ ಕೊಳ್ಳುವುದಕ್ಕೆ ಆಗಲಿಲ್ಲ. ಸರಕಾರ ಕೊಟ್ಟ ಅಂಕಿ ಅಂಶದ ಪ್ರಕಾರ ೫೦ ವಿದ್ಯಾರ್ಥಿಗಳಿಗಿಂತ ಕಡಿಮೆ ಇರತಕ್ಕಂತಹ ಜೂನಿಯರ್ ಕಾಲೇಜುಗಳ ಸಂಖ್ಯೆಯನ್ನು ಏನು ಕೊಟ್ಟಿದ್ದಾರೆ ಅಂಥಾವನ್ನು

ಮುಚ್ಚಬೇಕು. ಉಪಾಧ್ಯಾಯರುಗಳ ಕೊರತೆ ಎಲ್ಲೆಲ್ಲಿ ಇದೆ ಅಲ್ಲಿ ಹೊಸ ವ್ಯವಸ್ಥೆಯಾಗಬೇಕು. ಈ ಎಲ್ಲಾ ವಿಚಾರಗಳನ್ನು ಪುನಃ ಗಂಡು ೪ ವರ್ಷಗಳ ಹಿಂದೆ ಸಮಗ್ರ ಶಿಕ್ಷಣ ಮಸೂದೆಯನ್ನು ತರಬೇಕೆಂದು ವಿಧಾನ ಸಭೆ, ವಿಧಾನ ಪರಿಷತ್ತುಗಳಲ್ಲಿ ಒಪ್ಪಿಗೆ ಪಡೆದು ರಾಜ್ಯಪಾಲರಿಂದಲೂ ಒಪ್ಪಿಗೆಯಾಗಿ ರಾಷ್ಟ್ರಪತಿ ಯವರ ಸಹಿಗೋಸ್ಕರ ಕಾಯ್ದುಕೊಂಡು ಕುಳಿತಿದೆ. ಈ ಶಿಕ್ಷಣ ವ್ಯವಸ್ಥೆಯನ್ನು ಸಮಗ್ರವಾಗಿ ಬದಲಾವಣೆ ಮಾಡಬೇಕು ಎಂದು ಎಲ್ಲರ ಒಪ್ಪಿಗೆಯನ್ನು ತೆಗೆದುಕೊಂಡು ಏನು ಮಸೂದೆಯನ್ನು ಅಲ್ಲಿಗೆ ಕಳಿಸಿದ್ದೀರಿ ಅದನ್ನು ಜಾರಿಗೆ ತರಬೇಕು. ಇದರ ಬಗ್ಗೆ ಅಧಿಕಾರಿಗಳು ಮತ್ತು ಸರಕಾರ ಗಮನ ವಹಿಸಬೇಕು. ಇದುವರೆವಿಗೂ ಏಕಾನಮಿ ಮೆಷರ್ಸ್ ಇತ್ತು ಈಗ ರಾಜ್ಯದ ಹಣಕಾಸಿನ ಪರಿಸ್ಥಿತಿ ಚೆನ್ನಾಗಿದೆ ಎಂದು ಹೇಳತಕ್ಕಂತಹ ಕಾಲದಲ್ಲಿ ಖಾಲಿ ಹುದ್ದೆಗಳು ಏನು ಇವೆ ಅವನ್ನು ತುಂಬಬೇಕು. ಮೊನ್ನೆ ಮಾನ್ಯ ಅರ್ಥ ಸಚಿವರು ೧೨ ಸಾವಿರ ಉಪಾಧ್ಯಾಯರುಗಳನ್ನು ತೆಗೆದುಕೊಳ್ಳುತ್ತೇವೆಂದು ಹೇಳಿಕೆಯನ್ನು ಕೊಟ್ಟಿದ್ದರು. ಅವರನ್ನು ಯಾವಾಗ ತೆಗೆದುಕೊಳ್ಳುತ್ತೀರಿ ಯಾವಾಗ ಅವರನ್ನು ಶಾಲೆಗಳಿಗೆ ಕೊಡುತ್ತೀರಿ ಎಂಬುದನ್ನು ಈ ಸದನದಲ್ಲಿ ತಿಳಿಸಬೇಕು. ಇನ್ನು ಗ್ರಾಮಾಂತರ ಪ್ರದೇಶ ಗಳಲ್ಲಿ ಹೈಸ್ಕೂಲು. ಜ್ಯೂನಿಯರ್ ಕಾಲೇಜುಗಳಲ್ಲಿ ಉಪಾಧ್ಯಾಯರನ್ನು ೧೯೭೧ರ ಸೆನ್ಸಸ್ ಪ್ರಕಾರ ತೆಗೆದುಕೊಂಡಿದ್ದಾರೆ ೧೯೭೧ರ ಸೆನ್ಸಸ್ ಪ್ರಕಾರ ವಿದ್ಯಾರ್ಥಿಗಳ ಅಂದಾಜಿನ ಪ್ರಕಾರ ಆ ಪ್ಯಾಟ್ರನ್ ನಲ್ಲಿ ಉಪಾಧ್ಯಾಯರುಗಳನ್ನು ಕೊಟ್ಟಿದ್ದೀರೇ ವಿನಹ ಹೊಸ ಪ್ಯಾಟ್ರನ್ ಅನ್ನು ಮಾಡಿಲ್ಲ. ಇದರ ಬಗ್ಗೆ ಶೀಘ್ರವಾಗಿ ಪರಿಶೀಲನೆ ಮಾಡಿ ಹೊಸ ಪ್ಯಾಟ್ರನ್ ಅನ್ನು ಮಾಡಿಸಿ ಎಷ್ಟು ಜನ ಹುಡುಗರಿದ್ದಾರೆ ಅವರಿಗೆ ಎಷ್ಟು ಉಪಾಧ್ಯಾಯರುಗಳ ಅವಶ್ಯಕತೆ ಇದೆ ಎಂಬುದನ್ನು ಕಂಡು ಹಿಡಿದು ಆ ಪ್ರಕಾರವಾಗಿ ಉಪಾಧ್ಯಾಯರುಗಳನ್ನು ಶಾಲೆಗಳಿಗೆ ಕೊಡಬೇಕು. ಗ್ರಾಮಾಂತರ ಪ್ರದೇಶಗಳಲ್ಲಿನ ಶಾಲೆಗಳಲ್ಲಿ ಉಪಾಧ್ಯಾಯರು ಇರುವುದಿಲ್ಲವಾದ್ದರಿಂದ ಹುಡುಗರು ನಗರ ಪ್ರದೇಶದಲ್ಲಿನ ಹುಡುಗರ ಜೊತೆಯಲ್ಲಿ ಪೈಪೋಟಿ ಮಾಡಲು ಸಾಧ್ಯವಾಗುತ್ತಿಲ್ಲ. ಗ್ರಾಮೀಣ ಪ್ರದೇಶದ ವಿದ್ಯಾಭ್ಯಾಸದ ವೈಫಲ್ಯದಿಂದಾಗಿ ಅವರು ಬಿ ಎ. ಎಂ.ಬಿ.ಬಿ.ಎಸ್. ಗೆ ಬಿ.ಇ. ಗೆ ಹೋಗಲು ತೊಂದರೆಯಾಗುತ್ತದೆ ಮತ್ತು ನಗರದಲ್ಲಿನ ಹುಡುಗರ ಜೊತೆಯಲ್ಲಿ ಪೈಪೋಟಿ ಮಾಡಲು ತೊಂದರೆಯಾಗುತ್ತದೆ. ಆದುದರಿಂದ ಗ್ರಾಮೀಣ ಪ್ರದೇಶದಲ್ಲಿ ಓದತಕ್ಕಂತಹ ವಿದ್ಯಾರ್ಥಿಗಳಿಗೆ ಗ್ರೇಸ್ ಮಾರ್ಕ್ಸ್ ಅನ್ನು ಕೊಟ್ಟು ನಗರ ಪ್ರದೇಶಗಳಲ್ಲಿನ ಹುಡುಗರ ಜೊತೆ ಪೈಪೋಟಿಗೆ ಬಿಡಬೇಕು ಆ ರೀತಿ ಮಾಡಿದರೆ ಅವರು ನಗರ ಪ್ರದೇಶಗಳ ಹುಡುಗರ ಜೊತೆಗೆ ನಿಲ್ಲಬಹುದು. ಹಳ್ಳಿಯಲ್ಲಿ ಪಿ.ಯು.ಸಿ. ಓದಿ ಗ್ರೇಸ್ ಮಾರ್ಕ್ಸ್ ತೆಗೆದುಕೊಂಡರೆ ನಗರಕ್ಕೆ ಬಂದು ಮುಂದೆ ಕಾಲೇಜಿಗೆ ಸೇರುವಾಗ ಸೀಟನ್ನು ಹೊಡೆಯಬಹುದು. ಗ್ರೇಸ್ ಮಾರ್ಕ್ಸ್ ಕೊಡದೇ ಇದ್ದರೆ ಆ ಸೀಟನ್ನು ನಗರದಲ್ಲಿನ ಹುಡುಗ ಹೊಡೆಯುತ್ತಾನೆಯೋ ಹೊರತು ಗ್ರಾಮಾಂತರ ಪ್ರದೇಶ ದಿಂದ ಬಂದಂತಹ ಹುಡುಗ ಹೊಡೆಯುವುದಕ್ಕಾಗುವುದಿಲ್ಲ. ಇದರ ಬಗ್ಗೆ ಸಮಗ್ರ ಚಿಂತನೆ ಮಾಡಿ ಇವರಿಗೆ ಗ್ರೇಸ್ ಮಾರ್ಕ್ಸ್ ಅನ್ನು ಕೊಡಬೇಕು. ಉಪಾಧ್ಯಾಯರುಗಳನ್ನು ಕೊಡುವಂತಹ ಜವಾಬ್ದಾರಿಯನ್ನು ಸರಕಾರ ತೆಗೆದುಕೊಂಡಿದೆ. ನಗರದಲ್ಲಿರತಕ್ಕಂತಹ ಹುಡುಗರ ಜೊತೆಯಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಓದಿ ಬಂದಿರುವ ವಿದ್ಯಾರ್ಥಿಗಳು ಪೈಪೋಟಿ ಮಾಡಬೇಕಾಗುತ್ತದೆ. ದಯಮಾಡಿ ಇವರಿಗೆ ಗ್ರೇಸ್ ಮಾರ್ಕ್ಸ್ ಅನ್ನು ಕೊಡುವಂತಹ ಕೆಲಸ ಮಾಡಬೇಕು. ಅವರು ಎಷ್ಟೇ ಚೆನ್ನಾಗಿ ಓದಿ ಬಂದರೂ ಕೂಡ ಗ್ರೇಸ್ ಮಾರ್ಕ್ಸ್ ಕೊಟ್ಟರೆ ಸಿಟಿಯಲ್ಲಿರತಕ್ಕಂತಹ ಹುಡುಗರ ಜೊತೆ ಪೈಪೋಟಿ ಮಾಡತಕ್ಕಂತಹ ಮಟ್ಟಕ್ಕೆ ಬರುತ್ತಾನೆ. ಇನಾದಮೇಲೆ ಎಕ್ಸಾಮಿನೇಷನ್ ಸಿಸ್ಟಂನ್ನೇ ಬದಲಾವಣೆ ಮಾಡಬೇಕು. ಏಕೆಂದರೆ ಮಾನ್ಯ ಸಚಿವರಾಗಲಿ, ಸರ್ಕಾರವಾಗಲಿ ಎಷ್ಟೇ ಪ್ರಯತ್ನ ಮಾಡಿದರೂ ಪರೀಕ್ಷೆಗಳಲ್ಲಿ ಹುಡುಗರು ಕಾಪಿ ಹೊಡೆಯುವುದನ್ನು ತಪ್ಪಿಸುವುದಕ್ಕಾಗಿಲ್ಲ. ಇದೂ ಇರಲಿ. ಕೆಲವು ಅಧಿಕಾರಿ ಮಿತ್ರರು ಪರೀಕ್ಷೆ ಪ್ರಾರಂಭವಾಗುವುದಕ್ಕೆ ಮೊದಲೇ ಕ್ವಶ್ಚನ್ ಪೇಪರ್‌ನ್ನು ಮಾರಾಟ ಮಾಡತಕ್ಕದ್ದು, ಅವರನ್ನು ಸಸ್ಪೆಂಡ್ ಮಾಡತಕ್ಕದ್ದು ಇದೆಲ್ಲಾ ಮೊದಲಿನಿಂದಲೂ ನಡೆದು ಕೊಂಡು ಬಂದಿದೆ. ಇದು ಇವತ್ತಿನದು ಏನೂ ಅಲ್ಲ. ಬಹಳ ವರ್ಷಗಳಿಂದ ನಡೆಯುತ್ತಿದೆ. ಆದ್ದರಿಂದ ಸರ್ಕಾರ ಇದರ ಬಗ್ಗೆ ಒಂದು ಸಮಗ್ರವಾದ ಚಿಂತನೆಯನ್ನು ಮಾಡಿ ಎಕ್ಸಾಮಿನೇಷನ್ ಸಿಸ್ಟಂನ್ನೇ ಬದಲಾವಣೆ ಮಾಡಬೇಕು ನಾನು ತಮಗೆ ಒಂದು ಉದಾಹರಣೆಯನ್ನು ಕೊಡುತ್ತೇನೆ. ನನ್ನ ಕ್ಷೇತ್ರದಲ್ಲಿ ನಡೆಯುತ್ತಿರುವಂಥ ಒಂದು ಪ್ರಕರಣವನ್ನು ನಾನು ಮಾನ್ಯ ಮಂತ್ರಿಗಳ ಗಮನಕ್ಕೂ ತಂದಿದ್ದೇನೆ. ಅವರು ತಮ್ಮ ಗಮನಕ್ಕೆ ತೆಗೆದುಕೊಂಡಿದ್ದಾರೆ. ಅವರು ಕ್ರಮ ತೆಗೆದುಕೊಂಡಿಲ್ಲ ವೆಂದು ನಾನು ಹೇಳುವುದಿಲ್ಲ. ನನ್ನ ತಾಲ್ಲೂಕಿನಲ್ಲಿ ನಾಗಮಂಗಲ ಜೂನಿಯರ್ ಕಾಲೇಜು ಎಂದು ಇದೆ. ಆ ಕಾಲೇಜಿಗೆ ಎಲ್ಲೂ ಇಲ್ಲದೇ ಇರತಕ್ಕ ಹುಡುಗರು ಬಂದು ಎಕ್ಸಾಮಿನೇಷನ್ ಕಟ್ಟುತ್ತಾರೆ. ಕಳೆದ ೩-೪ ವರ್ಷದಿಂದ ಇದು ನಡೆಯುತ್ತಿದೆ. ಇದು ಯಾರಿಗೂ ಕೂಡ ಗೊತ್ತಿಲ್ಲ ಒಬ್ಬ ವಿದ್ಯಾರ್ಥಿಗೆ ೪-೫ ಸಾವಿರ ರೂಪಾಯಿಗಳು ಎಂದು ಫಿಕ್ಸ್ ಮಾಡಿದ್ದರು. ಅಂದರೆ ಪಿ.ಯು.ಸಿ.ಯ

ಮೊದಲನೇ ವರ್ಷಕ್ಕೆ ೫ ಸಾವಿರ ರೂಪಾಯಿ, ಎರಡನೇ ವರ್ಷಕ್ಕೆ ೩ ಸಾವಿರ ರೂಪಾಯಿ ಎಸ್.ಎಸ್.ಎಲ್.ಸಿ. ಯವರಿಗೆ ಇಂತಿಷ್ಟು ಎಂದು ಆ ಕೇಂದ್ರದಲ್ಲಿ ಪರೀಕ್ಷೆಗೆ ಕುಳಿತ ಯಾವ ವಿದ್ಯಾರ್ಥಿಗಳೂ ಉತ್ತರವನ್ನು ಬರೆಯುವುದಿಲ್ಲ. ಅವರು ಎಲ್ಲೋ ಬಸ್ ಸ್ಟ್ಯಾಂಡ್‌ನಲ್ಲಿ ಕುಳಿತಿರುತ್ತಾರೆ, ಅಥವಾ ಟಿ. ವಿ. ನೋಡುತ್ತಾ ಕುಳಿತುಕೊಂಡು ಯಾರೋ ಒಬ್ಬ ಬ್ರೋಕರ್‌ನ್ನು ಇಟ್ಟುಕೊಂಡು ಅವನಿಗೆ ದುಡ್ಡು ಕೊಟ್ಟು ಪರೀಕ್ಷೆಯಲ್ಲಿ ಪಾಸ್ ಮಾಡಿಸಿಕೊಂಡು ಹೋಗುತ್ತಿದ್ದಾರೆ. ಇದರ ಬಗ್ಗೆ ನಾವೆಲ್ಲಾ ಹೇಳಿದ್ದಾಯಿತು. ಆದರೆ ಈ ಸಾರಿ ಅಲ್ಲಿನ ಸಾರ್ವಜನಿಕರೇ ಇದರ ಬಗ್ಗೆ ಒಂದು ದೊಡ್ಡ ಹೋರಾಟವನ್ನು ನಡೆಸುತ್ತಿದ್ದಾರೆ. ನಾನು ಈ ಬಗ್ಗೆ ಮಾನ್ಯ ಮಂತ್ರಿಗಳಿಗೆ ಒಂದು ಫೋಟೋವನ್ನು ಕೂಡ ತಂದುಕೊಟ್ಟಿದ್ದೇನೆ. ಇದರ ಆಧಾರದ ಮೇಲೆ ಮಾನ್ಯ ಮಂತ್ರಿಗಳು ನಿರ್ದಾಕ್ಷಿಣ್ಯವಾದ ಕ್ರಮವನ್ನು ತೆಗೆದುಕೊಂಡು ಅವರನ್ನೆಲ್ಲಾ ಬಹಳ ದೂರದ ಊರಿಗೆ ಹಾಕಿದ್ದಾರೆ. ನಾನಾದರೂ ಮಾನ್ಯ ಮಂತ್ರಿಗಳಲ್ಲಿ ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ. ದೂರದ ಊರುಗಳಿಗೆ ಹೋಗಿರುವವರು ಯಾವುದಾದರೂ ರೀತಿಯಲ್ಲಿ ರಾಜಕೀಯ ಒತ್ತಡವನ್ನು ತಂದು ನಮ್ಮ ಪಕ್ಕದ ಊರಿಗೆ ಬರುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ, ಆದರೆ ಅದಕ್ಕೆ ತಾವು ಅವಕಾಶ ಕೊಡಬೇಡಿ. ಅವರು ಅಲ್ಲೇ ಇರಲಿ. ಈಗ ವರ್ಗಾವಣೆ ಮಾಡಿರುವುದನ್ನು ಮತ್ತೆ ಮಾಡಿಫೈ ಆರ್ಡರ್‌ನ್ನು ಮಾಡಿ ಅವರ ಮೊದಲಿನ ಜಾಗಕ್ಕೆ ಹಾಕಬಾರದಾಗಿ ಮಾನ್ಯ ಮಂತ್ರಿಗಳಲ್ಲಿ ನಾನು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ. ಮತ್ತು ನಾನು ಈಗಾಗಲೇ ಹೇಳಿದಂತೆ ಈ ಎಜುಕೇಷನ್ ಸಿಸ್ಟಂನ್ನೇ ಬದಲಾವಣೆ ಮಾಡಬೇಕು. ಹೊರದೇಶಗಳಲ್ಲಿರುವಂತೆ ವಿದ್ಯಾರ್ಥಿಗಳ ಬಂಡವಾಳವನ್ನು, ಅವರ ಜ್ಞಾನ ಬಂಡಾರವನ್ನು ಅಳೆಯಲು ಪುಸ್ತಕಗಳನ್ನೇ ವಿದ್ಯಾರ್ಥಿಗಳ ಕೈಗೆ ಕೊಟ್ಟು ಉತ್ತರ ಬರೆಯುವಂತೆ ಹೇಳುತ್ತಾರೆ. ಅದೇ ರೀತಿ ನಮ್ಮಲ್ಲೂ ಕೂಡ ವಿದ್ಯಾರ್ಥಿಗಳ ಬಂಡವಾಳವನ್ನು ಅವರ ಬುದ್ಧಿಶಕ್ತಿಯನ್ನು ಅಳೆಯಲು ಪುಸ್ತಕಗಳನ್ನು ಅವರ ಕೈಗೇ ಕೊಟ್ಟು ಉತ್ತರವನ್ನು ಬರೆಯಿಸಲು ಪ್ರಯತ್ನ ಮಾಡಬೇಕು. ಅದೇ ಸಿಸ್ಟಂನ್ನು ನಮ್ಮಲ್ಲೂ ಜಾರಿಗೆ ತನ್ನಿ. ಹೊರದೇಶದವರು ಚಂದ್ರಲೋಕಕ್ಕೆ ಹೋದರು ಎಂದು ನಾವೂ ಕೂಡ ಚಂದ್ರಲೋಕಕ್ಕೆ ಹೋಗಲು ಯೋಚನೆ ಮಾಡುತ್ತೇವೆ. ಎಜುಕೇಷನ್ ಸಿಸ್ಟಂನಲ್ಲಿ ನಾವು ಹೊರದೇಶದವರಿಗೆ ಹೋಲಿಕೆ ಮಾಡಿಕೊಂಡರೆ ಅದರಲ್ಲಿ ಏನೂ ತಪ್ಪಿಲ್ಲ, ಇದರ ಬಗ್ಗೆ ಸಮಗ್ರ ಯೋಚನೆ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ವಿದ್ಯಾ ಕೇಂದ್ರಗಳ ಬಗ್ಗೆ ಹೇಳುವುದಾದರೆ, ಯಾವ ಭಾಷೆಯಲ್ಲಿ ಹೇಳಿದರೂ ತಪ್ಪಾಗುತ್ತದೆ ಕನ್ನಡ ಭಾಷೆಯಲ್ಲಿ ಎಂಥ ಕೆಟ್ಟ ಪದಗಳಿಂದ ವರ್ಣಿಸಿದರೂ ತಪ್ಪಿಲ್ಲ ಈ ವಿದ್ಯಾ ಕೇಂದ್ರಗಳು ಅಷ್ಟು ಭ್ರಷ್ಟ ಕೇಂದ್ರಗಳಾಗಿ ಮಾರ್ಪಾಡಾಗುತ್ತಿವೆ. ಇದರ ಬಗ್ಗೆ ತಾವು ಒಂದು ಕಡಿವಾಣವನ್ನು ಹಾಕಬೇಕು ಮಾನ್ಯ ಚಂದ್ರಪ್ರಭ ಅರಸುರವರು ಅವರದೇ ಆದ ಧಾಟಿಯಲ್ಲಿ ಒಂದು ಮಾತನ್ನು ಹೇಳಿದರು. ಹಿಂದೆ ಪಿ.ಯು.ಸಿ ಆದಮೇಲೆ ನಮ್ಮ ಮಕ್ಕಳನ್ನು ಯಾವ ಮೆಡಿಕಲ್ ಕಾಲೇಜಿಗೆ, ಯಾವ ಇಂಜಿನಿಯರಿಂಗ್ ಕಾಲೇಜಿಗೆ, ಅಥವಾ ಬೇರೆ ಇನ್ನಾವ ಕಾಲೇಜಿಗೆ ಸೇರಿಸಬೇಕೆಂದು ಯೋಚನೆ ಮಾಡಬೇಕಾಗಿತ್ತು ಆದರೆ ಇವತ್ತು ಏನಾಗಿದೆ ಎಂದರೆ ಈಗ ಹುಟ್ಟಿದ ಮಕ್ಕಳಿಗೇ ನರ್ಸರಿಗೆ ಸೇರಿಸಬೇಕಾದರೆ ೫–೧೦–೧೫ ಸಾವಿರ ರೂಪಾಯಿಗಳನ್ನು ಅಡ್ವಾನ್ಸ್ ಆಗಿ ಕಟ್ಟಬೇಕಾಗಿದೆ. ಆ ಮಗು ಹುಟ್ಟಿದ ಕೂಡಲೇ ಅದರ ಹೆಸರನ್ನು ರಿಜಿಸ್ಟರ್ ಮಾಡಿಸಬೇಕು.

ಕೆಂಪೇಗೌಡ ಕಟ್ಟಿರತಕ್ಕ ಈ ಬೆಂಗಳೂರು ನಗರದಲ್ಲಿರತಕ್ಕ ಕರ್ನಾಟಕದ ಜನರಿಗೆ ಇಲ್ಲಿ ಸೀಟು ಸಿಕ್ಕುವುದಿಲ್ಲ. ಈ ಸೀಟುಗಳೆಲ್ಲಾ ಸೇಠ್ ಮತ್ತು ಸಿಂಧಿ ಮಕ್ಕಳಿಗೆ ಸಿಕ್ಕುತ್ತಿವೆ. ಈ ನಮ್ಮ ಬೆಂಗಳೂರಿನಲ್ಲಿ ಕೆಲವು ಕಾನ್ವೆಂಟ್‌ಗಳಿವೆ, ಅದು ಸೋಫಿಯ ಇರಬಹುದು, ಬಿಷಪ್ ಕಾಟನ್ ಇರಬಹುದು, ಬಾಲ್ಡ್‌ವಿನ್ಸ್ ಇರಬಹುದು, ಪೂರ್ಣಪ್ರಜ್ಞ ಇರಬಹುದು ಇವು ಒಳ್ಳೆಯ ಶಿಕ್ಷಣ ಕೇಂದ್ರಗಳು, ಇವುಗಳ ವಿಚಾರದಲ್ಲಿ ಚಕಾರ ಎತ್ತುವಂತಿಲ್ಲ. ಆದರೆ ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಅವರು ವ್ಯಾಪಾರೀ ಮನೋಭಾವದಿಂದ ಹೊರಟಿದ್ದಾರೆ. ಇದರ ಬಗ್ಗೆ ಸರ್ಕಾರದವರು ಒಂದು ಕಡಿವಾಣ ಹಾಕಬೇಕು. ಇವತ್ತು ಮಾನ್ಯ ಮಂತ್ರಿಗಳು ಒಂದು ತೀರ್ಮಾನವನ್ನು ತೆಗೆದುಕೊಳ್ಳಲಿ. ಯಾವುದಾದರೊಂದು ಕಾನ್ವೆಂಟ್‌ನ್ನು ಅವರೇ ಸೆಲೆಕ್ಟ್ ಮಾಡಿಕೊಳ್ಳಲಿ. ಅಲ್ಲಿ ಎಷ್ಟು ಜನ ಕನ್ನಡಿಗರ ಮಕ್ಕಳಿದ್ದಾರೆ ಎಂಬುದನ್ನು ನೋಡಲಿ. ಕನ್ನಡಿಗರ ಮಕ್ಕಳು ಇರುವುದು ಬೇಡ, ನಮ್ಮ ರಾಜ್ಯದಲ್ಲಿರತಕ್ಕವರ ಮಕ್ಕಳಿದ್ದಾರೆಯೋ ಎಂಬುದನ್ನು ನೋಡಲಿ. ಮಾನ್ಯ ವಾಟಾಳ್ ನಾಗರಾಜ್‌ರವರು ಮಾತನಾಡುವಾಗ ಹೇಳಿದರು ಈ ಬೆಂಗಳೂರು ಇನ್ನೊಂದು ತಮಿಳರ ರಾಜ್ಯವಾಗುತ್ತದೆ. ಆದ್ದರಿಂದ ಇದರ ಬಗ್ಗೆ ಹೆಚ್ಚಿನ ಎಚ್ಚರವನ್ನು ವಹಿಸಬೇಕೆಂದು. ಇದನ್ನು ನಾವು ನೆನಪು ಮಾಡಿಕೊಳ್ಳಬೇಕು. ಇವತ್ತು ಈ ಬೆಂಗಳೂರಿನಲ್ಲಿ ಎಲ್ಲಾ ವಿದ್ಯಾಭ್ಯಾಸ ಕೇಂದ್ರಗಳಲ್ಲೂ ಒಳ್ಳೆಯ ವಿದ್ಯಾಭ್ಯಾಸವನ್ನು ಕಲಿಯುತ್ತಿರತಕ್ಕ ಮಕ್ಕಳು ಎಂದರೆ ಅವರೆಲ್ಲರೂ ಕೂಡ ಸೇಠ್ ಮತ್ತು ಸಿಂಧಿಗಳ ಮಕ್ಕಳೇ ಹೊರತು ಬೇರೆಯವರು

ಯಾರೂ ಇಲ್ಲ ಇವತ್ತು ತಾವೂ ಕೂಡ ನೋಡಿರಬಹುದು, ಈ ಬೆಂಗಳೂರಿನಲ್ಲಿ ಕಮರ್ಷಿಯಲ್ ಸ್ಟ್ರೀಟ್‌ಗೆ ಹೋದರೆ ಅಲ್ಲಿಯೇ ಒಂದು ಭಾಷೆ. ಬ್ರಿಗೇಡ್ ರೋಡಿಗೆ ಹೋದರೆ ಅಲ್ಲೀ ಒಂದು ಭಾಷೆ, ಗಾಂಧಿ ನಗರಕ್ಕೆ ಹೋದರೆ ಅಲ್ಲಿ ಒಂದು ಭಾಷೆ. ಹೀಗೆ ವಿವಿಧ ಭಾಗಗಳಲ್ಲಿ ವಿವಿಧ ಭಾಷೆಗಳಿವೆ. ಆದ್ದರಿಂದ ಇದರ ಬಗ್ಗೆ ಸರ್ಕಾರ ಸಮಗ್ರವಾದ ಚಿಂತನೆ ಮಾಡಿ ಒಂದು ಕಡಿವಾಣವನ್ನು ಹಾಕಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಪಿ. ವೆಂಕಟೇಶ್.—ಗಾಂಧಿನಗರದಲ್ಲಿ ಯಾವ ಭಾಷೆ ಇದೆ ಸ್ವಾಮಿ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಬಸ್ ಸ್ಟ್ಯಾಂಡ್ ಮತ್ತು ರೈಲ್ವೇಸ್ಟೇಷನ್ ಪಕ್ಕದಲ್ಲೇ ಇರುವುದರಿಂದ ಅಲ್ಲಿ ಎಲ್ಲಾ ಮಿಕ್ಸ್ ಆಗಿರತಕ್ಕ ಭಾಷೆ ಇದೆ. ಅಲ್ಲಿ ತಮಿಳು ಜಾಸ್ತಿ ಇದೆಯೆಂದು ಮಾನ್ಯ ವಾಟಾಳ್ ಗರಾಜ್‌ರವರು ಹೇಳಿದರು. ಮೊನ್ನೆ ಮಾನ್ಯ ಆರೋಗ್ಯ ಸಚಿವೆಯುವರು ಒಂದು ಗಮನ ಸೆಳೆಯುವ ಸೂಚನೆಗೆ ಉತ್ತರವನ್ನು ಕೊಟ್ಟಿರತಕ್ಕದು ಪತ್ರಿಕೆಯಲ್ಲೂ ಬಂದಿದೆ. ಅವರು ಏನು ಕೊಟ್ಟಿದ್ದಾರೆಂದರೆ, ಜುಲೈ ೮ರಿಂದ ಕ್ಯಾಪಿಟೇಷನ್ ಶುಲ್ಕವನ್ನು ಈ ರಾಜ್ಯದಲ್ಲಿ ರದ್ದು ಮಾಡಿದ್ದೇವೆ ಎಂದು. ನಾನು ಒಪ್ಪಿಕೊಳ್ಳುತ್ತೇನೆ. ಮಾನ್ಯ ಸಚಿವೆಯವರು ಬಹಳ ಹಿರಿಯರು, ಅವರ ಬಗ್ಗೆ ನಮಗೆ ತುಂಬಾ ಗೌರವವಿದೆ. ಇದರ ಬಗ್ಗೆ ಎರಡನೇ ಮಾತಿಲ್ಲ.

೧೧-೦೦ ಎ. ಎಂ.

ಪೋಲೀಸ್ ಇಲಾಖೆಯವರು ಒಂದು ಕಾನೂನು ಮಾಡಿರುತ್ತಾರೆ. ಕಳ್ಳತನ ಮಾಡಿದವರಿಗೆ, ರಾತ್ರಿಹೊತ್ತು ಮನೆ ನುಗ್ಗಿದವರಿಗೆ ಇಂಥ ಶಿಕ್ಷೆ ಎಂದು, ಮರ್ಡರ್ ಮಾಡಿದವರಿಗೆ ಇಂಥ ಶಿಕ್ಷೆ ಎಂದು ಪೋಲೀಸ್ ಇಲಾಖೆಯವರು ಶಿಕ್ಷೆಯನ್ನು ಕೊಡುವುದನ್ನು ನೋಡಿದ್ದೇವೆ. ಅದರಂತೆ ಹಗಲು ದರೋಡೆ ಮಾಡಿದವರಿಗೆ ಇಂಥ ಶಿಕ್ಷೆ ಎಂದು ಇದೆ. ಇವರು ಹಗಲು ದರೋಡೆ ಮಾಡುತ್ತಿದ್ದಾರೆ. ಇವತ್ತು ಕ್ಯಾಪಿಟೇಷನ್ ಶುಲ್ಕ ಎಂದು ತೆಗೆದುಕೊಳುತ್ತಿರುವುದು ಸರ್ಕಾರದವರಿಗೆ ಗೊತ್ತಿದೆ. ಹಿರಿಯರಾದ ಮಾನ್ಯ ವಿದ್ಯಾಸಚಿವರೇ ಹೇಳಲಿ. ರಾಜ್ಯದಲ್ಲಿ ಕ್ಯಾಪಿಟೇಷನ್ ಶುಲ್ಕ ಒಂದು ದೊಡ್ಡ ಪಿಡುಗಾಗಿದೆ. ಇವತ್ತಿನದಿವಸ ಗ್ರಾಮಾಂತರ ಪ್ರದೇಶದಲ್ಲಿರತಕ್ಕಂಥ ರೈತನ ಮಗ ದುಡ್ಡು ಕೊಟ್ಟು ಇಂಜನೀಯರಿಂಗ್ ಕೋರ್ಸ್‌ಗೆ ಸೀಟು, ಮೆಡಿಕಲ್‌ಗೆ ಸೀಟು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆಯೇ ? ನಾಲ್ಕು ಲಕ್ಷ ರೂಪಾಯಿಗಳನ್ನು ಕೊಡಬೇಕೆಂದರೆ ಅವನಿಗೆ ಹೇಗೆ ಸಾಧ್ಯವಾಗುತ್ತದೆ ? ಅದಕ್ಕಿಂತ ಕಡಿಮೆ ಇಲ್ಲವೇ ಇಲ್ಲ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೇ, ಹೋದಸಾರಿ ಕ್ಯಾಪಿಟೇಷನ್ ಬಗ್ಗೆ ಮಾತನಾಡುವಾಗ ಮಾನ್ಯ ಆರೋಗ್ಯ ಸಚಿವರು ಕಂಪ್ಲೇಂಟ್ ಕೊಡಿ ಎಂದು ಹೇಳಿದರು. ಸಭೆಯ ಮೂಲಕ ಹೇಳಿದೆ ಒಬ್ಬ ರಾಜ್ಯದ ಉನ್ನತ ಶಿಕ್ಷಣವೇತ್ತ ಅಧಿಕಾರದಲ್ಲಿದ್ದಂತವರು ಒಂದು ಗುರುತರವಾದ ಅಪಾದನೆಯನ್ನು ಪಟ್ಟಿಯನ್ನು ಮಾಡಿ ಕೊಟ್ಟಿದ್ದರು. ನನಗೂ ಕೂಡ ಅವರು ಪತ್ರ ಬರೆದಿದ್ದರು. ಅದು ತಮಗೂ ಕೂಡ ಗೊತ್ತಿದೆ. ಡಾ. ವೆಂಕಟಗಿರಿಗೌಡರು ಎಂದು ಅವರು ಪತ್ರ ಬರೆದು ಅದರ ಕಾಪಿಯನ್ನು ನನಗೆ ಕಳುಹಿಸಿಕೊಟ್ಟಿದ್ದಾರೆ.

ಒಬ್ಬ ಮಾನ್ಯ ಸದಸ್ಯರು.—ಬೇರೆ ಪ್ರಶ್ನೆ ಕೇಳಿ.

ಶ್ರೀ ವಾಟಾಳ್ ನಾಗರಾಜ್.—ಬೇರೆ ಏನು ಪ್ರಶ್ನೆಯನ್ನು ಕೇಳುವುದು. ತಾವು ಸುಮ್ಮನೆ ಕುಳಿತುಕೊಳ್ಳಿ. ಕ್ಯಾಪಿಟೇಷನ್ ಶುಲ್ಕದ ಬಗ್ಗೆ ಉನ್ನತ ಶಿಕ್ಷಣವೇತ್ತ ಮಹಾನ್ ವ್ಯಕ್ತಿಗಳು, ಶ್ರೀ ವೆಂಕಟಗಿರಿಗೌಡರು ಬರೆದ ಪತ್ರ ಅದನ್ನು ತಾವು ಪರಿಶೀಲನೆ ಮಾಡಬೇಕು. ಅದರ ಪ್ರತಿಯನ್ನು ನನಗೂ ಕಳುಹಿಸಿಕೊಟ್ಟಿದ್ದಾರೆ. ಅದನ್ನು ತಮ್ಮ ಗಮನಕ್ಕೆ ತಂದಿದ್ದೇವೆ.

ಶ್ರೀ ಎಲ್. ಆರ್. ಶಿವರಾಮೇಗೌಡರು.—ಕ್ಯಾಪಿಟೇಷನ್ ಶುಲ್ಕದ ಬಗ್ಗೆ ಸರ್ಕಾರದವರು ಒಂದು ಆಜ್ಞೆಯನ್ನು ಹೊರಡಿಸಿದ್ದಾರೆ. ಕ್ಯಾಪಿಟೇಷನ್ ಶುಲ್ಕವನ್ನು ಯಾರು ತೆಗೆದುಕೊಳ್ಳುತ್ತಾರೊ ಅವರಿಗೆ ಮೂರು ವರ್ಷಕ್ಕೂ ಕಡಿಮೆ ಇಲ್ಲದೆ ಸೆರೆಮನೆವಾಸ, ಮತ್ತು ೫೦೦೦ ರೂಪಾಯಿಗಳ ದಂಡವೆಂದು ಸರ್ಕಾರಿ ಆಜ್ಞೆ ಇದೆ. ಹಾಗಿದ್ದಮೇಲೆ ಕ್ಯಾಪಿಟೇಷನ್ ಶುಲ್ಕವನ್ನು ಈ ರೀತಿ ವಸೂಲು ಮಾಡುತ್ತಿರಬೇಕಾದರೆ ಮಂತ್ರಿ ಮಂಡಲದವರು ಒಂದು ಡಿಸಿಷನ್ ತೆಗೆದುಕೊಂಡು ಆ ಆಜ್ಞೆಯನ್ನು ವಿತ್‌ಡ್ರಾ ಮಾಡಿಕೊಳ್ಳಲಿ. ನಾವು ಬೇಡವೆಂದು ಹೇಳುವುದಿಲ್ಲ. ಆಜ್ಞೆಯನ್ನು ಸರ್ಕಾರ ಮಾಡಿರುವುದರಿಂದ ಕ್ಯಾಪಿಟೇಷನ್ ಶುಲ್ಕವನ್ನು ತೆಗೆದುಕೊಳ್ಳುವವರು ನಿರ್ದಾಕ್ಷಿಣ್ಯವಾಗಿ ಜೈಲಿಗೆ ಹೋಗುತ್ತಾರೆಂದು ಘೋಷಣೆ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ವಿನಂತಿ ಮಾಡಿಕೊಳ್ಳುತ್ತೇನೆ. ಇವತ್ತು ವಿದ್ಯಾಕ್ಷೇತ್ರದಲ್ಲಿ ಶಿಕ್ಷಣಮಟ್ಟ ಯಾವ ಮಟ್ಟಕ್ಕೆ ಹೋಗಿದೆ ಎಂದರೆ ರಾಜ್ಯದ

ಜನತೆಗೆ ಬಡವರ ಮಕ್ಕಳಿಗೆ ವಿದ್ಯಾಭ್ಯಾಸವನ್ನು ಕಲಿಸಬೇಕು ಎಂದು ದೃಷ್ಟಿಯಿಂದ ಈ ಕಾಲೇಜುಗಳನ್ನು ಸ್ಥಾಪನೆ ಮಾಡುತ್ತಿಲ್ಲ. ಅವರು ನೋಡಿದರು ಈ ಎಕ್ಸೈಸ್, ಗ್ರಾನೆಟ್ ಕಲ್ಲು ಇವುಗಳಿಂದ ಹಣವನ್ನು ಸಂಪಾದನೆ ಮಾಡುವುದು ಸ್ವಲ್ಪ ಕಷ್ಟವೆಂದು ಕಂಡದ್ದರಿಂದ ಯೋಚನೆ ಮಾಡಿ ಈ ತೀರ್ಮಾನಕ್ಕೆ ಬಂದು ಮೆಡಿಕಲ್ ಕಾಲೇಜು, ಇಂಜಿನೀಯರಿಂಗ್ ಕಾಲೇಜ್ ಇವುಗಳನ್ನು ತೆಗೆದು ಹಣವನು ಸಂಪಾದನೆ ಮಾಡಲು ಹೊರಟರು. ಇದರಮೇಲೆ ಕಡಿವಾಣವನ್ನು ಹಾಕದೆ ಹೋದರೆ ಗ್ರಾಮಾಂತರ ಪ್ರದೇಶದಲ್ಲಿ ಇರತಕ್ಕಂಥ ಬಡಜನರ ಮಕ್ಕಳಿಗೆ ಯಾವರೀತಿ ಅನುಕೂಲವಾಗುತ್ತದೆ. ನಗರಪ್ರದೇಶದಲ್ಲಿರುವವರ ಮೇಲೆ ಗ್ರಾಮಾಂತರ ಪ್ರದೇಶದ ಮಕ್ಕಳು ಕಾಂಪಿಟ್ ಮಾಡಲು ಹೇಗೆ ಸಾಧ್ಯವಾಗುತ್ತದೆ. ನಾವು ಹೇಳಿಕೊಂಡು ಹೋಗುತ್ತಲೇ ಇದ್ದೇವೆ, ತಾವು ಕೇಳಿಕೊಂಡು ಹೋಗುತ್ತಲೇ ಇದ್ದೀರಿ. ಈಗ ೪೦ ಪರ್ಸೆಂಟ್ ಸೀಟ್ಸ್‌ನ್ನು ಸರ್ಕಾರದವರು ತೆಗೆದುಕೊಂಡು ೬೦ ಪರ್ಸೆಂಟ್ ಮ್ಯಾನೇಜ್‌ಮೆಂಟ್‌ನವರಿಗೆ ಬಿಟ್ಟಿರುತ್ತಾರೆ. ಇವತ್ತು ಸರ್ಕಾರದವರೇ ಒಂದು ತೀರ್ಮಾನ ಮಾಡಿ ತಾವು ತೆಗೆದುಕೊಳ್ಳುವ ೪೦ ಪರ್ಸೆಂಟ್ ಸೀಟ್‌ನಲ್ಲಿ ೨೦ ಪರ್ಸೆಂಟ್ ಗ್ರಾಮಾಂತರ ಪ್ರದೇಶದಲ್ಲಿರತಕ್ಕಂಥ ವಿದ್ಯಾರ್ಥಿಗಳಿಗೆ ಕೊಡುವುದಾಗಿ ಘೋಷಣೆ ಮಾಡಲಿ. ಮತ್ತು ಒಂದು ನಾಮಿನಲ್ ರೇಟ್‌ನ್ನು ಫಿಕ್ಸ್ ಮಾಡಿ ಗ್ರಾಮಾಂತರ ಪ್ರದೇಶದಿಂದ ಬರತಕ್ಕಂಥ ಬಡವರ ಮಕ್ಕಳಿಗೆ ರಿಯಾಯಿತಿಯನ್ನು ತೋರಿಸಲಿ ಎಂದು ನನ್ನ ಕಳಕಳಿ. ಮತ್ತೆ ಈ ಕಾನೂನನ್ನು ಬಿಗಿಮಾಡಿ ಕಾಳಸಂತೆಕೋರರು ಏನಿದ್ದಾರೆ ಅವರಿಗೆ ನಿರ್ದಾಕ್ಷಿಣ್ಯವಾದ ಕ್ರಮ ತೆಗೆದುಕೊಳ್ಳಲಿ ಎಂದು ಸರ್ಕಾರವನ್ನು ತಮ್ಮ ಮೂಲಕ ಕೇಳಬಯಸುತ್ತೇನೆ. ಇದಾದಮೇಲೆ ನನಗೆ ತಿಳಿದ ಮಟ್ಟಿಗೆ ನಮ್ಮ ಸರ್ಕಾರ ಎರಡು ಹೊಸ ಮೆಡಿಕಲ್ ಕಾಲೇಜುಗಳಿಗೆ ಅವಕಾಶ ಕೊಡತಕ್ಕ ಯೋಚನೆ ಮಾಡುತ್ತಿದೆ ಎಂದು ತಿಳಿದು ಬಂದಿದೆ. ೧೯೮೩ ರಲ್ಲಿ ೧೦ ಖಾಸಗಿ ಕಾಲೇಜುಗಳಿಂದ ೭೭೫ ವಿದ್ಯಾರ್ಥಿಗಳು ೪ ಸರ್ಕಾರಿ ಕಾಲೇಜುಗಳಿಂದ ೫೫೦ ವಿದ್ಯಾರ್ಥಿಗಳು ಅಂದರೆ ಒಟ್ಟು ೧೩೨೫ ವಿದ್ಯಾರ್ಥಿಗಳು ಹೊರಗೆ ಬರುತ್ತಿದ್ದುದನ್ನು ನೋಡಿದ್ದೇವೆ. ಇವತ್ತು ಎಷ್ಟು ಜನ ಹೊರಗೆ ಬರುತ್ತಿದ್ದಾರೆಂಬುದನ್ನು ಗಮನಿಸಬೇಕು. ಮಾನ್ಯ ಸಿಂಧ್ಯರವರು ಅಧಿಕಾರ ಬಿಟ್ಟುಕೊಡುವಾಗ ೧೫ ಖಾಸಗಿ ಕಾಲೇಜುಗಳಾಗಿದ್ದವು, ದುಡ್ಡು ಕೊಟ್ಟವರಿಗೆಲ್ಲ ಒಂದೊಂದು ಕಾಲೇಜು ಕೊಟ್ಟು ಅಂದರೆ ಕೊಡಬಾರದವರಿಗೆಲ್ಲ ಕಾಲೇಜು ಕೊಟ್ಟು......

ಶ್ರೀ ವಾಟಾಳ್ ನಾಗರಾಜ್.—ಕಾಲೇಜುಗಳ ವ್ಯಾಪಾರ ನಡೆದಿದೆ. ಒಂದೊಂದು ಮೆಡಿಕಲ್ ಕಾಲೇಜಿಗೆ ಇಷ್ಟು, ಇಂಜಿನಿಯರಿಂಗ್ ಕಾಲೇಜಿಗೆ ಇಷ್ಟು ಎಂದು ಕೋಟಿ ಕೋಟಿ ರೂಪಾಯಿಗಳ ವ್ಯಾಪಾರ ನಡೆಯಿತು. ೫೦ ಮೆಡಿಕಲ್ ಕಾಲೇಜುಗಳು, ೫೨ ಇಂಜಿನಿಯರಿಂಗ್ ಕಾಲೇಜುಗಳು, ಒಂದೊಂದು ಕಾಲೇಜಿಗೆ ಕೋಟಿಗಟ್ಟಲೆ ಹಣ ಮೆಡಿಕಲ್ ಕಾಲೇಜಿಗೆ ೫ ಕೋಟಿ, ಇಂಜಿನಿಯರಿಂಗ್ ಕಾಲೇಜಿಗೆ ೩ ಕೋಟಿ ತಾಂತ್ರಿಕ......

ಚೇರ್ಮನ್.—ಮಧ್ಯೆ ಮಧ್ಯೆ ಡಿಸ್ಟರ್ಬ್ ಮಾಡಬಾರದು.

ಶ್ರೀ ಎಲ್. ಆರ್. ಶಿವರಾಮೇಗೌಡ.—೧೯೮೩ರಲ್ಲಿ ೧೩೨೫ ಮಂದಿ ವಿದ್ಯಾರ್ಥಿಗಳು ಹೊರಗೆ ಬರುತ್ತಿದ್ದರು. ನೀವು ಅಧಿಕಾರ ಬಿಟ್ಟುಕೊಡತಕ್ಕ ಸಂದರ್ಭದಲ್ಲಿ ೩ ಸಾವಿರ ಜನ ಬರುತ್ತಿದ್ದರು. ಅಂದರೆ ೧:೪ ಆಯಿತು. ೧೯೭೩ ರಲ್ಲಿ ೩೭ ಇಂಜಿನಿಯರಿಂಗ್ ಕಾಲೇಜುಗಳಿದ್ದವು ೭ ವರ್ಷದ ನಂತರ ಅಧಿಕಾರ ಬಿಟ್ಟುಕೊಡುವಾಗ ಅಂದರೆ ೧೯೮೦ರಲ್ಲಿ ೫೧ ಇಂಜಿನಿಯರಿಂಗ್ ಕಾಲೇಜುಗಳಾಗಿದ್ದವು ೧೯೮೩ರಲ್ಲಿ ೧೦೬೭೩ ಮಂದಿ ವಿದ್ಯಾರ್ಥಿಗಳು ಹೊರಬರುತ್ತಿದ್ದರೆ ೧೯೮೦ ರಲ್ಲಿ ೧೬ ಸಾವಿರ ಜನ ಹೊರಬರುತ್ತಿದ್ದಾರೆ. ಇವರಿಗೆಲ್ಲ ಸರ್ಕಾರ ಉದ್ಯೋಗ ಕೊಡುವ ವ್ಯವಸ್ಥೆ ಮಾಡುತ್ತದೆಯೇ ? ಗ್ರಾಮಾಂತರ ಪ್ರದೇಶಗಳಿಂದ ಬರತಕ್ಕ ಬಡ ವಿದ್ಯಾರ್ಥಿ ಅವರ ಅಪ್ಪನ ಜೇಬಿನಿಂದ ೫-೬ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಅವನ ಗತಿ ಏನು ? ನಾಯಿಕೊಡೆಗಳಂತೆ ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳು ಬೆಳೆದರೆ ಡಾಕ್ಟರ್, ಇಂಜಿನಿಯರ್‌ಗಳಿಗೆ ಎಲ್ಲಿ ಮಹತ್ವ ಇರುತ್ತದೆಂದು ಸರ್ಕಾರವನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಇವೆಲ್ಲದರ ಬಗ್ಗೆ ಶಿಕ್ಷಣ ಸಚಿವರು ವಿಚಾರ ಮಾಡಬೇಕು. ಕೊನೆಯಲ್ಲಿ ಜಿಲ್ಲಾ ಪರಿಷತ್‌ನಿಂದ ಪ್ರಾಥಮಿಕ ಶಿಕ್ಷಣವನ್ನು ವಾಪಸ್ಸು ಪಡೆಯಬೇಕೆಂದು ಪ್ರಾರ್ಥಿಸಿಕೊಂಡು ಅಧ್ಯಕ್ಷರಿಗೆ ವಂದಿಸಿ ನನ್ನ ಮಾತು ಮುಗಿಸುತ್ತೇನೆ.

† ಶ್ರೀ ಎ. ಕೆ. ಅನಂತಕೃಷ್ಣ (ಶಿವಾಜಿನಗರ).— ಮಾನ್ಯ ಅಧ್ಯಕ್ಷರೆ, ಲೇಖನ, ಸಾಮಗ್ರಿ, ಯುವಜನ ಸೇವೆ, ಪ್ರಾಥಮಿಕ ಶಿಕ್ಷಣ ಹಾಗೂ ಸೆಕೆಂಡರಿ ಶಿಕ್ಷಣಕ್ಕೆ ಸಂಬಂಧಪಟ್ಟ ಅನುದಾನ ಬೇಡಿಕೆಗಳಿಗೆ ಅನುಮತಿ ಕೊಡುವ ಸಮಯದಲ್ಲಿ ನಾನು ಕೆಲವು ಸಲಹೆಗಳನ್ನು ನೀಡಲು ಇಚ್ಛಿಸುತ್ತೇನೆ. ಈಗಾಗಲೇ ಈ ಬೇಡಿಕೆಗಳ ಮೇಲೆ ಸಾಕಷ್ಟು ಸಮಯ ಚರ್ಚೆ ನಡೆದಿದೆ. ನಾವು ಮೂಲಭೂತವಾಗಿ ನಮ್ಮ ರಾಷ್ಟ್ರದ ಸಂವಿಧಾನವನ್ನು ಇಟ್ಟುಕೊಂಡು ಯಾವ ತರಹದ ಸಮಾಜವನ್ನು ನಿರ್ಮಾಣ ಮಾಡಬೇಕು ನಮ್ಮ ರಾಷ್ಟ್ರದ ಸಮಾಜಕ್ಕೆ ಯಾವ ತರಹ ಮೂಲಭೂತ ಸೇವೆಯನ್ನು ಮಾಡಬೇಕೆಂದು

ಹೇಳಿ ಪ್ರತಿಜ್ಞೆಯನ್ನು ಮಾಡುತ್ತೇವೆ. ಆ ಪ್ರತಿಜ್ಞೆಯಲ್ಲಿ ಬಹಳ ಪ್ರಾಮುಖ್ಯವಾದ ವಿಷಯವೆಂದರೆ ನಮ್ಮ ರಾಷ್ಟ್ರ ಸಮಾಜವಾದದ ರಾಷ್ಟ್ರವಾಗಬೇಕು, ಸಮಾಜ ಆ ಒಂದು ದಿಕ್ಕಿನಲ್ಲಿಯೇ ಪ್ರಗತಿಯನ್ನು ಸಾಧಿಸಬೇಕು, ಪ್ರಜಾ ರಾಷ್ಟ್ರವಾಗಬೇಕು, ಮತೀಯ ಮತ್ತು ಜಾತ್ಯಾತೀತ ರಾಷ್ಟ್ರವಾಗಬೇಕು ಎಂಬ ಕಾರ್ಯಕ್ರಮವನ್ನು ನಾವು ಇಟ್ಟುಕೊಂಡಿರಬೇಕಾದರೆ ಪ್ರತಿ ವರ್ಷ ನಮ್ಮ ಯಾವುದೇ ಒಂದು ಸಮಾಜಕ್ಕೆ ಗುರುತರವಾದ ಮೂಲಭೂತವಾದ ಬದಲಾವಣೆಗಳನ್ನು ಆರ್ಥಿಕವಾಗಿ ಸಾಮಾಜಿಕವಾಗಿ ಸಾಧಿಸಬೇಕೆನ್ನುವ ಸಂದರ್ಭದಲ್ಲಿ, ನಾವು ಪ್ರಮುಖವಾಗಿ ನಮ್ಮ ಶಿಕ್ಷಣದ ಒಂದು ಪದ್ಧತಿ ಮತ್ತು ಶಿಕ್ಷಣಕ್ಕೆ ಅವಶ್ಯವಾಗಿ ಬೇಕಾದಂತಹ ಹಣವನ್ನು ಮಂಜೂರ್ಮಾಡುವಂತಹ ಸಮಯದಲ್ಲಿ ನನಗಾದರೂ ಅನ್ನಿಸುತ್ತದೆ, ಯಾವ ಒಂದು ಮೂಲಭೂತವಾದ, ಒಂದು ತತ್ವದಿಂದ, ಒಂದು ಧ್ಯೇಯದಿಂದ ನಾವು ಈ ಗುರಿಯನ್ನು ಸಾಧಿಸಬೇಕೋ ಆ ಗುರಿಯನ್ನು ಆ ದಿಕ್ಕನ್ನು ತಪ್ಪಿ ನಾವು ಕೇವಲ ಒಂದು ಸಾಧಾರಣವಾಗಿ ಪ್ರತಿ ವರ್ಷ ಏನು ಮಾಡುತ್ತಿದ್ದೇವೆಯೋ ಅದನ್ನೇ ನಾವು ಮಾಡುತ್ತಿದ್ದೇವೆನ್ನುವ ಭಾವನೆ ಬರುತ್ತದೆ. ಕಾರಣವಾದರೂ ಈಗಾಗಲೇ ನಮ್ಮ ಸ್ನೇಹಿತರು, ಸದಸ್ಯರು ಮಾತನಾಡಿದ ಪೈಕಿ ಒಂದೊಂದನ್ನೂ ತೆಗೆದು ವಿಶ್ಲೇಷಣೆ ಮಾಡಿದರೆ ಇಲ್ಲಿ ಹೇಳುವವರು, ಭಾಷಣ ಮಾಡುವವರು ತಮ್ಮ ಮನಸ್ಸಿಗೆ ತೃಪ್ತಿ ಆಗುವ ರೀತಿಯಲ್ಲಿ ಮಾತನಾಡಿದ ಹಾಗೆ ಕೇಳುವವರು ಸಾಂಪ್ರದಾಯಿಕವಾಗಿ ಕೇಳುವ ಒಂದು ಸಂದರ್ಭ ಎನ್ನುವ ರೀತಿಯಲ್ಲಿ ನನಗೆ ಕಾಣಿಸುತ್ತದೆ, ತೀವ್ರತೆಯಿಂದ ಹೇಳುವಾಗ ತೀವ್ರತೆಯನ್ನು ಗಮನಿಸಿ ಒಪ್ಪುವುದಾದರೆ ಅದನ್ನು ಒಪ್ಪುತ್ತೇನೆ ಎನ್ನುವ ರೀತಿಯಲ್ಲಿ ಅಥವಾ ಒಪ್ಪಿಗೆ ಇಲ್ಲದಿದ್ದರೆ ಮೂಲಭೂತವಾಗಿ ಒಪ್ಪುವುದಕ್ಕೆ ಸಾಧ್ಯವಿಲ್ಲ ಎನ್ನುವ ರೀತಿಯಲ್ಲಿ ನಮ್ಮಲ್ಲಿ ನಡವಳಿಕೆ ಕಾಣುತ್ತಾ ಇಲ್ಲ. ಯಾರಿಗಾದರೂ ನಾನು ಅಗೌರವದಿಂದ ಹೇಳುತ್ತೇನೆಂದಲ್ಲ. ಆದರೆ ನಾನಾದರೂ ತೀವ್ರತೆಯಿಂದ ಯೋಚನೆ ಮಾಡುವಾಗ ಹೀಗೆನಿಸುತ್ತದೆ. ನಾವು ನಮ್ಮ ಸಮಾಜವನ್ನು ಸಮಾಜವಾದೀ ಸಮಾಜವನ್ನಾಗಿ ಪರಿವರ್ತನೆ ಮಾಡಬೇಕೆನ್ನುವ ಸಮಯದಲ್ಲಿ ಶಿಕ್ಷಣ ಬಹಳ ಮುಖ್ಯವಾದುದು. ಈ ಶಿಕ್ಷಣದ ವಿಷಯ ಮಾತನಾಡಬೇಕಾದರೆ ನಮ್ಮ ಸಮಾಜದಲ್ಲಿ ಶಿಕ್ಷಣ ಪ್ರತಿಯೊಬ್ಬ ನಾಗರೀಕರಿಗೆ ಕೂಡಾ ಸರ್ವ ಸಮಾನತೆಯಿಂದ ದೊರಕಬೇಕಾದ್ದು ಅತ್ಯಾವಶ್ಯಕ, ಇದು ಮೂಲಭೂತವಾದ ಹಕ್ಕು ಎಂದು ಹೇಳುತ್ತೇನೆ. ಇವತ್ತು ಕ್ಯಾಪಿಟೇಷನ್ ವಿಷಯವಾಗಲೀ, ಡೊನೇಷನ್ ವಿಷಯ ಇರಲಿ. ಇಂಗ್ಲೀಷ್ ಮಾಧ್ಯಮದ ಶಾಲೆಗಳ ವಿಷಯ ಇರಲಿ, ಇದೆಲ್ಲಾ ಯೋಚನೆ ಮಾಡಿದಾಗ ನಮ್ಮ ಸಮಾಜದಲ್ಲಿ ಏನು ಒಂದು ಸಾಮಾಜಿಕ ಆರ್ಥಿಕ ವಿಪರ್ಯಾಸ ಇದೆ ಆ ವಿಪರ್ಯಾಸಗಳನ್ನು ಹಾಗೆಯೇ ಉಳಿಸಿ ಬೆಳೆಸಿಕೊಂಡು ಹೋಗುವ ರೀತಿಯಲ್ಲಿ ನಮ್ಮ ವಿದ್ಯೆ ಕೂಡಾ ಮಕ್ಕಳಿಗೆ ಕೊಡುವ ಒಂದು ಸಂದರ್ಭ ಆಗಿದೆ. ನಮ್ಮ ರಿಪೋರ್ಟ್ ಏನು ಇದೆ ಅದನ್ನು ತೀವ್ರವಾಗಿ ಯೋಚನೆ ಮಾಡಿದರೆ ನಾವು ನೋಡುತ್ತೇವೆ. ಉದಾಹರಣೆಗೆ ನಮ್ಮ ಅರ್ಬನ್ ಏರಿಯಾದಲ್ಲಿ ಪರ್ಸೆಂಟೇಜ್ ಆಫ್ ಪಾಸ್ ೨೬.೪೨೯ ಎಂದು ಇದ್ದು ರೂರಲ್ ಏರಿಯಾದಲ್ಲಿ ಅದು ೨೯.೦೫೭ ಎಂದು ಇದೆ. ಅರ್ಬನ್ ಏರಿಯಾ ಪರ್ಸೆಂಟೇಜ್ ಕೂಡಾ ರೂರಲ್ ಏರಿಯಾದಲ್ಲಿಗಿಂತ ಕಡಿಮೆ ಆಗಿದೆ. ಇವತ್ತು ಹೆಚ್ಚಿನ ಸಂಖ್ಯೆಯಲ್ಲಿ ಜನ ಹಳ್ಳಿಗಾಡಿನಲ್ಲಿದ್ದಾರೆ. ಗ್ರಾಮಸ್ಥರಿದ್ದಾರೆ ಅವರಲ್ಲಿಯೇ ಇಷ್ಟು ಕಡಿಮೆ ಪರ್ಸೆಂಟೇಜ್ ಪಾಸ್ ಆದರೆ ಎಷ್ಟರಮಟ್ಟಿಗೆ ವಿದ್ಯೆಯನ್ನು ಬೆಳೆಸುತ್ತಿದ್ದೇವೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಕನ್ನಡಕ್ಕೆ ಮಹತ್ವ ಕೊಡಬೇಕು ಕನ್ನಡದಲ್ಲಿ ಪ್ರತಿಯೊಂದು ಅಭ್ಯಾಸ ಆಗಬೇಕೆನ್ನುವಾಗ ಈಗ ಕನ್ನಡ ಮಾಧ್ಯಮದಲ್ಲಿ ತೇರ್ಗಡೆಯಾದವರ ಸರಾಸರಿ ೯.೨೮೧ ಇದ್ದರೆ ಇಂಗ್ಲೀಷ್ ಮಾಧ್ಯಮದಲ್ಲಿ ತೇರ್ಗಡೆಯಾದವರ ಸರಾಸರಿ ೩೬.೩೩೦ ಆಗಿದೆ. ಇದಕ್ಕೆ ಮೂಲಭೂತವಾದ ಕಾರಣ ಏನು? ನಾವು ಕನ್ನಡ ಭಾಷೆಯಲ್ಲಿ ಕನ್ನಡ ಮಾಧ್ಯಮದಲ್ಲಿ ವಿದ್ಯೆ ಹೇಳುತ್ತಿರುವಾಗ. ಕನ್ನಡ ಮಾಧ್ಯಮದಲ್ಲಿ ಆಡಳಿತವನ್ನು ನಡೆಸುತ್ತಿರುವಾಗ, ಕನ್ನಡದಲ್ಲಿ ನಾವು ಸೇವೆ ಮಾಡುತ್ತೇವೆಂದು ಹೇಳುವ ಕಾಲದಲ್ಲಿ ಇಲ್ಲಿ ಪಾಸಾಗತಕ್ಕಂಥ ಇಷ್ಟು ಏನು ಕಂಡ ಕಂಡ ತೇರ್ಗಡೆ ಏಕೆ ಆಗುತ್ತದೆ, ಅದರಲ್ಲೂ ಕನ್ನಡ ಭಾಷೆಯಲ್ಲಿ ಇಷ್ಟು ಕಡಿಮೆ ಆಗುತ್ತಿದೆ ಎಂಬುದನ್ನು ಯೋಚನೆ ಮಾಡಬೇಕು. ಮತ್ತು ಶಿಕ್ಷಣ ಮಂತ್ರಿಗಳು ಈ ವಿಷಯದಲ್ಲಿ ತೀವ್ರ ಗಮನ ಕೊಟ್ಟು ಮೂಲಭೂತವಾದ ಲೋಪದೋಷ ಏನು ಇದೆ ಅದನ್ನು ಯಾವ ರೀತಿ ಸರಿಪಡಿಸಬೇಕಾಗಿದೆ ಎಂಬುದನ್ನು ಯೋಚನೆ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ನಾವು ಹೇಳುವುದು ಸಮಾಜವಾದ, ಕಾಲ ಕಾಲಕ್ಕೆ ನಡೆಯುವುದೇ ನಡೆಯುತ್ತಿದ್ದು ಇದೇ ವಿಪರ್ಯಾಸವನ್ನು ಮುಂದುವರಿಸಿಕೊಂಡು ಹೋಗುವ ಒಂದು ಮಾತಾಗುತ್ತದೆ. ಸಮಾಜದಲ್ಲಿ ಅದನ್ನು ಹಾಗೆಯೇ ಮುಂದುವರಿಸಿಕೊಂಡು ಹೋಗ ದಕ್ಕೆ ಅವಕಾಶ ಮಾಡಿಕೊಟ್ಟ ಹಾಗೆ ಆಗುತ್ತದೆ. ಇಷ್ಟು ಈ ಸಂದರ್ಭದಲ್ಲಿ ಹೇಳುತ್ತ, ನನ್ನ ಕೆಲವು ಮುಖ್ಯವಾದ ಸಲಹೆಗಳನ್ನು ಮಾತ್ರ ಕೊಡುತ್ತಿದ್ದೇನೆ. ಭಾಷಣಕ್ಕೆ ಸಮಯ ಇಲ್ಲ ಎಂದು ಕಾಣಿಸುತ್ತದೆ. ನಮ್ಮ ರಾಷ್ಟ್ರದಲ್ಲಿ ಈಗಾಗಲೇ ನಮ್ಮ ಮಿತ್ರರು ಹೇಳಿದ ಹಾಗೆ ನಮ್ಮ ರಾಷ್ಟ್ರದ ಅಭಿವೃದ್ಧಿ ರಾಷ್ಟ್ರದ ಐಕ್ಯತೆ, ಭದ್ರತೆ. ರಾಷ್ಟ್ರದಲ್ಲಿ ಸಮಾಜವಾದ,

ರಾಷ್ಟ್ರದಲ್ಲಿ ಜಾತ್ಯಾತೀತವಾದಿ ಸಮಾಜ ರಾಷ್ಟ್ರದಾದ್ಯಂತ ಸರಿಸಮಾನತೆ ಇದೆ ಎನ್ನತಕ್ಕಂಥ ಸಮಾಜ ಆಗಬೇಕು ಎನ್ನುವುದಾದರೆ, ರಾಷ್ಟ್ರದ ಭದ್ರತೆ ಐಕ್ಯತೆ, ಸಮಗ್ರತೆ ಆಗಬೇಕಾಗಿದ್ದರೆ, ನಮ್ಮ ಮಕ್ಕಳಿಗೆ ರಾಷ್ಟ್ರದ ವಿಷಯವಾಗಿಯೂ, ಮತ್ತು ಜಾತ್ಯಾತೀತೆಯ ವಿಷಯವಾಗಿಯೂ, ಸಮಾಜವಾದದ ವಿಷಯವಾಗಿಯೂ, ರಾಷ್ಟ್ರದ ಐಕ್ಯತೆಯ ವಿಷಯವಾಗಿಯೂ, ಮತ್ತು ರಾಷ್ಟ್ರದ ಭದ್ರತೆ, ನಮ್ಮ ಪ್ರಜಾಪ್ರಭುತ್ವ, ನಮ್ಮ ಸಮಾಜವಾದದ ವಿಷಯದಲ್ಲಿ ಹೆಚ್ಚು ತಿಳುವಳಿಕೆಯನ್ನು ಕೊಡುವಂತಹ ಒಂದು ವಿದ್ಯಾಭ್ಯಾಸವನ್ನು ನಮ್ಮ ಮಕ್ಕಳಿಗೆ ಕೊಡಬೇಕು. ಇಂಗ್ಲೀಷ್‌ನಲ್ಲಿ ಒಂದು ಮಾತು ಹೇಳುತ್ತಾರೆ. ಯಾವುದೇ ಒಂದು ಕೆಲಸ ಮಾಡಬೇಕಾಗಿದ್ದರೆ, ಯಾವುದೇ ಒಂದರಲ್ಲಿ ತರಬೇತಿಯನ್ನು ಕೊಡಬೇಕಾಗಿದ್ದರೆ, ಕ್ಯಾಚ್ ದೆಮ್ ವೆಲ್ ಎಂದು ಹೇಳುತ್ತಾರೆ. ಹಾಗೆ ಸಣ್ಣ ವಯಸ್ಸಿನಲ್ಲಿಯೇ ನಾವು ಯಾವ ರೀತಿಯ ಬೋಧನೆಯನ್ನು ಮಾಡುತ್ತೇವೆಯೋ, ಯಾವ ರೀತಿಯ ವಿದ್ಯಾಭ್ಯಾಸವನ್ನು ಕೊಡುವುದಕ್ಕಾಗುತ್ತದೆಯೋ. ಯಾವ ರೀತಿಯ ತರಬೇತಿಯನ್ನು ಕೊಡುವುದಕ್ಕಾಗುತ್ತದೆಯೋ ಅದೇ ಕೊನೆಯ ವರೆಗೂ ಉಳಿಯುತ್ತದೆ. ಸಣ್ಣ ವಯಸ್ಸಿನಲ್ಲೇ ಅವರಿಗೆ ಒಳ್ಳೆಯ ಶಿಕ್ಷಣವನ್ನು ಕೊಡುವುದಕ್ಕಾಗದಿದ್ದರೆ, ಅವರು ದೊಡ್ಡವರಾದ ಮೇಲೆ ಏನೂ ಮಾಡುವುದಕ್ಕಾಗುವುದಿಲ್ಲ. ಕನ್ನಡದಲ್ಲಿ ಒಂದು ಗಾದೆ ಇದೆ, ಅದೇನೆಂದರೆ, ''ಸಸಿಯಾಗಿ ಬಗ್ಗದ್ದು ಮರವಾಗಿ ಬಗ್ಗೀತೆ" ಎಂದು ಇದೆಲ್ಲವನ್ನೂ ತಿಳಿದುಕೊಂಡಿದ್ದು, ಅವರ ವಿದ್ಯಾಭ್ಯಾಸಕ್ಕೆ, ಅವರ ತರಬೇ'' ನೀಡುವುದರಲ್ಲಿ ನಿರುತ್ಸಾಹ, ಒಂದು ರೀತಿಯ ತಾತ್ಸಾರ. ಇದು ಏಕೆಂದು ನನಗೆ ಅರ್ಥವಾಗುತ್ತಿಲ್ಲ. ಇದನ್ನು ತೀವ್ರವಾಗಿ ನಮ್ಮ ಮಂತ್ರಿವರ್ಯರು ಗಮನಿಸಬೇಕು. ಏನು ಈ ಒಂದು ಸಮಾಜದಲ್ಲಿ ಬದಲಾವಣೆಯಾಗಬೇಕೆಂದಿದ್ದೇವೆ, ಅದು ನಿಧಾನವಾಗಿ, ನಮ್ಮ ಕಾಲದಲ್ಲೂ ಆಗದೆ, ನಮ್ಮ ಪೀಳಿಗೆಯ ಕಾಲದಲ್ಲೂ ಆಗದೆ, ಮುಂದೆ ಯಾವತ್ತಾದರೂ ಒಂದು ದಿನ ಬದಲಾವಣೆಯಾಗುತ್ತದೆ ಎನ್ನುವ ರೀತಿಯಲ್ಲಿ ನಾವು ನಡೆದುಕೊಂಡು ಹೋಗುವುದಾದರೆ ಆ ಬದಲಾವಣೆಗೆ ಅರ್ಥವಿಲ್ಲ. ಈ ಸಮಾಜದ ಪ್ರತಿಯೊಂದು ಹಂತದಲ್ಲೂ ವಿಪರ್ಯಾಸ ಇದೆ. ಸಾಮಾಜಿಕವಾಗಿ, ಆರ್ಥಿಕವಾಗಿ ಈ ಒಂದು ವಿಪರ್ಯಾಸ ಹಾಗೆಯೇ ಉಳಿದುಕೊಂಡು ಹೋಗುತ್ತದೆ. ನಾವು ಅದನ್ನು ಮುಂದುವರಿಸಿಕೊಂಡು ಹೋಗುವುದಕ್ಕೆ ಹೆಚ್ಚಿನ ಪ್ರಾಶಸ್ತ್ಯವನ್ನು ಪರೋಕ್ಷವಾಗಿ ಕೊಟ್ಟು, ಅದು ಬೆಳೆಯುವುದಕ್ಕೆ ಅವಕಾಶ ಕೊಟ್ಟಂತಾಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಈಗಾಗಲೇ ಈ ವರದಿ ಪ್ರಕಾರ ನಾವು ಗುರಿಯನ್ನು ಸಾಧಿಸಿದ್ದೇವೆಂದು ಹೇಳಿದ್ದಾರೆ. ಅಂದರೆ ೬ರಿಂದ ೧೦ ವರ್ಷದ ಮಕ್ಕಳಿಗೆ ನೂರಕ್ಕೆ ನೂರರಷ್ಟು ಹಾಗೂ ೧೧ರಿಂದ ೧೪ ವರ್ಷ ವಯಸ್ಸಿನ ಮಕ್ಕಳಿಗೆ ೫೦ರಷ್ಟು ಸಾಧನೆಯನ್ನು ೭ನೇ ಪಂಚವಾರ್ಷಿಕ ಯೋಜನೆಯ ಪೀರಿಯೆಡ್‌ನಲ್ಲೇ ಸಾಧಿಸಬೇಕೆಂದು ಹೇಳಿದ್ದಾರೆ. ಇದನ್ನು ನಿಜವಾಗಿಯೂ ಸಾಧನೆ ಮಾಡಬೇಕು ಎನ್ನುವುದಾದರೆ, ನಾವು ಯಾವ ತರಹದ ಗುರುತರವಾದ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು ಯಾವ ತರಹದ ಮೂಲಭೂತವಾದ ಬದಲಾವಣೆಗಳು ನಮ್ಮ ಶಾಲೆಗಳಲ್ಲಿ ಆಗಬೇಕು? ಆ ಮೂಲಭೂತವಾದ ಬದಲಾವಣೆ ನಮ್ಮ ಶಾಲೆಗಳಲ್ಲಿ ಆಗುತ್ತಿರುವಂತಹ ವಿದ್ಯಾಭ್ಯಾಸ ಇರುವುದಾದರೆ, ಮತ್ತು ಅದಕ್ಕೆ ಬೇಕಾದ ರಿಕ್ರೂಟ್‌ಮೆಂಟ್ ಆಗಲಿ, ಅದಕ್ಕೆ ಸಂಬಂಧಪಟ್ಟಂತಹ ಮೇಲಾಧಿಕಾರಿಗಳು ಯಾರು ಇದ್ದಾರೆ, ಡೈರೆಕ್ಟರೇಟ್ ಆಫ್ ಎಜುಕೇಷನ್ ಅಲ್ಲಿಂದ ಇಲ್ಲಿನವರೆವಿಗೂ ಕೂಡ ಇರುವ ಮನೋ ವೃತ್ತಿ ಬದಲಾವಣೆ ಆಗಬೇಕು. ಅದು ಬದಲಾವಣೆಯಾಗಿ ಯಾವ ರೀತಿ ವಹಿವಾಟು ಆಗಬೇಕೆಂಬುದೂ ಕೂಡ ಆಗಬೇಕಾಗುತ್ತದೆ. ರಾಜಕಾರಣಿಗಳಾದ ನಮ್ಮಲ್ಲೂ ಕೂಡ ರಾಜಕೀಯದ ಸ್ಥಿರತೆ ಮತ್ತು ಪೊಲಿಟಿಕಲ್ ವಿಲ್ ಎಂದು ನಾವು ಏನು ಹೇಳುತ್ತೇವೆ, ಆ ರೀತಿಯ ಪೊಲಿಟಿಕಲ್ ವಿಲ್‌ನ ಅವಶ್ಯಕತೆ ಕೂಡ ಇದೆ. ಆ ರೀತಿಯಾಗಿ ಮಾಡಿದಾಗ ಮಾತ್ರ ಮೂಲಭೂತವಾದ ಬದಲಾವಣೆಯನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆಂಬುದನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಕನ್ನಡದ ಬಗ್ಗೆ ಸಾಕಷ್ಟು ಹೇಳಿದ್ದೇನೆ. ಉರ್ದು ಭಾಷೆಯ ಬಗ್ಗೆ ಸ್ಪೆಷಲ್ ನೋಟ್ ತೋರಿಸಿದ್ದಾರೆ. ಉರ್ದು ಭಾಷೆ ಎಷ್ಟು ಒಳ್ಳೆಯ ಭಾಷೆ, ಎಷ್ಟು ಒಳ್ಳೆಯ ಪೊಯೆಟಿಕ್ ಲಾಂಗ್ವೇಜ್ ಎಂಬುದನ್ನು ನಾವು ಅರ್ಥ ಮಾಡಿಕೊಂಡು ಅದನ್ನು ಹೆಚ್ಚು ಬೆಳೆಸುವುದಕ್ಕೆ ಮನಸ್ಸು ಮಾಡಬೇಕು ಆ ಭಾಷೆಯನ್ನು ಬೆಳೆಸುವುದರಿಂದ ಏನು ಒಳ್ಳೆಯದು ಆಗುತ್ತದೆಂಬುದನ್ನು ಕೂಡ ಯೋಚನೆ ಮಾಡಬೇಕು. ಉರ್ದುವನ್ನು ಹೇಳಿಸಿಕೊಳ್ಳುವ ಮಕ್ಕಳಿಗೆ ಈ ಕೆಲಸವನ್ನು ನಾವು ಮಾಡಿಕೊಡುತ್ತಿಲ್ಲ. ಉರ್ದು ಭಾಷೆ ಮಾತನಾಡುವ ಮಕ್ಕಳಿಗೆ ಕನ್ನಡವನ್ನು ಕಲಿಸಬೇಕೆಂಬುದು ನಮ್ಮ ರಾಜ್ಯದ ನೀತಿಯಾಗಿದ್ದರೂ ಕೂಡ ಆ ಶಾಲೆಗಳಲ್ಲಿ ಕನ್ನಡದಲ್ಲಿ ವಿದ್ಯಾಭ್ಯಾಸವನ್ನು ಹೇಳಿಕೊಡುವ ಅಧ್ಯಾಪಕರನ್ನೇ ನೇಮಕ ಮಾಡುತ್ತಿಲ್ಲ.

ಈಗಾಗಲೇ ನಮ್ಮ ಸ್ನೇಹಿತರು ಹೇಳಿದ ಹಾಗೆ ನಾವು ವರ್ಷಗಟ್ಟಲೆ ಇದೇ ಮಾತನ್ನು ಪದೇ ಪದೇ ಹೇಳತ್ತಾ ಇದ್ದೇವೆ. ಅದನ್ನು ಬದಲಾವಣೆ ಮಾಡುವುದು ಹೇಗೆ, ಯಾವುದು ಬದಲಾವಣೆ ಆಗಬೇಕು. ಯಾವಾಗ ಬದಲಾವಣೆಯನ್ನು ತರುತ್ತೀರಿ ಎನ್ನುವುದು ಮೂಲಭೂತವಾದ ಪ್ರಶ್ನೆಯಾಗಿದೆ. ನಮ್ಮಲ್ಲಿ

ಅಂಗ್ಲೋ ಇಂಡಿಯನ್ ಕಮ್ಯೂನಿಟಿಯವರಿಗೆ ಕೆಲವು ವಿಶೇಷ ಸವಲತ್ತುಗಳನ್ನು ಕೊಡಲಾಗಿತ್ತು. ಈ ಬಗ್ಗೆ ನನ್ನ ಗೆಳೆಯ ಡೆರಿಕ್ ರವರು ತಮ್ಮ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಕೆಲವು ವಿಶೇಷ ಸವಲತ್ತು ಕೊಡುವಾಗ ಅವು ಸರಿಯಾಗಿ ಅವರಿಗೆ ದೊರಕಿದೆಯೋ ಇಲ್ಲವೇ ಎಂಬುದನ್ನು ಯಾರು ನೋಡಬೇಕು ? ಆ ಬಡಮಕ್ಕಳ ತಂದೆ ತಾಯಿಗಳು ಸರ್ಕಾರವನ್ನು ಕೇಳಲು ಆಗುವುದಿಲ್ಲ. ಇದಕ್ಕಾಗಿ ಒಂದು ಡೈರೆಕ್ಟರೇಟ್ ಅನ್ನು ಇಟ್ಟುಕೊಂಡಿದ್ದೇವೆ. ಇದಕ್ಕಾಗಿ ಸೂಪರ್ ವೈಜರ್ಸ್ ಇನ್ಸ್‌ಪೆಕ್ಟರ್ಸ್ ಇದ್ದಾರೆ ಅವರು ಏನು ಮಾಡುತ್ತಿದ್ದಾರೆಂಬುದನ್ನು ಯಾರೂ ನೋಡುತ್ತಿಲ್ಲ. ಪ್ರತಿ ಹಂತದಲ್ಲಿಯೂ ಸರಿಯಾಗಿ ವಿಶೇಷ ಸವಲತ್ತು ಇದೆಯೋ ಇಲ್ಲವೋ ಎಂಬುದನ್ನು ಯಾರೂ ನೋಡುತ್ತಿಲ್ಲ. ಈ ಅಂಗ್ಲೋ ಇಂಡಿಯನ್ ಕಮ್ಯುನಿಟಿ ಮತ್ತು, ಫಾರ್ಸಿ ಕಮ್ಯುನಿಟಿಯವರಿಗೆ ಮೆಡಿಕಲ್ ಕಾಲೇಜಿನಲ್ಲಿ ಒಂದು ಸೀಟನ್ನು ವಿಶೇಷ ಸವಲತ್ತು ಇಟ್ಟಿದ್ದಾರೆ. ಈಗ ಅದನ್ನು ನಮ್ಮ ಸರ್ಕಾರ ತಿದ್ದುಪಡಿ ಮಾಡಿ ಗೆಜೆಟ್ ನೋಟಿಫಿಕೇಷನ್ ಮೂಲಕ ತೆಗೆದು ಹಾಕಿದ್ದಾರೆ, ಏತಕ್ಕೆ ತೆಗೆದು ಹಾಕಿದರು, ಯಾರ ಕಾರಣಕ್ಕಾಗಿ ತೆಗೆದು ಹಾಕಿದರು, ಎಂಬುದು ಯಾರಿಗೂ ಗೊತ್ತಾಗಲಿಲ್ಲ. ಒಬ್ಬ ಅಂಗ್ಲೋ ಇಂಡಿಯನ್ ಕಮ್ಯುನಿಟಿಯ ವಿದ್ಯಾರ್ಥಿಗೆ ಅಥವಾ ಫಾರ್ಸಿ ಕಮ್ಯೂನಿಟಿಯ ವಿದ್ಯಾರ್ಥಿಗೆ ರಾಜ್ಯಮಟ್ಟದಲ್ಲಿ ಇರತಕ್ಕ ಈ ವಿಶೇಷ ಸವಲತ್ತನ್ನು ತೆಗೆದುಹಾಕಿರುವುದರಿಂದ ಇವರಿಗೆ ಬಹಳ ಅನ್ಯಾಯ ಮಾಡಿದ ಹಾಗೆ ಆಗಿದೆ. ಈ ಜನಗಳ ಭವಿಷ್ಯವನ್ನು ನೋಡಿಕೊಳ್ಳುವುದು ಕೂಡ ನಮ್ಮ ಜವಾಬ್ದಾರಿ ಅಲ್ಲವೇ ಎಂಬುದನ್ನು ನಾವು ಯೋಚನೆ ಮಾಡಬೇಕಾಗಿದೆ. ವಿದ್ಯಾಮಂತ್ರಿಗಳು ತೀವ್ರವಾಗಿ ಈ ಬಗ್ಗೆ ಯೋಚನೆ ಮಾಡಿ ಈ ವಿಶೇಷ ಸವಲತ್ತನ್ನು ಏನು ತೆಗೆದು ಹಾಕಿದ್ದಾರೆ ಅದನ್ನು ಕೂಡಲೇ ವಾಪಸ್ಸು ಕೊಡುವ ರೀತಿಯಲ್ಲಿ ಕ್ರಮ ಕೈಗೊಳ್ಳಬೇಕು. ಈ ವಿಶೇಷ ಸವಲತ್ತನ್ನು ಇನ್ನೂ ಜಾಸ್ತಿ ಮಾಡುವುದನ್ನು ಬಿಟ್ಟು ತೆಗೆದುಹಾಕಿರುವುದರ ಅರ್ಥ ಏನು ಎನ್ನುವುದು ಯಾರಿಗೂ ಗೊತ್ತಾಗುತ್ತಿಲ್ಲ. ಮೆಡಿಕಲ್ ಕಾಲೇಜುಗಳಲ್ಲಿ ಹಾಗೂ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಅಂಗ್ಲೋ ಇಂಡಿಯನ್, ಫಾರ್ಸಿ ಹಾಗೂ ಇತರ ಅಲ್ಪ ಸಂಖ್ಯಾತ ಕಮ್ಯೂನಿಟಿಗಳಿಗೆ ಸೇರಿದಂತಹ ವಿದ್ಯಾರ್ಥಿಗಳಿಗೆ ಸೀಟುಗಳು ದೊರೆಯಲು ಅನುಕೂಲವಾಗುವಂತೆ ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ನಮ್ಮಲ್ಲಿ ಡೈರೆಕ್ಟರ್ ಅಫ್ ಎಜುಕೇಷನ್ ಇದೆ. ಅದಕ್ಕಾಗಿ ಸೆಕ್ರಟೇರಿಯಟ್ ಇದೆ, ಅದಕ್ಕಾಗಿ ಮಂತ್ರಿಗಳು ಇದ್ದಾರೆ, ಇಲ್ಲಿಂದ. ವಿಕೇಂದ್ರೀಕರಣ ಹೇಗೆ ಆಗಬೇಕು ಎಂಬುದನ್ನು ತಿಳಿಸಬೇಕು. ಇನ್ನು ಶಾಲಾ ಮಟ್ಟದಲ್ಲಿ ಒಂದು ಮ್ಯಾನೇಜಿಂಗ್ ಕಮಿಟಿಯನ್ನು ಮಾಡಬೇಕು. ಪ್ರತಿಯೊಂದು ಶಾಲೆಯಲ್ಲೂ ಹಾಗೂ ಪ್ರತಿಯೊಂದು ಸೆಕ್ಷನ್ ನಲ್ಲೂ ವಿದ್ಯಾರ್ಥಿಗಳ ಶಿಕ್ಷಕರ ತಂದೆ ತಾಯಿಗಳಲ್ಲಿ ಪ್ರತಿನಿಧಿಗಳು, ಈ ಕಮಿಟಿಯಲ್ಲಿ ಇರಬೇಕು. ಹಾಗೂ ಪ್ರಫೆಷನಲ್ಸ್‌ಗಳು ಅಂದರೆ ವಿದ್ಯಾ ಕ್ಷೇತ್ರದಲ್ಲಿ ಯಾರು ಚೆನ್ನಾಗಿ ಅರಿತಿದ್ದವರು ಇದ್ದಾರೆ ಆಡಳಿತವನ್ನು ಯಾರು ಚೆನ್ನಾಗಿ ತಿಳಿದುಕೊಂಡಿದ್ದಾರೆ, ಹಾಗೂ ಪ್ರಿನ್ಸಿಪಾಲ್ ರವರನ್ನು ಒಳಗೊಂಡ ಒಂದು ಸಮಗ್ರವಾದ ಪ್ರತಿನಿಧಿಗಳು ಇರತಕ್ಕಂಥವ ಒಂದು ಮ್ಯಾನೇಜಿಂಗ್ ಕಮಿಟಿಯನ್ನು ನೇಮಕ ಮಾಡಬೇಕು. ಈ ರೀತಿ ಒಂದು ಸಮಿತಿಯನ್ನು ನೇಮಕ ಮಾಡಿದರೆ ಆ ಶಾಲೆಯಲ್ಲಿ ಏನು ನಡೆಯುತ್ತದೆ, ಹೇಗೆ ನಡೆಯುತ್ತದೆ, ಹಾಗೂ ಏನು ಆಗಬೇಕಾಗಿದೆ ಎಂಬುದನ್ನು ತಿಳಿದುಕೊಳ್ಳಲು ಹಾಗೂ ಗುರುತರವಾದ ಮಾರ್ಗವನ್ನು ತೋರಿಸಲು ಅವಕಾಶವಾಗುತ್ತದೆ. ಈ ರೀತಿಯ ಎಂದು ಮ್ಯಾನೇಜಿಂಗ್ ಕಮಿಟಿಗಳು ಇದ್ದರೆ ಆ ಶಾಲೆಗಳಲ್ಲಿ ಕೆಲಸ ಚೆನ್ನಾಗಿ ನಡೆಯುತ್ತದೆ. ಇನ್ನು ಕ್ಯಾಪಿಟೇಷನ್ ಫೀಜ್ ಮತ್ತು ಡೊನೇಷನ್ ಬಗ್ಗೆ ನಾನು ಹೆಚ್ಚು ಹೇಳಲು ಹೋಗುವುದಿಲ್ಲ. ಬರೀ ಹೇಳಿಕೆಯಿಂದ ಪ್ರಯೋಜನವಿಲ್ಲ, ತೀವ್ರವಾಗಿ ಮೂಲಭೂತವಾದ ಬದಲಾವಣೆಯನ್ನು ತರಬೇಕು, ಅಂದರೆ ಅದನ್ನು ನಿಲ್ಲಿಸಬೇಕೆಂಬ ತೀರ್ಮಾನವನ್ನು ಸರ್ಕಾರ ಮಾಡಬೇಕು. where there is a will there is a way. ಸನ್ಮಾನ್ಯ ವಿದ್ಯಾ ಮಂತ್ರಿಗಳು ಹಠ ಸಾಧನೆ ಮಾಡಿ ಇದನ್ನು ನಿಲ್ಲಿಸಲು ಕ್ರಮಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಈ ಈ ಕ್ಯಾಪಿಟೇಷನ್ ಫೀ ಡೊನೇಷನ್ ತೆಗೆದುಕೊಳ್ಳುವುದು ಉಗ್ರವಾಗಿ ನಡೆದುಕೊಂಡು ಬಂದಿದೆ. ತಂದೆ ತಾಯಿಗಳ ಬಹಳ ಕಷ್ಟಪಟ್ಟು ಈ ಡೊನೇಷನ್ ಕಟ್ಟಬೇಕಾಗಿದೆ. ಈ ಡೊನೇಷನ್ ಕೊಡ ಬೇಕಾದರೆರೆ ತಂದೆ ತಾಯಿಗಳು ತಪ್ಪು ಮಾರ್ಗದಲ್ಲಿ ಸಂಪಾದನೆ ಮಾಡಿ ಅದನ್ನು ಕೊಡಬೇಕಾಗಿದೆ. ಇದರಿಂದ ನಾವು ಪರೋಕ್ಷವಾಗಿ ಅಕ್ರಮ ಹಾಗೂ ಅನೀತಿಯ ಮಾರ್ಗವನ್ನು ತಂದೆ ತಾಯಿಗಳು ಅನುಸರಿಸಲು ನಾವೇ ಅವಕಾಶ ಮಾಡಿಕೊಟ್ಟ ಹಾಗೆ ಆಗಿದೆ. ಈ ರೀತಿ ಹಣ ಖರ್ಚು ಮಾಡಿ ವಿದ್ಯಾವಂತರಾದ ಈ ಯುವಕರು ಮುಂದೆ ಉದ್ಯೋಗಕ್ಕೆ ಬಂದ ತಕ್ಷಣ ಲಂಚದ ಮೂಲಕ ಹಣ ಸಂಪಾದನೆ ಮೊದಲು ತೊಡಗುತ್ತಾರೆ. ಈ ವ್ಯವಸ್ಥೆಯಿಂದ ಕರ್‌ಪ್ಷನ್ ಪರ್‌ಪಚ್ಯುಯೆಟ್ ಮಾಡಲು ಸಹಾಯಕವಾಗಿದೆ. ಇದಕ್ಕೆ ಸರ್ಕಾರವೇ ಎನ್‌ಕ್ರೈಜ್ ಮಾಡಿದ ಹಾಗೆ ಆಗಿದೆ. ತಾವು ಕಡ್ಡಾಯವಾಗಿ ತೀರ್ಮಾನವನ್ನು ತೆಗೆದುಕೊಳ್ಳಬೇಕು, ಮತ್ತು ಅದರ ಬಗ್ಗೆ ಈ ಸದನದಲ್ಲಿ ಹೇಳಿಕೆ ನೀಡಬೇಕು.

ಇನ್ನು ಸೆಕೆಂಡರಿ ಸ್ಟೇಜ್‌ನಲ್ಲಿ ಎಷ್ಟು ಮಕ್ಕಳು ಡ್ರಾಪ್ ಔಟ್ ಮಾಡುತ್ತಿದ್ದಾರೆ, ಹಾಗೂ ಪ್ರೈಮರಿ ಸ್ಟೇಜ್‌ನಲ್ಲಿ ಎಷ್ಟು ಡ್ರಾಪ್ ಔಟ್ ಆಗುತ್ತಿದ್ದಾರೆ ಹಾಗೂ ಯಾವ್ಯಾವ ಕಾರಣಕ್ಕಾಗಿ ಆಗುತ್ತಿದ್ದಾರೆ ಎಂಬುದರ ಬಗ್ಗೆ ಒಂದು ಸರ್ವೆ ಮಾಡಬೇಕಾಗಿದೆ ಡ್ರಾಪ್ ಔಟ್ ಆದ ಮಕ್ಕಳ ಗತಿ ಏನು ? ಅವರು ಈ ಸಮಾಜದಲ್ಲಿ ಏನು ಆಗುತ್ತಾರೆ ಎಂಬುದನ್ನು ಯೋಚನೆ ಮಾಡಬೇಕು ಅವರು ಈ ಸೊಸೈಟಿನಲ್ಲಿ ಯಾವ ರೀತಿ ಗೌರವದಿಂದ ಜೀವನ ನಡೆಸಲು ಅನುಕೂಲವಾಗುತ್ತಿದೆಯೋ ಇಲ್ಲವೊ ಎಂಬುದನ್ನು ಯೋಚನೆ ಮಾಡಬೇಕು. ಇದರಿಂದ ಎಷ್ಟು ಜನ ಸಾಮಾಜ ಘಾತುಕ ಶಕ್ತಿಗಳಾಗುತ್ತಾರೆ, ಆ್ಯಂಟಿ ಸೋಷಿಯಲ್ ಎಲಿಮೆಂಟ್ಸ್ ಆಗುತ್ತಾರೆಂಬುದನ್ನು ನಾವು ಯೋಚನೆ ಮಾಡಬೇಕು. ಅವರು ಡ್ರಾಪ್ ಔಟ್ ಆಗುವುದಕ್ಕೆ ಮುಂಚೆ ಡ್ರಾಪ್ ಔಟ್ ಆಗದೇ ಇರಲು ಏನು ಮಾಡಬೇಕೆಂಬುದು ಯೋಚನೆ ಮಾಡಬೇಕು. ಒಂದು ವೇಳೆ ಡ್ರಾಪ್ ಔಟ್ ಆಗುವಂಥ ಸಂದರ್ಭದಲ್ಲಿ ಅವರನ್ನು ರಿ ಹ್ಯಾಬಿಲಿಟೇಟ್ ಮಾಡಲು ವಿದ್ಯಾ ಅಧಿಕಾರಿಗಳಾಗಲೀ, ಅಥವಾ ಬೇರೆ ಅಧಿಕಾರಿಗಳಾಗಲೀ ಏನು ಕ್ರಮ ಕೈಗೊಂಡಿದ್ದಾರೆಂಬುದನ್ನು ತಿಳಿಸಬೇಕು. ಈ ವಿಷಯದ ಬಗ್ಗೆ ಸನ್ಮಾನ್ಯ ಸಚಿವರು ತೀವ್ರವಾದ ಯೋಚನೆ ಮಾಡುತ್ತಾರೆಂದು ನಾನು ಭಾವಿಸುತ್ತೇನೆ.

ಛೇರ್ಮನ್.—ತಾವು ಬೇಗ ಮುಗಿಸಿ,

ಶ್ರೀ ಎ.ಕೆ. ಅನಂತಕೃಷ್ಣ.—ಮೂಲಭೂತವಾದ ಕೆಲವು ವಿಷಯಗಳನ್ನು ಹೇಳುತ್ತಿದ್ದೇನೆ. ಪ್ರತಿ ಸಾರಿಯೂ ನಾನು ಹೀಗೆಯೇ ಕುಳಿತುಕೊಳ್ಳುವ ಹಾಗೆ ಆಗುತ್ತಿದೆ.

ಛೇರ್ಮನ್.—ಬೇರೆಯವರಿಗೆ ಅವಕಾಶ ಕೊಡಬೇಕಾಗುತ್ತದೆ.

ಶ್ರೀ ಎ.ಕೆ, ಅನಂತ ಕೃಷ್ಣ.—ಜಾಸ್ತಿ ಸಂಬಳ ಕೊಡಬೇಕಾಗುತ್ತದೆ. ತಪ್ಪು ಸದಸ್ಯರದ್ದು ಅಲ್ಲ,

ಛೇರ್ಮನ್.—ಬೇರೆಯವರು ಕೇಳುತ್ತಿದ್ದಾರೆ.

ಶ್ರೀಮತಿ ವೋಟಮ್ಮ.—ಈ ಇಲಾಖೆ ಬಹಳ ದೊಡ್ಡ ಇಲಾಖೆ, ಇದರ ಮೇಲೆ ಮಾತನಾಡಲು ಎಲ್ಲರಿಗೂ ಅವಕಾಶ ಕೊಡಬೇಕು.

ಶ್ರೀ ಎ. ಕೆ. ಅನಂತ ಕೃಷ್ಣ.—ತಮ್ಮ ಆಜ್ಞೆಯನ್ನು ಉಲ್ಲಂಘನೆ ಮಾಡಲು ನಾನು ಹೋಗುವುದಿಲ್ಲ. ಇದು ಬಹಳ ಮುಖ್ಯವಾದ ವಿಷಯ. ನಮ್ಮ ದೇಶದ ಮತ್ತು ನಮ್ಮ ಸಮಾಜದ ಆಗು ಹೋಗುಗಳಿಗೆ ಮೂಲಭೂತವಾದ ಈ ವಿಷಯವನ್ನು ನಾವು ತೀವ್ರವಾಗಿ ಚರ್ಚೆ ಮಾಡಲಿಲ್ಲ ವೆಂದರೆ ಹೇಗೆ ? ಮತ್ತೆ ನಾವು ಯಾವ ರೀತಿ ಸರ್ಕಾರದ ಮೇಲೆ ಒತ್ತಾಯ ಮಾಡಲು ಸಾಧ್ಯ ವಾಗುತ್ತದೆ. ಕೇವಲ ಆಡಳಿತ ವರ್ಗದವರು ತಯಾರು ಮಾಡಿದ ರಿಪೋರ್ಟ್‌ಗಳನ್ನು ಹಾಗೆಯೇ ಒಪ್ಪಿಕೊಳ್ಳುವುದಾದರೆ ಈ ಚರ್ಚೆಯ ಅವಶ್ಯಕತೆ ಇಲ್ಲ, ಈಗ ಬಹಳ ಮೂಲಭೂತವಾದ ಬದಲಾವಣೆ ಗಳನ್ನು ಮಾಡಬೇಕಾಗಿದೆ. ಈ ವರದಿಗಳಲ್ಲಿ ಕೇವಲ ಅಕ್ಷರಗಳನ್ನು ಬದಲಾವಣೆಗಳನ್ನು ಮಾಡಿರುವುದನ್ನು ಬಿಟ್ಟರೆ ಬೇರೆ ಏನೂ ಮಾಡಿಲ್ಲ ಕಳೆದ ವರ್ಷ ಹಾಗೂ ಈ ವರ್ಷ ಕೊಟ್ಟಿರತಕ್ಕ ವರದಿಗಳಲ್ಲಿಯಾವುದು ಹೆಚ್ಚು ಕಡಿಮೆ ಎಂದು ವ್ಯತ್ಯಾಸವಿಲ್ಲ, ನಾವು ಸಮಾಜವಾದಿಗಳೆಂದು ಹೇಳುತ್ತೇನೆ. ನಮ್ಮ ಸ್ನೇಹಿತರು ಹೇಳುತ್ತಾರೆ. ಮಾನ್ಯ ಮಂತ್ರಿಗಳು ಕೂಡ ಸಮಾಜವಾದಿಗಳು: ಅವರಿಗೆ ಈ ವಿಷಯಗಳ ಬಗ್ಗೆ ಬಹಳ ಅನುಭವವಿದೆ. ನಾವು ಈ ಸದನದಲ್ಲಿ ಹೇಳತಕ್ಕ ಕೆಲವು ವಿಷಯಗಳು ಏನು ಇದೆ ಅವುಗಳನ್ನು ಅವರು ಪರಿಶೀಲಿಸುತ್ತಾರೆಂಬ ಭರವಸೆ ನಮಗೆ ಇದೆ. ನಾನು ಸಮಾಜವಾದಿ ಅಂದುಕೊಂಡಿದ್ದೇನೆ. ಇಡೀ ಸದನದ ಸದಸ್ಯರುಗಳು ಸಮಾಜವಾದಿಗಳು, ನಾವು ಇದನ್ನು ರಾಜ್ಯಾಂಗದಲ್ಲಿಯೂ ಒಪ್ಪಿಕೊಂಡಿದ್ದೇವೆ. ಆದರೆ ಬದಲಾವಣೆ ಏತಕ್ಕೆ ಕಾಣುತ್ತಿಲ್ಲ. ಸಮಾಜವಾದಿ ದೃಷ್ಟಿಯಲ್ಲಿ ಏತಕ್ಕೆ ಈ ಬದಲಾವಣೆ ಕಾಣುತ್ತಿಲ್ಲ. ಸರ್ಕಾರ ಕೊಡುವಂತಹ ಶಿಕ್ಷಣ ದಿಂದ ಯಾವ ಹೆಚ್ಚಿನ ಬದಲಾವಣೆಯೂ ಕಾಣುತ್ತಿಲ್ಲ. ನಾವು ಈಗ ಚಿಂತನೆಯನ್ನು ಏನು ಪ್ರಾರಂಭ ಮಾಡಿದ್ದೇವೆ, ಅದರ ಬಗ್ಗೆ ಹೆಚ್ಚಿನ ಗಮನ ಹರಿಸಬೇಕು. ತಾವು ಬೇಡವೆಂದರೆ, ಈ ಸದನದ ಸಮಯ ವೇಸ್ಟ್ ಆಗುತ್ತದೆ ಎಂದರೆ ನಾನು ಕುಳಿತು ಕೊಳ್ಳುತ್ತೇನೆ. ನಾನು ಬಹಳ ದುಃಖದಿಂದ ಹೇಳುತ್ತೇನೆ ನಮ್ಮ ಶಿಕ್ಷಣದಲ್ಲಿ ಬದಲಾವಣೆಯನ್ನು ನಾವೇನೂ ಕಾಣುತ್ತಿಲ್ಲ. ನಮ್ಮ ಯುವಕ ಯುವತಿಯರಿಗೆ ವಿದ್ಯಾಭ್ಯಾಸ ಕೊಡುತ್ತಿದ್ದೇವೆ ಅವರು ಒಂದು ಪಾಲು ಈ ಸಮಾಜಕ್ಕೆ ಏನು ಆಗಬೇಕಾಗಿದೆ [illegible] ಇವರಲ್ಲಿ ಆ ಬೇಕು ಎಂಬುದರ ಬಗ್ಗೆ ಯಾವ ಕಾರ್ಯಕ್ರಮ [illegible] ಇದರಲ್ಲಿ ನಾವು ಕಾಣುತ್ತಿಲ್ಲ. ಆದ್ದರಿಂದ ನಾನು ಹಲವಾರು ಸಲಹೆ ಗಳನ್ನು ಕೊಡಬೇಕೆಂದಿದ್ದೇನೆ.

ಛೇರ್ಮನ್.—ಎಲ್ಲರೂ ತಮ್ಮ ಕಳಕಳಿಯನ್ನು ವ್ಯಕ್ತಪಡಿಸುವವರಿದ್ದಾರೆ. ತಾವು ಸಹಕಾರ ಕೊಡಬೇಕು.

ಶ್ರೀ ಎ.ಕೆ. ಅನಂತ ಕೃಷ್ಣ —ಏನು ಬದಲಾವಣೆ ಆಗಬೇಕಾಗಿದೆ ಅದಕ್ಕೆ ಸಹಾಯ ಆಗುವಂತಹ ರೀತಿಯಲ್ಲಿ ಒಂದು ಮಾರ್ಗದರ್ಶನವಿಲ್ಲ. ಮೌಲ್ಯದ ಬಗ್ಗೆ ಯೋಚನೆ ಮಾಡಬೇಕು, ನಮ್ಮ ಹಳೆಯ ಕಾಲದಲ್ಲಿ ಗುರು ಶಿಷ್ಯರ ಸಂಪರ್ಕ ಹಾಗೂ ಸಂಬಂಧ ಯಾವ ರೀತಿ ಇತ್ತು ಮತ್ತು ತಂದೆತಾಯಿಗಳು ಗುರುಗಳ ಹಾಗೂ ಶಿಷ್ಯರ ಸಂಬಂಧ ಯಾವ ರೀತಿ ಇತ್ತೆಂಬುದು ನಾವು ಗಮನಿಸಬೇಕು. ಹಳೆಯ ಕಾಲದಲ್ಲಿ ಏನು ವಿದ್ಯಾಭ್ಯಾಸ ಪದ್ಧತಿ ಇತ್ತು ಯಾವ ರೀತಿ ಸಂಸ್ಕೃತ ಹಾಗೂ ವೇದಪಾಠಶಾಲೆಗಳಲ್ಲಿ ಏನು ಮೌಲ್ಯಧಾರಿತ ಶಿಕ್ಷಣ ಇತ್ತು ಅವುಗಳನ್ನು ಅನುಷ್ಠಾನಕ್ಕೆ ತಂದು ನಮ್ಮ ವಿದ್ಯಾ ಸಂಸ್ಥೆಗಳಿಗೆ ಬೆಳವಣಿಗೆಗೆ ಅವಕಾಶ ಮಾಡಿಕೊಟ್ಟರೆ ಒಳ್ಳೆಯದು. ಬಹಳ ಮುಖ್ಯವಾದ ಒಂದು ವಿಷಯವನ್ನು ಹೇಳಬಯಸುತ್ತೇನೆ ಅದೇನೆಂದರೆ ನಾವು ಮಕ್ಕಳಿಗೆ ಟೆಕ್ನಿಕಲ್ ಎಜುಕೇಷನ್ ಕೊಡುತ್ತಿದ್ದೇವೆ. ಅದಕ್ಕೆ ಮುಂಚಿತವಾಗಿ ಹೈಯರ್ ಸೆಕೆಂಡರಿ ಎಜುಕೇಷನ್ ಇದೆ. The secondary education period is a sort of spring board for building one's own career. ಸೆಕೆಂಡರಿ ಸ್ಟೇಜ್ ನಂತರ ಟೆಕ್ನಿಕಲ್ ಎಜುಕೇಷನ್ನಿಗೆ ಹೋಗಬೇಕಾಗುತ್ತದೆ. ಆದ ಅತಂಗೆ ಯಾವ ರೀತಿ ಮಾರ್ಗದರ್ಶನ ಕೊಡಬೇಕೆಂಬುದನ್ನು ನಾವು ಕಾಣುತ್ತಿಲ್ಲ. ಸೆಕೆಂಡರಿ ಸ್ಟೇಜ್‌ನಿಂದ ಟೆಕ್ನಿಕಲ್ ಎಜುಕೇಷನ್ ಸ್ಟೇಜಿಗೆ ಹೋಗಬೇಕಾದ ಮಕ್ಕಳಿಗೆ ಯಾವ್ಯಾವ ಇಂಡಸ್ಟ್ರಿಯಲ್ ಆರ್ಗನೈಜೇಷನ್, ಕಮರ್ಷಿಯಲ್ ಆರ್ಗನೈಜೇಷನ್ ಇದೆ ಅಂತಹ ಕೇಂದ್ರಗಳಲ್ಲಿ ಅವರಿಗೆ ಸಂಬಂಧವನ್ನು ಬೆಳೆಸುವಂತಹ ರೀತಿಯಲ್ಲಿ ಕೆಲಸವನ್ನು ಮಾಡಬೇಕು.

೧೧-೩೦ ಎ. ಎಂ.

ಈ ರೀತಿ ಮಾಡುವುದರಿಂದ ಮಕ್ಕಳಿಗೆ ಅನುಕೂಲವಾಗುತ್ತದೆ. We should affiliate some of the educational institutions to the Industrial and Commercial Organisations by which the students of these institutions will be associated with those Organisations, and will be able to learn about future needs. ಏಕೆಂದರೆ ಹಿಂದುಳಿದವರ, ನಿಮ್ಮ ವರ್ಗದವರ ಮತ್ತು ಅಲ್ಪಸಂಖ್ಯಾತರ ಅದರಲ್ಲೂ ಮುಖ್ಯವಾಗಿ ಮುಸಲ್ಮಾನರ ಜನಾಂಗ ಏನಿದೆ ಅವರಲ್ಲಿ ಹೆಚ್ಚು ಹೆಚ್ಚಾಗಿ ಟೆಕ್ನಿಕಲ್ ಎಜುಕೇಷನ್‌ಗೆ ಹೋಗುವ ಆಟಿಟ್ಯೂಡ್ ಇದೆ, ಈ ಟೆಕ್ನಿಕಲ್ ಪ್ರೊಫೆಷನ್‌ನಲ್ಲಿ ಹೋಗುವಂಥ ಅದರಲ್ಲಿ ಪ್ರಗತಿ ಸಾಧಿಸುವಂಥ ಒಂದು ಶಕ್ತಿ ನ್ಯಾಚುರಲ್ಲಾಗಿ ಅವರಿಗೆ ಬಂದಿದೆ, ಆ ಟ್ಯಾಲೆಂಟ್ ಸರಿಯಾಗಿ ಉಪಯೋಗ ಮಾಡಿಕೊಳ್ಳುವುದಕ್ಕೆ ತಾಂತ್ರಿಕ ವಿದ್ಯಾಸಂಸ್ಥೆಗಳನ್ನು ಇಂಡಸ್ಟ್ರಿಯಲ್ ಮತ್ತು ಕಮರ್ಷಿಯಲ್ ಆರ್ಗನೈಸೇಷನ್‌ಗೆ ಅಫಿಲಿಯೇಟ್ ಮಾಡಿ ಅವರಿಂದ ಸಹಾಯ ಪಡೆದಿದ್ದೇ ಆದರೆ ನಮ್ಮ ಮಕ್ಕಳಿಗೆ ವಿದ್ಯೆಯನ್ನು ಕೊಡುವುದಕ್ಕೆ ಮತ್ತು ಅವರ ಭವಿಷ್ಯವನ್ನು ಪ್ರಗತಿದಾಯಕವಾಗಿ ಸಾಧನೆ ಮಾಡುವುದಕ್ಕೆ ಆಗುತ್ತದೆ ಎಂದು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. ಬಹಳ ಮುಖ್ಯವಾದ ವಿಷಯ ಎಂದರೆ ನಮ್ಮ ಯುವ ವಿದ್ಯಾರ್ಥಿಗಳನ್ನು ರಾಷ್ಟ್ರಮಟ್ಟದಲ್ಲಿ ಅನುಕೂಲವಾಗುವಹಾಗೆ ರಾಷ್ಟ್ರದ ಬಗ್ಗೆ, ಸಮಾಜದ ಬಗ್ಗೆ ರಾಷ್ಟ್ರಘಾತುಕ, ಸಮಾಜಘಾತುಕ, ಯಾವುದೇ ಸಮಸ್ಯೆಗಳು ಬಂದಾಗ ಅದನ್ನು ಯಾವರೀತಿ ಉಪಯೋಗ ಮಾಡಿಕೊಳ್ಳಬೇಕು ಎಂಬ ವಿಚಾರದಲ್ಲಿ ವಿದ್ಯೆ ಹೇಳಿಕೊಟ್ಟು ರಾಷ್ಟ್ರದ ಸಮಸ್ಯೆಗಳ ಬಗ್ಗೆ ತಿಳುವಳಿಕೆ ಕೊಟ್ಟು ಸಂಘನೆ ಮಾಡಿ ಯುವಕ ಶಕ್ತಿಯನ್ನು ಸದುಪಯೋಗ ಮಾಡುವಂಥ ಕೆಲಸ ಮಾಡಿದರೆ ಒಳ್ಳೆಯದು. ಮತ್ತು ಅವರಿಗೆ ಕನ್‌ಸ್ಟ್ರಕ್ಟೀವ್ ಆಗಿ ನೇಷನ್ ಕನ್‌ಸ್ಟ್ರಕ್ಷನ್ ವಿಷಯದಲ್ಲಿ ದಾರಿ ತೋರಿಸಿದರೆ ಇವತ್ತು ಪಂಜಾಬ್, ಕಾಶ್ಮೀರ, ಅಸ್ಸಾಂನಲ್ಲಿ ಏನು ಪರಿಸ್ಥಿತಿ ಕಾಣುತ್ತಿದ್ದೇವೆ ಅಂಥದ್ದನ್ನು ತಪ್ಪಿಸಬಹುದು. ಯುವಕರು ತಪ್ಪು ದಾರಿಯಲ್ಲಿ ಏನು ಹೋಗುತ್ತಿದ್ದಾರೆ ಅದನ್ನು ನಿಲ್ಲಿಸಿ ಅವರನ್ನು ಸರಿಪಡಿಸುವ ಕಾರ್ಯಕ್ರಮಕ್ಕೆ ಅವಕಾಶವಾಗುತ್ತದೆ ಎಂದು ಹೇಳುತ್ತೇನೆ. ಪ್ರತಿಯೊಂದು ವಿದ್ಯಾ ಸಂಸ್ಥೆಯಲ್ಲೂ ಪ್ರತಿಯೊಬ್ಬ ವಿದ್ಯಾರ್ಥಿಗಳಿಗೆ ಮೂಲಭೂತವಾಗಿ ಸಮಾಜವಾದ ಜಾತ್ಯತೀತ ಭಾವನೆ ಬರುವಂಥ ಶಿಕ್ಷಣವನ್ನು ಕೊಡಬೇಕು. ಅದರಲ್ಲಿ ಒಳ್ಳೆಯ ಸಂಘಟನೆ ಮಾಡಿ ಅವರನ್ನು ಸದುಪಯೋಗ ಮಾಡಿಕೊಳ್ಳಬೇಕಾಗುತ್ತದೆ. ನ್ಯಾಚುರಲ್ ಕಲಾಮಿಟೀಸ್ ಆಗುವಂಥ ಸಂದರ್ಭದಲ್ಲಿ ಮತ್ತು ಕೋಮು ಘರ್ಷಣೆ ಆಗುವಾಗ ಯುವಕರು ಸಂಘಟಿತರಾಗಿ ಶಕ್ತಿಯುತವಾಗಿ ಕೆಲಸ ಮಾಡಿದ್ದೇ ಆದರೆ ಸಾಕಷ್ಟು ಸಮಸ್ಯೆಗಳನ್ನು ಬಗೆಹರಿಸುವುದಕ್ಕಾಗುತ್ತದೆ. ಈ ಕಡೆ ನಿಮ್ಮ ದೃಷ್ಟಿಕೋನವನ್ನು ಹರಿಸಬೇಕೆಂದು ಕೇಳುತ್ತೇನೆ. ಅದಕ್ಕಾಗಿ ಎಷ್ಟು ಹಣವನ್ನು ವೆಚ್ಚ ಮಾಡಿದರೂ ಪ್ರಯೋಜನವಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಹಾಗೆಯೇ ವಿದ್ಯಾರ್ಥಿಗಳಲ್ಲಿ ಜನರಲ್ ನಾಲೆಡ್ಜ್ ಬೆಳವಣಿಗೆಗೆ ಬರೀ ಪಠ್ಯಪುಸ್ತಕದಲ್ಲಿರುವುದನ್ನು ಅಭ್ಯಾಸ ಮಾಡಿದರೆ ಮತ್ತು ಶಿಕ್ಷಕರು ಹೇಳುವಂಥ ಬೋಧನೆಯನ್ನು ಕೇಳಿದರೆ ಸಾಧ್ಯವಾಗುವುದಿಲ್ಲ.

He must associate himself with the rest of the society ಬೇರೆ ಬೇರೆ ವಿದ್ಯಾ ಕ್ಷೇತ್ರಗಳಲ್ಲಿ ಬೇರೆ ಬೇರೆ ಕ್ಷೇತ್ರಗಳಲ್ಲಿ, ರಾಷ್ಟ್ರಮಟ್ಟದಲ್ಲಿ ಮತ್ತು ಅಂತರ ರಾಷ್ಟ್ರಮಟ್ಟದಲ್ಲಿ ನಡೆಯುವಂಥ ವರ್ಕ್‌ಷಾಪ್‌ಗಳು, ಸೆಮಿನಾರ್‌ಗಳು ಕಾನ್‌ಫರೆನ್ಸ್ ಸಿಂಪೋಸಿಯಂ ಇಂಥ ಸಮಾರಂಭಗಳಲ್ಲಿ ಹೆಚ್ಚು ಹೆಚ್ಚಾಗಿ ಸಮ್ಮಿಳನ ಆಗುವಂತೆ ಮಾಡಿ ಅಲ್ಲಿ ಭಾಗವಹಿಸಿ ಅಲ್ಲಿನ ವಿಷಯಗಳನ್ನು ತಿಳಿದುಕೊಂಡು ಸೌಹಾರ್ದತೆಯನ್ನು ಬೆಳೆಸಿಕೊಂಡು exchange of views ಮಾಡಿಕೊಂಡರೆ intellectual transformation ಆಗುವುದಕ್ಕೆ ಅನುಕೂಲವಾಗುವುದಕ್ಕೆ ಸಾಧ್ಯವಾಗುತ್ತದೆ. ಅದಕ್ಕಾಗಿ ಸಾಕಷ್ಟು ಹಣವನ್ನು ಸರ್ಕಾರ ಮೀಸಲಿಟ್ಟು ವಿದ್ಯಾರ್ಥಿಗಳನ್ನು ಆರಿಸಿ ಅವರಿಗೆ ತರಬೇತಿ ಕೊಡುವುದಕ್ಕೆ ಸಾಧ್ಯವಾಗುತ್ತದೆಯೋ ಎಂಬುದನ್ನು ಯೋಚನೆ ಮಾಡಬೇಕು.

ಛೇರ್ಮನ್.—ತಾವು ಮುಗಿಸಬೇಕು.

ಶ್ರೀ ಎ. ಕೆ. ಅನಂತ ಕೃಷ್ಣ.—ಒಂದು ಮಾತು ಹೇಳಿ ಮುಗಿಸುತ್ತೇನೆ. ನಾವು ಬಹಳ ಶಿಕ್ಷಣ ಸಂಸ್ಥೆಗಳಿಗೆ ಮಂಜೂರಾತಿ ಕೊಡುತ್ತಿದ್ದೇವೆ. ಒಂದೊಂದು ಶಾಲೆಯಲ್ಲಿ ಕೂಡ ಅವರದೇ ಆದ ರೀತಿಯಲ್ಲಿ ಶಿಕ್ಷಣ ಕೊಡುವುದು, ಅವರಿಗೆ ಬೇಕಾದ ಶಿಕ್ಷಕರನ್ನು ಮತ್ತು ಅವರಿಗೆ ತಕ್ಕ ವಿಷಯಗಳನ್ನು ಅಳವಡಿಸಿಕೊಂಡು ಹೋಗುವುದು ಆಗುತ್ತಿದೆ. ಯೂನಿಫಾರಂ ಪಾಲಿಸಿ ಇದ್ದರೂ ಅದರಂತೆ ನಡೆದುಕೊಂಡು ಹೋಗದೆ ಬೇರೆ ರೀತಿಯಿಂದ ನಡೆದುಕೊಂಡು ಹೋಗುತ್ತಿದ್ದಾರೆ. ಹೀಗಾಗಿ ಮಕ್ಕಳು ಪ್ರತಿ ಸಲ ನಮಗೆ ಎಂ. ಇ. ಎಸ್. ಕಾಲೇಜಿನಲ್ಲಿ ಸೀಟು ಕೊಡಿಸಿ, ವಿಜಯಾ ಕಾಲೇಜಿನಲ್ಲಿ ಸೀಟು ಕೊಡಿಸಿ ನ್ಯಾಷನಲ್ ಕಾಲೇಜಿನಲ್ಲಿ ಸೀಟು ಕೊಡಿಸಿ ಬೇರೆ ಕಡೆ ಬೇಡ ಎಂದು ಬರುತ್ತಾರೆ. ಏತಕ್ಕೆ ಇದಾಗುತ್ತಿದೆ ಸ್ವಾಮಿ ? ಯೂನಿಫಾರಂ ಸಿಸ್ಟಂನಲ್ಲಿ ಮೇಲುಗಡೆಯಿಂದ ಉಸ್ತುವಾರಿ ಇದ್ದಿದ್ದರೆ, ಸರಿಯಾದ ಡೈರೆಕ್ಷನ್ ಇದ್ದಿದ್ದರೆ ಇದಾಗುತ್ತಿರಲಿಲ್ಲ. ಡೈರೆಕ್ಟರ್ ಆಫ್ ಎಜುಕೇಷನ್ ಅವರಿಂದಾಗಲೀ, ಅವರ ಉಪ ಅಧಿಕಾರಿಗಳಿಂದಾಗಲೀ ಸರಿಯಾಗಿ ಕೆಲಸವಾಗಿದ್ದರೆ ಒಂದೊಂದು ವಿದ್ಯಾಕ್ಷೇತ್ರದಲ್ಲೂ ಕೂಡ ಈ ರೀತಿಯ ವಿಪರ್ಯಾಸ ಆಗುತ್ತಿರಲಿಲ್ಲ. ಪ್ರತಿಯೊಂದು ತರಗತಿಯಲ್ಲೂ ಪ್ರತಿಯೊಂದು ಶಾಲೆಯಲ್ಲೂ, ಅಂದರೆ ಯಾವ ಶಾಲೆಗೆ ಹೋದರೂ ಒಂದೇ ತರನಾದ ವಿದ್ಯಾಭ್ಯಾಸ ದೊರಕುವುದಾದರೆ, ಆಗ ಸರಿಯಾದ ಡಿಸಿಪ್ಲಿನ್ ಬರುತ್ತದೆ, ವಿದ್ಯೆಯ ಬಗ್ಗೆ ನಂಬಿಕೆ ಬರುತ್ತದೆ. ಆ ಬಗ್ಗೆ ವಿಶ್ವಾಸ ಜನರಲ್ಲಿ ಬರಬೇಕಾಗಿದೆ ಎಂದು ಪ್ರತಿಯೊಬ್ಬ ಕನ್ನಡದ ನಾಗರೀಕನಿಗೂ ಯಾವ ಶಾಲೆಗೆ ಹೋದರೂ ಕೂಡ ಸರಿಯಾದ ವಿದ್ಯಭ್ಯಾಸ ದೊರಕುತ್ತದೆ ಎಂಬ ನಂಬಿಕೆಯನ್ನು ಕ್ರಿಯೇಟ್ ಮಾಡುವುದಕ್ಕೆ ಪ್ರಯತ್ನ ಮಾಡಬೇಕಾಗುತ್ತದೆ. ಇದು ನಮ್ಮ ಸರ್ಕಾರದ ಮೂಲಭೂತವಾದ ಜವಾಬ್ದಾರಿ. ಆಗ ಪ್ರತಿಯೊಂದು ಶಾಲೆಯ ಬಗ್ಗೆ ಜನತೆಗೆ ಗೌರವ ಬರುತ್ತದೆ. ಆ ರೀತಿಯಾಗಿ ಸರ್ಕಾರ ಕೆಲಸ ಮಾಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ಡೈರೆಕ್ಟರೇಟ್ ಆಫ್ ಎಜುಕೇಷನ್ ಆಗಲಿ, ಕೊಲಿಜಿಯೇಟ್ ಎಜುಕೇಷನ್ ಆಗಲಿ, ಟೆಕ್ನಿಕಲ್ ಎಜುಕೇಷನ್ ಆಗಲಿ ಸರ್ಕಾರಕ್ಕೆ ನೇರವಾಗಿ ನಿಯಂತ್ರಣ ಪ್ರತಿಯೊಂದು ಹಂತದಲ್ಲೂ ಇಲ್ಲದಿದ್ದರೂ ಸಂದರ್ಭಾನುಸಾರ ಬದಲಾವಣೆ ಆಗುವಂತೆ ಮಾಡದಿದ್ದರೆ ಬಹಳ ವಿಪರ್ಯಾಸವಾಗುತ್ತದೆ. ಸಮಾಜದಲ್ಲಿ ವಿಪರ್ಯಾಸ ಬರುತ್ತದೆಂಬುದಾಗಿ ಹೇಳುತ್ತಾ, ಇಷ್ಟು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

(ಅಧ್ಯಕ್ಷರು ಪೀಠವನ್ನಲಂಕರಿಸಿದರು)

ಶ್ರೀ ಕೆ. ಶಿವಮೂರ್ತಿ.—ಮಾನ್ಯ ಅಧ್ಯಕ್ಷರಿಗೆ ನಮಗೂ ಮಾತನಾಡುವುದಕ್ಕೆ ಅವಕಾಶಕೊಡಬೇಕು. ಯುವಜನ ಸೇವೆಯ ಇಲಾಖೆಯ ಬಗ್ಗೆ ಯುವಕರಾದ ನಾವುಗಳು ಮಾತನಾಡಬೇಕಾಗುತ್ತದೆ. ನಾವು ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ.

ಅಧ್ಯಕ್ಷರು.—ಸದನದ ಕಾರ್ಯಕಲಾಪಗಳ ಸಮಿತಿ ಶಿಕ್ಷಣ ಇಲಾಖೆಯ ಬೇಡಿಕೆಯನ್ನು ನಿನ್ನೆಯ ದಿವಸವೇ ಮುಕ್ತಾಯಗೊಳಿಸಬೇಕೆಂದು ತೀರ್ಮಾನಿಸಿತ್ತು. ಆದರೆ ಮಾನ್ಯ ಮಂತ್ರಿಗಳು ಔದಾರ್ಯ ತೋರಿಸಿ ಇವೊತ್ತು ಉತ್ತರ ಕೊಡುತ್ತೇನೆಂದು ಹೇಳಿದರು. ಈಗ ೧೧-೪೦ ಗಂಟೆಯಾಗಿದೆ. ಹೇಗೆ ಮಾಡಬೇಕೆಂಬುದರ ಬಗ್ಗೆ ಮಾನ್ಯ ವಿರೋಧಪಕ್ಷದ ಉಪನಾಯಕರ ಅಭಿಪ್ರಾಯವನ್ನು ಮೊದಲು ಕೇಳುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಸಭಾ ಸಲಹಾ ಸಮಿತಿಯಲ್ಲಿ ಆ ರೀತಿ ಒಪ್ಪಿಕೊಂಡದ್ದು ನಿಜ. ಅದಕ್ಕಿಂತ ಹೆಚ್ಚು ೩ ಗಂಟೆಗಳ ಕಾಲ ಸಮಯವಾಗಿದೆ. ಮಾನ್ಯ ಮಂತ್ರಿಗಳು ಉತ್ತರ ಕೊಡುವುದಕ್ಕೆ ಒಂದು ಗಂಟೆಯಾಗಬಹುದು. ವಿವರಣೆಯನ್ನು ಕೇಳುವುದಕ್ಕೆ ಅರ್ಧ ಗಂಟೆ ಒಟ್ಟು ಮೂರು ಗಂಟೆಯಾಗುತ್ತದೆ. ಇದು ಪ್ರಮುಖವಾದ ಇಲಾಖೆಯಾಗಿದ್ದು ಕೆಲವು ಹೊಸಬರು ಸದಸ್ಯರು ಇದ್ದಾರೆ. ಅವರು ಮಾತನಾಡುವವರು ಇದ್ದಾರೆ. ಅವರಿಗೆ ಅವಕಾಶ ಕೊಡಬೇಕು.

ಅಧ್ಯಕ್ಷರು.—ಶ್ರೀಮಾನ್ ಶಿವಮೂರ್ತಿಯವರು ಹೊಸ ಸದಸ್ಯರೆ ? ಈ ರೀತಿಯಾದರೆ ಬಹಳಷ್ಟು ಬೇಡಿಕೆಗಳನ್ನು ಗಿಲ್ಲಟಿನ್ ಆಗಿ ಹಾಕಬೇಕಾದ ಪರಿಸ್ಥಿತಿ ಬರುತ್ತದೆ. ಏಕೆಂದರೆ ಸಭಾ ಸಲಹಾ ಸಮಿತಿ ಎಷ್ಟು ಕಾಲವನ್ನು ನಿಯೋಜಿಸುತ್ತದೆಯೋ ಅದಕ್ಕಿಂತ ೨ ಗಂಟೆ ಸ್ವಲ್ಪ ಹೆಚ್ಚು ಕಡಿಮೆಯಾದರೂ ಪರವಾಯಿಲ್ಲ, ದಿವಸಗಳೇ ಹೆಚ್ಚು ಕಡಿಮೆ ಆಗುವುದಾದರೆ ಬಹಳ ಕಷ್ಟವಾಗುತ್ತದೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ನಾವು ತಮಗೆ ಸಂಪೂರ್ಣವಾಗಿ ಸಹಕಾರ ಕೊಡುತ್ತಿದ್ದೇವೆ. ಬೆಳಿಗ್ಗೆ ೯–೧೦ ಗಂಟೆಗೆ ಬರಬೇಕು ಹೇಳಿದಿರಿ, ಬಂದಿದ್ದೇವೆ. ಸಂಜೆ ೬ ಗಂಟೆಯವರೆಗೂ ಕೂಡೋಣ, ೭ ಗಂಟೆಯವರೆಗಾದರೂ ಇದ್ದು ಕಾರ್ಯಕಲಾಪ ನಡೆಸೋಣ. ಅವರು ಈ ಕಡೆ ಇರುವಾಗ ರಾತ್ರಿ ೧೦–೧೧ ಗಂಟೆಯವರೆಗೂ ಕುಳಿತುಕೊಂಡು ಡಿಮ್ಯಾಂಡ್‌ಗಳನ್ನು ಪಾಸು ಮಾಡಿಕೊಟ್ಟಿದ್ದಾರೆ. ನಾವೂ ಅದನ್ನು ಮಾಡುತ್ತೇವೆ. ಹೊಸಬರು ಮಾನ್ಯ ಸದಸ್ಯರುಗಳು ನಿರಾಶರಾಗುವುದು ಬೇಡ. ಇಲಾಖೆಗಳ ಬಗ್ಗೆ ಮಾತನಾಡಬೇಕಾಗುತ್ತದೆ. ಅನೇಕ ವಿಷಯಗಳು ಮಂತ್ರಿಗಳ ಗಮನಕ್ಕೆ ಬರುವುದಿಲ್ಲ. ಒಂದೆರಡು ವರ್ಷವಾದರೂ ಬರುವುದಿಲ್ಲ. ಅಂತಹ ವಿಚಾರಗಳನ್ನು ಮಾನ್ಯ ಸದಸ್ಯರು ಮಂತ್ರಿಗಳ ಗಮನಕ್ಕೆ ತರಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್.—ಅನೇಕ ಇಲಾಖೆಗಳನ್ನು ಒಂದೇ ದಿವಸದಲ್ಲಿ ಮುಗಿಸಿದ್ದೇವೆ. ಆದರೆ ಈ ಇಲಾಖೆಗೆ ಕನಿಷ್ಟ ೨ ದಿವಸವಾದರೂ ಬೇಕಾಗುತ್ತದೆ. ಇಡೀ ರಾಜ್ಯಕ್ಕೆ ಸಂಬಂಧಪಟ್ಟಂತೆ ಅನೇಕ ವಿಚಾರಗಳನ್ನು ಹೇಳಬೇಕಾಗುತ್ತದೆ. ಚರ್ಚೆ ನಡೆಯಬೇಕಾಗುತ್ತದೆ. ವಿದ್ಯಾ ಇಲಾಖೆ ಬಹಳ ಪ್ರಾಮುಖ್ಯವಾದುದು. ಕೆಲವು ಇಲಾಖೆಗಳಿಗಾದರೂ ಜಾಸ್ತಿ ಅವಕಾಶ ಕೊಟ್ಟರೆ ಅನುಕೂಲವಾಗುತ್ತದೆ.

ಶ್ರೀಮತಿ ಮೋಟಮ್ಮ.—ತಾವೇ ಎಷ್ಟೋ ಸಲ ಹೇಳುತ್ತಿದ್ದೀರಿ. ಡಿಮ್ಯಾಂಡ್ಸ್ ಬಂದಾಗ ವಿವರವಾಗಿ ಮಾತನಾಡುವಿರೆಂದು, ನೀವೇ ಈಗ ಅವಕಾಶ ಕೊಡುವುದಿಲ್ಲ ಎಂದು ಹೇಳಿದರೆ ಹೇಗೆ ?

ಶ್ರೀ ಬಿ. ಎಚ್. ಬನ್ನಿಕೋಡ್.—ವಿದ್ಯಾ ಇಲಾಖೆಯ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲ ಎಂದು ಹೇಳಿದರೆ ಹೇಗೆ ? ಚರ್ಚೆಗೆ ಹೆಚ್ಚು ಅವಕಾಶ ಕೊಡಬೇಕು.

† ಶ್ರೀಮತಿ ಮೋಟಮ್ಮ (ಮೂಡಿಗೆರೆ).—ಮಾನ್ಯ ಅಧ್ಯಕ್ಷರೇ, ಇವತ್ತು ವಿದ್ಯಾ ಇಲಾಖೆಗೆ ಸಂಬಂಧಪಟ್ಟ ಬೇಡಿಕೆಯನ್ನು ನಮ್ಮ ವಿದ್ಯಾಸಚಿವರು ಸಭೆಯ ಮುಂದೆ ಮಂಡಿಸಿದ್ದಾರೆ. ಅದನ್ನು ನಾನು ಸ್ವಾಗತ ಮಾಡುತ್ತಾ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಲಿಕ್ಕೆ ಇಚ್ಛೆಪಡುತ್ತೇನೆ. ಇವತ್ತು ವಿದ್ಯಾಭ್ಯಾಸದ ಮಟ್ಟ ಏನಾಗಿದೆ ಎಂದರೆ ಗುರು ಇಲ್ಲದ ಓದಾಗಿದೆ. ಈ ಮಾತನ್ನು ಏಕೆ ಹೇಳುತ್ತಿದ್ದೇನೆ ಎಂದರೆ ವ್ಯಾಸಂಗ ಮಾಡತಕ್ಕ ಮಕ್ಕಳಲ್ಲಿ, ಅದರಲ್ಲೂ ಕಾಲೇಜು ಮಟ್ಟದಲ್ಲಿ ವ್ಯಾಸಂಗ ಮಾಡುವ ಮಕ್ಕಳಲ್ಲಿ ಜವಾಬ್ದಾರಿ ಬಹಳ ಕಡಿಮೆಯಾಗಿದ್ದು ಅವರು ಮಾದಕ ವಸ್ತುಗಳಿಗೆ ಬಲಿಯಾಗಿ ತಮ್ಮ ಕಾಲವನ್ನು ವ್ಯರ್ಥಮಾಡಿಕೊಂಡು ಗುರುಗಳಿಗೆ ಸಹ ಬೆಲೆ ಕೊಡದೆ ಓದಿನ ಜವಾಬ್ದಾರಿ ಮರೆತು ಕಾಲ ಕಳೆಯುವಂಥ ಪ್ರಸಂಗ ಬಂದಿದೆ. ಇದೇ ರೀತಿ ಇವತ್ತಿನ ಉಪಾಧ್ಯಾಯರೂ ಸಹ ಈ ಮಕ್ಕಳಲ್ಲಿ ಏನು ಆಸಕ್ತಿ ಇಲ್ಲ ಎನ್ನುವುದನ್ನು ಅರ್ಥಮಾಡಿಕೊಂಡು ಅವರು ಈ ವಿದ್ಯಾ ಇಲಾಖೆಯ ಬಗ್ಗೆಯಾಗಲೀ, ಮಕ್ಕಳ ಓದಿನ ಬಗ್ಗೆಯಾಗಲೀ ಹೆಚ್ಚಿನ ಆಸಕ್ತಿಯನ್ನು ತೋರಿಸದೇ ಇರುವ ಪ್ರಸಂಗವನ್ನು ನಾವು ಇವತ್ತು ನೋಡಬೇಕಾಗಿದೆ. ಉದಾಹರಣೆಗೆ ನಮ್ಮ ಕ್ಷೇತ್ರದ್ದೇ ಕೆಲವಾರು ವಿಷಯಗಳನ್ನು ಪ್ರಸ್ತಾಪ ಮಾಡಬೇಕಾಗುತ್ತದೆ. ನಮ್ಮ ಮೂಡಿಗೆರೆಯಲ್ಲಿ ಒಂದು ಜೂನಿಯರ್ ಕಾಲೇಜ್ ಇದೆ. ಆ ಕಾಲೇಜಿಗೆ ಸರಿಯಾದ ಕಿಟಕಿಗಳು ಇಲ್ಲ. ಲೆಕ್ಚರರ್ಸ್ ಪಾಠ ಮಾಡುತ್ತಿರುತ್ತಾರೆ ಹುಡುಗರು ಕಿಟಕಿಯಿಂದ ನೆಗೆದು ಆಚೆ ಹೋಗುತ್ತಾರೆ. ಮತ್ತೆ ಹೊರಗಡೆಯಿಂದ ಕಿಟಕಿ ಮೂಲಕವೇ ಬಂದು ಕ್ಲಾಸ್‌ನಲ್ಲಿ ಕುಳಿತುಕೊಳ್ಳುತ್ತಾರೆ. ಇದರ ಬಗ್ಗೆ ಹೇಳುವವರು ಇಲ್ಲ, ಕೇಳುವವರು ಇಲ್ಲ.

ಶ್ರೀ ಕೆ. ಹೆಚ್. ರಂಗನಾಥ್.—ಮೊದಲೇ ಕಿಟಕಿ ಇರಲಿಲ್ಲವೇ ? ಮಧ್ಯೆ ಕಿಟಕಿ ಇಲ್ಲ ಎಂದರೆ ಹೇಗೆ ಆಯಿತು ?

ಶ್ರೀಮತಿ ಮೋಟಮ್ಮ.—ಇಲ್ಲ ತಾವು ಇದ್ದಾಗ ಈ ಜೂನಿಯರ್ ಕಾಲೇಜು ಮಂಜೂರು ಆಗಿರುವುದು ತಾವು ಈ ಕ್ಷೇತ್ರವನ್ನು ಪ್ರತಿನಿಧಿಸಿದಾಗ ಜೂನಿಯರ್ ಕಾಲೇಜು ಮಂಜೂರು ಆಗಿದೆ.

ಅಧ್ಯಕ್ಷರು.—ಅವರು ಕೇಳಿದ್ದುದು ನಾನು ಪ್ರತಿನಿಧಿಸುತ್ತಿದ್ದಾಗ ಕಿಟಕಿ ಇತ್ತೋ ಅಥವಾ ಬಿಟ್ಟು ಬಂದಮೇಲೆ ಕಿಟಕಿ ಕಿತ್ತುಹೋಯಿತೋ ಎಂದು.

ಶ್ರೀಮತಿ ಮೋಟಮ್ಮ.—ಇತ್ತು. ಶಾಲೆ ಕಟ್ಟಿದಾಗ ಕಿಟಕಿ ಇತ್ತು. ಆದರೆ ಬೇರೆ ಬೇರೆ ವಿದ್ಯಾರ್ಥಿಗಳ ದಬ್ಬಾಳಿಕೆ ಜಾಸ್ತಿಯಾಗಿ ರೂಮಿನಿಂದ ಆಚೆ ಓಡಲಿಕ್ಕೆ ಪ್ರಾರಂಭ ಮಾಡಿದರು. ಇಷ್ಟಬಂದರೆ ಕುಳಿತು ಕೊಳ್ಳುತ್ತಾರೆ ಇಷ್ಟವಿಲ್ಲದಿದ್ದರೆ ಕಿಟಕಿ ಮೂಲಕ ಆಚೆ ಹೋಗುತ್ತಾರೆ. ಅಲ್ಲಿ ಒಬ್ಬರು ಪ್ರಿನ್ಸಿಪಾಲರು

ಇದ್ದರು. ಇದ್ದುದರಲ್ಲೇ ಉತ್ತಮವಾದ ಪ್ರಿನ್ಸಿಪಾಲರು ಅವರಾಗಿದ್ದರು. ಆರು ವರ್ಷವಾಗಿತ್ತೆಂದು ಅವರನ್ನು ವರ್ಗ ಮಾಡಿದ್ದಾರೆ ಈ ಕಾಲೇಜಿಗೆ ಈಗ ಪ್ರಿನ್ಸಿಪಾಲರನ್ನು ಹಾಕಿಲ್ಲ ಮುಂದೆ ಈ ಕಾಲೇಜನ್ನು ಹೇಗೆ ನಡೆಸುತ್ತಾರೋ ಗೊತ್ತಾಗುವುದಿಲ್ಲ ಇನ್ನು ಕಳಸದಲ್ಲಿ ಜೂನಿಯರ್ ಕಾಲೇಜು ಇದೆ. ಇದು ಮಾನ್ಯ ಸಚಿವರಿಗೆ ಗೊತ್ತು. ಕಳಸಾದ ಜೂನಿಯರ್ ಕಾಲೇಜಿನಲ್ಲಿ ಶಿಕ್ಷಕರು ಕಾಂಟ್ರಾಕ್ಟ್ ಬೇಸಿಸ್ ಮೇಲೆ ಇದ್ದರು ಅಲ್ಲಿ ಸಹ ಪ್ರಿನ್ಸಿಪಾಲರು ಇರಲಿಲ್ಲ. ಮೊನ್ನೆ ಎಸ್ ಎಸ್.ಎಲ್.ಸಿ ಪರೀಕ್ಷೆಯಲ್ಲಿ ಏನಾಗಿದೆ ಎಂದರೆ ಕೆಲವು ಉಪಾಧ್ಯಾಯರು ಅಲ್ಲಿ ಸಬ್ ಇನ್‌ಸ್ಪೆಕ್ಟರ್ ಜೊತೆ ಶಾಮೀಲಾಗಿ ಅವರ ಮಗನಿಗೆ ಕಾಪಿ ಮಾಡುವುದಕ್ಕೋಸ್ಕರ, ಶಾಲೆಯಿಂದಲೇ ಪ್ರಶ್ನೆಪತ್ರಿಕೆಯನ್ನು ಮನೆಗೆ ತೆಗೆದುಕೊಂಡು ಹೋಗಿ ಮನೆಯಲ್ಲಿಯೇ ಉತ್ತರ ಬರೆಸಿದ ಪ್ರಸಂಗ ಬೆಳಕಿಗೆ ಬಂದರೂ ಸಹ, ಅದಕ್ಕೆ ಮುಖ್ಯವಾಗಿ ಯಾರು ಹೊಣೆಗಾರರಾಗಿದ್ದಾರೆ, ಅಂತಹ ಶಿಕ್ಷಕರಿಗೆ ಶಿಕ್ಷೆ ಮಾಡದೆ ಕೇವಲ ಅಲ್ಲಿನ ಇನ್‌ಚಾರ್ಜ್ ಪ್ರಿನ್ಸಿಪಾಲರಾಗಿದ್ದ ವ್ಯಕ್ತಿಯನ್ನು ಸಸ್ಪೆಂಡ್ ಮಾಡಿ, ಆ ಉಪಾಧ್ಯಾಯರನ್ನು ವರ್ಗಾವಣೆ ಮಾಡಿದ್ದಾರೆ. ಇದು ನ್ಯಾಯವೇ ? ಇದು ಹಣ್ಣು ತಿಂದವನನ್ನು ಬಿಟ್ಟು ಸಿಪ್ಪೆ ತಿಂದವನನ್ನು ಹಿಡಿದುಕೊಂಡು ಹೋದಹಾಗೆ ಆಗಿದೆ ಈಗ ಸುಮಾರು ೧೭ ಮಕ್ಕಳು ಏನು ಎಸ್. ಎಸ್. ಎಲ್. ಸಿ ಪರೀಕ್ಷೆಗೆ ಕಳಸಾ ಜೂನಿಯರ್ ಕಾಲೇಜಿನಲ್ಲಿ ಕುಳಿದ್ದರು, ಅವರ ರಿಸಲ್ಟನ್ನು ತಡೆಹಿಡಿದಿದ್ದಾರೆ. ಇದರಿಂದಾಗಿ ಈ ಮಕ್ಕಳ ಭವಿಷ್ಯಕ್ಕೆ ತೊಂದರೆಯಾಗಿದೆ ಯಾರು ಕಾಪಿ ಹೊಡೆಯುವುದಕ್ಕೆ ಮುಖ್ಯಕಾರಣ ಕರ್ತರಾಗಿದ್ದರು, ಯಾರಿಗೆ ಕಾಪಿ ಮಾಡುವುದು ಅಗತ್ಯ ಇತ್ತು, ಅಂತಹವರಿಗೆ ಶಿಕ್ಷೆ ಕೊಡದೆ ಈ ೧೭ ಮುಗ್ಧ ಮಕ್ಕಳನ್ನು ಈ ಪ್ರಸಂಗದಲ್ಲಿ ಒಳಪಡಿಸಿರುವುದರಿಂದ ಈ ಮಕ್ಕಳ ಭವಿಷ್ಯಕ್ಕೆ ಇವತ್ತು ಕುಂದಾಗಿದೆ. ಅದರಲ್ಲಿ ಕಳಸ ಜೂನಿಯರ್ ಕಾಲೇಜಿನ ಮಕ್ಕಳು ಮಾತ್ರ ಪರೀಕ್ಷೆಗೆ ಕುಳಿತಿರಲಿಲ್ಲ. ಜಾವಳಿಗುಜ್ಜಾರ ಹೈಸ್ಕೂಲಿನ ಮಕ್ಕಳು ಸಹ ಪರೀಕ್ಷೆಗೆ ಕುಳಿತಿದ್ದರು. ಇದು ಮಾನ್ಯ ಸಚಿವರಿಗೆ ಗೊತ್ತು. ಆ ಹೈಸ್ಕೂಲಿಗೆ ತನ್ನದೇ ಆದ ಇತಿಹಾಸ ಇದೆ, ಒಳ್ಳೆಯ ಹೆಸರು ಇದೆ. ಅಲ್ಲಿನ ಕೆಲವು ಮಕ್ಕಳು ಸಹ ಈ ಕಾಪಿ ಮಾಡುತ್ತಿದ್ದ ಕೊಠಡಿಯಲ್ಲಿ ಸೇರಿಕೊಂಡಿದ್ದರು ಎಂದು ಹೇಳಿ ಆ ಮಕ್ಕಳ ರಿಸಲ್ಟನ್ನು ವಿತ್‌ಹೆಲ್ ಮಾಡಿದ್ದಾರೆ. ಆದಷ್ಟು ಬೇಗ ಈ ಮಕ್ಕಳ ಪ್ರಶ್ನೆಪತ್ರಿಕೆಯನ್ನು ವೆರಿಫೈ ಮಾಡಿಸಿ ರಿಸಲ್ಟ್ ಹೊರಡುವ ಹಾಗೆ ಮಾಡಿ ಮುಂದೆ ಅವರು ಕಾಲೇಜಿಗೆ ಸೇರುವುದಕ್ಕೆ ಅವಕಾಶ ಮಾಡಿಕೊಡಬೇಕು. ಇಲ್ಲದಿದ್ದರೆ ಅನ್ಯಾಯವಾಗಿ ಅವರ ಭವಿಷ್ಯವನ್ನು ವಿದ್ಯಾ ಇಲಾಖೆಯವರು ಕೊಲೆ ಮಾಡಿದಹಾಗೆ ಆಗುತ್ತದೆ ಎಂದು ಮಾನ್ಯ ಸಚಿವರ ಗಮನಕ್ಕೆ ಈ ವಿಷಯವನ್ನು ತರುತ್ತಿದ್ದೇನೆ. ಇನ್ನೊಂದು ಆಲದೂರಿನಲ್ಲಿ ಜೂನಿಯರ್ ಕಾಲೇಜು ಇದೆ ಅಲ್ಲಿ ಸಹ ಪ್ರಿನ್ಸಿಪಾಲರು ಇಲ್ಲ. ಕೆಲವು ಉಪಾಧ್ಯಾಯರನ್ನು ಹಾಕಿದ್ದಾರೆ ಅವರು ಎರಡು ಗುಂಪುಗಳನ್ನು ಮಾಡಿಕೊಂಡು ಬೀದಿಯಲ್ಲಿ ನಿಂತು ಹೊಡೆದಾಟ, ಗಲಾಟೆಗೆ ಇಳಿದಿದ್ದಾರೆ. ಇದು ನಿಜಕ್ಕೂ ನಾಚಿಕೆ ಪಟ್ಟುಕೊಳ್ಳಬೇಕಾದ ಪ್ರಸಂಗ. ಇಂತಹ ಜೂನಿಯರ್ ಕಾಲೇಜುಗಳಲ್ಲಿ ಮಕ್ಕಳು ಏನು ಕಲಿಯಬಹುದು ಎಂದು ನಾವು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಮುಂದೆ ಚಿಕ್ಕಮಗಳೂರು ತಾಲ್ಲೂಕಿನ ಅವತಿ ಎಂಬಲ್ಲಿ ಜೂನಿಯರ್ ಕಾಲೇಜು ಇದ್ದು ಅಲ್ಲಿ ಮಕ್ಕಳು ಇಲ್ಲವೆಂದು ಕಾಲೇಜನ್ನು ಮುಚ್ಚಿದರು. ಒಂದು ವರ್ಷವಾಯಿತು ಕಾಲೇಜನ್ನು ಮುಚ್ಚಿ ಆದರೆ ಸುಮ್ಮನೆ ಉಪಾಧ್ಯಾಯರನ್ನು ಮನೆಯಲ್ಲಿಟ್ಟುಕೊಂಡು ಒಂದು ವರ್ಷ ಕಾಲ ಸಂಬಳ ಕೊಟ್ಟರು. ಈ ಇಲಾಖೆಯ ಅಧಿಕಾರಿಗಳ ಬುದ್ಧಿವಂತಿಕೆಗೆ ನಾವು ಏನು ಬಹುಮಾನ ಕೊಡಬೇಕೆಂದು ಅರ್ಥವಾಗುತ್ತಿಲ್ಲ.

ಶ್ರೀ ಕೆ. ಹೆಚ್ ರಂಗನಾಥ್.—ಹುಡುಗರು ಹೋಗದೇ ಹೋದರೆ ಉಪಾಧ್ಯಾಯರು ಏನು ಮಾಡುತ್ತಾರೆ. ಸುಮ್ಮನೆ ಒಳಗೆ ಹೋಗಿ ಕುಳಿತುಕೊಳ್ಳಬೇಕು. ಈಗ ನಾವು ಅದನ್ನು ಮುಚ್ಚಬೇಕೆಂಬ ತೀರ್ಮಾನ ತೆಗೆದುಕೊಂಡಿದ್ದೇವೆ. ಲಾಲ್‌ಬಹದ್ದೂರ್ ಶಾಸ್ತ್ರಿ ಹೈಸ್ಕೂಲ್ ಎಂದು ಇದೆ, ಇದನ್ನು ಅಪ್‌ಗ್ರೇಡ್ ಮಾಡಿ ಈ ಕಾಲೇಜನ್ನು ಅಲ್ಲಿಗೆ ಸ್ಥಳಾಂತರಿಸಬೇಕೆಂಬ ತೀರ್ಮಾನ ಮಾಡಿದೆ.

ಶ್ರೀಮತಿ ಮೋಟಮ್ಮ.—ಒಂದು ವರ್ಷಕಾಲ ಆ ಕಾಲೇಜು ನಡೆದಿಲ್ಲ, ಶಿಕ್ಷಕರು ಮನೆಯಲ್ಲಿ ಕುಳಿತು ಸಂಬಳ ತೆಗೆದುಕೊಂಡಿದ್ದಾರೆ.

ಶ್ರೀ ಕೆ. ಹೆಚ್. ರಂಗನಾಥ್.—ಮಕ್ಕಳನ್ನು ಏನಾದರೂ ಪ್ರೋತ್ಸಾಹ ಮಾಡಿ ತಂದು ಸೇರಿಸಬಹುದೆಂದು ಕಾದೆವು, ಅವರು ಈ ಕೆಲಸ ಮಾಡಲಿಲ್ಲ ಅನಿವಾರ್ಯವಾಗಿ ಮುಚ್ಚಬೇಕಾಯಿತು.

ಅಧ್ಯಕ್ಷರು.— ನೀವು ಮಕ್ಕಳಿಗೆ ಕ್ಯಾನವಾಸ್ ಮಾಡಬೇಕಾಗಿತ್ತು......

ಒಬ್ಬ ಮಾನ್ಯ ಸದಸ್ಯರು.—ಮಕ್ಕಳೇ ಇಲ್ಲದಿರುವಾಗ ಏನು ಕ್ಯಾನವಾಸ್ ಮಾಡೋಣ ಫ್ಯಾಮಿಲಿ ಪ್ಲಾನಿಂಗ್ ಮಾಡಿ ಮಕ್ಕಳೇ ಕಡಿಮೆಯಾಗುತ್ತಿವೆ.

ಶ್ರೀಮತಿ ಮೋಟಮ್ಮ.—ಆ ಕಾಲೇಜಿನ ಪರಿಸ್ಥಿತಿ ಚೆನ್ನಾಗಿದ್ದರೆ ಮಕ್ಕಳು ಬರುತ್ತಿದ್ದರು. ಅಲ್ಲಿಯ ಉಪಾಧ್ಯಾಯರು ಸರಿಯಾಗಿದ್ದರೆ, ಮಕ್ಕಳು ಸೇರುತ್ತಿದ್ದರು. ನಮ್ಮ ಮಲೆನಾಡಿನಲ್ಲಿ ಇದೊಂದು ದೊಡ್ಡ ದುರಂತ.

ಶ್ರೀ ಕೆ. ಹೆಚ್. ರಂಗನಾಥ್.—ನಾನು ಅದನ್ನು ನೋಡಿದ್ದೇನೆ ಆದರೆ ಇದನ್ನು ಯಾರು ಕೊಟ್ಟರೋ ಗೊತ್ತಿಲ್ಲ. ಒಂದು ಮೂಲೆಯಲ್ಲಿ ಇದೆ. ಇದು ಮಾನ್ಯ ಸದಸ್ಯರ ಕ್ಷೇತ್ರಕ್ಕೆ ಬರುವುದಿಲ್ಲ. ಚಿಕ್ಕಮಗಳೂರು ಕ್ಷೇತ್ರಕ್ಕೆ ಬರುತ್ತದೆ. ಚಿಕ್ಕಮಗಳೂರು ಕ್ಷೇತ್ರದಲ್ಲಿ ಬೇಕಾದಷ್ಟು ಕಾಲೇಜು ಮಾಡಬಹುದಿತ್ತು. ಆದರೆ ಯಾವುದೋ ಒತ್ತಡಕ್ಕೆ ಅಲ್ಲಿ ಮಾಡಿದ್ದಾರೆ. ಅಲ್ಲಿಗೆ ಯಾರೂ ಹೋಗಂತಾ ಇಲ್ಲ ಆವತಿನಲ್ಲಿ ಎಷ್ಟು ಜನ ಇದ್ದಾರೆ, ಅಲ್ಲಿಯು ಪ್ರಜಾಸಂಖ್ಯೆ ಕಡಿಮೆ ಇದೆ.

ಶ್ರೀಮತಿ ಮೋಟಮ್ಮ.—ಈಗ ಮುಚ್ಚಿದ್ದಾರೆ. ಸಂತೋಷ ಆದರೆ ಒಂದು ವರ್ಷಕಾಲ ಉಪಾಧ್ಯಾಯರು ಪಾಠ ಮಾಡದೇ ಸಂಬಳ ತೆಗೆದುಕೊಂಡಿದ್ದಾರೆ. ನಮ್ಮ ಜೂನಿಯರ್ ಕಾಲೇಜಿನಲ್ಲಿ ವೇಕೆನ್ಸಿ ಇದ್ದವು, ಕೊನೆಯ ಪಕ್ಷ ಇವರನ್ನು ಅಲ್ಲಿಗೆ ಡೆಪ್ಯೂಟೇಷನ್ ಮಾಡಬಹುದಿತ್ತು. ಇದು ಜಾಯಿಂಟ್ ಡೈರೆಕ್ಟರಿಗೆ ಗೊತ್ತಿರಲಿಲ್ಲವೇ ? ಕಮೀಷನರ್ ಆಫ್ ಎಜುಕೇಷನ್ ಇವರಿಗೆ ಗೊತ್ತಿರಲಿಲ್ಲವೇ ಡಿ.ಡಿ.ಪಿ.ಐ ರವರಿಗೆ ಗೊತ್ತಿರಲಿಲ್ಲವೇ ಎಂದು ನನ್ನ ಪ್ರಶ್ನೆ. ಇನ್ನು ಮೂಡಿಗೆರೆ ತಾಲ್ಲೂಕಿನಲ್ಲಿ ಫಸ್ಟ್ ಗ್ರೇಡ್ ಕಾಲೇಜ್ ನನ್ನ ಮೊದಲ ಅವಧಿಯಲ್ಲಿ ಸ್ಯಾಂಕ್ಷನ್ ಆಯಿತು ಸುಮಾರು ೨ ಲಕ್ಷ ಡೊನೇಷನ್ ಕೊಟ್ಟಿದ್ದಾರೆ, ಆದರೆ ಇನ್ನೂ ಕಟ್ಟಡ ಇಲ್ಲ ೨ ಲಕ್ಷ ಡೊನೇಷನ್ ಕೊಟ್ಟವರು ಆಕಾಶ ನೋಡುತ್ತಾ ಕುಳಿತಿದ್ದಾರೆ. ನಮ್ಮ ಹೆಸರಿನಲ್ಲಿ ಕಟ್ಟಡ ಆಗುತ್ತದೆ, ಆ ಕಟ್ಟಡದಲ್ಲಿ ನಮ್ಮ ಹೆಸರು ಬರುತ್ತದೆ ಎಂದು ಆದರೆ, ಕಟ್ಟಡವನ್ನು ಕಟ್ಟಿಲ್ಲ. ಆದರೂ ಡಿ. ಎಸ್. ಬಿಳಿಗೌಡ ಪ್ರಥಮ ದರ್ಜೆ ಕಾಲೇಜು ಎಂದು ಬೋರ್ಡ್ ಹಾಕಿದ್ದಾರೆ. ಡೊನೇಷನ್ ಉಪಯೋಗ ಮಾಡಿಕೊಂಡು, ಕಟ್ಟಡ ಕಟ್ಟಿದ ನಂತರ, ನನ್ನ ಅನಿಸಿಕೆ ಪ್ರಕಾರ ಈ ಹೆಸರು ಆ ಕಾಲೇಜಿಗೆ ಬರಬೇಕಾಗುತ್ತದೆ. ಆದರೆ ಕಟ್ಟಡವೇ ಆಗಿಲ್ಲ. ಆದರೂ ಈ ರೀತಿ ಬೋರ್ಡ್ ಬರೆದು ಹಾಕಿರುವ ಔಚಿತ್ಯ ನನಗೆ ಅರ್ಥವಾಗುತ್ತಿಲ್ಲ. ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ ಇದಕ್ಕೆ ಹಣ ಬಿಡುಗಡೆ ಮಾಡಿ. ಆದಷ್ಟು ಬೇಗ ಕಟ್ಟಡವನ್ನು ಪ್ರಾರಂಭ ಮಾಡಬೇಕು ಈಗಲಾದರೂ ಮನಸ್ಸು ಮಾಡಿ. ಈ ಕಟ್ಟಡಕ್ಕೆ ಹೆಚ್ಚಿನ ಹಣ ಕೊಟ್ಟು, ಫಸ್ಟ್ ಗ್ರೇಡ್ ಕಾಲೇಜನ್ನು ತೆಗೆದುಕೊಳ್ಳುವುದಕ್ಕೆ ಮನಸ್ಸು ಮಾಡುತ್ತಾರೆಂದು ನಾನು ಅಂದುಕೊಂಡಿದ್ದೇನೆ. ಇನ್ನು ಪ್ರೈಮರಿ ಎಜುಕೇಷನ್‌ಗೆ ಬಂದರೆ, ಡಿ.ಎಲ್.ಆರ್ ಸಿ. ಕಮಿಟಿ ಎಂದು ಹಿಂದೆ ಇತ್ತು, ಅದನ್ನೇ ಮುಂದುವರಿಸಿಕೊಂಡು ಬಂದರೆ ಒಳ್ಳೆಯದು. ಏಕೆಂದರೆ, ಜಿಲ್ಲಾಪರಿಷತ್ತಿನಲ್ಲಿ ಶಿಕ್ಷಕರನ್ನು ಆಯ್ಕೆ ಮಾಡಬೇಕಾದರೆ, ಮೆರಿಟ್ ಎಂದು ಹೇಳಿಕೊಂಡು, ಮೊನ್ನೆ, ನಿನ್ನೆ ಟಿ.ಸಿ.ಹೆಚ್. ಪಾಸಾದವರಿಗೆ ಶಿಕ್ಷಕರ ಹುದ್ದೆ ಸಿಗುತ್ತದೆ. ೫-೬ ವರ್ಷಗಳಿಂದ ಟಿ.ಸಿ.ಹೆಚ್ ಪಾಸ್ ಮಾಡಿ. ತಮ್ಮ ಬದುಕಿನ ಬಗ್ಗೆ ಯೋಚನೆ ಮಾಡುತ್ತಿರುವವರಿಗೆ ಅನ್ಯಾಯವಾಗಿದೆ. ಆದ್ದರಿಂದ, ಶಿಕ್ಷಕರನ್ನು ಆಯ್ಕೆ ಮಾಡಿಕೊಳ್ಳುವಾಗ, ೫೦ ಪರ್ಸೆಂಟ್ ಮೆರಿಟ್‌ಗೆ ಮತ್ತು ೫೦ ಪರ್ಸೆಂಟ್ ವಯಸ್ಸಾದವರಿಗೆ ಅವಕಾಶ ಮಾಡಿಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ನಾನು ಕೇಳಿಕೊಳ್ಳುತ್ತೇನೆ. ಮತ್ತೆ ಹಿಂದೆ ಉಪಾಧ್ಯಾಯರನ್ನು ಆಯ್ಕೆ ಮಾಡಬೇಕಾದರೆ, ಹರಿಜನ ಗಿರಿಜನರಿಗೆ ಟಿ.ಸಿ.ಹೆಚ್. ಇನ್‌ಸಿಸ್ಟ್ ಮಾಡುತ್ತಾ ಇರಲಿಲ್ಲ, ಆದರೆ ಇವತ್ತು ಟಿ.ಸಿ.ಹೆಚ್. ಆಗಿರಬೇಕೆಂದು ಇನ್‌ಸಿಸ್ಟ್ ಮಾಡುತ್ತಿದ್ದಾರೆ. ಇದನ್ನು ಸಡಿಲಗೊಳಿಸಿ, ಎಸ್.ಎಸ್.ಎಲ್.ಸಿ ಪಾಸಾದವರಿಗೆ ಆಯ್ಕೆ ಮಾಡಿಕೊಂಡು, ನಂತರ ಡೆಪ್ಯುಟೇಷನ್ ಮೇಲೆ ಟಿ.ಸಿ.ಹೆಚ್. ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟರೆ ಹೆಚ್ಚಿನ ಜನರಿಗೆ ಅನುಕೂಲವಾಗುತ್ತದೆ. ಇನ್ನು ಪ್ರೈವೇಟ್ ಸಂಸ್ಥೆಯವರು, ಇವತ್ತು ಲಾಭದಾಯಕ ಸಂಸ್ಥೆಗಳಾಗಿ ಬೆಳೆಯುತ್ತಿವೆ. ಹಿಂದೆ ತಾವು ಸಹಕಾರಿ ಮಂತ್ರಿಗಳಾಗಿದ್ದಾಗ ಪ್ರತಿಯೊಂದು ಸಹಕಾರ ಸಂಘದಲ್ಲೂ ಸಹ ಒಬ್ಬರು ಹೆಣ್ಣುಮಗಳು ಇರಬೇಕು ಮತ್ತೆ ಒಬ್ಬ ಹರಿಜನ ಪ್ರತಿನಿಧಿ ಇರಬೇಕೆಂದು ಹೇಗೆ ಮಾಡಿದಿರೋ, ಹಾಗೆಯೇ ಈ ಖಾಸಗಿ ಶಿಕ್ಷಣ ಸಂಸ್ಥೆಗಳ ಬೋರ್ಡಿನಲ್ಲೂ ಪ್ರತಿಯೊಂದು ವರ್ಗಕ್ಕೂ ರೆಪ್ರಸೆಂಟೇಷನ್ ಇರಬೇಕು. ಅವರು ಈ ಸಂಸ್ಥೆಗಳನ್ನು ತಮ್ಮ ಸ್ವಂತ ಆಸ್ತಿಯಾಗಿ ಮಾಡಿಕೊಂಡಿದ್ದಾರೆ ಇದನ್ನು ತಪ್ಪಿಸಬೇಕಾದರೆ, ಎಲ್ಲಾ ವರ್ಗದವರಿಗೆ ಪ್ರಾತಿನಿಧ್ಯ ಇರಬೇಕು. ಇದರಿಂದ ಅವರ ದಬ್ಬಾಳಿಕೆಯನ್ನು ಕಡಿಮೆ ಮಾಡಿದಹಾಗೆ ಆಗುತ್ತದೆ. ಸರ್ಕಾರಿ ಶಾಲೆಗಳಲ್ಲಿರುವಂತೆ ಸ್ಕೂಲ್ ಬೆಟರ್‌ಮೆಂಟ್ ಕಮಿಟಿ ಎಂದು ಪ್ರೈವೇಟ್ ಸ್ಕೂಲುಗಳಲ್ಲೂ ಮಾಡಬೇಕು, ಏಕೆಂದರೆ ಅವರು ಸಿಕ್ಕಾಪಟ್ಟೆ ಡೊನೇಷನ್ ಕಲೆಕ್ಟ್ ಮಾಡಿಕೊಳ್ಳುತ್ತಿದ್ದಾರೆ.

ಹಾಸ್ಟೆಲ್ ಕಟ್ಟಿಸುತ್ತೇವೆ, ಸ್ಕೂಲ್ ಬಿಲ್ಡಿಂಗ್ ಕಟ್ಟಿಸುತ್ತೇವೆಂದು ಬೇಕಾದಷ್ಟು ಡೊನೇಷನ್‌ಗಳನ್ನು ಶಾಲೆಗಳವರು ವಿದ್ಯಾರ್ಥಿಗಳ ಪೋಷಕರುಗಳಿಂದ ವಸೂಲಿ ಮಾಡುತ್ತಾರೆ. ಇದನ್ನೆಲ್ಲಾ ಕಳೆಯುವುದಕ್ಕಾಗಿ ಒಂದು ಬೆಟರ್‌ಮೆಂಟ್ ಕಮಿಟಿಯನ್ನು ಮಾಡಬೇಕು. ಈ ಬೆಟರ್‌ಮೆಂಟ್ ಕಮಿಟಿಯನ್ನು ಸರ್ಕಾರದವರೇ ಕಡ್ಡಾಯವಾಗಿ ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ, ಈ ಪ್ರೈವೇಟ್ ಶಾಲೆಗಳವರು ಒಂದೊಂದು ಶಾಲೆಯಲ್ಲಿ ಒಂದೊಂದು ತರಹ ಫೀಸ್‌ಗಳನ್ನು ವಸೂಲಿ ಮಾಡುತ್ತಿದ್ದಾರೆ. ಒಂದು ಶಾಲೆಯಲ್ಲಿ ಎಲ್.ಕೆ.ಜಿ.ಗೆ ೧೦೦ ರೂಪಾಯಿ ಇನ್ನೊಂದು ಶಾಲೆಯಲ್ಲಿ ೬೫ ರೂಪಾಯಿ, ಹೀಗೆ ಒಂದೊಂದು ಶಾಲೆಯಲ್ಲಿ ಒಂದೊಂದು ತರಹವೇ ತೆಗೆದು ಕೊಳ್ಳುತ್ತಿದ್ದಾರೆ. ಹೈಸ್ಕೂಲುಗಳಲ್ಲಾಗಲೀ, ಮಿಡ್ಲ್ ಸ್ಕೂಲ್‌ಗಳಲ್ಲಾಗಲೀ ಪ್ರೈಮರಿ ಸ್ಕೂಲ್‌ಗಳಲ್ಲಾಗಲೀ ಎಲ್ಲಾ ಶಾಲೆಗಳವರು ಒಂದೇ ರೀತಿಯಲ್ಲಿ

ಫೀಸ್‌ಗಳನ್ನು ವಸೂಲಿಮಾಡುವ ರೀತಿಯಲ್ಲಿ ಕಾನೂನನ್ನು ಮಾಡಬೇಕು. ಈ ರೀತಿ ಮಾಡಿದರೆ ಒಳ್ಳೆಯದೆಂದು ನಾನು ಸರ್ಕಾರಕ್ಕೆ ಸಲಹೆ ಮಾಡುತ್ತಿದ್ದೇನೆ. ಇನ್ನು ಯುವಜನ ಖಾತೆ ಬಗ್ಗೆ ಬಹಳಷ್ಟು ಜನ ಮಾನ್ಯ ಸದಸ್ಯರುಗಳು ಮಾತನಾಡುವುದರಿಂದ ನಾನು ಅದರ ಬಗ್ಗೆ ಹೇಳದೆ ಯೂನಿವರ್ಸಿಗಳ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಯೂನಿವರ್ಸಿಗಳ ಬಗ್ಗೆ ಯಾರೂ ಮಾತನಾಡಿಲ್ಲ. ಇವತ್ತಿನ ಯೂನಿವರ್ಸಿಟಿಗಳ ಪರಿಸ್ಥಿತಿ ಏನಾಗಿದೆಯೆಂದರೆ, ಕೆಲವೇ ಕೆಲವು ವರ್ಗದ ಜನರು ಯೂನಿವರ್ಸಿಗಳಲ್ಲಿ ಸೇರಿಕೊಂಡು ಯೂನಿವರ್ಸಿಟಿಗಳ ಆಡಳಿತವನ್ನು ನಡೆಸುತ್ತಿದ್ದಾರೆ ಯೂನಿವರ್ಸಿಗಳ ಆಡಳಿತದಲ್ಲಿ ಯಾವಾಗಲೂ ಗೊಂದಲ ಉಂಟಾಗುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಕೆಲವು ದಿವಸಗಳ ಹಿಂದೆ ಮೈಸೂರು ಯೂನಿವರ್ಸಿಟಿಯಲ್ಲಿ ಗಲಾಟೆ ಆಗಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಬೆಂಗಳೂರು ಯೂನಿವರ್ಸಿಟಿಯಲ್ಲೂ ಗಲಾಟೆ ಆಗಿರುವುದನ್ನು ನಾವು ಕಂಡಿದ್ದೇವೆ. ಯೂನಿವರ್ಸಿಟಿಗಳ ಆಡಳಿತವನ್ನು ಚುರುಕುಗೊಳಿಸುವತ್ತ ಮಾನ್ಯ ಮಂತ್ರಿಗಳು ಗಮನ ಹರಿಸಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತೇನೆ. ಯೂನಿವರ್ಸಿಟಿಗಳಲ್ಲಿ ನೇಮಕ ಮಾಡುವಾಗ ರೋಸ್ಟರ್ ಪದ್ಧತಿಯನ್ನು ಅನುಸರಿಸಿಲ್ಲ. ಪ್ರೈವೇಟ್ ಸ್ಕೂಲುಗಳಲ್ಲೂ ಸಹ ರೋಸ್ಟರ್ ಪದ್ಧತಿಯನ್ನು ನೇಮಕಾತಿ ಮಾಡುವಾಗ ಅನುಸಾರ ಮಾಡುತ್ತಿಲ್ಲ. ಇನ್ನು ಮುಂದೆ ಯುನಿವರ್ಸಿಗಳಲ್ಲಾಗಲೀ, ಪ್ರೈವೇಟ್ ಸ್ಕೂಲುಗಳಲ್ಲಾಗಲೀ ನೇಮಕ ಮಾಡಿಕೊಳ್ಳುವಾಗ ರೋಸ್ಟರ್ ಪದ್ಧತಿಯನ್ನು ಕಡ್ಡಾಯವಾಗಿ ಅನುಸರಿಸುವುದಕ್ಕೆ ಸರ್ಕಾರದವರು ಕ್ರಮ ತೆಗೆದುಕೊಳ್ಳಬೇಕು. ಯೂತ್ ಸರ್ವೀಸಸ್ ಬಗ್ಗೆ ಹೇಳಬೇಕಾದರೆ, ಮಾನ್ಯ ಗಂಗಾಧರಗೌಡರು ಯೂತ್ ಸರ್ವೀಸ್ ಇಲಾಖೆಯ ಸಚಿವರಾಗಿದ್ದಾಗ ನಮ್ಮ ಚಿಕ್ಕಮಗಳೂರು ಜಿಲ್ಲೆಗೆ ಒಂದು ಸ್ಟೇಡಿಯಂನ್ನು ಕಟ್ಟುವುದಕ್ಕೆ ಮಂಜೂರು ಮಾಡಿದ್ದರು. ಸ್ಯಾಂಕ್ಷನ್ ಮಾಡಿ ೧೦ ವರ್ಷಗಳಾದರೂ ಇದುವರೆಗೆ ಸ್ಟೇಡಿಯಂ ಕಟ್ಟುವ ಕೆಲಸ ಮುಕ್ತವಾಗಿಲ್ಲ, ಈಗಲಾದರೂ ಮಾನ್ಯ ಮಂತ್ರಿಯವರು ಈ ಕಡೆ ಗಮನ ಹರಿಸಿ ಆದಷ್ಟು ಬೇಗ ಈ ಸ್ಟೇಡಿಯಂನ್ನು ಪೂರ್ಣಗೊಳಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಆಮೇಲೆ ಈ ಯುವ ಜನ ಖಾತೆಗೆ ಸರ್ಕಾರದವರು ಹೆಚ್ಚಿನ ರೀತಿಯಲ್ಲಿ ಹಣವನ್ನು ಕೊಡುತ್ತಿಲ್ಲ. ಯುವ ಜನ ಮೇಳಗಳನ್ನು ಮಾಡಬೇಕಾದಾಗ ಮಂಡಲ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಜನರುಗಳ ಹತ್ತಿರ ಹೋಗಿ ಹಣವನ್ನು ಕೇಳಿ ಪಡೆದು ಬರುವ ಜನರುಗಳಿಗೆ ಊಟ ತಿಂಡಿಯ ವ್ಯವಸ್ಥೆಯನ್ನು ಮಾಡಬೇಕಾದ ಪರಿಸ್ಥಿತಿ ಇದೆ. ಇನ್ನು ಮುಂದಾದರೂ ಯುವ ಜನ ಸೇವಾ ಖಾತೆಗೆ ಹೆಚ್ಚಿನ ರೀತಿಯಲ್ಲಿ ಸರ್ಕಾರದವರು ಹಣವನ್ನು ಬಿಡುಗಡೆ ಮಾಡಬೇಕು. ಪ್ರತಿ ಜಿಲ್ಲೆಯಲ್ಲಿ ಯಾವ ರೀತಿ ಒಂದೊಂದು ಕ್ರೀಡಾ ಸೆಂಟರುಗಳನ್ನು ಮಾಡಿದ್ದಾರೋ ಅದೇ ರೀತಿಯಲ್ಲಿ ಪ್ರತಿ ತಾಲ್ಲೂಕು ಕೇಂದ್ರಗಳಲ್ಲೂ ಕ್ರೀಡಾ ಸೆಂಟರುಗಳನ್ನು ಮಾಡಬೇಕು ಈ ರೀತಿ ಮಾಡಿದರೆ ಒಬ್ಬಳು ಪಿ.ಟಿ. ಉಷಾ ಅಲ್ಲ, ಇಂಥಾ ಹತ್ತಾರು ಪಿ.ಟಿ. ಉಷಾಗಳು ನಮ್ಮ ರಾಜ್ಯದಲ್ಲಿ ಬೆಳಕಿಗೆ ಬರುವುದಕ್ಕೆ ಅವಕಾಶವಾಗುತ್ತದೆ. ಇದರ ಜೊತೆಗೆ ಎಲ್ಲಾ ಶಾಲೆಗಳಲ್ಲೂ ಸ್ಕೌಟ್ ಗೈಡ್ಸ್ ಟ್ರೈನಿಂಗ್ ಕೊಡುವ ವ್ಯವಸ್ಥೆಯನ್ನು ಜಾರಿಗೆ ತರಬೇಕು. ಪ್ರೈಮರಿ, ಮಿಡ್ಲ್, ಹೈಸ್ಕೂಲುಗಳಲ್ಲಿ ಓದತಕ್ಕಂಥ ಎಲ್ಲಾ ಮಕ್ಕಳುಗಳಿಗೂ ಕಡ್ಡಾಯ ಯೋಗ ಶಿಕ್ಷಣ ತರಬೇತಿಯನ್ನು ಜಾರಿ ಮಾಡಬೇಕು. ಆ ರೀತಿ ಮಾಡಿದರೆ ಮಕ್ಕಳುಗಳ ಆರೋಗ್ಯ ಸಾಧಾರಣೆಯಾಗಿ ಅವರ ಭವಿಷ್ಯತ್ತು ಉತ್ತಮಗೊಳ್ಳುತ್ತದೆ. ಇದರ ಜೊತೆಗೆ ಭಾರತ ಸೇವಾ ದಳದ ರೀತಿಯಲ್ಲಿ ಎಲ್ಲಾ ಶಾಲೆಯ ಮಕ್ಕಳುಗಳಿಗೂ ಸೇವಾ ದಳದಲ್ಲಿಸೇರಿಸಿ ಶಿಸ್ತನ್ನು ಕಲಿಸಬೇಕು ಸೇವಾದಳ ಮಾಡುವುದರಿಂದ ಸಮಾಜದಲ್ಲಿ ಒಳ್ಳೆಯ ಕೆಲಸಗಳನ್ನು ಮಾಡಿಸಬಹುದು. ಈ ಸಲಹೆಗಳನ್ನು ಮಾನ್ಯ ಸಚಿವರು ಗಮನಿಸಿ ಕಾರ್ಯರೂಪಕ್ಕೆ ತರುವುದಕ್ಕೆ ಏರ್ಪಾಡು ಮಾಡಿದರೆ ಒಳ್ಳೆಯದು. ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಶಿವಮೂರ್ತಿ (ಭರಮಸಾಗರ).—ಸನ್ಮಾನ್ಯ ಅಧ್ಯಕ್ಷರೇ, ಶಿಕ್ಷಣ, ಯುವಜನ ಖಾತೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಳ ಬೇಡಿಕೆಗಳನ್ನು ಏನು ಮಂಡಿಸಿದ್ದಾರೋ ಅವುಗಳನ್ನು ನಾನು ಸ್ವಾಗತಿಸುತ್ತಾ ಅವುಗಳ ಬಗ್ಗೆ ಒಂದೆರಡು ಮಾತುಗಳನ್ನು ಆಡುವುದಕ್ಕೆ ಬಯಸುತ್ತೇನೆ. ಸಾರ್, ಈಗ ನಾನು ಯುವ ಜನ ಖಾತೆ ಬಗ್ಗೆ ಕೆಲವು ವಿಚಾರಗಳನ್ನು ಹೇಳುತ್ತೇನೆ. ನಮ್ಮ ರಾಜ್ಯದ ಯುವಕರ ಅಭಿವೃದ್ಧಿಗಾಗಿ ಯುವ ಜನ ಖಾತೆಗೆ ಇಟ್ಟಿರುವ ಹಣ ಒಟ್ಟು ೫ ಕೋಟಿ ೬೧ ಲಕ್ಷ ರೂಪಾಯಿಗಳು. ಇದರಲ್ಲಿ ನಮ್ಮ ರಾಜ್ಯದ ಯುವಕರ ಸಂಖ್ಯೆ ೨೧ ಲಕ್ಷ ಎಂದು ಇಟ್ಟುಕೊಂಡರೆ, ಒಂದು ವರ್ಷಕ್ಕೆ ಒಬ್ಬ ಯುವಕನಿಗೆ ಸರ್ಕಾರದವರು ಪರ್ ಹೆಡ್ ೪ ರೂಪಾಯಿ ೫೦ ಪೈಸೆ ಖರ್ಚು ಮಾಡಿದ ಹಾಗಾಯಿತು. ಯೂತ್ ಸರ್ವೀಸ್ ಡಿಪಾರ್ಟ್‌ಮೆಂಟಿಗೆ ಇಷ್ಟು ಕಡಿಮೆ ಪ್ರಮಾಣದಲ್ಲಿ ಹಣವನ್ನು ಇಟ್ಟರೆ ಯಾವ ರೀತಿ ಯುವಕರ ಅಭಿವೃದ್ಧಿಯನ್ನು ಮಾಡುವುದಕ್ಕೆ ಸಾಧ್ಯವಾಗಬಹುದು ? ಯುವ ಜನ ಇಲಾಖೆಯಲ್ಲಿ ಯಾವ ರೀತಿ ಕೆಲಸ ಮಾಡುತ್ತಿದ್ದಾರೆಂದರೆ. ಹ್ಯೂಮನ್ ರಿಸೋರ್ಸ್‌ನ್ನು ಯಾವರೀತಿ ಡೆವಲಪ್ ಮಾಡಬೇಕು ಎನ್ನುವುದೇ ಗೊತ್ತಿಲ್ಲ. ತಾವು

ಈ ಖಾತೆ ನೋಡಿಕೊಳ್ಳುತ್ತಿದ್ದೀರಿ. ಯುವ ಜನ ಸೇವಾ ಖಾತೆಯಲ್ಲಿ ಒಬ್ಬರು ನ್ಯಾಷನಲ್ ಅವಾರ್ಡ್ ವಿನ್ನರ್ ಅಶ್ವಿನಿ ನಾಚಪ್ಪ ಎನ್ನುವವರಿಗೆ ಬಿ.ಡಿ.ಎ ದಿಂದ ಉಚಿತವಾಗಿ ಒಂದು ಸೈಟ್ ಕೊಡುತ್ತೇವೆಂದು ಅದೂ ಇನ್‌ಸೆಂಟೀವ್ ತರಹ, ಸೈಟ್ ಕೊಡುತ್ತೇವೆಂದು ಹೇಳಿದರು. ಅವರಿಗೆ ಇನ್‌ಸೆಂಟೀವ್ ತರಹ ಸೈಟ್ ಕೊಡಲಿಲ್ಲ. ಫುಲ್ ಕಾಸ್ಟ್‌ನಲ್ಲಿ ಸೈಟ್ ಕೊಟ್ಟರು. ಅದೂ ತುಂಬಾ ಸ್ಟ್ರಗಲ್ ಮಾಡಿದ ಮೇಲೆ. ನ್ಯಾಷನಲ್ ಅವಾರ್ಡ್ ಇಂಟರ್ ನ್ಯಾಷನಲ್ ಅವಾರ್ಡ್ ಪಡೆದಂತಹ ಸ್ಪೋರ್ಟ್ಸ್ ಮೆನ್‌ಗಳಿಗೆ ಇನ್‌ಸೆಂಟೀವ್ ಸ್ಕೀಮ್‌ನಲ್ಲಿ ಕೊಡಬೇಕೆಂದು ಹೇಳಿ ಸುಮಾರು ೨೫ ಅಪ್ಲಿಕೇಶನ್‌ಗಳನ್ನು ಡೈರಕ್ಟರ್ ಆಫ್ ಸ್ಪೋರ್ಟ್ಸ್ ಫಾರ್‌ವಾರ್ಡ್ ಮಾಡಿದರೆ ಒಬ್ಬ ಸ್ಪೋರ್ಟ್ಸ್‌ಮೆನ್‌ಗೂ ಸೈಟ್ ಸಿಕ್ಕಿಲ್ಲ. ಈ ರೀತಿಯ ಅಟ್ರಾಕ್ಷನ್‌ನ್ನು ನಮ್ಮ ರಾಜ್ಯದಲ್ಲಿ ಇಟ್ಟಿದ್ದಾರೆ. ಅದೇ ಕೇರಳದಲ್ಲಿ, ಮದ್ರಾಸ್‌ನಲ್ಲಿ, ಮಹಾರಾಷ್ಟ್ರದಲ್ಲಿ ಒಂದು ಲಕ್ಷ ರೂಪಾಯಿಗಳ ಗೋಲ್ಡ್ ಮೆಡಲ್ಸ್‌ನ್ನು ನ್ಯಾಷನಲ್ ಅವಾರ್ಡ್ ಮತ್ತು ಇಂಟರ್ ನ್ಯಾಷನಲ್ ಅವಾರ್ಡ್ ಪಡೆದಂತಹವರಿಗೆ ಇನ್‌ಸೆಂಟೀವ್ಸ್ ಆಗಿ ಇಟ್ಟಿದ್ದಾರೆ. ಅಂತಹ ಇನ್‌ಸೆಂಟೀವ್ಸ್ ನಮ್ಮ ರಾಜ್ಯದಲ್ಲಿ ಏತಕ್ಕೆ ಇಟ್ಟಿಲ್ಲ. ದಯಮಾಡಿ ನಮ್ಮ ಮಾನ್ಯ ಸಚಿವರು ಈ ಕಡೆ ಸ್ವಲ್ಪ ಗಮನ ಹರಿಸಬೇಕೆಂದು ನಾನು ಹೇಳುತ್ತೇನೆ. ಸ್ಪೋರ್ಟ್ಸ್ ಮೇನ್‌ಗಳಿಗೆ ನಾವು ಪ್ರೋತ್ಸಾಹ ಕೊಡದಿದ್ದರೆ, ಅಟ್ರಾಕ್ಟೀವ್ ಮಾಡದಿದ್ದರೆ ಅವರು ಯಾವ ರೀತಿ ಸ್ಪೋರ್ಟ್ಸ್‌ಗಳಲ್ಲಿ ಇನ್‌ವಾಲ್ವ್ ಆಗುತ್ತಾರೆ ? ಆಮೇಲೆ ಈ ಸ್ಪೋರ್ಟ್ಸ್‌ಮೆನ್‌ಗಳಿಗೆ ಎಜುಕೇಶನ್‌ನಲ್ಲಿ ಮೆಡಿಕಲ್ ಮತ್ತು ಇಂಜನೀಯರಿಂಗ್‌ನಲ್ಲಿ ೫೦ ಪರ್ಸೆಂಟ್ ಸೀಟ್ಸ್ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಇಲ್ಲಿ ಒಬ್ಬರು ಇಂಟರ್‌ನ್ಯಾಷನಲ್ ಸ್ವಿಮರ್ಸ್, ಅವರು ಮೆಡಿಕಲ್ ಸೀಟ್‌ಗೆ ಪ್ರಯತ್ನ ಮಾಡಿದರೂ ಸಹ ಅವರಿಗೆ ಮೆಡಿಕಲ್ ಸೀಟ್ ಸಿಗಲಿಲ್ಲ. ಅವರು ಇಂಟರ್ ನ್ಯಾಷನಲ್ ಸ್ವಿಮಿಂಗ್‌ನಲ್ಲಿ ಎಕ್ಸ್‌ಪರ್ಟ್ ಆಗಿ ಅವಾರ್ಡ್ ತೆಗೆದುಕೊಂಡಿದ್ದಾರೆ. ಇದರಿಂದ ಇಂಟರ್ ನ್ಯಾಷನಲ್ ಲೆವೆಲ್‌ನಲ್ಲಿ ನಮ್ಮ ದೇಶದ ಕೀರ್ತಿಯನ್ನು ಎತ್ತರಕ್ಕೆ ತೆಗೆದುಕೊಂಡು ಹೋಗಿದ್ದಾರೆ ಅಂತಹವರಿಗೆ ಮೆಡಿಕಲ್ ಸೀಟ್ ಸಿಗಲಿಲ್ಲ. ಅವರಿಗೆ ಪರ್ಸೆಂಟೇಜ್ ಇಟ್ಟು ಎಗ್ಸಾಮಿನೇಶನ್ ಇಟ್ಟು ಕಾಂಪಿಟೇಟೀವ್ ಎಗ್ಸಾಮಿನೇಶನ್‌ನಲ್ಲಿ ಮೆರಿಟ್ ಬರಬೇಕೆಂದು ಹೇಳುತ್ತಾರೆ. ಇದು ಯಾವ ರೀತಿ ಸಾಧ್ಯ ? ಅವರು ಸ್ಪೋರ್ಟ್ಸ್‌ನ್ನು ಯಾವ ರೀತಿ ಡವಲಪ್‌ಮಾಡಿಕೊಳ್ಳಬೇಕು ? ಈಗ ಇರುವ ರೇಷಿಯೋನು ೬೦ ಪರ್ಸೆಂಟ್‌ನಿಂದ ೪೫ ಪರ್ಸೆಂಟ್ ಮಾಡಿ ಅವರಿಗೆ ಹೆಚ್ಚಿನ ಪ್ರೋತ್ಸಾಹ ಕೊಟ್ಟು ಮೆಡಿಕಲ್ ಅಥವಾ ಇಂಜನೀಯರಿಂಗ್‌ನಲ್ಲಿ ಸ್ಪೋರ್ಟ್ಸ್‌ಮೆನ್‌ಗಳಿಗೆ ಅವಕಾಶ ಮಾಡಿಕೊಟ್ಟರೆ ಅನುಕೂಲವಾಗುತ್ತದೆಯೋ ಹೊರತು ಈಗ ಇರುವಂತೆ ೫೦ ಪರ್ಸೆಂಟ್‌ನಿಂದ ಯಾವ ರೀತಿಯಲ್ಲೂ ಅವರಿಗೆ ಅನುಕೂಲವಾಗುವುದಿಲ್ಲ. ಆಮೇಲೆ ೧೯೯೦-೯೧ನೇ ಸಾಲಿಗೆ ಬಜೆಟ್‌ನಲ್ಲಿ ಬಿಲ್ಡಿಂಗ್ ಕಟ್ಟಲಿಕ್ಕೆ ತಾವು ಎಷ್ಟು ಹಣ ಪ್ರಾವಿಜನ್ ಮಾಡಿದ್ದೀರಿ. ೧೯.೫೦ ಲಕ್ಷ ಹಣ ಸ್ಟೇಟ್ ಸೆಕ್ಟಾರ್‌ನಲ್ಲಿ, ೩೦ ಲಕ್ಷ ಹಣ ಸೆಂಟ್ರಲ್ ಸೆಕ್ಟಾರ್‌ನಲ್ಲಿ ಬಿಲ್ಡಿಂಗ್ ಕಟ್ಟಲಿಕ್ಕೆ. ಈ ಹಣದಲ್ಲಿ ತಾವು ಎಷ್ಟು ಬಿಲ್ಡಿಂಗ್‌ಗಳನ್ನು ಕಟ್ಟುತ್ತೀರಿ ? ಯಾವ ಯಾವ ಸ್ಟೇಡಿಯಂಗಳನ್ನು ಕಟ್ಟುತ್ತೀರಿ? ಮಾನ್ಯ ಅಧ್ಯಕ್ಷರೇ ತಾವು ಸಹ ಬೆಳಿಗ್ಗೆ ವ್ಯಾಯಾಮ ಮಾಡಲು ಹೋಗುತ್ತೀರಿ ಎಂದು ಕೇಳಿದ್ದೇನೆ. ನಮ್ಮ ಹುಡುಗರು ಬೆಳಿಗ್ಗೆ ಸಮಯದಲ್ಲಿ ಓಡುತ್ತಿರುತ್ತಾರೆ. ಆಗ ಬಸ್ಸುಗಳು, ಕಾರುಗಳು, ರೈಲುಗಳು ಹೊಗೆ ಬಿಟ್ಟುಕೊಂಡು ಹೋಗುತ್ತಿರುತ್ತವೆ. ಅದೂ ಬೆಂಗಳೂರಿನಂತಹ ನಗರದಲ್ಲಿ, ಇನ್ನು ಜಿಲ್ಲಾ ಹೆಡ್ ಕ್ವಾಟ್ರಸ್‌ಗಳಲ್ಲಿ ಹೇಳಿ. ಅಲ್ಲಿ ಸರಿಯಾದ ಸ್ಟೇಡಿಯಂಗಳು ಇಲ್ಲ. ಎಷ್ಟೋ ಜಿಲ್ಲೆಗಳಲ್ಲಿ ಸ್ಟೇಡಿಯಂಗಳು ಇಲ್ಲದೆ ಇರುವಂತದ್ದು ನಮ್ಮ ಗಮನಕ್ಕೆ ಬಂದಿದೆ. ಅಲ್ಲಿ ಸ್ಟೇಡಿಯಂಗಳನ್ನು ಕಟ್ಟಬೇಕು, ಅದಕ್ಕೆ ಸರಿಯಾದ ಭೂಮಿ ಬೇಕು. ನಮ್ಮಲ್ಲಿ ಬರುಬರುತಾ ಭೂಮಿ ಸಿಗುವುದಿಲ್ಲ ಇನು ೧೦-೧೫ ವರ್ಷಗಳ ಮೇಲೆ ಭೂಮಿ ಸಿಗುವುದೇ ದೊಡ್ಡ ಕಷ್ಟವಾಗುತ್ತದೆ. ಆದ್ದರಿಂದ ತಾವು ಈಗಲೇ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಭೂಮಿಯನ್ನು ರಿಜರ್ವ್ ಮಾಡಿ ಇಟ್ಟು ನೀವು ಯುವಕರ ಆಕ್ಟಿವಿಟೀಸ್‌ಗೆ ಹೆಚ್ಚು ಆಧ್ಯತೆ ಕೊಡಬೇಕಾಗುತ್ತದೆ. ನೀವು ಭೂಮಿಯನ್ನು ಈಗಲೇ ರಿಜರ್ವ್‌ಮಾಡಿ ಇಡಬೇಕಾಗುತ್ತದೆ. ಅಲ್ಲಿ ಜಿಮ್ನಾಷಿಯಂ, ಇನ್‌ಡೋರ್ ಗೇಮ್ಸ್, ಔಟ್‌ಡೋರ್ ಗೇಮ್ಸ್‌ಗೆ ಅವಕಾಶ ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಆಮೇಲೆ ಇವೊತ್ತು ಯುವಕರಲ್ಲಿ ಒಂದು ತರಹ ಡ್ರಗ್ ಅಡಿಕ್ಟ್ ಪದ್ಧತಿ ಬೆಳೆದು ಬಂದಿದೆ. ಅವರಲ್ಲಿ ಶಿಸ್ತು ಪರಿಪಾಲನೆ ಬಿಟ್ಟು ಹೋಗಿದೆ. ಶಿಸ್ತು ಇಲ್ಲ. ಶಿಸ್ತು ಯಾವ ರೀತಿಯಲ್ಲಿ ಬೆಳೆಸಬೇಕೆನ್ನುವುದರ ಬಗ್ಗೆ ಪ್ರಿನ್ಸಿಪಾಲ್‌ರ ಮಾತು ಕೇಳುವುದಿಲ್ಲ ತಂದೆ ತಾಯಿಗಳ ಮಾತು ಸಹ ಕೇಳುವುದಿಲ್ಲ. ಅವರು ಯಾರು ಹೇಳಿದರೂ ಸಹ ಕೇಳುವುದಿಲ್ಲ. ಅದಕ್ಕೆ ಅವರಲ್ಲಿ ಒಂದು ಶಿಸ್ತಿನ ಜೀವನ ಮೂಡುವುದಕ್ಕೆ ಎಜುಕೇಶನ್ ಕರಿಕುಲಮ್‌ನಲ್ಲಿ ಶಿಸ್ತು ಬಗ್ಗೆ ಒಂದು ಸಬ್ಜೆಕ್ಟ್ ಇಡಬೇಕು. ಎನ್. ಸಿ. ಸಿ. ತರಹ ಎನ್‌ಸಿಸಿ ಒಂದು ಉತ್ತಮ ಕೋರ್ಸ್. ಶಿಸ್ತು ಇಲ್ಲದಿದ್ದರೆ ಜೀವನ ಹಾಳಾಗುತ್ತದೆ. ಯುವಕರಿಗೆ ಬೆಲೆ ಇಲ್ಲ, ಅವರು ಈ ನಮ್ಮ ಸಮಾಜಕ್ಕೆ ಹೊರೆಯಾಗುತ್ತಾರೆ. ಆದ್ದರಿಂದ ಅವರಲ್ಲಿ ಶಿಸ್ತು

ಮಾಡಿಸುವಂತಹ ಕೆಲಸ ಆಗಬೇಕಾಗಿದೆ. ಶಿಸ್ತು ಇಲ್ಲದೆ ಇರುವಂತಹ ವಿದ್ಯೆ ಕೊಟ್ಟರೆ ಅದಕ್ಕೆ ಅರ್ಥ ಇಲ್ಲ. ಅಂತಹ ಒಂದು ಒಳ್ಳೆಯ ಕೆಲಸವನ್ನು ತಾವು ಮಾಡದಿದ್ದರೆ ಶಿಕ್ಷಣ ಕೊಡತಕ್ಕಂಥಾದ್ದು ವ್ಯರ್ಥ. ಆಮೇಲೆ ರ್‍ಯಾಗಿಂಗ್ ಹೊಸ ಹೊಸ ತರಹದ ಸಿನಿಮಾ ಸ್ಟೈಲ್ಸ್ ಫ್ಯಾಷನ್ಸ್, ಇಮಿಟೇಶನ್ಸ್ ಬರುತ್ತಿದೆ. ಇದನ್ನು ತಪ್ಪಿಸಿ ಶಿಸ್ತಿನ ಶಿಕ್ಷಣ ಕೊಡಬೇಕು.

೧೨.೦೦ ಪಿ.ಎಂ

ಈ ಸಿನಿಮಾಗಳನ್ನು ನೋಡಿದಾಗ ಅದು ಇಮಿಟೇಟ್ ಆಗುತ್ತದೆ ಅದೇ ರೀತಿ ನಮ್ಮ ಜೀವನವೂ ಇರುತ್ತದೆಂದು ನಮ್ಮ ಯುವಕರು ಅಂದುಕೊಳ್ಳುತ್ತಾರೆ. ನಮ್ಮ ಯುವಕರ ಮನೋಭಾವವನ್ನು ಒಳ್ಳೆಯ ರೀತಿಯಲ್ಲಿ ತಿರುಗಿಸಬೇಕು ಒಳ್ಳೆಯ ಎಜುಕೇಷನ್‌ನ ಮೂಲಕ ಇದನ್ನು ಮಾಡಬಹುದು ಆದರೆ, ಆ ರೀತಿ ಇವತ್ತಿನ ಪರಿಸ್ಥಿತಿಯಲ್ಲಿ ಆಗುತ್ತಿಲ್ಲ. ಯೂನಿವರ್ಸಿಟಿ ಸೆಂಟರ್‌ಗಳನ್ನು ನೋಡಿದರೆ ಅದು ಗೊತ್ತಾಗುತ್ತದೆ. ಎಂಥ ಪವಿತ್ರ ಜಾಗ ಸ್ವಾಮಿ ಅದು, Middie School, primary School, High School, University Centers of academicians, intellectuals, Professors, People meet there, discuss there. ಆ ರೀತಿ ಇವತ್ತಿನ ದಿವಸ ಯೂನಿವರ್ಸಿಟಿಗಳು ಉಳಿದಿಲ್ಲ. ಯೂನಿವರ್ಸಿಟಿ ಕ್ಯಾಂಪಸ್ ಎಂದರೆ election, selection, strike, Dharana, agitation, ಇಂಥ ರೀತಿಯಲ್ಲಿ ನಮ್ಮ ಎಜುಕೇಷನ್ ಮಟ್ಟ ಆಗುತ್ತಿದೆ. ಯೂನಿವರ್ಸಿಗಳಲ್ಲಿ ಇವತ್ತಿನ ದಿವಸ We have developed an ill-feelings. ಇದನ್ನೆಲ್ಲಾ ನೋಡಿದರೆ, ಹಳ್ಳಿಯಿಂದ ಬಂತಕ್ಕಂಥ ವಿದ್ಯಾರ್ಥಿಗಳಿಗೆ ಶ್ರೀಮಂತರ ಮನೆಯಿಂದ ಬರತಕ್ಕ ವಿದ್ಯಾರ್ಥಿಗಳನ್ನು ಕಂಡರೆ ಹೊಟ್ಟೆ ಕಿಚ್ಚು ಬರುತ್ತದೆ. Not only me, the Students who come from rural back ground, rural area and those who are really farmers sons. ಯಾರು ಬಡತನದಿಂದ ಬರುತ್ತಾರೋ, ದನ ಕಾಯುವವರು ಅಂದರೆ ನಮ್ಮಂಥವರು ಓದುವುದಕ್ಕೆ ನಗರಗಳಿಗೆ ಬಂದರೆ really we feel jealous of urban people ನಮಗೂ ಇಂಥಾ ಆಪರ್ಚುನಟಿ ಕೊಟ್ಟು ನೋಡಬೇಕಾಗಿತ್ತು. ನಮಗೆ ಆ ಆಪರ್ಚುನಟಿ ಕೊಡಲಿಲ್ಲ. who is the merit students ? ಎಜುಕೇಷನ್ ಸಿಸ್ಟಮ್‌ನಲ್ಲಿ ತಾರತಮ್ಯ ಇದೆ. ದನ ಕಾಯುವವರ ಮಕ್ಕಳು ಮೆರಿಟ್‌ನಲ್ಲಿ ಬರುವುದಕ್ಕೆ ಸಾಧ್ಯವಿದೆಯೇ ? ಗ್ರಾಮಾಂತರ ಪ್ರದೇಶಗಳಲ್ಲಿ ಇರುವ ಶಾಲೆಗಳಲ್ಲಿ ಟೀಚರ್ಸ್‌ಗಳು ಇರುವುದಿಲ್ಲ, ಯಾವುದೇ ಸೌಲಭ್ಯ ಇರುವುದಿಲ್ಲ ಅಂಥಾ ಕಡೆ ಓದುವವರು ಮೆರಿಟ್‌ನಲ್ಲಿ ಬರುವುದಕ್ಕೆ ಆಗುತ್ತದೆಯೇ ? Can we really expect the rural students, the ordinary students to come up in the competative examinations ? ಅದಕ್ಕೋಸ್ಕರವೇ ಐ.ಎ.ಎಸ್. ಐ.ಪಿ.ಎಸ್. ಎಲ್ಲಾ ಕೆಲವರ ಗುತ್ತಿಗೆ ಆಗಿಹೋಗಿದೆ. ಐ.ಎ.ಎಸ್. ಐ.ಪಿ.ಎಸ್. ಹುದ್ದೆಗಳೆಲ್ಲಾ ಶ್ರೀಮಂತರ ಪಾಲಿಗೆ ಬರುತ್ತವೆ. ಗ್ರಾಮಾಂತರ ಪ್ರದೇಶಗಳಲ್ಲಿ ಓದತಕ್ಕಂಥವರು ದೊಡ್ಡ ಹುದ್ದೆಗಳಿಗೆ ಕಾಂಪೀಟ್ ಮಾಡುವುದಕ್ಕಾಗುತ್ತಿಲ್ಲ. ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಯಾರ ಮಕ್ಕಳಿಗೆ ಸೀಟುಗಳು ಸಿಗುತ್ತವೆ ಸ್ವಾಮಿ ? ಯಾರ ಹತ್ತಿರ ದುಡ್ಡು ಇದೆಯೋ, ಯಾರು ಲಕ್ಷಾಂತರ ರೂಪಾಯಿಗಳನ್ನು ಕೊಡುತ್ತಾರೋ ಅಂಥವರ ಮಕ್ಕಳು ಮಾತ್ರ ಮೆಡಿಕಲ್ ಮತ್ತು ಇಂಜಿನೀಯರಿಂಗ್ ಕಾಲೇಜುಗಳಲ್ಲಿ ಓದುತ್ತಿದ್ದಾರೆ. ಬಡವರ ಮಕ್ಕಳು ಮೆರಿಟ್ ತೆಗೆದುಕೊಂಡು ಸೀಟುಗಳನ್ನು ತೆಗೆದುಕೊಳ್ಳುವುದಕ್ಕಾಗದೇ ಇರುವುದರಿಂದ ಅವರು ಮೆಡಿಕಲ್ ಮತ್ತು ಇಂಜಿನೀಯರಿಂಗ್ ಕಾಲೇಜುಗಳಲ್ಲಿ ಸೀಟುಗಳನ್ನು ಪಡೆಯುವುದಕ್ಕಾಗುವುದಿಲ್ಲ. ನಿಜವಾಗಿಯೂ ನಾವು ಎಜುಕೇಷನ್ ಸಿಸ್ಟಮ್‌ನಲ್ಲಿ ತಾರತಮ್ಯವನ್ನು ಸೃಷ್ಟಿ ಮಾಡುತ್ತಿದ್ದೇವೆ ನಮ್ಮ ಸಮಾಜದಲ್ಲಿ ಎಲ್ಲರಿಗೂ ಸಮಾನವಾದ ಹಕ್ಕು ಇರಬೇಕೆಂದು ನಾವೆಲ್ಲರೂ ದೊಡ್ಡದಾಗಿ ಫಿಲಾಸಫಿ ಮಾತನಾಡುತ್ತೇವೆ. ಆದರೆ ಕೆಲವರಿಗೆ ಮಾತ್ರ ಅಂದರೆ ಹಣ ಇರುವವರಿಗೆ ಎಲ್ಲಾ ಸೌಲಭ್ಯಗಳನ್ನು ಗುತ್ತಿಗೆಗೆ ಕೊಡುವುದಕ್ಕೆ ಏರ್ಪಾಡು ಮಾಡಿರುತ್ತೇವೆ ಆರ್ಡಿನರಿ ದನ ಕಾಯುವವನ ಬಗ್ಗೆ ಅನುಕೂಲ ಮಾಡಿಕೊಡುವುದಕ್ಕೆ ನಾವು ಏನಾದರೂ ಮಾಡಿದ್ದೇವೆಯೇ ? ಅದಕ್ಕೋಸ್ಕರ ಗ್ರಾಮಾಂತರ ಪ್ರದೇಶಗಳಿಂದ ಬರತಕ್ಕ ಯುವ ಪೀಳಿಗೆಯವರಿಗೆ ಆಕ್ರೋಶ ಬರುತ್ತದೆ. ಪಂಜಾಬ್‌ನಲ್ಲಿ ಬೇರೆ ಕಾರಣಕ್ಕೋಸ್ಕರ ಇವೊತ್ತಿನ ದಿವಸದಲ್ಲಿ ಹೋರಾಟ ನಡೆಯುತ್ತಿರಬಹುದು. ಇನ್ನು ಮುಂದೇ ಇದೇ ತರಹ ಶಿಕ್ಷಣ ನೀತಿಯನ್ನು ಅನುಸರಿಸಿಕೊಂಡು ಬಂದರೆ ಇಡೀ ರಾಜ್ಯದಲ್ಲೇ ಅಲ್ಲ ಇಡೀ ದೇಶದಲ್ಲೇ ಈ ಶಿಕ್ಷಣ ನೀತಿ ಬಗ್ಗೆ ಹೋರಾಟವಾಗಬಹುದು ಈ ಹೋರಾಟಕ್ಕೆ ಜನ ಬರಬೇಕಾದರೆ ಅದಕ್ಕೆ ನಾವೇ ಹೊಣೆಗಾರರಾಗಬೇಕಾಗುತ್ತದೆ. ನಾವು ಮಾಡಿರತಕ್ಕ ವ್ಯವಸ್ಥೆಯೇ ಇವಕ್ಕೆ ಕಾರಣ. ಆಮೇಲೆ ರಿಗಾರ್ಡಿಂಗ್ ಅಪಾಯಿಂಟ್‌ಮೆಂಟ್, ರಿಗಾರ್ಡಿಂಗ್ ಫೆಸಿಲಿಟೀಸ್ ಟು ದಿ ಶೆಡ್ಯೂಲ್ಡ್ ಕ್ಯಾಸ್ಟ್, ಏನು ಏನು ಮಾಡಿದ್ದೀರಿ ಸ್ವಾಮಿ ? ಶೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಶೆಡ್ಯೂಲ್ ಟ್ರೈಬ್‌ಗಳಿಗೆ ೧೮ ಪರ್‌ಸೆಂಟ್ ರಿಸರ್ವೇಷನ್ ಮಾಡಿರುವುದು ಮೂಲಭೂತ ಹಕ್ಕು

ಎಂದು ಮಾಡಿದ್ದಾರೆ. ಈ ೧೮ ಪರ್ಸೆಂಟ್ ಯಾವ ಯಾವುದರಲ್ಲಿ ತುಂಬಲಾಗಿದೆ ? ಮಾನ್ಯ ಸಿದ್ಧಾರವರು ಇದರ ಬಗ್ಗೆ ಆಗಲೇ ಕೇಳಿದ್ದಾರೆ. ಯೂನಿವರ್ಸಿಟಿಗಳಲ್ಲಿ ೧೮ ಪರ್ಸೆಂಟ್‌ನಷ್ಟು ಪೋಸ್ಟ್‌ಗಳನ್ನು ತುಂಬಲಿಕ್ಕೆ ಮತ್ತು ಶೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಶೆಡ್ಯೂಲ್ ಟ್ರೈಬ್‌ನವರುಗಳಿಗೆ ಪ್ರಮೋಷನ್ ಕೊಡಲಿಕ್ಕೆ ಏಕೆ ಕ್ರಮ ತೆಗೆದುಕೊಂಡಿಲ್ಲ. ಕೊಡುವುದಕ್ಕೆ ನಿಮಗೆ ಯಾವ ತೊಂದರೆ ಇದೆ ? ಇದನ್ನು ಮಾಡುವುದಕ್ಕೆ ನಿಮಗೆ ಮನಸ್ಸು ಇಲ್ಲವೋ ಅಥವಾ ಯಾವುದಕ್ಕೆ ಕೊರತೆ ಇದೆ ? ಆಮೇಲೆ ಬಡವರ ಮಕ್ಕಳಿಗೆಂದು ಸರ್ಕಾರದವರು ಬಟ್ಟೆಗಳನ್ನು ಪುಸ್ತಕಗಳನ್ನು ಕೊಡುತ್ತಾರೆ. ಈ ರೀತಿ ಬಟ್ಟೆಗಳನ್ನು ಕೊಡುವುದರಿಂದ ಸರ್ಕಾರದವರೇ ಬಡವರನ್ನು ಸೃಷ್ಟಿ ಮಾಡಿದ ಹಾಗಾಗಿದೆ. ಗೌರ್ನಮೆಂಟ್‌ನವರು ಕೊಡುವ ಬಟ್ಟೆಯನ್ನು ಮಕ್ಕಳುಗಳು ಹಾಕಿಕೊಂಡರೆ ಅವರುಗಳು ವೀಕರ್ ಸೆಕ್ಷನ್‌ನವರು ಎಂದು ನೋಡಿದ ತಕ್ಷಣ ಹೇಳಬಹುದು. ಲೋ ಕ್ವಾಲಿಟಿ ಇರತಕ್ಕಂಥ ಬಟ್ಟೆಗಳನ್ನು ಅವರುಗಳಿಗೆ ಕೊಡುತ್ತಾರೆ. ಇವತ್ತು ನಾವು ಹಗುರವಾಗಿ ಈ ವಿಷಯವನ್ನು ತೆಗೆದುಕೊಳ್ಳುತ್ತಿದ್ದೇವೆ. ಇವತ್ತಲ್ಲ ನಾಳೆ ಈ ಪ್ರಶ್ನೆ ಬಂದೇ ಬರುತ್ತದೆ.

ಈ ರೀತಿಯಲ್ಲಿ ಶ್ರೀಮಂತರ ಪರವಾಗಿ ಮೆಡಿಕಲ್, ಇಂಜಿನಿಯರಿಂಗ್ ಶಿಕ್ಷಣವನ್ನು ಕೊಡುವ ಒಂದು ಪಕ್ಷಪಾತವನ್ನು ಇನ್ನು ಮುಂದೆ ಬೆಳೆದುಕೊಂಡು ಹೋಗಲು ಬಿಟ್ಟಲ್ಲಿ ಶ್ರೀಮಂತರ ಮತ್ತು ಬಡವರ ನಡುವೆ ಅಸಮಾನತೆ ಬೆಳೆಯಲು ಅವಕಾಶ ಮಾಡಿಕೊಟ್ಟ ಹಾಗೆ ಆಗುತ್ತದೆ. ಸರಕಾರದವರಿಂದಲೆ ಎಲ್ಲಾ ಮೆಡಿಕಲ್ ಇಂಜಿನೀಯರಿಂಗ್ ಕಾಲೇಜುಗಳನ್ನು ನಡೆಸುವುದಕ್ಕೆ ಆಗಲಿಕ್ಕಿಲ್ಲ. ಸರಕಾರದ ಮುಖಂಡರು ಎನಿಸಿಕೊಂಡವರು ಕೂಡ ಇವೊತ್ತು ಕ್ಯಾಪಿಟೇಷನ್‌ಫೀ ಈಸ್ ಎ ಮಸ್ಟ್ ಎಂದು ಹೇಳುತ್ತಾರೆ. ಹೀಗಿದ್ದಲ್ಲಿ ಬಡವರ ಮಕ್ಕಳು, ದಲಿತರ ಮಕ್ಕಳು, ರೈತರ ಮಕ್ಕಳು ಇಂಜಿನೀಯರಿಂಗ್, ಮೆಡಿಕಲ್ ವಿದ್ಯಾಭ್ಯಾಸವನ್ನು ಪಡೆಯುವುದಕ್ಕೆ ಸಾಧ್ಯವೆ ? ಒಂದು ವೇಳೆ ಈ ಬಡವರ್ಗಕ್ಕೆ ಅದನ್ನು ಒದಗಿಸಲು ಸಾಧ್ಯವಿಲ್ಲ ಎಂದಲ್ಲಿ ಇವೊತ್ತಲ್ಲ ನಾಳೆ ಅವುಗಳನ್ನು ವೈಂಡ್‌ಅಪ್ ಮಾಡಬೇಕಾಗುತ್ತದೆ, ರಾಷ್ಟ್ರೀಕರಣ ಮಾಡಲೇ ಬೇಕಾಗುತ್ತದೆ. ಆದುದರಿಂದ ಈ ನನ್ನ ವಿಚಾರಧಾರೆಯನ್ನು ತಮ್ಮ ಮುಂದಿಟ್ಟಿದ್ದೇನೆ.

ಇನ್ನು ಎಸ್‌ಸಿ/ಎಸ್‌ಟಿ ಮ್ಯಾನೇಜ್‌ಮೆಂಟ್ ಸ್ಕೂಲ್‌ಗಳ ಬಗ್ಗೆ ಒಂದೆರಡು ಮಾತುಗಳನ್ನು ತಮ್ಮ ಮುಂದಿಡಬಯಸುತ್ತೇನೆ. ನಾನು ಈ ವಿಚಾರದಲ್ಲಿ ಸಚಿವರ ಜೊತೆಯಲ್ಲಿ ಕೂಡ ಮಾತನಾಡಿದ್ದೇನೆ. ಗ್ರಾಂಟ್ ಕೊಡತಕ್ಕಂಥ ಸ್ಕೂಲ್‌ಗಳಿಗೆ ಇಕಾನಮಿ ಮೆಜರ್ ಏನು ಮಾಡಿದ್ದೀರಿ ಅಲ್ಲಿಂದ ಗ್ರ್ಯಾಂಟ್ ನಿಂತು ಹೋಗಿದೆ. ಇಂಥ ಪರಿಸ್ಥಿತಿಯಲ್ಲಿ ಅಂಥ ಶಾಲೆಗಳವರು ಅವರ ಸಿಬ್ಬಂದಿವೆಚ್ಚ ಮತ್ತಿತರ ವೆಚ್ಚಗಳನ್ನು ಭರಿಸಿಕೊಳ್ಳುವಷ್ಟು ಸಂಪದ್ಭರಿತವಾಗಿವೆಯೋ ? ಆ ದೃಷ್ಟಿಯಿಂದ ವಿಚಾರ ಮಾಡುವುದಾದಲ್ಲಿ ಯಾವ ಮ್ಯಾನೇಜ್‌ಮೆಂಟಿನವರು ಕೂಡ ಅಷ್ಟು ಸಂಪದ್ಭರಿತರಾಗಿ ಇಲ್ಲ ಎಂದು ಹೇಳಬೇಕಾಗುತ್ತದೆ. ಅಂಥ ಶಕ್ತಿವಂತ ವ್ಯವಸ್ಥಾಪಕ ವರ್ಗ ಇದ್ದಲ್ಲಿ ಒಂದೆರಡು ಇರಬಹುದು, ಅದು ಸಂತೋಷಕರವಾದ ವಿಚಾರವೇ ಸರಿ. ಇಂಥ ಒಂದು ಆರ್ಥಿಕ ದಿಗ್ಬಂಧನದ ನೀತಿಯನ್ನು ಎಸ್‌ಸಿ/ಎಸ್‌ಟಿ ಮ್ಯಾನೇಜ್‌ಮೆಂಟ್‌ನ ಶಾಲೆಗಳವರಿಗೆ ಏತಕ್ಕಾಗಿ ಅನ್ವಯ ಮಾಡಿದ್ದೀರಿ ? Grant-in-aid ವಿಚಾರದಲ್ಲಿ ಮಾನ್ಯ ಸಿಂಧ್ಯರವರು ಹೇಳಿದ್ದರು. ಏಕೆ ಸ್ವಾಮಿ ತಾವುಗಳು ಈ ಗ್ರ್ಯಾಂಟ್ ಕೊಟ್ಟಿಲ್ಲ ? ಎಸ್‌ಸಿ ಎಸ್‌ಟಿ ಮೆನೇಜ್‌ಮೆಂಟ್ ಸ್ಕೂಲ್‌ಗಳ ಬಗ್ಗೆ ನಿಮ್ಮ ನೀತಿ ಇದೆಯೆ ? ಏತಕ್ಕಾಗಿ ಜೂನಿಯರ್ ಕಾಲೇಜ್‌ಗಳನ್ನು ಸ್ಯಾಂಕ್ಷನ್ ಮಾಡಿದ್ದೀರಿ ? ಪರ್ಮನೆಂಟ್‌ಗ್ರ್ಯಾಂಟ್‌ಲೆಸ್ ಕಾಲೇಜಸ್ ಇವರಿಗೆ ಎಂದು ಮಂಜೂರಾತಿ ಕೊಟ್ಟಿದ್ದೀರಾ ? ಹಾಗೆ ಪರ್ಮನೆಂಟ್ ಗ್ರ್ಯಾಂಟ್‌ಲೆಸ್ ಆಗಿ ಅವರು ನಡೆಸುವುದಕ್ಕೆ ಸಾಧ್ಯ ಇದೆಯೆ ? ಸಿಂಧ್ಯರವರು [illegible] ಸರಕಾರ [illegible] ಪರ್ಮನೆಂಟ್‌ಗ್ರ್ಯಾಂಟ್‌ಲೆಸ್ ಜೂನಿಯರ್ ಕಾಲೇಜುಗಳನ್ನು ಸ್ಯಾಂಕ್ಷನ್ ಮಾಡಿದೆ [illegible] ಕೇಳಿದ್ದಾರೆ. ಅಂಥ [illegible] ಶಕ್ತಿವಂತರು ಇದ್ದರೆ ಅವರು ನಡೆಸಿಕೊಂಡು ಹೋಗಲಿ. ನಿಜವಾಗಿ [illegible] ವಿದ್ಯೆಯನ್ನು ಪುಕ್ಕಟೆಯಾಗಿ ಕೊಡುವಂಥವರಿಗೆ ನಾನು ಶರಣು ಎನ್ನುತ್ತೇನೆ. ಆದರೆ ಎಸ್‌ಸಿ ಮೆನೇಜ್‌ಮೆಂಟಿನವರಿಗೆ ಗ್ರಾಂಟ್‌ಲೆಸ್ ಆಗಿ ನಡೆಸುವುದಕ್ಕೆ ಆಗುವುದಿಲ್ಲ. ಅವರಿಗೆ ಹೇಗೆ ನಡೆಸುವುದಕ್ಕೆ ಸಾಧ್ಯವಾಗುತ್ತೆ ? ಅವರಲ್ಲಿ ಬಿಲ್ಡಿಂಗ್ ಇದೆಯೇ ? ಫಂಡ್ ಇದೆಯೋ? ಅಥವಾ ಅವರಲ್ಲಿ ದುಡಿಯುವ ಸಿಬ್ಬಂದಿ ವರ್ಗ ಇದೆಯೋ ? ಇವನ್ನೆಲ್ಲಾ ನೋಡಿದಾಗ [illegible] ಅವರಿಗೆ [illegible] ಸಾಧ್ಯವಾಗಲಾರದ ಮಾತು. ನಿಮ್ಮ ಗ್ರ್ಯಾಂಟ್ ಮೇಲೆಯೇ ಅವರು ಕೆಲಸ ಮಾಡಬೇಕು. ಇದನ್ನು ಮಾನ್ಯ ಸಚಿವರು ಗಂಭೀರವಾಗಿ ಪರಿಶೀಲನೆ ಮಾಡಬೇಕು. [illegible] ಯಾರ್ಯಾರು ಎಸ್‌ಸಿ ಮ್ಯಾನೇಜ್‌ಮೆಂಟಿನವರು ಇದ್ದಾರೆ ಅವರಿಗೆ ಗ್ರಾಂಟ್ ಕೊಡತಕ್ಕಂಥ ವ್ಯವಸ್ಥೆಯನ್ನು ಕೂಡಲೇ ಮಾಡಬೇಕು. ಆಮೇಲೆ ಅಲ್ಲಿನ ಸಿಬ್ಬಂದಿಗಳಿಗೆ ಕೂಡ ಪ್ರಾರಂಭದ ದಿನಗಳಿಂದಲೇ ಸಂಬಳ ಮಂಜೂರಾತಿ ಮಾಡಬೇಕು. ಹೀಗೆ ಅವರಿಗೆ ಪ್ರಾರಂಭದಿಂದ ಸಂಬಳ ಕೊಡದಿದ್ದರೆ ಅವರು ಪಾಠವನ್ನು ಮಾಡುವುದಾದರೂ ಹೇಗೆ ? ಅವರಿಗೆ ಟೀಚಿಂಗ್ ಎಫಿಶಿಯನ್ಸಿ ಬರುವುದಾದರೂ

ಹೇಗೆ ? ಅವರಿಗೆ ಬೇರೆ ಇಲಾಖೆಗಳಲ್ಲಿ ಸಿಕ್ಕ ಹಾಗೆ ಲಂಚ ಸಿಗುತ್ತದೆಯೇ ? ಇಲ್ಲ ವಿದ್ಯಾ ಇಲಾಖೆಯಲ್ಲಿ ಕಚೇರಿಗಳಲ್ಲಿ ಇರಬಹುದು. ಆದರೆ ಮೇಸ್ಟ್ರುಗಳಿಗೆ ಲಂಚವನ್ನು ಯಾರು ಕೊಡುತ್ತಾರೆ ? ಅಷ್ಟೇ ಅಲ್ಲ ಉಪಾಧ್ಯಾಯರ ಹುದ್ದೆಯು ಗೌರವಾನ್ವಿತ ಹುದ್ದೆಯಾಗಿದೆ. ಅವರಿಗೆ ಎರಡರಷ್ಟು ಸಂಬಳವನ್ನು ಕೊಟ್ಟರೂ ಅದರಲ್ಲಿ ತಪ್ಪಿಲ್ಲ. ಅವರಿಗೆ ಇನ್‌ಸೆಂಟಿವ್ಸ್ ಕೂಡ ಕೊಡಬೇಕು. ಅವರುಗಳು ಇವೊತ್ತು ಹಳ್ಳಿಗಳಲ್ಲಿದ್ದು ತಮ್ಮ ಮನೆ–ಮಾರು, ಹೆಂಡತಿ ಮಕ್ಕಳನ್ನು ದೂರದಲ್ಲಿ ಎಲ್ಲೋ ಬಿಟ್ಟು ಕೆಲಸ ಮಾಡ ತಕ್ಕಂಥ ಪರಿಸ್ಥಿತಿ ಇದೆ. ಇಂಥ ಒಂದು ಸ್ಥಿತಿಯಲ್ಲಿಯೂ ಕೆಲಸ ಮಾಡುವಂಥ ಒಂದು ಮನೋಭೂಮಿಕೆ ಅವರಲ್ಲಿ ಇರಬೇಕಾಗುತ್ತದೆ. ಆದರೆ ಅವರಿಗೆ ಇರುವ ಹಲವಾರು ಸಮಸ್ಯೆಗಳಿಂದಾಗಿ ಅವರಿಗೆ ಕಷ್ಟವಾಗಿದೆ ಆರ್‌ಟಿಓ ಕಚೇರಿಯಲ್ಲಿ ಒಬ್ಬ ಗುಮಾಸ್ತನಾದವನು, ಒಬ್ಬ ಇನ್ಸ್‌ಪೆಕ್ಟರ್ ಆದವನು ಎಷ್ಟು ಗಳಿಕೆಯನ್ನು ಮಾಡಿಕೊಂಡಿದ್ದಾನೆ ಎಂದು ಎಲ್ಲರೂ ತಿಳಿದುಕೊಂಡಿದ್ದಾರೆ. ಆದರೆ ಟೀಚಿಂಗ್‌ನವರಿಗೆ ಏನು ಲಂಚ ? ಎಲ್ಲಿಂದ ಬರಬೇಕು ? ಅಷ್ಟೇ ಅಲ್ಲ ಬೇಡವಾದ ಕಡೆಗಳಲ್ಲಿಯೂ ಜೀಪ್ ಇತ್ಯಾದಿ ಸೌಲಭ್ಯಗಳನ್ನು ಕೊಟ್ಟಿದ್ದಾರೆ. ಆದರೆ ವಿದ್ಯಾ ಇಲಾಖೆಯಲ್ಲಿ ಎಇಓ ಗೆ ಕೂಡ ಒಂದು ಜೀಪ್ ಇಲ್ಲ. ಅವನು ತಾಲ್ಲೂಕಿನಲ್ಲಿ ಎಷ್ಟು ಶಾಲೆಗಳು ಇವೆ ಎಂದು ಕೇಳಿದರೆ ಗೊತ್ತಿಲ್ಲ ಸ್ವಾಮಿ ಎನ್ನುತ್ತಾನೆ. ಕಾರಣ ಅವನಿಗೆ ಎಲ್ಲಾ ಕಡೆ ಗಳಲ್ಲಿ ಹೋಗುವಷ್ಟು ಸಮಯ ಮತ್ತು ವ್ಯವಸ್ಥೆ ಇಲ್ಲವಾಗಿದೆ. ಆದುದರಿಂದ ಅವರಿಗೆ ಕೂಡ ಜೀಪ್ ಒದಗಿಸುವ ವ್ಯವಸ್ಥೆಯನ್ನು ಮಾಡಬೇಕು. ಇನ್ನು ಹೆಚ್ಚಿಗೆ ಅಧ್ಯಾಪಕರ ಬಗ್ಗೆ ಹೇಳುವುದಕ್ಕೆ ಹೋಗದೆ ಅವರಿಗೆ ಸೂಕ್ತ ಸೌಲಭ್ಯಗಳನ್ನು ಒದಗಿಸಿಕೊಟ್ಟು ಅವರಿಂದ ಒಳ್ಳೆಯ ಕರ್ತವ್ಯನಿರ್ವಹಣೆಯನ್ನು ಮಾಡಿಸಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಗುರುಗಳು ನಮ್ಮ ಸಮಾಜಕ್ಕೆ ವಿದ್ಯೆಯನ್ನು ಕೊಡ ತಕ್ಕಂಥವರು ಅವರಿಗೆ ಸ್ವಲ್ಪ ಜಾಸ್ತಿ ಸೌಲಭ್ಯಗಳನ್ನು ನಾವು ಕೊಡಬೇಕಾಗುತ್ತದೆ. ಇದನ್ನು ಬಿಟ್ಟು ಎಲ್ಲಾ ವಿಚಾರದಲ್ಲಿಯೂ ಮೇಷ್ಟ್ರುಗಳನ್ನು ನಿಂದೆ ಮಾಡಿದರೆ ಸರಿಯಲ್ಲ. ಎಲ್ಲಾ ವೈಫಲ್ಯಗಳಿಗೆ ಅವರನ್ನೆ ಗುರಿ ಮಾಡುವುದು ಸರಿಯಲ್ಲ. ಒಬ್ಬ ಐ ಎ ಎಸ್ ಅಧಿಕಾರಿಗೆ ಏನೇನು ಸೌಲಭ್ಯಗಳನ್ನು ನಾವು ಕೊಡುತ್ತಿದ್ದೇವೆ ಮತ್ತು ಉಪಾಧ್ಯಾಯರುಗಳಿಗೆ ಏನೇನು ಸೌಲಭ್ಯಗಳನ್ನು ಕೊಡುತ್ತಿದ್ದೇವೆ ಎಂಬು ದನ್ನು ತುಲನೆ ಮಾಡಿ ನೋಡಬೇಕು. ಅಂತೆಯೇ ಚಿಕ್ಕಮಕ್ಕಳನ್ನು ಸತ್ಪ್ರಜೆಗಳನ್ನಾಗಿ ಮಾಡುವ ಉಪಾಧ್ಯಾಯರುಗಳಿಗೂ, ವೈಭವಯುಕ್ತವಾಗಿ ಅಧಿಕಾರ ಮಾಡುವ ಐ.ಎ.ಎಸ್. ಅಧಿಕಾರಿಗಳ ಜವಾಬ್ದಾರಿಯ ಹೊಣೆಯನ್ನು ನೋಡಿದರೆ ಉಪಾಧ್ಯಾಯರ ಹೊಣೆಯೇ ಹೆಚ್ಚು ಹೀಗಾಗಿ ಅವರಿಗೆ ಸೂಕ್ತ ಸೌಲಭ್ಯವನ್ನು ಕೊಡಬೇಕು.

ರೋಸ್ಟರ್ ಸಿಸ್ಟಮನ್ನು ಜಾರಿಗೆ ತಂದಿದ್ದೀರಿ. ಸಿಂಡಿಕೇಟ್ ಮತ್ತು ಸೆನೆಟ್‌ಗಳಿಗೆ ನೀವು ಮೆಂಬರ್ಸ್‌ನ್ನು ನೇಮಕ ಮಾಡಿಕೊಂಡು ಬರುತ್ತೀರಿ. ಆವಾಗ ಸಾಮಾನ್ಯವಾಗಿರತಕ್ಕಂಥ ಒಬ್ಬ ಅಧ್ಯಾಪಕರನ್ನು ದಯಮಾಡಿ ನೇಮಕ ಮಾಡಬೇಡಿ. ಅಂಥ ಸಂದರ್ಭದಲ್ಲಿ ವರ್‌ಸಟೈಲ್ ಜೀನಿಯಸ್ ಪರ್ಸನಾಲಿಟಿ ಇರುವಂಥವರನ್ನು ಆಯ್ಕೆ ಮಾಡಿ. ಅಸಾಮಾನ್ಯರಾಗಿರತಕ್ಕಂಥವರನ್ನು ಹುಡುಕಿ. ನಿವೃತ್ತರಾದ ಅಧಿಕಾರಿಗಳು ಹೆಸರುಗಳಿಸಿದವರು ಇರುತ್ತಾರೆ, ಅಕಾಡಮೀಶಿಯನ್ಸ್ ಇರುತ್ತಾರೆ. ಪ್ರೊಫೆಸರ್ಸ್ ಇರುತ್ತಾರೆ, ಅಂಥವರನ್ನು ಗುರುತಿಸಿ, ಶೋಧಿಸಿ ನೇಮಕ ಮಾಡಿದಲ್ಲಿ ಅದರ ಪರಿಣಾಮವು ಯೂನಿವರ್ಸಿಟಿಯ ಒಂದು ಧ್ಯೇಯ:ಧೋರಣೆಗಳ ಮೇಲೆ ಪ್ರತಿಫಲಿಸುತ್ತದೆ. ಆದರೆ ಇಂಥ ವಿಚಾರಗಳ ಬಗ್ಗೆ ನಿರ್ಣಯ ತೆಗೆದುಕೊಳ್ಳುವುದು ಹೇಗೆ ಎಂಬ ಪ್ರಶ್ನೆ ನಮ್ಮ ಮುಂದೆ ಬರುತ್ತದೆ. ಆದುದರಿಂದ ಯಾರ್ಯಾರು ಗಣ್ಯವ್ಯಕ್ತಿಗಳು ಹೆಸರುಗಳಿಸಿದವರು ಇದ್ದಾರೋ, ವಿದ್ವಾಂಸರು ಇದ್ದಾರೋ ಅವರನ್ನು ನೇಮಕಾತಿ ಮಾಡಬೇಕು. ಹಿಂದೆ ಪುರಾತನ ಕಾಲದಲ್ಲಿನ ಸೆನೆಟ್, ಸಿಂಡಿಕೇಟ್ ಮೆಂಬರ್ಸ್ ಗಳನ್ನು ನೋಡಿದರೆ ಅರ್ಥವಾಗುತ್ತದೆ. ಯಾವ ಸ್ಥಾನಕ್ಕೆ ಯಾರ ನೇಮಕಾತಿ ಮಾಡಬೇಕೆಂದು ಕಲ್ಪನೆ ಬರುತ್ತದೆ. ಆದರೆ ಈಗ ಅಲ್ಲಿ ಕೇವಲ ರಾಜಕೀಯ ನಡೆಯುತ್ತಿದೆ ಎಂದು ಹೇಳಬೇಕಾಗಿದೆ. ಹೀಗಾಗಿ ನಮ್ಮ ವಿಶ್ವವಿದ್ಯಾನಿಲಯಗಳ ಸ್ಟ್ಯಾಂಡರ್ಡ್ ಎಲ್ಲಿಬಂದು ಮುಟ್ಟಿದೆ ಎನ್ನುವುದೂ ಕೂಡ ಗಮನ ಕೊಡಬೇಕಾದ ಅಂಶ

ನಮ್ಮಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯ, ಮೈಸೂರು ವಿಶ್ವವಿದ್ಯಾನಿಲಯ, ಮಂಗಳೂರು ಮತ್ತು ಗುಲ್ಬರ್ಗ ಹಾಗೂ ಕುವೆಂಪು ವಿಶ್ವವಿದ್ಯಾನಿಲಯಗಳು ಇವೆ. ಅಲ್ಲಿಯೂ ಕೂಡ ಕೆಲವು ಕಡೆಗಳಲ್ಲಿ ಜಾತೀಯತೆಗೆ ಪ್ರಾಧಾನ್ಯತೆ ಇದೆ. ಅಲ್ಲಿ ಅವರದ್ದೇ ಆದ ರೀತಿಯಲ್ಲಿ ದಬ್ಬಾಳಿಕೆ ನಡೆಯುತ್ತದೆ. ಕೆಲವರಿಗೆ ಅದೊಂದು ಗುತ್ತಿಗೆಯಾಗಿ ಹೋಗಿದೆ. ಅದನ್ನು ತಪ್ಪಿಸಿ ಎಲ್ಲಾ ಜಾತಿ ಜನಾಂಗದವರು ಅಲ್ಲಿ ಇರುವಂಥ ಒಂದು ವ್ಯವಸ್ಥೆಯಾಗಬೇಕು. ಬಲಿಷ್ಠರು ಮಾತ್ರ ಇದ್ದು, ದುರ್ಬಲರಿಗೆ ಮುಂದೆ ಹೋಗುವ ಅವಕಾಶವನ್ನು ತಡೆಹಾಕುವಂತಾಗಬಾರದು. ಈ ಪರಿಸ್ಥಿತಿಯು ಮುಂದುವರಿದರೆ ಕಷ್ಟವಾಗುತ್ತದೆ. ಎಲ್ಲರಿಗೂ ಅವರ ಯೋಗ್ಯತಾನುಸಾರ ಪ್ರೋತ್ಸಾಹ ಇರಬೇಕು. ಹೀಗಾಗಿರುವುದರಿಂದ ಅಲ್ಲಿಯ ಮುಂದುವರಿದ ಕೆಲವು ಪ್ರೊಫೆಸರ್ಸ್ ಮತ್ತಿತರರು ಎಸ್‌ಸಿ ಎಸ್‌ಟಿ

ವಿದ್ಯಾರ್ಥಿಗಳಿಗೆ ೩೫ ಅಂಕಗಳನ್ನು ಕೊಟ್ಟರೂ ಅವರಿಗೆ ಕೆಲಸ ಸಿಗುತ್ತದೆ ಎಂಬ ಒಂದು ಮನೋಭಾವನೆಯನ್ನು ತಾಳಿ ಈ ನಮ್ಮ ಮಕ್ಕಳ ಭವಿಷ್ಯವನ್ನು ಹಾಳು ಮಾಡುತ್ತಿದ್ದೇವೆ ಎಂದು ಅನ್ನಿಸುತ್ತಿದೆ. ಈ ಪ್ರವೃತ್ತಿ ಅವರಲ್ಲಿ ಬರಬಾರದಂತೆ ನೋಡಬೇಕು. ಹೀಗೆ ಮಾಡಿದರೆ ನಮ್ಮ ಸಮಾಜ ಅಭಿವೃದ್ಧಿಯತ್ತ ಸಾಗುವುದು ಕಷ್ಟವಾಗಬಹುದು. ಉಪಾಧ್ಯಾಯರ ವರ್ಗದಲ್ಲಿ ಜಾತೀಯತೆಯ ಸೋಂಕು ಮತ್ತು ಅದರ ಆಚರಣೆ ಇರಬಾರದು. ಆದುದರಿಂದ ಅಂಥವರು ಯಾವುದೇ ವಿಶ್ವವಿದ್ಯಾನಿಲಯಗಳಲ್ಲಿ ಇದ್ದರೆ ಅಂಥವರನ್ನು ಪತ್ತೆ ಹಚ್ಚಿ ಆಯಾಯ ವಿಭಾಗದ ಅಧಿಕಾರಿಗಳ ಮೂಲಕ ಪರಿಶೀಲಿಸಿ, ಅಂಥವರು ಇದ್ದರೆ ಅವರನ್ನು ಯಾವ ದಾಕ್ಷಿಣ್ಯಕ್ಕೂ ಒಳಗಾಗದೇ ಬೇರೆ ಸ್ಥಳಗಳಿಗೆ ವರ್ಗಾಯಿಸುವ ಕೆಲಸವನ್ನು ಮಾಡಬೇಕು. ವಿಶ್ವವಿದ್ಯಾನಿಲಯಗಳಲ್ಲಿಯೂ ಕೂಡ ಬಹಳಷ್ಟು ತಾರತಮ್ಯ ಮನೋವೃತ್ತಿ ಬೆಳೆದು ಬಂದಿದೆ ಎಂದು ತಿಳಿದು ಬರುತ್ತದೆ. ಯಾರಲ್ಲಿ ನಿಜವಾಗಿಯೂ ಒಂದು ಎಫಿಶಿಯನ್ಸಿ ಇದೆ ಅಂಥವರನ್ನು ಸೂಕ್ತ ರೀತಿಯಲ್ಲಿ ಪ್ರೋತ್ಸಾಹಿಸಬೇಕು. ಇಂಥ ಕೆಲವು ವಿಚಾರಗಳ ವಿಚಾರದಲ್ಲಿ ತಾವುಗಳು ದಿಟ್ಟ ಹೆಜ್ಜೆ ಇಟ್ಟು ಸರಿಪಡಿಸುತ್ತೀರಿ ಎಂಬ ಮನೋವಿಶ್ವಾಸವು ನನಗಿದೆ.

ಇನ್ನು ಯುವಜನರಿಗೆ ಸೂಕ್ತ ಪ್ರಾಧಾನ್ಯತೆ, ಪ್ರೋತ್ಸಾಹಗಳನ್ನು ಕೊಡದಿದ್ದರೆ ನಿರಾಶರಾದ ಆ ವರ್ಗ ಮಾದಕದ್ರವ್ಯಗಳ ಸೇವನೆಗೆ ಮೊರೆಹೋಗಿಯಾರು. ದುಶ್ಚಟಗಳಿಗೆ ಬಲಿಯಾದಾರು. ಆದುದರಿಂದ ಅವರಿಗೆ ಸೂಕ್ತ ಪ್ರೋತ್ಸಾಹಗಳನ್ನು ಕೊಡುವುದರಲ್ಲಿ ಹಿಂದೆ ಉಳಿಯಬಾರದು. ಏಕೆಂದರೆ ಸಿನೇಮಗಳನ್ನು ನೋಡಿಕೊಂಡು ನಿಜಜೀವನದಲ್ಲಿ ಅದರ ಭ್ರಾಂತಿಯನ್ನು ಈ ವರ್ಗ ಕಂಡುಕೊಳ್ಳುವ ಪರಿಸ್ಥಿತಿಯಲ್ಲಿ ಅವರಿಗೆ ನಿರಾಶಾದಾಯಕ ವಾತಾವರಣವನ್ನು ಕಲ್ಪಿಸಿ ಕೊಡುವಂತಾಗಬಾರದು. ಇಂಥ ವಿಚಾರಗಳನ್ನು ಕೇವಲ ಭಾಷಣ ಮಾಡುವುದರಿಂದ ಬರುವುದಿಲ್ಲ. ಸೂಕ್ತಕ್ರಮಗಳನ್ನು ಈ ದಿಸೆಯಲ್ಲಿ ಹಾಕಿಕೊಳ್ಳಬೇಕು. ಅವರನ್ನು ಒಳ್ಳೆಯ ಕಾರ್ಯಗಳತ್ತ ಆಕರ್ಷಿಸಬೇಕು. ಅವರಿಗೆ ಸೂಕ್ತ ಜವಾಬ್ದಾರಿಗಳ ನಿರ್ವಹಣೆಯನ್ನು ವಹಿಸಿಕೊಡಬೇಕು. ಯುವಜನ ಸೇವಾ ಇಲಾಖೆಯಲ್ಲಿ ಯಾರೋ ಒಬ್ಬ ಸ್ಪೋರ್ಟ್ಸ್‌ಮೆನ್‌ರವರಿಗೆ ಡೈರೆಕ್ಟರ್ ಪೋಸ್ಟ್ ಕೊಟ್ಟಿದ್ದೀರಿ. ಯಾರೋ ಒಬ್ಬ ಟ್ಯೂಟರನ್ನು ಜಂಟಿ ನಿರ್ದೇಶಕನನ್ನಾಗಿ ಮಾಡಿದ್ದೀರಿ. ಹೀಗೆ ತಾರತಮ್ಯ ಮಾಡುವುದನ್ನು ಬಿಡಬೇಕು. ಹೀಗೆ ಆಗಬಾರದು. ಮಾನ್ಯ ಸಚಿವರು ಬಹಳ ದಕ್ಷರು ಮತ್ತು ಹಿರಿಯರು ಆಗಿದ್ದಾರೆ. ನಮ್ಮ ಜಿಲ್ಲೆಯ ಮಂತ್ರಿಗಳಾದ ಅವರ ಮೇಲೆ ನನಗೆ ಅಪರಿಮಿತ ಗೌರವ ಇದೆ. ಅವರು ಈ ಇಲಾಖೆಯನ್ನು ಟೋನ್‌ಅಪ್ ಮಾಡುತ್ತಾರೆಂಬ ವಿಶ್ವಾಸ ಇದೆ. In the case of administration staff pattern etc. In the allocation funds. ಹಿಂದಿನ ಬಡ್ಜೆಟ್ಟಿನಲ್ಲಿ ಸುಧಾರಣೆ ಮಾಡಬೇಕಾಗಿದೆ. ಒಂದು ಪೈಸೆಯನ್ನು ಕೂಡ ಈ ಇಲಾಖೆಗೆ ಇಟ್ಟಿಲ್ಲ. ಯುವಕರ ಬಗ್ಗೆ ಹೆಚ್ಚಿಗೆ ಗಮನ ಹರಿಸಿದರೆ, ಯುವಕರನ್ನು ಹೆಚ್ಚಿನ ರೀತಿಯಲ್ಲಿ ಮನಒಲಿಸಿಕೊಳ್ಳುವುದರ ಮೂಲಕ ದೇಶದ, ರಾಜ್ಯದ ಭವಿಷ್ಯವನ್ನು ಉಜ್ವಲಗೊಳಿಸುವತ್ತ ಕಾರ್ಯಕ್ರಮಗಳನ್ನು ಹಮ್ಮಿಕೊಂಡಂತಾಗಿ, ದೇಶದ ಏಳಿಗೆ ಮತ್ತು ಅಭಿವೃದ್ಧಿಯನ್ನು ಸಾಧಿಸಬಹುದು ಎಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಚ್. ಬನ್ನಿಕೋಡ್ ಬಸಪ್ಪ.—ಅಧ್ಯಕ್ಷರೇ, ಧಾರವಾಡ ಜಿಲ್ಲೆಯಲ್ಲಿರತಕ್ಕಂಥ ಒಂದೆರಡು ಸಮಸ್ಯೆಗಳನ್ನು ಹೇಳುವುದಕ್ಕೆ ತಾವು ಅವಕಾಶ ಕೊಡಬೇಕು.

(ಗೊಂದಲ)

† ಶ್ರೀ ಕೆ. ಹೆಚ್. ರಂಗನಾಥ್ (ಮಾನ್ಯ ಶಿಕ್ಷಣ ಸಚಿವರು).—ಮಾನ್ಯ ಅಧ್ಯಕ್ಷರೇ, ಈ ಸದನದಲ್ಲಿ ಒಟ್ಟು ಬೇಡಿಕೆಗಳು ಏನು ಇವೆ ಅವುಗಳಲ್ಲಿ ವಿದ್ಯಾ ಇಲಾಖೆಗೆ ಸಂಬಂಧಪಟ್ಟಂತೆ ಸಾಕಷ್ಟು ವಿಚಾರಗಳನ್ನು ಸದಸ್ಯರುಗಳು ಪ್ರಸ್ತಾಪ ಮಾಡಿದ್ದಾರೆ, ಅನೇಕ ಸಲಹೆಗಳನ್ನು ಕೂಡಾ ಕೊಟ್ಟಿದ್ದಾರೆ, ಸಂಯಮದಿಂದ ಟೀಕೆಯನ್ನು ಕೂಡಾ ಮಾಡಿದ್ದಾರೆ. ತಮಗೆ ಗೊತ್ತಿರುವ ಹಾಗೆ ಕರ್ನಾಟಕದಲ್ಲಿ ವಿದ್ಯಾಕ್ಷೇತ್ರ ಬಹಳ ದೊಡ್ಡದಾಗಿ ಬೆಳೆದಿದೆ. ಸ್ವಾಮಿ, ತಾವು ಈ ಸದನವನ್ನು ಪ್ರವೇಶ ಮಾಡಿದಾಗ ಸುಮಾರು ೧೯೬೨ರ ಸಮಯದಲ್ಲಿ ಆ ಕಡೆಗೆ ಇದ್ದು ಹೆಚ್ಚು ವಿಷಯಗಳನ್ನು ಪ್ರಸ್ತಾಪ ಮಾಡಿದ್ದೀರಿ. ಆಗ ತಾನೇ ಕೊಲಿಜಿಯೇಟ್ ಡೈರೆಕ್ಟೊರೇಟ್ ಪ್ರಾರಂಭವಾಗಿತ್ತು. ಆ ಒಂದು ಹೆಜ್ಜೆಯಿಂದ ವಿದ್ಯಾಕ್ಷೇತ್ರ ವ್ಯಾಪಕವಾಗಿ ಬೆಳೆದಿದೆ. ಮಾನ್ಯ ಸದಸ್ಯರು ಸಲಹೆಗಳನ್ನು ಕೊಟ್ಟು ಏನು ವಿಶ್ಲೇಷಣೆ ಮಾಡಿದರು ಎಂದರೆ ಶಿಕ್ಷಣದ ಗುಣಮಟ್ಟ ಹೆಚ್ಚಾಗಬೇಕು, ಜಾಸ್ತಿಯಾಗಬೇಕು. ಹಳ್ಳಿಗಾಡಿನ ಜನರಿಗೆ ಯಾವ ರೀತಿಯ ವಿದ್ಯೆ ಏನು ಬರಿದಿದೆ, ಏನು ತಲುಪಿದೆ ನಮ್ಮ ವಿದ್ಯಾಭ್ಯಾಸದ ಕಾರ್ಯಕ್ರಮ ಏನು ? ಅಲ್ಲಿ ವ್ಯವಸ್ಥಿತವಾಗಿರತಕ್ಕಂಥ ಉತ್ತಮ ಮಟ್ಟದ ಎಲ್ಲಾ ಅನುಕೂಲವಿರತಕ್ಕಂಥ ಶಾಲೆಗಳು ಇರಬೇಕು. ಅದೇ ಸಮಯದಲ್ಲಿ ಖಾಸಗೀ ಕ್ಷೇತ್ರದಲ್ಲಿ ಏನು ಇಂಗ್ಲೀಷಿನ ವ್ಯಾಮೋಹದಿಂದ ಶಾಲೆಗಳು ಪ್ರಾರಂಭ

ಮಾಗುತ್ತಿವೆ, ಅವುಗಳ ಬಗ್ಗೆ ಜನರ ಗಮನ ಹೆಚ್ಚು ಆಗುತ್ತಿದೆ. ನಾವು ಎರಡು ವರ್ಗದ ಜನರನ್ನು ಸೃಷ್ಟಿಮಾಡುತ್ತಿದ್ದೇವೆ ಎನ್ನುವ ಒಂದು ಭಾವನೆಯನ್ನು ಮಾನ್ಯ ಸದಸ್ಯರುಗಳು ಪ್ರಸ್ತಾಪ ಮಾಡಿದ್ದಾರೆ. ಇನ್ನು ಹಳ್ಳಿಗಾಡಿನಲ್ಲಿ ಅದರಲ್ಲಿಯೂ ಕೂಡ ಪ್ರಾಥಮಿಕ ಶಾಲೆ, ಮಾಧ್ಯಮಿಕ ಶಾಲೆ ಮತ್ತು ಪ್ರೌಢಶಾಲೆಗಳಲ್ಲಿ ಅದರ ಬಗ್ಗೆ ಪ್ರಸ್ತಾಪ ಮಾಡುವಾಗ ನೇಮಕಾತಿಗಳು ಇಲ್ಲ, ಕಟ್ಟಡಗಳು ಇಲ್ಲ, ಇತರ ಅನುಕೂಲಗಳನ್ನು ಮಾಡಿಕೊಡಬೇಕು ಎಂದು ಹೇಳಿ ಪ್ರಸ್ತಾಪವಾಗಿದೆ. ಮತ್ತೆ ಮಧ್ಯೆ ಮಧ್ಯೆ ವರ್ಗಾವಣೆಗಳ ಬಗ್ಗೆ ಪ್ರಸ್ತಾಪವಾಗಿದೆ. ಮೀಸಲಾತಿಗಳ ಬಗ್ಗೆ ಪ್ರಸ್ತಾಪವಾಗಿದೆ. ಮತ್ತೆ ಕೆಲವು ಶಾಲೆಗಳು ಕೂಡಾ ಸರ್ಕಾರ ಇವತ್ತಿನ ಹಣಕಾಸಿನ ಪರಿಸ್ಥಿತಿಯಲ್ಲಿ ಈ ಪ್ರಮಾಣದಲ್ಲಿ ವಿದ್ಯೆಯನ್ನು ನಾವು ಕೊಡಬೇಕಾದರೆ ರಾಜ್ಯಸರ್ಕಾರಕ್ಕೆ ಆಗುತ್ತದೆಯೋ? ಇಲ್ಲವೋ? ಎಂದು ಹೇಳಿ ಶಂಕೆ ಮಾಡಿ ಅದಕ್ಕೆ ಕೆಲವು ಸಲಹೆಗಳನ್ನು ಕೂಡಾ ಕೊಟ್ಟಿದ್ದಾರೆ. ಮಾನ್ಯ ಕೌಜಲಗಿಯವರು ನಿನ್ನೆ ಮಾತನಾಡುತ್ತಾ ಹೇಳಿದರು ಹೈಯರ್ ಎಜುಕೇಷನ್ ಏನು ಇದೆ, ಅದನ್ನು ಕೂಡಾ ನೀವು ಮುಫತ್ತಾಗಿ ಕೊಡತಕ್ಕಂಥ ರೀತಿಯಲ್ಲಿ ಮಾಡಲಿಕ್ಕೆ ಸಾಧ್ಯ ಎಂದು ಹೇಳಿ ಪ್ರಸ್ತಾಪ ಮಾಡಿದ್ದಾರೆ. ಅಂದರೆ ಅವರ ಸಾರಾಂಶ ಇಷ್ಟೆ. ಇವತ್ತು ವಿದ್ಯೆ ಎನ್ನುವುದು ಎಲ್ಲದಕ್ಕೂ ಮೂಲ ಮತ್ತು ಆಗತ್ಯವಾಗಿರತಕ್ಕಂಥದ್ದು ಜ್ಞಾನ ಸಂಪಾದನೆ ಅಷ್ಟೇ ಅಲ್ಲ, ವ್ಯಕ್ತಿತ್ವವನ್ನು ಬೆಳೆಸುವುದಕ್ಕೆ ಉತ್ತಮವಾದಂಥ ಸಮಾಜದ ರಚನೆ ಮಾಡಿಕೊಳ್ಳುವುದಕ್ಕೆ ಮತ್ತೆ ಅವರು ಕಲಿತಂಥ ವಿದ್ಯೆಯನ್ನು ರಾಷ್ಟ್ರಕ್ಕೆ, ರಾಜ್ಯಕ್ಕೆ ಸಂಪತ್ತನ್ನು ಉತ್ಪಾದನೆಯಾಗಿ ಬೆಳೆಸುವುದಕ್ಕೆ ಬಹಳ ಮುಖ್ಯ ಹಾಗೆ ಎಂದು ಹೇಳಿ ಪ್ರಸ್ತಾಪವಾಗಿದೆ.

ನಾನಾದರೂ ಕೂಡ ಕೇವಲ ಆರು ತಿಂಗಳಿಂದ ಈ ಇಲಾಖೆಯನ್ನು ನಡೆಸುತ್ತಾ ಇದ್ದು ತಮಗೆ ತಿಳಿದಹಾಗೆ ಇವೊತ್ತು ಸಮಸ್ಯೆಗಳು ಇದ್ದು ದೊಡ್ಡದು ಆಗಿದೆ. ಇದನ್ನು ನೋಡತಕ್ಕದ್ದು ಅವಶ್ಯವಾಗಿವೆ ಎಂದು ನಾನಾದರೂ ಭಾವಿಸುತ್ತೇನೆ. ೨೩ ಅಂಕಿ ಅಂಶಗಳನ್ನು ಈ ಸಭೆಯ ಮುಂದೆ ಇಟ್ಟಾಗ ಸಮಸ್ಯೆಯ ವ್ಯಾಪಕತೆ ಹಾಗೂ ಅದರ ಆಳವನ್ನು ಮಾನ್ಯ ಸದಸ್ಯರು ತಿಳಿಯುತ್ತಾರೆಂದು ನಾನಾದರೂ ಕೂಡ ಭಾವಿಸಿದ್ದೇನೆ. ಇವೊತ್ತು ಪ್ರಾಥಮಿಕ ಶಾಲಾ ಮಟ್ಟದಲ್ಲಿ ಲೋಯರ್ ಪ್ರೈಮರಿ ಮಟ್ಟ ಮತ್ತು ಹೈ ಪ್ರೈಮರಿ ಮಟ್ಟದಲ್ಲಿ ಸುಮಾರು ೬೭ ಲಕ್ಷ ೭೫ ಸಾವಿರ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಲೋಯರ್ ಪ್ರೈಮರಿಯಲ್ಲಿ ೪೭ ಲಕ್ಷ ೨೧ ಸಾವಿರ ಗಂಡು ಹುಡುಗರು, ೨೧ ಲಕ್ಷ ೮೫ ಸಾವಿರ ಹೆಣ್ಣು ಮಕ್ಕಳು ವ್ಯಾಸಂಗ ಮಾಡುತ್ತಿದ್ದಾರೆ. ಹೈಯರ್ ಪ್ರೈಮರಿ ಮಟ್ಟದಲ್ಲಿ ೨೫, ಲಕ್ಷ ೫೫ ಸಾವಿರ ಹುಡುಗರು, ೮ ಲಕ್ಷ ೬೦ ಸಾವಿರ ಹೆಣ್ಣು ಮಕ್ಕಳು ವ್ಯಾಸಂಗ ಮಾಡುತ್ತಿದ್ದಾರೆ. ಅಂದರೆ ಹೈಯರ್ ಪ್ರೈಮರಿಗೆ ಬರುತ್ತಿದ್ದ ಹಾಗೆ ಹೆಣ್ಣು ಮಕ್ಕಳ ಸಂಖ್ಯೆ ಕಡಿಮೆ ಆಗುತ್ತಾ ಹೋಗುತ್ತಿದೆ. ಇವೊತ್ತು ಇಷ್ಟು ದೊಡ್ಡ ಪ್ರಮಾಣದಲ್ಲಿ ನಮ್ಮ ರಾಜ್ಯದ ಮಕ್ಕಳು ವ್ಯಾಸಂಗ ಮಾಡುತ್ತಿದ್ದಾರೆ. ಉಪಾಧ್ಯಾಯರ ಸಂಖ್ಯೆ ೧,೩೩,೨೩೫ ಎಂದು ರಿಪೋರ್ಟ್‌ನಲ್ಲಿ ಇದೆ. ಅದನ್ನು ಮತ್ತೆ ಉಲ್ಲೇಖ ಮಾಡುವುದಕ್ಕೆ ನಾನು ಹೋಗುವುದಿಲ್ಲ. ಇವೊತ್ತು ಉಪಾಧ್ಯಾಯರನ್ನು ಎಲ್ಲಾ ಪೂರ್ಣ ಪ್ರಮಾಣದಲ್ಲಿ ಕೆಲಸ ಮಾಡತಕ್ಕ ಖಾಯಂ ಆಗಿ ಇರತಕ್ಕ ಉಪಾಧ್ಯಾಯರನ್ನು ಒದಗಿಸಿದ್ದೇವೆ ಎಂದು ನೋಡಿದರೆ. ಅದು ಕೆಲವು ಕಡೆ ಆಗಿಲ್ಲ. ಕೆಲವಾರು ವರ್ಷಗಳಿಂದ ನೇಮಕಾತಿಗಳನ್ನು ನಿಲ್ಲಿಸಿರುವುದರಿಂದ ಇವೊತ್ತು ಈ ಒಂದು ಕ್ಷೇತ್ರದಲ್ಲಿ ನೇಮಕಾತಿ ಇಲ್ಲದೇ ಇರುವುದರಿಂದ ಇವೊತ್ತು ಒಂದು ಶಾಲೆಗೆ ಅವಶ್ಯಕವಾಗಿ ಏನು ಉಪಾಧ್ಯಾಯರು ಇರಬೇಕು, ಅಂದರೆ ೫೦ ವಿದ್ಯಾರ್ಥಿಗಳಿಗೆ ಒಬ್ಬ ಉಪಾಧ್ಯಾಯರು ಇರಬೇಕೆಂಬ ನಿಯಮ, ನೀತಿ ಏನು ಇದೆ, ಅದನ್ನು ಪೂರ್ಣ ಮಾಡದೇ ಇರತಕ್ಕ ಸ್ಥಿತಿ ಇದೆ. ಈ ಒಂದು ಪರಿಸ್ಥಿತಿಯನ್ನು ನಾವು ಗಮನಿಸಿದಾಗ ಮಾನ್ಯ ಸದಸ್ಯರು ಅವರವರ ಕ್ಷೇತ್ರದಲ್ಲಿ ಹಳ್ಳಿಗಾಡಿನಲ್ಲಿ ಹೋದಾಗ ಎಲ್ಲರೂ ಕೂಡಿ ಕೇಳತಕ್ಕ ಒಂದು ಬೇಡಿಕೆ, ನಮ್ಮ ಮುಂದೆ ಇರತಕ್ಕ ಬೇಡಿಕೆ ಏನು ಅಂದರೆ ಏನೀ ನೀವು ಪ್ರಾಥಮಿಕ ಶಾಲೆಗೆ ಉಪಾಧ್ಯಾಯರನ್ನು ಕೊಡುವುದಕ್ಕೆ ಆಗುವುದಿಲ್ಲವೇ [illegible] ತನು ಆಡುತ್ತಾರೆ ಇವೊತ್ತು [illegible] ಸರ್ಕಾರದಿಂದ ನೇಮಕಾತಿ ಮಾಡದೇ ಇರುವುದರಿಂದ [illegible] ಪರಿಸ್ಥಿತಿ [illegible] ಬಂದಿದೆ [illegible] ನಾನು ವಿಶ್ಲೇಷಣೆ ಮಾಡುವುದಕ್ಕೆ [illegible] ಹೋಗುವುದಿಲ್ಲ. ಹಣಕಾಸಿನ ಪರಿಸ್ಥಿತಿ [illegible] ಹಣದ ಅಭಾವ [illegible] ಅನುಕೂಲತೆ [illegible] ಮಾಡುವುದಕ್ಕೆ ಸಾಧ್ಯ ಆಗಿಲ್ಲ. ಅದು ಏನೇ ಇರಲಿ ಇವೊತ್ತು [illegible] ಕೊಡತಕ್ಕ ಕಾರ್ಯವನ್ನು [illegible] ಹಮ್ಮಿಕೊಂಡಿದೆ. ಮಾನ್ಯ ಕೌಜಲಗಿಯವರು [illegible] ಒಂದು ಮಾತನ್ನು [illegible] ಕೊಂಡು [illegible] ತಕ್ಷಣವೇ ಬೆಳಗಾವಿಯಲ್ಲಿ [illegible] ಕೊಟ್ಟರು. ನಾವು ಉಪಾಧ್ಯಾಯರ ನೇಮಕ ಮಾಡುತ್ತೇವೆ [illegible]. ಇದುವರೆಗೂ ಅದು ಇಲ್ಲ. ಅದು [illegible] ಕೊಡತಕ್ಕ ಕೆಲಸ ಏನೂ ತೀರ್ಮಾನ ತೆಗೆದುಕೊಳ್ಳಲಿಲ್ಲ ಎನ್ನುವ ಅರ್ಥ ಬರುವ ರೀತಿಯಲ್ಲಿ ಪ್ರಸ್ತಾಪ ಮಾಡಿದರು. ಇವೊತ್ತು ಪರಿಸ್ಥಿತಿ ಹಾಗೆ ಇಲ್ಲ. ಸರ್ಕಾರ ಇದರ ಬಗ್ಗೆ ತೀರ್ಮಾನ ತೆಗೆದು

ಕೊಳ್ಳಲು ವಿಚಾರ ಮಾಡಿದೆ, ತೀರ್ಮಾನವನ್ನು ಕೂಡ ಇದರಬಗ್ಗೆ ತೆಗೆದುಕೊಂಡಿದೆ. ಅದಕ್ಕಾಗಿ ಹಣವನ್ನು ಒದಗಿಸುತ್ತೇವೆ. ಈಗಾಗಲೇ ಫೈನಾನ್ಸ್ ಡಿಪಾರ್ಟ್‌ಮೆಂಟ್‌ನಿಂದ ನೇಮಕಾತಿ ಬಗ್ಗೆ ಅನುಮತಿ ಕೊಟ್ಟಿದೆ. ಇನ್ನು ನೇಮಕಾತಿ ಬಗ್ಗೆ ಮಾಡುವುದಕ್ಕೆ ಬೇಕಾದ ಕಾನೂನನ್ನು ಮಾಡಿ ರಿಕ್ರೂಟ್‌ಮೆಂಟ್ ಕಮಿಟಿಯನ್ನೋ ಅಥವಾ ಮತ್ತೊಂದನ್ನು ಮಾಡಿ, ಕಾನೂನು ಮಾಡಿ ನೇಮಕಾತಿ ಮಾಡತಕ್ಕ ಕೆಲಸ ಮಾತ್ರ ಉಳಿದಿದೆ ಎನ್ನುವ ಮಾತನ್ನು ನಾನು ಈ ಸದನಕ್ಕೆ ತಿಳಿಸಲು ಇಷ್ಟಪಡುತ್ತೇನೆ. ಎಷ್ಟು ಉಪಾಧ್ಯಾಯರುಗಳು ನಮಗೆ ಬೇಕಾಗುತ್ತಾರೆ, ಎಷ್ಟು ಉಪಾಧ್ಯಾಯರನ್ನು ನಾವು ಕೊಡುವುದಕ್ಕೆ ಅವಕಾಶ ಇದೆ ಎನ್ನುವುದನ್ನು ಸ್ಥೂಲವಾಗಿ ಸದನದ ಮುಂದೆ ಇಡಲು ನಾನು ಇಷ್ಟಪಡುತ್ತೇನೆ.

ಈ ಆಪರೇಷನ್ ಬ್ಲಾಕ್‌ಬೋರ್ಡ್ ಕಾರ್ಯಕ್ರಮದ ಅಡಿಯಲ್ಲಿ ಸುಮಾರು ೯೩೭೬ ಉಪಾಧ್ಯಾಯರ ನೇಮಕಾತಿ ಆಗತಕ್ಕಂಥದ್ದು ಅದಕ್ಕೆ ಅನುಮತಿ ದೊರೆತಿದೆ ಅದಲ್ಲದೆ, ನಾನ್ ಪ್ಲಾನಿಂಗ್ ಅಂದರೆ ಯೋಜನೇತರ ಶೀರ್ಷಿಕೆಯಲ್ಲಿ ಸುಮಾರು ೬೬೪೨ ಉಪಾಧ್ಯಾಯರ ನೇಮಕಾತಿ ಆಗತಕ್ಕಂಥಾದ್ದು. ಒಟ್ಟು ಹತ್ತು ಸಾವಿರದಷ್ಟು ಜಾಗಗಳನ್ನು ಸೃಷ್ಟಿಮಾಡಿ, ಪೋಸ್ಟ್ಸ್ ಕ್ರಿಯೇಟ್ ಮಾಡಿ ಸ್ಯಾಂಕ್ಷನ್ ಮಾಡಿಕೊಂಡು ನೇಮಕಾತಿ ಆಗತಕ್ಕಂಥಾದ್ದು. ಮತ್ತೆ ೯ ಸಾವಿರ ನೇಮಕಾತಿಗಳು ಆಪರೇಷನ್ ಬ್ಲಾಕ್ ಬೋರ್ಡ್‌ನಲ್ಲಿ ಮುಂದಿನ ವರ್ಷಕ್ಕೆ ಅನುಮತಿ ಕೊಟ್ಟಿರತಕ್ಕಂಥಾದ್ದು. ಹೀಗೆ ಒಟ್ಟು ಸುಮಾರು ೧೮–೧೯ ಸಾವಿರ ಉಪಾಧ್ಯಾಯರ ನೇಮಕಾತಿಯಾದರೆ ಇವತ್ತು ಬೇಡಿಕೆ ಏನಿದೆ ಅದಕ್ಕೆ ಅನುಕೂಲವಾಗುತ್ತದೆ ಎನ್ನುವ ಮಾತನ್ನು ಹೇಳಲಿಕ್ಕೆ ಇಷ್ಟಪಡುತ್ತೇನೆ. ಅಷ್ಟಲ್ಲದೆ ಇವತ್ತು ಕಂಪೋಸಿಟ್ ಜೂನಿಯರ್ ಕಾಲೇಜುಗಳಲ್ಲಿ, ಕೆಲವು ಲೆಕ್ಚರರ್ಸ್ ನೇಮಕಾತಿ ಕೂಡ ಮಾಡುತ್ತೇವೆ. ಸುಮಾರು ೫೦೭ ಹೆಡ್‌ಮಾಸ್ಟರುಗಳ ಹುದ್ದೆಗಳು ಖಾಲಿ ಇನಿವೆ ಅವರ ನೇಮಕಾತಿ ಆಗುತ್ತದೆ. ಇಂಡಿಪೆಂಡೆಂಟ್ ಜೂನಿಯರ್ ಕಾಲೇಜಿನಲ್ಲಿ ಕೆಲವು ಲೆಕ್ಚರರ್ಸ್ ನೇಮಕಾತಿಯಾಗುತ್ತದೆ. ಫಿಸಿಕಲ್ ಎಜುಕೇಷನ್ ಡೆಮಾನ್‌ಸ್ಟ್ರೇಟರ್ಸ್ ಕೆಲವು ಹುದ್ದೆಗಳು ಏನು ಖಾಲಿ ಇವೆ ಅವುಗಳ ನೇಮಕಾತಿ ಆಗುತ್ತದೆ. ಅನುದಾನ ಕೊಡತಕ್ಕಂಥ ಬಿಎಡ್ ಕಾಲೇಜುಗಳಲ್ಲಿ ಏನು ಉದ್ಯೋಗಗಳು ಖಾಲಿ ಇವೆ ಅವುಗಳ ನೇಮಕಾತಿ ಆಗುತ್ತದೆ. ಮತ್ತೆ ಸಂಸ್ಕೃತ ಉಪಾಧ್ಯಾಯರು, ಅರೇಬಿಕ್ ಟೀಚರ್ಸ್‌ರು ಹೀಗೆ ಒಟ್ಟು ೭೨೨ ಉಪಾಧ್ಯಾಯರುಗಳು ನೇಮಕಾತಿ ಆಗುತ್ತಾರೆ. ಆದುದರಿಂದ ಮಾನ್ಯ ಸದಸ್ಯರ ಕಳವಳ ಏನಿದೆ, ಸರ್ಕಾರ ಏನೂ ತೀರ್ಮಾನ ತೆಗೆದುಕೊಳ್ಳಲಿಲ್ಲ. ಸರ್ಕಾರ ಮನಸ್ಸು ಮಾಡಿಲ್ಲ. ಸರ್ಕಾರ ಹೇಳುವುದೇ ಒಂದು, ಮಾಡದೇ ಇರತಕ್ಕಂಥ ನೀತಿಯನ್ನು ಅನುಸರಣೆ ಮಾಡುತ್ತಿದೆ ಎನ್ನುವ ಆಪಾದನೆ ಏನಿದೆ ಆದಕ್ಕೆ ಇನ್ನೂ ಮುಂದೆ ಅವಕಾಶವಿಲ್ಲ. ಅದಕ್ಕೆ ಒಂದು ಪೂರ್ಣ ವಿರಾಮವನ್ನು ಸರ್ಕಾರ ಹಾಕುತ್ತದೆ ಎನ್ನುವ ಮಾತನ್ನು ಈ ಸಭೆಯಲ್ಲಿ ಹೇಳಲಿಕ್ಕೆ ಇಷ್ಟಪಡುತ್ತೇನೆ. ಸ್ವಾಮಿ, ಇನ್ನು ಕಟ್ಟಡಗಳ ಪ್ರಶ್ನೆ. ಇದು ಬಹಳ ದೊಡ್ಡ ಪ್ರಶ್ನೆ, ನಮಗೆ ಕಟ್ಟಡಗಳ ಅವಶ್ಯಕತೆ ಇದೆ. ನಮಗೆ ಕಟ್ಟಡಗಳು ಬೇಕಾಗುತ್ತವೆ. ಆದರೆ ಇವತ್ತಿನದಿವಸ ಯಾವ ಪ್ರಮಾಣದಲ್ಲಿ ಕಟ್ಟಡಗಳ ಅವಶ್ಯಕತೆ ಇದೆ ಎನ್ನುವುದನ್ನು ಹೇಳಿದರೆ ಬಹಳಮಟ್ಟಿಗೆ ಸದನಕ್ಕೆ ಅದು ಅರ್ಥವಾಗಬಹುದು ಎಂದು ನಾನಾದರೂ ಕೂಡ ಭಾವಿಸುತ್ತೇನೆ. ತಮಗೆ ತಿಳಿದಹಾಗೆ ಪ್ರಾಥಮಿಕ ಶಾಲೆಗಳಲ್ಲಿ ಅಂದರೆ ಸುಮಾರು ಶೇಕಡ ೨೫ರಷ್ಟು ಶಾಲೆಗಳಲ್ಲಿ ಕಟ್ಟಡ ಇಲ್ಲದೆ ಇರುವುದನ್ನು ಗಮನಿಸಿ ಆಪರೇಷನ್ ಬ್ಲಾಕ್‌ಬೋರ್ಡ್ ಕಾರ್ಯಕ್ರಮದ ಅಡಿಯಲ್ಲಿ ಕಟ್ಟಡದ ಕೆಲಸವನ್ನು ತೆಗೆದುಕೊಂಡು ಆಗಿದೆ. ಈಗ ಸುಮಾರು ೧೦,೭೩೬ ಕಟ್ಟಡಗಳ ನಿರ್ಮಾಣ ಪ್ರಾಥಮಿಕ ಶಾಲಾ ಮಟ್ಟದಲ್ಲಿ, ಹೈಸ್ಕೂಲು ಮಟ್ಟದಲ್ಲಿ ೪೨೧೧ ಕೊಠಡಿಗಳ ಕಟ್ಟಡದ ನಿರ್ಮಾಣ ಆಗಬೇಕಾಗಿದೆ. ಸುಮಾರು ೩೭ ಕೋಟಿ ೫೭ ಲಕ್ಷದ ೬೦ ಸಾವಿರದಷ್ಟು ಹಣ ಪ್ರಾಥಮಿಕ ಶಾಲಾ ಕಟ್ಟಡಗಳಿಗೆ ಬೇಕಾಗುತ್ತದೆ.

೧೨.೩೦ ಪಿ.ಎಂ.

ಇನ್ನು ಹೈಸ್ಕೂಲಿಗೆ ೨೧ ಕೋಟಿ ೫ ಲಕ್ಷ ರೂಪಾಯಿ ಬೇಕಾಗುತ್ತದೆ. ಮತ್ತೆ ಎಕ್ವಿಪ್‌ಮೆಂಟ್ ಹೈಸ್ಕೂಲುಗಳಿಗೆ ಇದೆಲ್ಲಾ ಬೇಕೆ, ಬೇಕಾಗುತ್ತದೆ. ಇದುವರೆಗೂ ನಾವು ಏನು ಮಾಡಿಕೊಂಡು ಬಂದಿದ್ದೇವೆ ಅಂದರೆ ಶಾಲೆಗಳು ಬೇಕು ಸ್ಯಾಂಕ್ಷನ್ ಮಾಡಿದ್ದೇನೆ. ಅದನ್ನು ಮಾಡುವುದಕ್ಕೆ ಪೂರ್ವ ಭಾವಿಯಾಗಿ ಈ ಅನುಕೂಲ ಬೇಕು, ವ್ಯವಸ್ಥೆ ಆಗಬೇಕು ಎನ್ನುವ ಅಭಿಪ್ರಾಯದ ಬಗ್ಗೆ ಯೋಚನೆ ಮಾಡಲಿಲ್ಲ. ಶಾಲೆ ಕೊಡತಕ್ಕದ್ದು ಮುಖ್ಯ ಎಂದು ಕೊಟ್ಟಿದ್ದರಿಂದ, ಈ ಸಮಸ್ಯೆ ಇವೊತ್ತು ದೊಡ್ಡ ಪ್ರಮಾಣದಲ್ಲಿ ನಮ್ಮ ಮುಂದೆ ನಿಂತಿದೆ ಇದನ್ನು ನಾವು ನಿವಾರಿಸಲೇಬೇಕಾಗುತ್ತದೆ. ಇದಕ್ಕೆ ಪರಿಹಾರ ಒದಗಿಸಲೇ ಬೇಕಾಗುತ್ತದೆ. ಈ ಒಂದು ದೃಷ್ಟಿಯಿಂದ ಇದು ಶೀಘ್ರವಾಗಿ ಆಗಬೇಕೆಂದು ಆತುರಪಡುತ್ತೇವೆ. ಅದನ್ನು ಮಾಡುವುದಕ್ಕೆ ಸಾಧ್ಯವಾಗದ ಪರಿಸ್ಥಿತಿಯಲ್ಲಿದ್ದೇವೆ. ಆದರೂ

ಸಹ ಸರ್ಕಾರ ಇದನ್ನು ಪರಿಹಾರ ಮಾಡುತ್ತದೆ. ಇದನ್ನು ಪರಿಹಾರ ಮಾಡಲಿಕ್ಕೆ ಸರ್ಕಾರ ಕಾರ್ಯಕ್ರಮ ಹಾಕಿಕೊಳ್ಳಬೇಕಾಗುತ್ತದೆ ಎಂದು ಹೇಳುತ್ತೇನೆ. ನನ್ನ ದೃಷ್ಟಿಯಲ್ಲಿ ಇದಕ್ಕೆ ಪ್ರತ್ಯೇಕವಾಗಿ ಕಟ್ಟಡದ ಅವಶ್ಯಕತೆ ಏನಾಗಬೇಕು, ಅದಕ್ಕೆ ಒಂದು ಯೋಜನೆ ಹಾಕಿಕೊಂಡು ಇನ್ನು ೫-೧೦ ವರ್ಷಗಳಲ್ಲಿ ಹಂತ ಹಂತವಾಗಿ ಆದ್ಯತೆ ಮೇರೆಗೆ ಮಾಡಿ ಮುಗಿಸಿಕೊಡತಕ್ಕಂತಾದನ್ನು ಮಾಡಬೇಕಾಗುತ್ತದೆ. ಇದರ ಬಗ್ಗೆ ಮಾನ್ಯ ಸದಸ್ಯರಾದ ಮೋಟಮ್ಮನವರು ಹೇಳುತ್ತಿದ್ದರು. ಪ್ರಾಥಮಿಕ ಶಾಲೆಗೆ ಸಂಬಂಧಪಟ್ಟಂತೆ ಮಾತ್ರ ಹೇಳುತ್ತಿದ್ದೇನೆ. ಇನ್ನು ಕಾಲೇಜಿಗೆ ಬಂದರೆ. ಫಸ್ಟ್ ಗ್ರೇಡ್ ಕಾಲೇಜುಗಳು ೯೭ ಇವೆ. ಅದರಲ್ಲಿ ೩೨-೩೩ ಕಾಲೇಜುಗಳಿಗೆ ಮಾತ್ರ ಸ್ವಂತ ಕಟ್ಟಡ ಇದೆ. ಇನ್ನೂ ಬಾಕಿ ಕಾಲೇಜುಗಳಿಗೆ ಕಟ್ಟಡಗಳು ಇಲ್ಲ. ಜ್ಯೂನಿಯರ್ ಕಾಲೇಜುಗಳು ಈ ಒಂದು ಪರಿಸ್ಥಿತಿಯಲ್ಲಿ ಇವೆ. ಇದನ್ನೆಲ್ಲಾ ಸದನದ ಮುಂದೆ ಇಡಲಿಕ್ಕೆ ಹೋದರೆ ನಾನು ಬಹಳ ಸಮಯ ತೆಗೆದುಕೊಳ್ಳಬೇಕಾಗುತ್ತದೆ. ಆದ್ದರಿಂದ, ನಾನು ಹೆಚ್ಚು ಕಾಲ ತೆಗೆದುಕೊಳ್ಳುವುದಕ್ಕೆ ಇಷ್ಟಪಡುವುದಿಲ್ಲ. ಈಗ ಇರತಕ್ಕ ಸಮಸ್ಯೆ ಏನು ಎಂದು ಈ ಸದನದ ಮುಂದೆ ಇಡಲಿಕ್ಕೆ ನಾನು ಪ್ರಯತ್ನ ಪಡುತ್ತೇನೆ. ಸರ್ಕಾರ ಈ ದಿಸೆಯಲ್ಲಿ ಶಾಲಾಕಾಲೇಜುಗಳಿಗೆ ಲ್ಯಾಬೋರೇಟರಿ ಒದಗಿಸತಕ್ಕಂತಾದ್ದು, ಉಪಾಧ್ಯಾಯರನ್ನು ಒದಗಿಸತಕ್ಕಂತಾದ್ದು, ಪುಸ್ತಕ ಭಂಡಾರ ಒದಗಿಸತಕ್ಕಂತಾದ್ದು ಮಾಡಬೇಕಾಗುತ್ತದೆ. ಶಾಲಾಕಾಲೇಜುಗಳಲ್ಲಿ ಪುಸ್ತಕ ಭಂಡಾರ ಇಲ್ಲದಿದ್ದರೆ ಅದು ಶಾಲಾ ಕಾಲೇಜು ಎಂದು ಅನಿಸುವುದಿಲ್ಲ. ಕಾರಣಾಂತರಗಳಿಂದ ಅದರ ಕಡೆ ಗಮನವನ್ನು ಕೊಟ್ಟಿಲ್ಲ. ಅದನ್ನು ಮಾಡಲಿಕ್ಕೆ ಪ್ರತ್ಯೇಕ ಯೋಜನೆ ಮಾಡಿಕೊಂಡು ಅದು ಯಾವುದೇ ಸರ್ಕಾರ ಬರಲಿ ನಡೆಸುತ್ತಾ ಹೋಗಬೇಕಾಗುತ್ತದೆ, ಅದು ಕಾರ್ಯಗತವಾಗಬೇಕಾಗುತ್ತದೆ, ಅದರ ಬಗ್ಗೆ ಯೋಜನಾಬದ್ಧವಾಗಿ ಇಷ್ಟು ವರ್ಷದಲ್ಲಿ ಮಾಡಬೇಕೆಂದು ವಿಚಾರ ಮಾಡಿ ಮಾಡಬೇಕಾಗುತ್ತದೆ. ಅದಕ್ಕೆ ನಾನು ಹೇಳಿದ್ದುದು, ಪೂರ್ವಭಾವಿಯಾಗಿ ಯೋಚನೆ ಮಾಡಿ, ಶಾಲೆಗಳನ್ನು ಕೊಡತಕ್ಕ ಕಾಲೇಜುಗಳನ್ನು ಕೊಡತಕ್ಕ ಕೆಲಸವನ್ನು ಮಾಡಿದ್ದಿದ್ದರೆ ಇಂತಹ ತೊಂದರೆ ಒದಗುತ್ತಾ ಇರಲಿಲ್ಲ. ಈಗ ಅದನ್ನು ಪರಿಹಾರ ಮಾಡತಕ್ಕ ಜವಾಬ್ದಾರಿ ಸರ್ಕಾರದ ಮೇಲೆ ಇದೆ, ಅದರಲ್ಲಿಯೂ ಆಡಳಿತ ಪಕ್ಷಕ್ಕೆ ಹೆಚ್ಚು ಇದೆ. ಇದನ್ನು ಮಾಡಿ ಮುಗಿಸುತ್ತೇವೆಂದು ಈ ಸದನಕ್ಕೆ ಹೇಳಲಿಕ್ಕೆ ನಾನು ಇಷ್ಟಪಡುತ್ತೇನೆ. ಸ್ವಾಮಿ ಇದಕ್ಕೆ ಎಷ್ಟು ದೊಡ್ಡ ಪ್ರಮಾಣದಲ್ಲಿ ಹಣದ ಅವಶ್ಯಕತೆ ಇದೆ. ಎಂದರೆ ಲ್ಯಾಬೋರೇಟರಿ ಇತ್ಯಾದಿ ಎಲ್ಲವನ್ನು ಬಹಳಮಟ್ಟಿಗೆ ಸಭೆಯ ಮುಂದೆ ಇಟ್ಟರೆ ಕೆರೆ ಕಟ್ಟಲಿಕ್ಕೆ ದುಡ್ಡು ಬೇಕು, ರಸ್ತೆ ಮಾಡಲಿಕ್ಕೆ ದುಡ್ಡು ಬೇಕು. ಶಾಲೆ ಕಟ್ಟಲಿಕ್ಕೆ ದುಡ್ಡು ಬೇಕು ಎಂದು ಯಾರಿಗಾದರೂ ಅಭಿಪ್ರಾಯ ಬಂದು ನಿರಾಶೆಯಿಂದ ಏನಾದರೂ ಹೇಳಬಹುದು. ಅದಕ್ಕೆ ನಾನು ಪ್ರಸ್ತಾಪ ಮಾಡಿ ಹೇಳಿದ್ದೇನೆ. ಈ ಅನುಕೂಲಗಳನ್ನು ಒದಗಿಸಲಿಕ್ಕೆ ಪ್ರತ್ಯೇಕ ಒಂದು ಯೋಜನೆಯನ್ನು ಮಾಡಿಕೊಂಡು ಅದನ್ನು ಮಾಡಿ ಮುಗಿಸುತ್ತೇನೆಂದು ಹೇಳಲಿಕ್ಕೆ ಇಷ್ಟಪಡುತ್ತೇನೆ. ಉಪಾಧ್ಯಾಯರ ನೇಮಕಾತಿ ಬಗ್ಗೆ ಪ್ರಾಥಮಿಕ ಶಾಲೆಗಳಲ್ಲಿ ಅಷ್ಟೆ ಅಲ್ಲ ಹೈಸ್ಕೂಲುಗಳಲ್ಲಿ ಹಾಗೆ ಉಳಿದಿದೆ. ಪದವಿಪೂರ್ವ ಕಾಲೇಜುಗಳು ಅದೇ ಪರಿಸ್ಥಿತಿಯಲ್ಲಿವೆ. ಫಸ್ಟ್ ಗ್ರೇಡ್ ಕಾಲೇಜು ಅದೇ ಪರಿಸ್ಥಿತಿಯಲ್ಲಿದೆ. ಮಾನ್ಯ ಸದಸ್ಯರಾದ ಮೋಟಮ್ಮನವರು ಪ್ರಸ್ತಾಪ ಮಾಡುತ್ತಾ ಪದವಿಪೂರ್ವ ಕಾಲೇಜಿನಲ್ಲಿ ಉಪಾಧ್ಯಾಯರುಗಳ ನೇಮಕ ಆಗಿಲ್ಲ, ಅಲ್ಲಿ ಪ್ರಿನ್ಸಿಪಾಲರು ಒಬ್ಬರು ಮಾತ್ರ ಖಾಯಂ ನೇಮಕ ಆಗಿದ್ದಾರೆ, ಇನ್ನು ಬೇರೆ ಎಲ್ಲಾ ಲೆಕ್ಚರರ್ ಕಾಂಟ್ರ್ಯಾಕ್ಟ್ ಟೀಚರ್ಸ್ ಎಂದು ಹೇಳಿದರು, ಈ ಕಾಂಟ್ರ್ಯಾಕ್ಟ್‌ನಲ್ಲಿ ತರತರಹ ಹೆಸರು ಇರತಕ್ಕಂಥಾದ್ದು ಇದೆ. ಒಂದು ಸ್ಟಾಪ್‌ಗ್ಯಾಪ್ ಟೀಚರ್ಸ್, ಇನ್ನೊಂದು ಕಾಂಟ್ರ್ಯಾಕ್ಟ್ ಟೀಚರ್ಸ್, ಮತ್ತೊಂದು ಟೆಂಪರರಿ ಟೀಚರ್ಸ್ ಈ ತರಹ ಹೆಸರು ಕೊಟ್ಟಿದ್ದಾರೆ. ಈ ಅರೆಕಾಲಿಕ ಶಿಕ್ಷಕರು ಅಂದರೆ ಎರಡು ಮೂರು ಕಾಲೇಜಿನಲ್ಲಿ ಒಂದೊಂದು ಗಂಟೆ ಪಾಠ ಮಾಡಿ ಮನೆಗೆ ಹೋಗುವುದು ಇದೆ. ಇದು ಕೂಡ ನನಗೆ ವೇದನೆ ಆಗುತ್ತದೆ. ಅವನು ಒಂದು ತಿಂಗಳಿಗೆ ಎಷ್ಟು ಗಂಟೆ ಪಾಠ ಹೇಳಿದರೂ ಕೂಡ ೭೦೦ ಕ್ಕಿಂತ ಹೆಚ್ಚು ಸಂಪಾದನೆ ಮಾಡುವ ಹಾಗೆಯೇ ಇಲ್ಲ. ಹೀಗಾಗಿ ೪ ಕಾಲೇಜುಗಳನ್ನು ಕಾಂಟ್ರ್ಯಾಕ್ಟ್ ತೆಗೆದುಕೊಂಡಿದ್ದಾನೆ ಏನೋ ಪರಿಸ್ಥಿತಿಗೆ ಒಳಗಾಗಿ ಖಾಯಂ ಆಗಲಿಲ್ಲ ಅವರುಗಳೂ ಕೂಡ ಧರಣಿ ಮಾಡುತ್ತಿದ್ದಾರೆ. ಇಂತಹ ಪರಿಸ್ಥಿತಿ ಬಂದಿರುವುದರಿಂದ ಸಮಗ್ರವಾಗಿ ಇದನ್ನೆಲ್ಲಾ ಪರಿಶೀಲನೆ ಮಾಡಿ ಅವರನ್ನು ನೇಮಕ ಮಾಡತಕ್ಕಂಥ ಕಾರ್ಯಕ್ರಮವನ್ನು ತೆಗೆದು ಕೊಂಡಿದ್ದೇವೆ. ನಮ್ಮ ಅರ್ಥ ಮಂತ್ರಿಗಳ ಜೊತೆಯಲ್ಲಿಯೂ ಪ್ರಸ್ತಾಪ ಮಾಡಿದ್ದೇನೆ. ಪ್ರಾಥಮಿಕ ಶಾಲೆ ಹೈಯರ್ ಪ್ರೈಮರಿ ಶಾಲೆ, ಪ್ರೌಢ ಶಾಲೆ, ಪದವಿಪೂರ್ವ ಕಾಲೇಜುಗಳಿಗೆ ಸಂಬಂಧಪಟ್ಟಂತೆ ಅನುಮತಿಯನ್ನು ಕೊಟ್ಟಿದ್ದಾರೆ. ಫಸ್ಟ್ ಗ್ರೇಡ್ ಕಾಲೇಜು ಟೆಕ್ನಿಕಲ್. ಪಾಲಿಟೆಕ್ನಿಕ್ ಎಜುಕೇಷನ್, ಇಂಜಿನಿಯರ್ ಕಾಲೇಜುಗಳಿಗೆ ಸಂಬಂಧಪಟ್ಟಂತೆ ಅನುಮತಿಯನ್ನು ಕೊಟ್ಟಿಲ್ಲ. ಒಂದು ಸಣ್ಣ ತೊಂದರೆ ಇದೆ. ಅದನ್ನು ಸರಿಪಡಿಸಬೇಕಾಗುತ್ತದೆ. ಎಕಾನಮಿ ಮೆಷರ್ಸ್ ಶಿಕ್ಷಣ ಇಲಾಖೆಗೆ ಅನ್ವಯಿಸುವುದಿಲ್ಲವೆನ್ನುವಾಗ ಪ್ರಾಥಮಿಕ ಮತ್ತು ಮಾಧ್ಯಮಿಕ, ಪದವಿ ಪೂರ್ವ ಕಾಲೇಜುಗಳಿಗೆ ಇದು

ಅನ್ವಯವಾಗುವ ರೀತಿಯಲ್ಲಿ ಭಾಷಣ ಆಗಿದೆ. ಫಸ್ಟ್ ಗ್ರೇಡ್ ಕಾಲೇಜುಗಳಿಗೆ ಇದು ಅನ್ವಯವಾಗುವುದಿಲ್ಲ ಎನ್ನುವ ಬಗ್ಗೆ ಮಾನ್ಯ ಅರ್ಥ ಸಚಿವರ ಹತ್ತಿರ ಪ್ರಸ್ತಾಪ ಮಾಡಿ ಅದನ್ನೂ ಕೂಡ ಅಂದರೆ ಇದಕ್ಕೆ ಅನುಕೂಲ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ. ನಿನ್ನೆ ಅಧ್ಯಕ್ಷರು ವ್ಯಂಗ್ಯವಾಗಿ ಒಂದು ಮಾತನ್ನು ಹೇಳಿದರು ಅದೇನೆಂದರೆ ನಿಮ್ಮ ತಲೆ ಬೆಳ್ಳಗಾದರೂ ಚಿಂತೆ ಇಲ್ಲ ಮಕ್ಕಳ ಸಮಸ್ಯೆಯನ್ನು ಅದರ ತೀವ್ರತೆಯನ್ನು ಅರ್ಥ ಮಾಡಿಕೊಂಡು ಸಮಸ್ಯೆ ಬಗೆಹರಿಸಿ ಎಂದು ಹೇಳಿದರು ಅದನ್ನು ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಶಾಲೆಗಳಿಗೆ ಉಪಾಧ್ಯಾಯರನ್ನು ಶಾಲಾ ಕಟ್ಟಡಗಳನ್ನು, ಲ್ಯಾಬೊರೇಟರಿ ಒದಗಿಸತಕ್ಕಂಥಾದ್ದರ ಬಗ್ಗೆ ಈ ಸದನದ ಕಳಕಳಿ ಏನು ಇದೆ ಅದರ ಬಗ್ಗೆ ಹೇಳುವುದಾದರೆ ಇನ್ನು ಮುಂದೆ ಹೊಸ ಕಾಲೇಜುಗಳನ್ನು ತೆರೆಯುವಾಗ ಬೇಕಾಗಿರತಕ್ಕಂತಹ ಉಪಾಧ್ಯಾಯರನ್ನು ಒದಗಿಸದೇ ಕಾಲೇಜನ್ನು ಕೊಡತಕ್ಕಂತಹ ನೀತಿಯನ್ನು ನಮ್ಮ ಸರಕಾರ ಅನುಸರಿಸುವುದಿಲ್ಲವೆಂಬುದನ್ನು ಈ ಸದನದ ಮುಂದೆ ಸ್ಪಷ್ಟಪಡಿಸುತ್ತಿದ್ದೇನೆ. ಇನ್ನು ಎಲ್ಲೆಲ್ಲಿ ಉಪಾಧ್ಯಾಯರುಗಳಿಲ್ಲ ಅಲ್ಲಿ ಹಂತ ಹಂತವಾಗಿ ಆ ಕಾಲೇಜುಗಳಲ್ಲಿ ಉಪಾಧ್ಯಾಯರನ್ನು ಹಾಕುವಂತಹ ಪ್ರಯತ್ನ ಮಾಡುತ್ತೇನೆ. ನಾನು ಇನ್ನೊಂದು ವಿಚಾರವನ್ನು ಬಹಳ ದುಃಖದಿಂದ ಹೇಳಬೇಕಾಗಿದೆ. ಹಳ್ಳಿಗಾಡಿಗೆ ಧಾರಾಳವಾಗಿ ಆರ್ಟ್ಸ್ ಕಾಮರ್ಸ್ ಅನ್ನು ಕೊಡುತ್ತಿದ್ದೇವೆ ಆದರೆ ಸೈನ್ಸ್ ಕಾಲೇಜು ಅಲ್ಲಿಗೆ ಹೋಗಿಲ್ಲ. ಕೆಲವೇ ಕೆಲವು ಭಾಗಗಳಲ್ಲಿ ಮಾತ್ರ ಸೈನ್ಸ್ ಕಾಲೇಜುಗಳು ಇದ್ದು ಅಷ್ಟಕ್ಕೆ ಮಾತ್ರ ಸೀಮಿತವಾಗಿವೆ. ಬುದ್ಧಿವಂತ ಹುಡುಗರು ಹಳ್ಳಿಗಾಡಿನಲ್ಲೂ ಕೂಡ ಇದ್ದಾರೆ ಅವರು ಸೈನ್ಸ್ ಟೆಕ್ನಾಲಜಿಯಲ್ಲಿ ಅನುಭವ ಪಡೆಯುವಲ್ಲಿ ವಂಚಿತರಾಗಿದ್ದಾರೆ. ಅವರಿಗೆ ಹೇಗೆ ಅನುಕೂಲ ಮಾಡಬೇಕು, ಹೇಗೆ ಮಾಡಬೇಕೆಂಬ ಬಗ್ಗೆ ವಿಚಾರ ಮಾಡುತ್ತೇನೆ. ಈ ಸಮಯದಲ್ಲಿ ಕೆಲವು ಕಾಲೇಜುಗಳಲ್ಲಿ ಹುಡುಗರ ಸಂಖ್ಯೆ ಕಡಿಮೆ ಇದೆ ಆದುದರಿಂದ ಕೆಲವು ಕಾಲೇಜುಗಳನ್ನು ಮುಚ್ಚಬೇಕಾಗುತ್ತದೆನ್ನುವ ಮಾತನ್ನು ಪ್ರಶ್ನೋತ್ತರಗಳಿಗೆ ಉತ್ತರ ಕೊಡುವಾಗ ಹೇಳಿದ್ದೇನೆ. ಇದಕ್ಕೆ ಕಾರಣ ಇಷ್ಟೇ, ಆತುರದಲ್ಲಿ ಕಾಲೇಜನ್ನು ಕೊಡುವಾಗ ಕೊಟ್ಟಿದ್ದೇವೆ. ಈ ವರ್ಷ ಪದವಿಪೂರ್ವ ಕಾಲೇಜಿಗೆ ಹುಡುಗರ ಸಂಖ್ಯೆ ಮೊದಲನೆಯ ಪಿ.ಯು.ಸಿ. ಎರಡನೆಯ ಪಿಯುಸಿ ಸೇರಿ 80 ಕ್ಕಿಂತ ಕಡಿಮೆ ಇದ್ದರೆ ಅದನ್ನು ಮುಚ್ಚುವುದಕ್ಕೆ ಪ್ರಯತ್ನಪಟ್ಟಿದ್ದೇವೆ. ಇದರಿಂದ ಸರಕಾರದ ಮೇಲೆ ದೊಡ್ಡ ಹೊರೆ ಬೀಳುತ್ತದೆ ಆದುದರಿಂದ ಇದನ್ನು ಮುಚ್ಚುವಂತಹ ಪ್ರಯತ್ನ ಮಾಡಿದ್ದೇವೆ. ಇದನ್ನು ಕೇಳಿ ಈ ಸದನದ ಇಬ್ಬರು ಸದಸ್ಯರಾದ ಡಾ. ನಂಜಪ್ಪ, ಮತ್ತು ಲಕ್ಷ್ಮಣಯ್ಯನವರ ಕ್ಷೇತ್ರದಲ್ಲಿನ ಕಾಲೇಜನ್ನು ಈ ವರ್ಷ ಮುಚ್ಚಬೇಡಿ ಮುಂದುವರಿಸಿ ನಾವುಗಳು ಹುಡುಗರನ್ನು ಕಾಲೇಜಿಗೆ ಕರೆದುಕೊಂಡು ಬರುತ್ತೇವೆಂದು ಹೇಳಿದ್ದರಿಂದ ಈ ಸಾರಿಗೆ ಅದನ್ನು ಬಿಟ್ಟಿದ್ದೇವೆ. ಮತ್ತು ಶ್ರಾವಣದಲ್ಲಿ ಹುಡುಗರು ಬರದಿದ್ದರೆ ಮುಚ್ಚುತ್ತೇವೆಂದೂ ಕೂಡ ಹೇಳಿದ್ದೇವೆ.

ಅಧ್ಯಕ್ಷರು.—ಆಷಾಢ ಮುಗಿದ ಮೇಲೆ ಹುಡುಗರು ಬರುತ್ತಾರೆಯೇ ?

ಶ್ರೀಮತಿ ಮೋಟಮ್ಮ.—ಆಷಾಢವೆಂದು ಅಲ್ಲ, ಅಲ್ಲಿ ಉಪಾಧ್ಯಾಯರುಗಳು ಸರಿಯಾಗಿಲ್ಲ. ಆಯಾಯ ವಿಷಯಗಳ ಬಗ್ಗೆ ಉಪಾಧ್ಯಾಯರು ಇಲ್ಲ. ಪ್ರಿನ್ಸಿಪಾಲರು ಇದ್ದರೆ ತಂದೆ ತಾಯಿಗಳು ಮಕ್ಕಳನ್ನು ಸೇರಿಸುತ್ತಾರೆ.

ಶ್ರೀ ಕೆ. ಎಚ್. ರಂಗನಾಥ್.—ಮಾನ್ಯ ಸದಸ್ಯೆಯವರಿಗೆ ನಾನು ಹೇಳಿದ್ದು ತಿಳಿಯಿತೋ ಇಲ್ಲವೋ ಗೊತ್ತಿಲ್ಲ. ಕಾರಣಾಂತರದಿಂದ ಈ ರೀತಿ ಆಗಿದೆ. ನಾನಾ ರೀತಿಯ ಲೆಕ್ಚರರ್ಸ್ ಇದ್ದಾರೆ. ಅವನ್ನೆಲ್ಲಾ ನಾನು ಇಲ್ಲಿ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಆದರೆ ಅನಿವಾರ್ಯವಾಗಿ ಈ ನಿಷ್ಠುರವಾದ ತೀರ್ಮಾನವನ್ನು ಸರ್ಕಾರ ತೆಗೆದುಕೊಂಡಿದೆ ಇದೇರೀತಿ ಕೆಲವು ಮೊದಲನೆಯ ದರ್ಜೆ ಕಾಲೇಜುಗಳನ್ನು ಮುಚ್ಚಬೇಕಾಗುತ್ತದೆ. ಕನಕಪುರದಲ್ಲಿ ಅಂದರೆ ವಿರೋಧಪಕ್ಷದ ಉಪ ನಾಯಕರ ಕ್ಷೇತ್ರದಲ್ಲಿ ಹೆಣ್ಣು ಮಕ್ಕಳಿಗೋಸ್ಕರ ವ್ಯವಸ್ಥೆಯಾಗಿ ಪ್ರಾರಂಭವಾದ ಆರ್ಟ್ಸ್. ಸೈನ್ಸ್ ಎಲ್ಲಾ ಇರತಕ್ಕ ಒಂದು ಕಾಲೇಜು ಇದೆ. ಅಲ್ಲಿ ಒಬ್ಬ ಲೆಕ್ಚರರ್ ಇದ್ದಾರೆ ಮೊನ್ನೆ ಒಂದು ದಿವಸ ಅವನು ನನಗೆ ಸಿಕ್ಕಿ ನಮಸ್ಕಾರ ಎಂದು ಹೇಳಿದ, ನೀವು ಎಲ್ಲಿದ್ದೀರಿ ಎಂದು ನಾನು ಅವರನ್ನು ಕೇಳಿದೆ. ಅದಕ್ಕೆ ಆ ಮನುಷ್ಯ ನಾನು ಕನಕಪುರದಲ್ಲಿದ್ದೇನೆಂದು ಹೇಳಿದ. ಆತ ತನ್ನ ಪೆನ್‌ಷನ್‌ಗೋಸ್ಕರ ಓಡಾಡುತ್ತಿದ್ದ. ಆತನಿಗೆ ಇಬ್ಬರು ಕಾಂಟ್ರ್ಯಾಕ್ಟ್ ಲೆಕ್ಚರರ್ಸ್‌ನ್ನು ಕೊಟ್ಟು ನೀನು ಇದನ್ನು ನಡೆಸು ಎಂದು ಹೇಳಿದ್ದಾರೆ, ಅಲ್ಲಿ ಬಹುಶಃ ಹುಡುಗರೇ ಸೇರಿಲ್ಲ ಎಂದು ಅನಿಸುತ್ತದೆ. ಅಲ್ಲಿರತಕ್ಕದ್ದು ಇದೊಂದೇ ಕಾಲೇಜು. ಇದನ್ನು ಮುಚ್ಚುವುದಕ್ಕೆ ಬದಲಾಗಿ ಇದನ್ನು ಹೆಣ್ಣು ಮಕ್ಕಳ ಕಾಲೇಜು ಆಗಿ ಪರಿವರ್ತನೆ ಮಾಡಬೇಕೆಂದು ನನ್ನ ಅಧಿಕಾರಿಗಳಿಗೆ ಹೇಳಿದ್ದೇನೆ. ಇನ್ನು ಬೇರೆ ಬೇರೆ ಕಡೆಗಳಲ್ಲಿ ಎಲ್ಲೆಲ್ಲಿ ಈ ಕಾಲೇಜುಗಳನ್ನು ಮುಚ್ಚಬೇಕಾಗುತ್ತದೆಯೋ ಅದಕ್ಕೆ ಸಂಬಂಧಪಟ್ಟಂತೆ ಅಲ್ಲಿಯ ಶಾಸಕರಿಗೆ ನಾವು ಪತ್ರವನ್ನು ಬರೆದು ಅನಿವಾರ್ಯ ಕಾರಣದಿಂದಾಗಿ ನಿಮ್ಮ ಕ್ಷೇತ್ರದಲ್ಲಿರುವ ಕಾಲೇಜನ್ನು ಮುಚ್ಚುತ್ತಿದ್ದೇವೆ, ಇದಕ್ಕೆ ನಿಮ್ಮ ಸಹಕಾರ ಬೇಕಾಗಿದೆ ಎಂದು ಕೇಳಿಕೊಂಡಿದ್ದೇವೆ. ಕಾಲೇಜುಗಳಲ್ಲಿ ಸಾಮಾನ್ಯವಾಗಿ ಎಲ್ಲಾ

ವ್ಯವಸ್ಥೆಯೂ ಇರುತ್ತದೆ ಆದರೆ ನಾವು ಎಲ್ಲವನ್ನೂ ಒದಗಿಸುತ್ತೇವೆಂದು ಹೇಳುವುದಿಲ್ಲ, ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ನಾಳೆಯ ದಿವಸ ಮಾನ್ಯ ವಿರೋಧಪಕ್ಷದ ನಾಯಕರು ನನ್ನನ್ನು ಕೇಳಬಹುದು ಆದರೆ ನಾನು ಇಷ್ಟುಮಾತ್ರ ಹೇಳುತ್ತೇನೆ. ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಶಾಲೆಗಳಲ್ಲಿ ಈ ಕೊರತೆ ಇಲ್ಲದಂತೆ ವ್ಯವಸ್ಥೆ ಮಾಡುತ್ತೇನೆ. ವರ್ಗಾವಣೆ ಮಾಡುವಾಗ ಕೆಲವು ಅನಾನುಕೂಲಗಳಾಗಿವೆ. ನಾವು ವರ್ಗಮಾಡಿರುವ ಕಡೆಗಳಲ್ಲಿ ಕೆಲವು ಜಾಗಗಳಿಗೆ ಉಪಾಧ್ಯಾಯರು ಹೋಗಿದ್ದಾರೆ, ಮತ್ತೆ ಕೆಲವು ಕಡೆ ಹೋಗಿಲ್ಲ. ನಾವು ವರ್ಗಾವಣೆ ಮಾಡುವುದನ್ನು ನಿಲ್ಲಿಸಿರುವುದರಿಂದ ಸ್ವಲ್ಪಮಟ್ಟಿಗೆ ತೊಂದರೆಯಾಗುತ್ತಿದೆ. ಪ್ರಾಥಮಿಕ ಶಾಲೆಗಳಲ್ಲಿ, ಮಾಧ್ಯಮಿಕ ಶಾಲೆಗಳಲ್ಲಿ, ಪ್ರೌಢಶಾಲೆಗಳಲ್ಲಿ, ಕೆಲವು ಮೊದಲನೇ ದರ್ಜೆ ಕಾಲೇಜುಗಳಲ್ಲಿ ತೊಂದರೆಯಾಗಿದೆ. ಇದನ್ನೆಲ್ಲಾ ನಾವು ರಿವ್ಯೂ ಮಾಡಿ ಮುಂದಿನ ಕ್ರಮ ಕೈಗೊಳ್ಳುತ್ತೇವೆಂದು ಹೇಳಬಯಸುತ್ತೇನೆ.

ಇನ್ನೊಂದು ಪ್ರಮುಖವಾದ ವಿಚಾರ ಎಂದರೆ, ನಾವು ಯಾವ ಯಾವ ಇಲಾಖೆಗೆ ಎಷ್ಟೆಷ್ಟು ಹಣವನ್ನೊದಗಿಸಿದ್ದೇವೆಂದು ವಿಚಾರ ಮಾಡಿ ನೋಡುವುದಾದರೆ ನಾವು ಒದಗಿಸಿರತಕ್ಕ ಹಣ ಬಹಳ ಕಡಿಮೆ ನಮ್ಮ ಪಕ್ಕದ ರಾಜ್ಯಗಳಿಗೆ ಹೋಲಿಸಿದರೆ ೩ ಅಥವಾ ೩.೪ ಪರ್ಸೆಂಟ್ ಹಣವನ್ನು ನಾವು ಕಳೆದ ಪಂಚವಾರ್ಷಿಕ ಯೋಜನೆಯಲ್ಲಿ ಖರ್ಚು ಮಾಡಿದ್ದೇವೆ. ಸಾಮಾನ್ಯವಾಗಿ ನಮ್ಮ ಹಣವೆಲ್ಲಾ ನಾನ್ ಪ್ಲಾನ್ಡ್ ಸ್ಕೀಂಗಳಿಗೇ ಹೋಗುತ್ತಿದೆ. ಇದರಿಂದಾಗಿ ಪ್ಲಾನ್ಡ್ ಸ್ಕೀಂಗಳಿಗೆ ಹೆಚ್ಚಿನ ಹಣ ಸಿಕ್ಕುತ್ತಿಲ್ಲ. ಹಿಂದೆ ನಮ್ಮ ಕರ್ನಾಟಕ ರಾಜ್ಯದಲ್ಲಿ ವಿದ್ಯಾಭ್ಯಾಸದ ಕ್ಷೇತ್ರ ಎಂದರೆ ಒಂದು ಹೆಮ್ಮೆಯ ವಿಷಯವಾಗಿತ್ತು. ಫಸ್ಟ್ ಗ್ರೇಡ್ ಕಾಲೇಜುಗಳ ಸಂಖ್ಯೆ ಇಡೀ ರಾಷ್ಟ್ರದಲ್ಲಿಯೇ ನಮ್ಮ ರಾಜ್ಯದಲ್ಲಿ ಹೆಚ್ಚು ಇದೆ. ಆದರೆ ಅಲ್ಲಿ ಹೆಚ್ಚಿನ ಅನುಕೂಲಗಳಿಲ್ಲ. ಇವೊತ್ತಿನ ಪರಿಸ್ಥಿತಿಯಲ್ಲಿ ಈ ವಿದ್ಯಾಭ್ಯಾಸ ಕ್ಷೇತ್ರಕ್ಕೆ ಹೆಚ್ಚಿನ ಹಣವನ್ನು ತೊಡಗಿಸುವುದಕ್ಕೆ ತೊಂದರೆ ಆಗಿದೆ. ತಾವು ಇದರ ಬಗ್ಗೆ ಗಮನಹರಿಸಿರಬಹುದು. ಇಂಥ ಒಂದು ಪರಿಸ್ಥಿತಿ ಏತಕ್ಕೆ ಬಂತು ಎಂದರೆ......

ಶ್ರೀ ಎನ್. ಜಿ. ನಾಯಕ್.—ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ಕಳೆದ ೭-೮ ವರ್ಷಗಳಿಂದ ಜೂನಿಯರ್ ಕಾಲೇಜಿನಲ್ಲಿ ಇರುವವರೇ ಇದ್ದಾರೆ. ಅವರನ್ನು ವರ್ಗಮಾಡಬೇಕಾಗಿದೆ......

ಅಧ್ಯಕ್ಷರು.—ನೀವು ಇನ್ನೂ ವರ್ಗಾವಣೆಯಲ್ಲೇ ಇದ್ದೀರಾ ? ಬೇರೆ ಸದಸ್ಯರೆಲ್ಲರೂ ಈ ವರ್ಗಾವಣೆ ವಿಚಾರವನ್ನು ಬಿಟ್ಟೇ ಬಿಟ್ಟಿದ್ದಾರೆ.

ಶ್ರೀ ಕೆ. ಹೆಚ್. ರಂಗನಾಥ್.—ಇದು ತಮ್ಮ ಗಮನಕ್ಕೂ ಬಂದಿದೆಯೋ ಏನೋ ಗೊತ್ತಿಲ್ಲ. ಬಹಳ ವಿಷಾದದ ಸಂಗತಿ. ವಿದ್ಯಾಭ್ಯಾಸದ ನೀತಿಯ ಬಗ್ಗೆ, ಅದಾಗಬೇಕು ಇದಾಗ ಬೇಕೆಂದು ಹೇಳಿ ನಾವು ಬಹಳವಾಗಿ ಮಾತನಾಡುತ್ತೇವೆ ಎಲ್ಲಿ ಅದನ್ನು ಪಡೆದುಕೊಳ್ಳುವುದರಲ್ಲಿ ನಾವು ತಪ್ಪಿದ್ದೇವೆ. ಒಂದು ವ್ಯಂಗ್ಯ ಚಿತ್ರವನ್ನು ನಾವು ಗಮನಿಸಿರಬಹುದು. ಮಾನ್ಯ ಲಕ್ಷ್ಮಣ್‌ರವರು ಹಿಂದೂ ಪತ್ರಿಕೆಯಲ್ಲಿ ಬರೆದಿದ್ದಾರೆ. ಎಲ್ಲಾ ಹಂಚಿಕೆಯಾಗುತ್ತದೆ, ಪ್ಲಾನಿಂಗ್ ಕಮಿಷನ್‌ರವರು ಮೀಟಿಂಗ್‌ನಲ್ಲಿ ಎಲ್ಲ ಹಣವನ್ನು ಹಂಚಿ ಬಿಡುತ್ತಾರೆ. ಹಂಚಿದ ಮೇಲೆ ಸ್ವಲ್ಪ ಉಳಿದುಕೊಳ್ಳುತ್ತದೆ. After allocation of resources for all importtant ministries, we have few lakhs. Shall we set it apart for education ? ಇಂಥ ಒಂದು ಪರಿಸ್ಥಿತಿ ಇದೆ. ಈ ಪರಿಸ್ಥಿತಿಯಿಂದಲೇ ನಾವು ಶೇಕಡ ಮೂರು ಪರ್ಸೆಂಟ್ ಇನ್‌ವೆಸ್ಟ್ ಮಾಡಿರತಕ್ಕಂಥದ್ದು ದುರದೃಷ್ಟವಶಾತ್ ಇತ್ತೀಚೆಗೆ ನಾವು ಖರ್ಚು ಮಾಡಿರತಕ್ಕಂಥ ಹಣ ನಷ್ಟದ ಹಣವೆಂದು ನಮ್ಮ ಕಲ್ಪನೆ ಇದ್ದಂತೆ ಕಾಣುತ್ತದೆ. ನಮಗೆ ಗೊತ್ತಿರುವಹಾಗೆ ಈ ಒಂದು ಇಲಾಖೆಗೆ ಒಂದು ಹೊಸ ಹೆಸರನ್ನು ಕೊಟ್ಟಿರುತ್ತಾರೆ. ಹ್ಯೂಮನ್ ರಿಸೋರ್ಸಸ್ ಎಂದು ಕರೆದಿರುತ್ತಾರೆ. ಕೇಂದ್ರ ಸರ್ಕಾರದಲ್ಲಿ ಎಜ್ಯುಕೇಷನ್ ಡಿಪಾರ್ಟ್‌ಮೆಂಟ್ ಎಂದು ಯಾರು ಕರೆಯುವುದೇ ಇಲ್ಲ. ಇದಕ್ಕೆ ಹ್ಯೂಮನ್ ರಿಸೋರ್ಸಸ್ ಎಂದು ಹೆಸರು ಕೊಟ್ಟಿದ್ದಾರೆ. ಆ ಹೆಸರು ಅರ್ಥಪೂರ್ಣವಾಗಬೇಕಾದರೆ ಪರ್ ಕ್ಯಾಪಿಟಾ ಇನ್‌ವೆಸ್ಟ್‌ಮೆಂಟ್ ಜಾಸ್ತಿಯಾಗಬೇಕು.

ಶ್ರೀ ಎಂ. ಮಹದೇವ್.—ಈ ಸಾರಿ ಪ್ಲಾನಿಂಗ್‌ನಲ್ಲಿ ಹೆಲ್ತ್ ಅಂಡ್ ಎಜ್ಯುಕೇಷನ್ ಬಗ್ಗೆ ಎಕಾನೆಮಿಯನ್ನು ಲಿಫ್ಟ್ ಮಾಡಿರುತ್ತಾರೆಂದು ಬಂದಿದೆ.

ಶ್ರೀ ಕೆ. ಹೆಚ್. ರಂಗನಾಥ್.—ಲಿಫ್ಟ್ ಆಗಿದೆ ಎಂದು ಈಗಾಗಲೇ ಹೇಳಿದ್ದೇನೆ. ಲಿಫ್ಟ್ ಮಾಡಿದ್ದೇವೆ. ನೇಮಕಾತಿ ಮಾಡುತ್ತೇವೆ. ಫಸ್ಟ್ ಗ್ರೇಡ್ ಕಾಲೇಜ್ ಮತ್ತು ಟೆಕ್ನಿಕಲ್ ಕಾಲೇಜ್‌ಗಳಿಗೆ ಮಾತ್ರ ನಿರಾಕರಣೆ ಮಾಡಿದ್ದಾರೆ. ಅದನ್ನೂ ಕೂಡ ಪಡೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆನ್ನುವ ಮಾತನ್ನು ಹೇಳುತ್ತೇನೆ ಇದೇ ಸಮಯದಲ್ಲಿ ಈ ಸದನದ ಗಮನಕ್ಕೆ ತರಬಯಸುವುದೇನೆಂದರೆ ಕೇಂದ್ರ ಸರ್ಕಾರದಲ್ಲಿ ಒಂದು ಬದಲಾವಣೆಯಿಂದಾಗಿ ನಮ್ಮ ಪಠ್ಯ ಪುಸ್ತಕದ ವಿತರಣೆಯಲ್ಲಿ ವಿಳಂಬವಾಗಿದೆ. ಇದನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಮೊನ್ನೆ ತಾನೆ ಮಾನ್ಯ ರಾಮಮೂರ್ತಿಯವರ ನೇತೃತ್ವದಲ್ಲಿ ಒಂದು

ಹೊಸ ಸಮಿತಿಯನ್ನು ಮಾಡಿರುವುದರಿಂದ ನಮಗೆ ಸ್ವಲ್ಪ ಗೊಂದಲಮಯವಾಯಿತು. ಮೂರನೆಯ, ಐದನೇ ಮತ್ತು ಎಂಟನೇ ತರಗತಿಗಳ ಪುಸ್ತಕಗಳನ್ನು ಪ್ರಿಂಟಿಂಗ್ ಮಾಡಬೇಕಾಗಿದ್ದು ಬದಲಾವಣೆಯಾದ ಕಾರಣದಿಂದಾಗಿ ಪ್ರಿಂಟ್ ಮಾಡತಕ್ಕಂಥ ಕಾರ್ಯವನ್ನು ವಿಳಂಬವಾಗಿ ತೆಗೆದುಕೊಳ್ಳಬೇಕಾಗಿ ಬಂದಿತು. ಮತ್ತೆ ಇದೇ ಸಮಯದಲ್ಲಿ ಕಾಗದ ದೊರೆಯದೆ ತೊಂದರೆಯಾದ ಕಾರಣದಿಂದಾಗಿ ವಿಳಂಬವಾಯಿತು. ಪತ್ರಿಕೆಗಳಲ್ಲಿ privatisation of higher education mooted ಎಂದು ಇದೆ ಮಾನ್ಯ ವಿರೋಧಪಕ್ಷದ ನಾಯಕರು ಇದರ ಬಗ್ಗೆ ತೀವ್ರವಾಗಿ ಯೋಚನೆ ಮಾಡಬೇಕಾಗಿದೆ. ಸದನದಲ್ಲಿ ಬಹಳ ಜನ ಸದಸ್ಯರು ಹೇಳಿದ್ದೇನೆಂದರೆ ಖಾಸಗೀಯವರು ವಿದ್ಯಾಕ್ಷೇತ್ರದಲ್ಲಿ ಕೈಹಾಕುವುದನ್ನು ನಿಲ್ಲಿಸಬೇಕೆಂದು. ಮತಿಗೆ ಬಹಳ ಜಾಸ್ತಿಯಾಗಿದೆ, ಬಹಳ ದುಬಾರಿಯಾಗಿದೆ, ಪ್ರಾಥಮಿಕ ಶಾಲೆಯ ಮಟ್ಟದಲ್ಲಿಯೂ ಡೊನೇಷನ್ ಕೊಡತಕ್ಕಂಥದ್ದು ನಡೆಯುತ್ತಿದೆ ಎಂದು ಕೆಲವು ವರ್ಷಗಳ ಹಿಂದೆ ಈ ಡೊನೇಷನ್ ಮೆಡಿಕಲ್ ಕಾಲೇಜುಗಳಿಗೆ ಮತ್ತು ಇಂಜಿನೀಯರಿಂಗ್ ಕಾಲೇಜ್‌ಗಳಿಗೆ ಮಾತ್ರ ಸೀಮಿತವಾಗಿತ್ತು. ಕೆಳಮಟ್ಟಕ್ಕೂ ಬರುತ್ತಾ ಇದೆ. ಇದು ಆಗಬಾರದೆಂದು ವಿಚಾರ ಹೇಳುತ್ತಿರುವಾಗ "A greater role for private erterprises in higher education seems to be in the offing" ಎಂದು ಹೇಳಿ ಒಂದು ಬ್ಲಾಕ್ ಐಟಮ್ ಬಂದಿತ್ತು. ಆದ್ದರಿಂದ ಸದನದ ಸದಸ್ಯರ ಗಮನವನ್ನು ಸೆಳೆಯುತ್ತಾ ಆ ಕಡೆಯವರಾಗಲಿ, ಈ ಕಡೆಯವರಾಗಲಿ ವಿದ್ಯಾಕ್ಷೇತ್ರದಲ್ಲಿ ಪಕ್ಷಾತೀತವಾಗಿ ಅದನ್ನು ನೋಡಬೇಕಾಗುತ್ತದೆ ಪಕ್ಷ, ರಾಜಕಾರಣಕ್ಕೆ ಒಳ ಮಾಡಿದರೆ ಬಹಳ ಮಟ್ಟಿಗೆ ಮುಂದಿನ ಪೀಳಿಗೆಯ ಭವಿಷ್ಯಕ್ಕೆ ತೊಂದರೆಯಾಗುತ್ತದೆ. ಈ ದೃಷ್ಟಿಯಿಂದ ನೋಡದೆ ಪಕ್ಷಾತೀತವಾಗಿ ಇದನ್ನು ನೋಡಬೇಕೆಂದು ಹೇಳುವ ಸಮಯದಲ್ಲಿ ಈ ಅಭಿಪ್ರಾಯಕ್ಕೆ ಬಂದಿರುತ್ತೇವೆ. ಮಾನ್ಯ ವಿರೋಧಪಕ್ಷದವರ ವಿದ್ಯಾನೀತಿಯಿಂದ ಏನಾದರೂ ಸಹಾಯವಾಗುವಂಥ ರೀತಿಯಲ್ಲಿದೆಯೋ ಏನೋ ಗೊತ್ತಿಲ್ಲ ಪ್ರಾಥಮಿಕ ಶಾಲೆಗಳಿಗೆ ಹಣ ಕೊಡುವುದು ಕಡಿಮೆ ಬರಬಹುದು ಅದೇ ಹೈಯರ್ ಕಾಲೇಜುಗಳನ್ನು ಕೊಡುವಾಗ ಹೆಚ್ಚಿನ ಹಣವನ್ನು ಕೊಡಬೇಕಾಗುತ್ತದೆ. ಇವತ್ತಿನದಿವಸ ಒಂದು ಫಸ್ಟ್‌ಗ್ರೇಡ್ ಕಾಲೇಜು ತೆಗೆಯಬೇಕೆಂದರೆ ದುಬಾರಿ ಖರ್ಚು ಬರುತ್ತದೆ. ಅದು ೫೦ ಲಕ್ಷ ರೂಪಾಯಿಗಳಿಗಿಂತ ಕಡಿಮೆ ಆಗುವುದಿಲ್ಲ. ೨೫–೩೦ ಲಕ್ಷ ಆಗುವಂಥ ಪರಿಸ್ಥಿತಿ ಇರುವಾಗ ಅವರಿಗೇನೇ ವಹಿಸಿಬಿಡೋಣ ಎನ್ನುವ ಮಾತು ಕೂಡ ಬರಬಹುದು ಅದು ಮುಂದೆ ಬರತಕ್ಕಂಥ ಮಾತು ಅದನ್ನು ವಿಚಾರ ಮಾಡಬೇಕಾಗುತ್ತದೆ. ಮಾನ್ಯ ಮಿತ್ರರಾದಂಥ ಇದಿನಬ್ಬನವರು ಒಂದು ಮಾತನ್ನು ಹೇಳಿದರು. ಹೊರಗಿನವರು ಬರುತ್ತಾರೆ ಬರುವಾಗ ನಿಮ್ಮನ್ನು ಬಹಳವಾಗಿ ಹೊಗಳಿ ಬರುತ್ತಾರೆ. ಅದು ನಿಮಗೆ ಚೆನ್ನಾಗಿ ಕಾಣುತ್ತದೆ, ತದನಂತರ ನಿಮ್ಮ ಕುತ್ತಿಗೆಗೆ ಬರುತ್ತಾರೆಂದು ಹೇಳಿದರು. ಅದು ಕೂಡ ಹೇಳಬೇಕಾಗುತ್ತದೆಯೋ ಏನೋ ? ಇವೊತ್ತು ಬಡತನದ ರೇಖೆಯ ಕೆಳಗೆ ಇರತಕ್ಕಂಥ ಮಕ್ಕಳು, ಅದರಲ್ಲೂ ಹಳ್ಳಿಗಾಡಿನಲ್ಲಿರತಕ್ಕಂಥ ಮಕ್ಕಳು ಇವತ್ತಿಗೂ ಕೂಡ ಈ ಮಿನಿಟ್‌ವರೆಗೂ ಕೂಡ ಚರ್ಚೆ ಮಾಡತಕ್ಕಂಥ ಸಂದರ್ಭದಲ್ಲಿ ಕೂಡ ಎಷ್ಟೋ ಮನೆಗಳಲ್ಲಿ ಮೊದಲಬಾರಿಗೆ, ಶಾಲೆಗೆ ಹೋಗಿ, 'ಅ' ಅಕ್ಷರದ ಪ್ರಥಮ ಪರಿಚಯ ಇವನಿಗೂ ಆಗುತ್ತದೆ ಎನ್ನುವ ಭರವಸೆ ಇವತ್ತಿನದಿವಸ ಇದೆ.

ಕರ್ನಾಟಕದಲ್ಲಿ ಇವತ್ತು ೩೮ ಪರ್ಸೆಂಟ್ ಅಕ್ಷರಸ್ಥರು ಇರುವಾಗ ಅನಕ್ಷರಸ್ಥರ ಸಂಖ್ಯೆ ೬೨ರ ಮಟ್ಟಕ್ಕೆ ಹೋಗಿರುವಾಗ ಇಂಥ ವಾತಾವರಣದಲ್ಲಿ ನಾವು ತೀರ್ಮಾನ ತೆಗೆದುಕೊಳ್ಳಬೇಕಾದರೆ ಏನು ಮಾಡಬೇಕಾಗುತ್ತದೆ. ಇವತ್ತು ಪ್ರಾಥಮಿಕ ಶಾಲೆಗೆ ಮತಿಗೆಯನ್ನು ದೊಡ್ಡ ಪ್ರಮಾಣದಲ್ಲಿ ಕೊಡತಕ್ಕ ಪರಿಸ್ಥಿತಿ ಇರುವಾಗ ಪ್ರೀ ಯೂನಿವರ್ಸಿಟಿ. ಫಸ್ಟ್ ಗ್ರೇಡ್ ಕಾಲೇಜಿಗೆ ಕೂಡ ಮತಿಗೆ ಕೊಡತಕ್ಕ ಪರಿಸ್ಥಿತಿ ಬಂದರೆ ಏನು ಮಾಡಬೇಕೆಂಬುದನ್ನು ವಿಚಾರ ಮಾಡಬೇಕಾಗುತ್ತದೆಂದು ಸದನದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಹೈಯರ್ ಸೆಕೆಂಡರಿ ಆದಮೇಲೆ ಪ್ರೀ ಯೂನಿವರ್ಸಿಟಿ. ಇದು ಮೊದಲು ಪ್ರೀ ಯೂನಿವರ್ಸಿಟಿ ಬೋರ್ಡ್ ಆಗಿತ್ತು. ಕಾರಣಾಂತರದಿಂದ ರಾಜಕೀಯ ತೀರ್ಮಾನಕ್ಕೆ ಒಳಗಾಗಿ ಇವತ್ತು ಅದನ್ನು ಕಮಿಷನರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ಏನಿದೆ ಅವರ ಆಡಳಿತಕ್ಕೆ ಒಳಪಡಿಸಿದ್ದೇವೆ. ಮತ್ತೆ ಈ ಬಗ್ಗೆ ಒಂದು ತೀರ್ಮಾನ ಮಾಡಬೇಕೆಂದು ಸುರೇಂದ್ರನಾಥ್ ಅವರ ಕಮಿಟಿಗೆ ವಹಿಸಿ ಅವರು ಒಂದು ರಿಪೋರ್ಟ್ ಕೊಟ್ಟಿದ್ದಾರೆ. ಎಸ್.ಎಸ್.ಎಲ್.ಸಿ. ಆದಮೇಲೆ ಮುಂದೆ ಎರಡು ವರ್ಷದ ಪದವಿ ಪೂರ್ವ ಕಾಲೇಜ್ ಏನಿದೆ ಅದು ಬಹಳ ಪ್ರಮುಖವಾಗಿರತಕ್ಕದ್ದು. ಅದಾದಮೇಲೆ ಬಿ.ಎ. ಬಿಎಸ್ಸಿ., ಟೆಕ್ನಿಕಲ್ ಎಜುಕೇಷನ್‌ಗೆ ಹೋಗತಕ್ಕದ್ದು, ಜನರಲ್ ಎಜುಕೇಷನ್‌ಗೆ ಹೋಗತಕ್ಕದ್ದು ಇದೆ. ಅಲ್ಲಿ ಏನು ಮಾಡಬೇಕೆಂಬ ಬಗ್ಗೆ ಮಾನ್ಯ ಸದಸ್ಯರು ಕೂಡ ಪ್ರಸ್ತಾಪ ಮಾಡುವಾಗ ಹೇಳುತ್ತಿದ್ದರು. ಹಿರಿಯ ಸದಸ್ಯರಾದ ಅನಂತಕೃಷ್ಣ ಅವರು ಎಲ್ಲಿಯೂ ಸೋಷಿಯಲಿಸಂ ಇಲ್ಲವಲ್ಲ ಎಂದು ನನ್ನನ್ನು ಟೀಕೆ ಮಾಡಿದ್ದರು. ಹಿಂದೂ ಪೇಪರ್ ನೋಡಿದ ಮೇಲೆ ಗೊತ್ತಾಗುತ್ತದೋ ಏನೋ? ಕಾರಣಾಂತರದಿಂದ

ಇವತ್ತು ಇಂಥ ಪರಿಸ್ಥಿತಿಯಲ್ಲಿ ಸಿಕ್ಕಿಹಾಕಿಕೊಂಡಿದ್ದೇವೆ. ರಾಜ್ಯಾಂಗದಲ್ಲಿ ಸೋಷಿಯಲಿಸಂ ಸೆಕ್ಯುಲರಿಸಂ ಎಲ್ಲವನ್ನು ಪ್ರಸ್ತಾಪ ಮಾಡಿದ್ದೇವೆ. ಅದಕ್ಕೆ ಅನುಗುಣವಾಗಿ ನಮ್ಮ ನೀತಿಗಳು ಬರಬೇಕಾಗುತ್ತದೆ, ಇಲ್ಲವೆಂದು ಹೇಳುವುದಿಲ್ಲ. ಆದರೆ ಆ ದಿಸೆಯಲ್ಲಿ ಅಲ್ಲಲ್ಲಿ ಪ್ರಾರಂಭವಾಗಿದೆ. ಮತ್ತೆ ಅದು ದಾರಿ ತಪ್ಪಿದೆ. ಇಂಥ ಪರಿಸ್ಥಿತಿ ಇರುವಾಗ ಮಾನ್ಯ ಸದಸ್ಯರು ಏನು ಪ್ರಸ್ತಾಪ ಮಾಡಿದ್ದಾರೆ ಆ ಮಾತನ್ನು ನಾನು ಗಮನದಲ್ಲಿಟ್ಟುಕೊಂಡಿರುತ್ತೇನೆ. ನನ್ನ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆಯೇ ಹೊರತು ಹೀಗೆ ತೀರ್ಮಾನ ತೆಗೆದುಕೊಳ್ಳುತ್ತೇವೆಂದು ಹೇಳುವುದಕ್ಕೆ ನನಗೆ ಶಕ್ತಿ ಇಲ್ಲ ಇವತ್ತು. ಪ್ರಾರಂಭ ಮಾಡಿದರೆ ಹಾಗೇ ಆಗುತ್ತದೆ. ನಾವು ೧೯೪೭ರಿಂದಇಲ್ಲಿಯವರೆಗೆ ಬಂದಿದ್ದೇವೆ. ಮತ್ತೆ ಮರಳಿ ಹೋಗುವುದು ಎಂದರೆ ಕಷ್ಟವಾಗುತ್ತದೆ. ೧೯೬೮ರಲ್ಲಿ ಒಂದು ಎಜುಕೇಷನ್ ಪಾಲಿಸಿ, ೧೯೮೬ರಲ್ಲಿ ಮತ್ತೊಂದು ಪಾಲಿಸಿ. ಈಗ ರಾಮಮೂರ್ತಿಯವರು ಬಂದಿದ್ದಾರೆ, ಇನ್ನು ಏನಾಗುತ್ತದೋ ಗೊತ್ತಿಲ್ಲ. ಇಲ್ಲಿ ನಾವೇನಾದರೂ ಚೆಲ್ಲಾಟವಾಡಿದ್ದರೆ ಮಕ್ಕಳ ಭವಿಷ್ಯದೊಂದಿಗೆ ಚೆಲ್ಲಾಟವಾಡಿದ್ದೇವೆ. ನಿರ್ದಿಷ್ಟವಾದ ನಿಲುವನ್ನು ತೆಗೆದುಕೊಳ್ಳಲಿಲ್ಲ, ಕಾರ್ಯಕ್ರಮ ಹಾಕಿಕೊಳ್ಳಲಿಲ್ಲ, ಬೇಕಾದಂತಹ ಹಣವನ್ನು ಒದಗಿಸಬಲ್ಲ, ಪೂರ್ವಸಿದ್ಧತೆ ಮಾಡಿಕೊಳ್ಳಲಿಲ್ಲ. ಮಕ್ಕಳನ್ನು ಹೇಗೆ ತಯಾರು ಮಾಡಬೇಕೆಂದು ವಿಚಾರ ಮಾಡದೆ ಬ್ರಿಟಿಷರ ಕಾಲದಲ್ಲಿ ಏನು ಒಂದು ಅಭಿಪ್ರಾಯ ಇತ್ತು ಅವನ್ನೆ ಮುಂದುವರಿಸಿಕೊಂಡು ಬಂದಿದ್ದೇವೆ. ಶಾಲೆ ಕೇಳುತ್ತಿದ್ದರು, ಕೊಡುತ್ತಿದ್ದೆವು. ಆ ಒಂದು ನೀತಿಯನ್ನು ಅನುಸರಿಸಿಕೊಂಡು ಬಂದದ್ದರಿಂದ ಈ ಪರಿಸ್ಥಿತಿಗೆ ಒಳಗಾಗಿದ್ದೇವೆ, ಇವತ್ತು ಕರ್ನಾಟಕದಲ್ಲಿ ೬ ಸಾವಿರ ಕಾಲೇಜುಗಳನ್ನು ಪ್ರಾರಂಭಿಸಿದ್ದೇವೆ. ಬೇಡಿಕೆ ಜಾಸ್ತಿ ಇದೆ. ೫೦ ಇಂಜಿನಿಯರಿಂಗ್ ಕಾಲೇಜುಗಳು ಇವೆ. ಪಾಲಿಟೆಕ್ನಿಕ್‌ಗಳು ಸುಮಾರು ಇವೆ. ಅದನ್ನೆಲ್ಲಾ ಓದಿದರೆ ಸುಮಾರು ಹೊತ್ತಾಗುತ್ತದೆ.

೧–೦೦ ಪಿ. ಎಂ.

ಸ್ವಾಮಿ, ೨೩ ಸಾವಿರವೋ ಏನೋ ಅಡ್ಮಿಷನ್ಸ್ ಆಗತಕ್ಕದ್ದು. ಇಷ್ಟು ದೊಡ್ಡ ಪ್ರಮಾಣದಲ್ಲಿದೆ. ಇದನ್ನೆಲ್ಲಾ ಸರಿ ಮಾಡಬೇಕು, ಹಾಗೆ ಮಾಡಬೇಕು, ಹೀಗೆ ಮಾಡಬೇಕು ಎಂದು ಪ್ರಾರಂಭವಾಗಿದೆ. ಪಿ.ಯು.ಸಿ. ಪಾಸ್ ಆದತಕ್ಷಣ ಮೆರಿಟ್ ಇರುವ ಮಕ್ಕಳು ಇಂಜಿನಿಯರಿಂಗ್‌ಗೆ ಮೆಡಿಕಲ್‌ಗೆ ಹೋಗುತ್ತಾರೆ. ಮೆರಿಟ್ ಲಿಸ್ಟ್ ಹೇಗಿದೆ ಸ್ವಾಮಿ ? ಮೆರಿಟ್ ಜೊತೆಗೆ ಸರ್ಕಾರಿ ಸೀಟು ಖಾಸಗೀ ಸಂಸ್ಥೆಗಳು ಕೊಡಬೇಕೆಂದು ಇದೆ. ೩೮ ಪರ್ಸೆಂಟೋ ಏನೋ ಕೊಡುತ್ತಾರೆ. ಇಷ್ಟಾದರೂ ಸ್ವಾಮಿ ಷೆಡ್ಯೂಲ್ಡ್ ಕ್ಯಾಸ್ಟ್ ಹುಡುಗರ ಕಟ್ ಆಫ್ ಪರ್ಸೆಂಟೇಜ್ ಎಷ್ಟಕ್ಕೆ ನಿಲ್ಲುತ್ತದೆಂದರೆ ೭೦ ಪರ್ಸೆಂಟಿಗೆ ಅಥವಾ ಸ್ವಲ್ಪ ಮೇಲೆ ನಿಲ್ಲುತ್ತದೆ. ೭೦ ಪರ್ಸೆಂಟಿಗಿಂತ ಕಡಿಮೆ ಇರುವವರಿಗೆ ಹರಿಜನ ಮಕ್ಕಳಿಗೆ ಮೆಡಿಕಲ್ ಸೀಟು ಸಿಗುವುದಿಲ್ಲ. ನಾನು ಖಾಸಗಿ ಕಾಲೇಜುಗಳ ಪರ್ಸೆಂಟೇಜ್ ಸೇರಿ ಹೇಳುತ್ತಿರುವುದು. ಇಂಜಿನಿಯರಿಂಗ್ ಕಾಲೇಜಿನಲ್ಲಿ ೫೮–೬೦ ಪರ್ಸೆಂಟಿಗೆ ಬಂದು ನಿಲ್ಲುತ್ತದೆ, ಮಕ್ಕಳ ಸಂಖ್ಯೆಯೂ ಜಾಸ್ತಿಯಾಗುತ್ತಿದೆ ಪಿ.ಯು.ಸಿ. ಬಗ್ಗೆ ಹೆಚ್ಚು ಗಮನ ಕೊಡಬೇಕಾಗುತ್ತದೆ. ನನಗೆ ಒಂದೊಂದು ಸಾರಿ ಅನ್ನಿಸುತ್ತದೆ ಎಸ್.ಎಸ್.ಎಲ್.ಸಿ. ಪಾಸ್ ಆದಮೇಲೆ ಎಲ್ಲರಿಗೂ ಪಿ.ಯು.ಸಿ ಗೆ ಹೋಗುವುದಕ್ಕೆ ಅವಕಾಶ ಕೊಡತಕ್ಕದ್ದು ಸರಿಯೇ ಅಥವಾ ಏನಾದರೂ ಒಂದು ಪರ್ಸೆಂಟೇಜ್ ನಿಗದಿ ಮಾಡುವುದು ಉತ್ತಮವೇ ? ಹಾಗೆ ಮಾಡಿದರೆ ಅವರೆಲ್ಲಾ ಎಲ್ಲಿಗೆ ಹೋಗಬೇಕು ಎಂಬ ಪ್ರಶ್ನೆ ಉದ್ಭವವಾಗಬಹುದು. ನನಗನ್ನಿಸುತ್ತದೆ ವೊಕೇಶನಲ್ ಕೋರ್ಸಸ್ ಇದೆ, ಐ ಟಿ.ಐ. ಇದೆ. ನಮ್ಮ ವೊಕೇಷನಲ್ ಕೋರ್ಸಸ್ ಬೇರೆ ಇದೆ. ಇಡೀ ಹಿಂದೂಸ್ಥಾನದಲ್ಲೇ ಉತ್ತಮವಾದ ಕೋರ್ಸ್‌ಗಳು ಇವೆ, ಆದರೆ ಇದಕ್ಕೆ ಬಜೆಟ್‌ನಲ್ಲಿ ಬಹಳ ಕಡಿಮೆ ಹಣ ಇಟ್ಟಿದ್ದೇವೆ. ಇದರ ಬಗ್ಗೆ ಚಿಂತನೆ ಮಾಡಬೇಕಾಗುತ್ತದೆ. ಈ ಕಡೆ ಅವರನ್ನು ಕಳುಹಿಸುವುದಕ್ಕೆ ವಿಚಾರ ಮಾಡಬೇಕಾಗಿದೆ. ಡಿಪ್ಲೊಮಾ ಮತ್ತು ಪಾಲಿಟೆಕ್ನಿಕ್ ಕಾಲೇಜುಗಳಿವೆ. ಮಾನ್ಯ ಅನಂತಕೃಷ್ಣ ಅವರು ಒಂದು ಮಾತು ಹೇಳಿದರು. ಡಿಪ್ಲೋಮಾದಲ್ಲಿ ಇರತಕ್ಕ ಸಿಲಬಸ್‌ಗಳು ಓಬೀರಾಯನ ಕಾಲದ್ದು ಎಂದು. ಸಿವಿಲ್ ಇಂಜಿನಿಯರಿಂಗ್ ಆಗಲೀ ಮೆಕಾನಿಕಲ್ ಇಂಜಿನಿಯರಿಂಗ್ ಆಗಲೀ ಎಲೆಕ್ಟ್ರಿಕಲ್ ಇಂಜಿನಿಯರಿಂಗ್ ಆಗಲೀ, ಈಗ ಕೈಗಾರಿಕೆಗಳು ಏನಿವೆ, ಅವರ ಅವಶ್ಯಕತೆ ಏನಿದೆ ಅದಕ್ಕೆ ತಕ್ಕಹಾಗೆ ಬೆಳೆಸಿದಹಾಗೆ ಕಾಣುವುದಿಲ್ಲ. ಕೆಲವು ಕೋರ್ಸ್‌ಗಳಿರಬಹುದು. ಐ.ಟಿ.ಐ. ಟ್ರೈನಿಂಗ್ ಮಾಡಿದರೂ ಕೆಲಸ ಇಲ್ಲದಂತಾಗುತ್ತಿದೆ. ಡಿಪ್ಲೊಮೋ ಪಾಸ್ ಮಾಡಿದರೂ ಕೆಲಸ ಇಲ್ಲ ಎಂದು ಹೇಳುತ್ತಾರೆ. ಸರ್ಕಾರವೇ ಕೆಲಸ ಕೊಡತಕ್ಕದ್ದು ಎಂಬ ಮನೋಭಾವ ಬಂದಿದೆ. ಇಂಡಸ್ಟ್ರೀಸ್‌ನಲ್ಲಿ ಅವರು ಉಪಯೋಗವಾಗುವ ರೀತಿಯಲ್ಲಿ ಕೋರ್ಸ್‌ಗಳನ್ನು ಮಾಡಿದಿದ್ದರೆ ಬಹಳಮಟ್ಟಿಗೆ ಈ ಕಷ್ಟ ಆಗುತ್ತಾ ಇರಲಿಲ್ಲ ಎಂದು ನನ್ನ ಭಾವನೆ. ನನಗೆ ಒಂದೊಂದು ಸಾರಿ ಮನಸ್ಸಿಗೆ ಬರುತ್ತಿದೆ. ಎಸ್.ಎಸ್.ಎಲ್.ಸಿ. ಪಾಸ್ ಮಾಡಿದರೂ, ೩೦–೩೫ ಮಾರ್ಕ್ಸ್ ಬಂದರೂ ನೀನು ಕಾಲೇಜಿಗೆ ಹೋಗು ಎಂದು ಅವನನ್ನು ಪಿ.ಯು.ಸಿ.ಗೆ ಕಳುಹಿಸಿ ಅವನು ಅಲ್ಲೂ

ಫೇಲಾಗಿ ಅವನಿಗೂ, ಸಮಾಜಕ್ಕೂ ಮತ್ತು ಅವನ ಸಂಸಾರಕ್ಕೂ ಹೊರೆಯಾಗುವ ಬದಲು ಬೇರೆ ರೀತಿಯಿಂದ ಅವನಿಗೆ ವೊಕೇಷನಲ್ ಕೋರ್ಸ್ ಬಲಪಡಿಸಿ ಅಲ್ಲಿ ಕಳುಹಿಸುವುದಕ್ಕೆ ಏತಕ್ಕೆ ವ್ಯವಸ್ಥೆ ಮಾಡಬಾರದು ? ಆ ರೀತಿ ಮಾಡುವುದು ಒಳ್ಳೆಯದು ಎಂದು ನನ್ನ ಅಭಿಪ್ರಾಯ. ಈ ಸದನದ ಮುಂದೆ ಇಟ್ಟಿದ್ದೇನೆ. ಆ ಒಂದು ತೀರ್ಮಾನವನ್ನು ಸರ್ಕಾರ ಇನ್ನೂ ತೆಗೆದುಕೊಂಡಿಲ್ಲ. ಆ ಅಭಿಪ್ರಾಯಕ್ಕೂ ಬಂದಿಲ್ಲ ಇನ್ನೂ ಹಾಗೆಯೇ ಪಿಯು.ಸಿ. ಆದಮೇಲೆ ಕೂಡ, ಇವತ್ತು ನಾನು ಏತಕ್ಕೆ ಪ್ರಸ್ತಾಪ ಮಾಡುತ್ತಿದ್ದೇನೆ ಎಂದರೆ ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೇ ೬೦ ಪರ್ಸೆಂಟಿಗಿಂತ ಕಡಿಮೆ ಇರುವವರಿಗೆ ಸೀಟು ಸಿಗುತ್ತಿಲ್ಲ ಎಂದು ಹೇಳುವಾಗ ಬೇರೆ ಕೋರ್ಸಸ್‌ಗೆ ಹೋಗುವ ರೀತಿಯಲ್ಲಿ ಏತಕ್ಕೆ ಮಾಡಬಾರದು ? ಪ್ರೀ ಯುನಿವರ್ಸಿಟಿ ಕೋರ್ಸನ್ನೇ ಏತಕ್ಕೆ ಸ್ಟ್ರೆಂತ್‌ನ್ ಮಾಡಬಾರದು ? ಅನೇಕ ರೀತಿಯ ವೊಕೇಷನಲ್ ಕೋರ್ಸ್‌ಗಳನ್ನು ಮಾಡಿದ್ದೇವೆ. ಅದರ ಬಗ್ಗೆ ಸುಮಾರು ಅಂಕಿಅಂಶಗಳಿವೆ. ಅದನ್ನು ನಾನು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಇನ್ನೂ ಹೆಚ್ಚು ಕೋರ್ಸ್‌ಗಳನ್ನು ಮಾಡಿ ಆ ದಿಸೆಯಲ್ಲಿ ಮಕ್ಕಳು ಹೋಗುವಂತೆ ಮಾಡಬಹುದು. ಹೈಯರ್ ಎಜುಕೇಷನ್‌ಗೆ ಹೋಗುವವರು ಹೋಗುವುದಕ್ಕೆ ಅವಕಾಶ ಇದೆ. ಅದಲ್ಲದೆ ಲಾಭದಾಯಕವಾದ ಉದ್ಯಮ ಮಾಡಬೇಕೆಂದು ಯಾರು ವಿಚಾರ ಮಾಡುತ್ತಾರೆ ಆ ವಿದ್ಯಾರ್ಥಿಗಳಿಗೆ ಆ ಕಡೆ ಹೋಗುವ ರೀತಿಯಲ್ಲಿ ವ್ಯವಸ್ಥೆ ಮಾಡುವುದು ಉತ್ತಮ. ಇಲ್ಲದೇ ಹೋದರೆ ೬೭ ಲಕ್ಷ ೪೦ ಸಾವಿರ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳೇನಿದ್ದಾರೆ ಆ ಸಂಖ್ಯೆಯನ್ನೂ ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಈ ಸಂಖ್ಯೆ ಹೈಸ್ಕೂಲಿಗೆ, ಪದವಿ ಪೂರ್ವ ಕಾಲೇಜಿಗೆ ಬಂದರೆ, ಫಸ್ಟ್ ಗ್ರೇಡ್ ಕಾಲೇಜಿಗೆ ಬಂದರೆ, ಇಂಜಿನಿಯರಿಂಗ್ ಕಾಲೇಜಿಗೆ ಬಂದರೆ ಅದನ್ನು ಓದಿ ಅಲ್ಲಿಂದ ಹೊರಗೆ ಬಂದಮೇಲೆ ಏನು ಸಮಸ್ಯೆ ಉಂಟಾಗಬಹುದು ಎಂಬುದನ್ನು ಯೋಚನೆ ಮಾಡಬೇಕು. ಅದೇ ರೀತಿ ಬಿ.ಎಡ್. ಕಾಲೇಜುಗಳಿವೆ. ಬೇರೆ ರಾಜ್ಯದಲ್ಲಿ ಎಷ್ಟಿದೆಯೋ ಗೊತ್ತಿಲ್ಲ, ನಮ್ಮಲ್ಲಿ ಸಾಕಷ್ಟು ಬಿ.ಎಡ್. ಕಾಲೇಜುಗಳನ್ನು ತೆರೆದಿದ್ದೇವೆ. ಟಿ.ಸಿ.ಎಚ್. ಇನ್‌ಸ್ಟಿಟ್ಯೂಟ್‌ಗಳು ಕೂಡ ನೂರಾರು ಇವೆ. ಇವತ್ತಿನ ಲೆಕ್ಕದ ಪ್ರಕಾರ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜಿನಲ್ಲಿ ಸುಮಾರು ೨೬—೨೭ ಸಾವಿರ ಲೈವ್ ರಿಜಿಸ್ಟರ್‌ನಲ್ಲಿ ಎನ್‌ರೋಲ್‌ಮೆಂಟ್ ಮಾಡಿದ್ದಾರೆ. ಪ್ರತಿವರ್ಷ ಬಿ.ಎಡ್.ನಲ್ಲಿ ೬೫೦೦ ಉಪಾಧ್ಯಾಯರು ತಯಾರಾಗಿ ಬರುತ್ತಿದ್ದಾರೆ. ಅವರಿಗೆಲ್ಲಾ ಕೆಲಸ ಕೊಡುವುದು ಎಲ್ಲಿ? ರಿಟೈರ್ ಆದವರು ಅಥವಾ ಸತ್ತವರ ಜಾಗದಲ್ಲಿ ೨೫-೩೦ ಪರ್ಸೆಂಟ್ ನೇಮಕ ಮಾಡಿಕೊಳ್ಳಬಹುದೇ ವಿನಹ ಎಲ್ಲರನ್ನು ನೇಮಕ ಮಾಡಿಕೊಳ್ಳುವುದಕ್ಕಾಗುವುದಿಲ್ಲ, ಇದನ್ನೆಲ್ಲಾ ಸದನ ಉಗ್ರವಾಗಿ ವಿಚಾರ ಮಾಡಬೇಕು. ನಿಖರವಾದ ತೀರ್ಮಾನಕ್ಕೆ ಬರಬೇಕಾಗುತ್ತದೆ. ಬಿ.ಎಡ್. ಕಾಲೇಜುಗಳನ್ನು ಗಮನಿಸಿಯೇ ಮೊಲ್ಮನೆಯಲ್ಲಿ ನಾನು ಹೇಳಿದೆ ಟಿ.ಸಿ.ಎಚ್. ಮತ್ತು ಬಿ.ಎಡ್. ಕಾಲೇಜುಗಳನ್ನು ಪಾಲಿಟೆಕ್ನಿಕ್‌ಗಳನ್ನು ಕೊಡುವುದಿಲ್ಲ ಎಂದು. ಅಷ್ಟೇ ಅಲ್ಲ ಸರಿಯಾಗಿ ಯಾವುದು ನಡೆಯುತ್ತಿಲ್ಲ ಅದನ್ನು ಮುಚ್ಚಬೇಕಾಗುತ್ತದೆಂದೂ ಪ್ರಸ್ತಾಪ ಮಾಡಿದ್ದೇನೆ. ಇನ್‌ಟೇಕ್ ನಂಬರ್ ಏನು ಏನು ಫಿಕ್ಸ್ ಮಾಡಿದ್ದೇವೆ ಅದನ್ನು ಕಡಿಮೆ ಮಾಡುವ ಅವಶ್ಯಕತೆ ಇದೆಯೋ ಏನೋ ಎನಿಸುತ್ತದೆ. ಮಾನ್ಯ ಏಕಾಂತಯ್ಯ ಅವರು ಬಹಳ ಚೆನ್ನಾಗಿ ಮಾತನಾಡಿದರು. ಯಾರೋ ಹೈಸ್ಕೂಲಿಗೋಸ್ಕರ ಬಂದಿದ್ದರು ಎಂದು ಹೇಳಿದರು. ಅವರ ಹತ್ತಿರ ಮಾತ್ರ ಅಲ್ಲ ನಮ್ಮನ್ನೂ ಕೇಳುತ್ತಾರೆ. ಏನಾದರೂ ಮಾಡಿ, ಬದುಕಿಕೊಳ್ಳುತ್ತೇವೆ ಎಂದು ಹೇಳುತ್ತಾರೆ. ನಮಗೂ ಸಂಕಟವಾಗುತ್ತದೆ. ಅವನೂ ನಾಲ್ಕು ಓಟು ಕೊಡಿಸಿರುತ್ತಾನೆ ಹೋಗಯ್ಯಾ ಎಂದು ಹೇಳುವಹಾಗಿಲ್ಲ. ಹೀಗಾಗಿ ಏನೋ ಹೇಳಿ ಕಳುಹಿಸುತ್ತಿದ್ದೇವೆ. ಆದರೆ ಅದನ್ನೇ ಒಂದು ಉದ್ಯೋಗವನ್ನಾಗಿ ಏನು ಮಾಡುತ್ತಿದ್ದಾರೆ ಅದು ಸರಿಯಲ್ಲ. ಬಿ.ಎಡ್. ಆಗಲೀ ಟಿ.ಸಿ.ಎಚ್. ಆಗಲೀ ಪಾಲಿಟೆಕ್ನಿಕ್ ಆಗಲೀ ಮಕ್ಕಳಿಗೋಸ್ಕರ ಇದೆಯೇ ವಿನಹ ಅದನ್ನು ತೆಗೆಯುತಕ್ಕವರಿಗಲ್ಲ, ಇದನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ತನ್ನ ನೀತಿ ಹಾಕಬೇಕಾಗುತ್ತದೆ, ಇದನ್ನು ಹಾಕುವ ದೃಷ್ಟಿಯಲ್ಲಿ ಸರ್ಕಾರ ಗಮನ ಹರಿಸಬೇಕಾಗುತ್ತದೆ. ಸರ್ಕಾರ ಗಮನ ಹರಿಸುತ್ತದೆಂದು ಪ್ರಸ್ತಾಪ ಮಾಡುತ್ತಿದ್ದೇನೆ.

ಇನ್ನು ಲಾಂಗ್ವೇಜ್ ಪಾಲಿಸಿ ಬಗ್ಗೆ ಒಂದು ವಿಚಾರ ಪ್ರಸ್ತಾಪ ಮಾಡಿದರು. ಮಾನ್ಯ ವಾಟಾಳ್ ನಾಗರಾಜ್ ಅವರು ಗೋಕಾಕ್ ವರದಿ ಬಗ್ಗೆ ಹೇಳಿದರು. ಗೋಕಾಕ್ ವರದಿ ಬಂದಮೇಲೆ ಈ ಸದನದಲ್ಲಿ ಒಂದು ತೀರ್ಮಾನವಾಗಿ ಜಿ. ಒ ಬಂದಿತ್ತು ಅದು ಹೈಕೋರ್ಟಿನಲ್ಲಿ ಸಿಂಧುವಾಗಲಿಲ್ಲ. ಸ್ಟ್ರಕ್ ಡೌನ್ ಆಯಿತು. ಅದಾದಮೇಲೆ ಮೊನ್ನೆ ಮತ್ತೊಂದು ಸರ್ಕಾರಿ ಹುಕುಂ ಮಾಡಿದ್ದಾರೆ. ಅದು ಮಕ್ಕಳಿಗೆ, ಕನ್ನಡದ ಮಕ್ಕಳಿಗೆ ಕನ್ನಡದ ಜನರಿಗೆ ಅನುಕೂಲವಾಗುವ ರೀತಿಯಲ್ಲಿ ಇಲ್ಲ. ಅದನ್ನು ಪರಿಶೀಲನೆ ಮಾಡುತ್ತಿದ್ದೇವೆ. ಅದನ್ನು ಮಂತ್ರಿಮಂಡಲದ ಗಮನಕ್ಕೆ ತರುವ ವಿಚಾರ ಇದೆ. ಇನ್ನೊಂದು ಸಮಯದಲ್ಲಿ ಗೌರ್ನಮೆಂಟ್ ಆರ್ಡರ್ ಬಗ್ಗೆ ಹೇಳುತ್ತೇನೆ. ಆದರೆ ಬಾರ್ಡರ್ ಪ್ರದೇಶದಲ್ಲಿ ಇರತಕ್ಕ ನಮ್ಮ ಮಕ್ಕಳ ಬಗ್ಗೆಯೂ ಚಿಂತನೆ ಮಾಡಬೇಕಾಗುತ್ತದೆ. ಅವರೂ ಕೂಡ ಅವರ ಮಕ್ಕಳ ಬಗ್ಗೆ

ಚಿಂತನೆ ಮಾಡಬೇಕಾಗುತ್ತದೆ. ಅಕ್ಕಲಕೋಟೆ ಸೊಲ್ಲಾಪುರದಲ್ಲಿ ಇರತಕ್ಕ ಮಕ್ಕಳ ಬಗ್ಗೆ ನಾವು ಹೇಗೆ ಪ್ರಸ್ತಾಪ ಮಾಡುತ್ತೇವೋ ಅದೇರೀತಿ ಅವರೂ ಕೂಡ ನಿಪ್ಪಾಣಿಯಲ್ಲಿ, ಬೆಳಗಾಂನಲ್ಲಿ, ಸೂಪಾದಲ್ಲಿ ಇರತಕ್ಕ ಮಕ್ಕಳ ಬಗ್ಗೆ ನಾವು ಹೇಗೆ ಪ್ರಸ್ತಾಪ ಮಾಡುತ್ತೇವೋ ಅದೇ ರೀತಿ ಅವರೂ ಕೂಡ ನಿಪ್ಪಾಣಿಯಲ್ಲಿ, ಬೆಳಗಾಂನಲ್ಲಿ, ಸೂಪಾದಲ್ಲಿ ಇರುವವರ ಬಗ್ಗೆಯೂ ವಿಚಾರ ಮಾಡಬೇಕಾಗುತ್ತದೆ. ಅದಕ್ಕೆ ಅನುಕೂಲವಾಗುವ ರೀತಿಯಲ್ಲಿ ಮಹಾರಾಷ್ಟ್ರ ಸರ್ಕಾರ ಒಂದು ಸರ್ಕಾರಿ ಹುಕುಂ ಮಾಡಿದೆ. ನಾನು ಅದನ್ನು ನೋಡಿದ್ದೇನೆ. ಅದು ಮಾತ್ರ ಅನುಕೂಲವಾಗಬಹುದು. ನಮ್ಮ ರಾಜ್ಯದಲ್ಲಿ ಮಾಡಿರತಕ್ಕದ್ದು ಅಷ್ಟು ಅನುಕೂಲವಾಗಿಲ್ಲ. ಅದರ ಪ್ರಕಾರ ೭ ಭಾಷೆಯಲ್ಲಿ ನಮ್ಮ ಮಕ್ಕಳಿಗೆ ಪಾಠ ಹೇಳಿಕೊಡುವ ವ್ಯವಸ್ಥೆ ಮಾಡಬೇಕಾಗಿದೆ. ಆದ್ದರಿಂದ ನಮ್ಮದು ಅನುಕೂಲವಾಗಿಲ್ಲ.

ಇದರಿಂದ ಕನ್ನಡಕ್ಕೆ ಪ್ರಾತಿನಿಧ್ಯ ಕಮ್ಮಿ ಆಗುತ್ತಿದೆ ಎಂಬ ವಿಚಾರವನ್ನು ನಾನು ಮಂತ್ರಿಮಂಡಲದಲ್ಲಿ ತಂದ ಮುಂದಿನ ಕ್ರಮ ಕೈಗೊಳ್ಳುತ್ತೇನೆ. ನಂತರ ಇದರ ಬಗ್ಗೆ ಸದನದಲ್ಲಿ ಪ್ರಸ್ತಾಪ ಮಾಡಲು ಪ್ರಯತ್ನ ಪಡುತ್ತೇನೆ. ಇನ್ನು ಸಣ್ಣ ಪುಟ್ಟ ವಿಚಾರಗಳ ಬಗ್ಗೆ ಕೆಲವು ಸನ್ಮಾನ್ಯ ಸದಸ್ಯರುಗಳು ಪ್ರಸ್ತಾಪ ಮಾಡಿದ್ದಾರೆ. ನಮ್ಮ ಬಾಬುಗೌಡ ಪಾಟೀಲ್‌ರವರು ಏನು ಹೇಳಿದರು ಅಂದರೆ ಕನ್ನಡದ ಬಗ್ಗೆ ಆಸಕ್ತಿ ವಹಿಸದೆ ಇರುವುದು ಅಷ್ಟೇ ಅಲ್ಲ, ಕೆಲವು ಉಪಾಧ್ಯಾಯರುಗಳು ರಾಜಕಾರಣವನ್ನು ಮಾಡುತ್ತಿದ್ದಾರೆ. ಹಾಗೂ ಬಹಳ ವರ್ಷಗಳಿಂದ ಒಂದೇ ಜಾಗದಲ್ಲಿದ್ದಾರೆಂದು ನನ್ನ ಗಮನವನ್ನು ಸೆಳೆದಿದ್ದಾರೆ. ಅವರ ಸಲಹೆಯನ್ನು ನಾನು ಗಮನಕ್ಕೆ ತೆಗೆದುಕೊಳ್ಳುತ್ತೇನೆ ಇವತ್ತು ಒಂದು ಪ್ರಶ್ನೆ ಉದ್ಭವವಾಗಿದೆ. ಇವತ್ತು ಭಾಷೆ ಏನಿದೆ ಕನ್ನಡ ಮತ್ತು ಇಂಗ್ಲೀಷ್ ಭಾಷೆ ಇವುಗಳ ಬಗ್ಗೆ ಒಂದೆರಡು ಮಾತನ್ನು ಕೇಳಬೇಕಾಗಿದೆ. ಶ್ರೀ ವಾಟಾಳ್ ನಾಗರಾಜ್‌ರವರು ಇಂಗ್ಲೀಷ್ ಭಾಷೆ ಬೇಡವೇ ಬೇಡ ಎಂದು ಹೇಳಿದರು. ಅದು ಆಗುವುದಿಲ್ಲ ಪ್ರಪಂಚದಲ್ಲಿರತಕ್ಕ ಜ್ಞಾನವನ್ನು ಪಡೆದುಕೊಳ್ಳಬೇಕಾದರೆ ಇಂಗ್ಲೀಷ್ ಭಾಷೆಯ ಮೂಲಕವಾಗಿ ಮಾತ್ರ ಅದು ಸಾಧ್ಯವಾಗುತ್ತದೆ. ಆದ್ದರಿಂದ ಯಾರಿಗೆ ಕಲಿಯಬೇಕೆಂದು ಆಸಕ್ತಿ ಇದೆ ಅವರು ಕಲಿಯಲು ಅನುಕೂಲಗಳನ್ನು ಮಾಡಿಕೊಡೋಣ. ಮಕ್ಕಳಿಗೆ ಭಾಷೆಯನ್ನು ಸರಿಯಾಗಿ ಹೇಳಿಕೊಡುವುದು ಬಹಳ ಅವಶ್ಯಕವಿದೆ. ಇವತ್ತು ಪದಸಂಪತ್ತು ಆ ಪದಗಳ ಮೇಲೆ ಹಿಡಿತ ಬರತಕ್ಕ ರೀತಿಯಲ್ಲಿ ಕಲಿಸುವ ವ್ಯವಸ್ಥೆ ಮಾಡಬೇಕು. ಹಾಗೆಯೇ ಕನ್ನಡದಲ್ಲಿಯೂ ಕೂಡ ಕಲಿಸತಕ್ಕ ಒಂದು ವ್ಯವಸ್ಥೆ ಇಲ್ಲ. ಮಾನ್ಯ ಸದಸ್ಯರು ಪ್ರಸ್ತಾವಿಕವಾಗಿ ಮಾತನಾಡಿದರು. ಅವರು ಹೇಳಿದರು ಹನುಮಂತಯ್ಯನವರ ಕಾಲದಲ್ಲಿ ಮಹಾಭಾರತ, ಮುಂತಾದ ಗ್ರಂಥಗಳನ್ನು ಕಡಿಮೆ ಬೆಲೆಯಲ್ಲಿ ಒದಗಿಸಬೇಕೆಂದು ಮಾಡಿದ್ದರು ಅದೇ ವ್ಯವಸ್ಥೆ ಮಾಡಬೇಕೆಂದು ಹೇಳಿದರು. ಅದೇ ರೀತಿ ಶ್ರೀ ಇದಿನಬ್ಬನವರು, ಬೇಂದ್ರೆಯವರ ಕವನಗಳು, ಪುಟ್ಟಪ್ಪನವರ ಗ್ರಂಥಗಳು, ರಾಮಾಯಣ ದರ್ಶನ, ಡಾ॥ ಶಿವರಾಂ ಕಾರಂತರ ಪುಸ್ತಕಗಳು, ಡಾ॥ ಗುಂಡಪ್ಪನವರು ಪುಸ್ತಕಗಳು, ಹೀಗೆ ದೊಡ್ಡ ದೊಡ್ಡ ನಮ್ಮ ರಾಜ್ಯದ ಸಾಹಿತಿಗಳ ಗ್ರಂಥಗಳನ್ನು ಜನ ಕೊಂಡುಕೊಂಡು ಅವುಗಳನ್ನು ಉಪಯೋಗ ಮಾಡಿಕೊಳ್ಳತಕ್ಕ ಮಾತನ್ನಾಡಿದ್ದಾರೆ, ನನಗನ್ನಿಸುತ್ತದೆ ಬಹಳ ಮಟ್ಟಿಗೆ ಈ ಸದನದ ಎಲ್ಲಾ ಸದಸ್ಯರುಗಳಿಗೂ ಕೂಡ ಮಕ್ಕಳಿದ್ದಾರೆ, ಮೊಮ್ಮಕ್ಕಳಿದ್ದಾರೆ, ಅಣ್ಣತಮ್ಮಂದಿರಿದ್ದಾರೆ. ನಮ್ಮ ಮಕ್ಕಳು ಶಾಲೆಗೆ ಹೋಗುವುದನ್ನು ನೋಡುತ್ತಿದ್ದೇವೆ. ಇವೊತ್ತು ಕನ್ನಡದಲ್ಲಿ ನಮ್ಮ ಮಕ್ಕಳಿಗೆ ಕಲಿಸುವ ಪುಸ್ತಕಗಳು ಏನು ಇವೆ ಅವುಗಳನ್ನು ಸರಿಯಾಗಿ ಓದಿ ಅರ್ಥ ಮಾಡಿಕೊಳ್ಳುವುದು ಎಷ್ಟರಮಟ್ಟಿಗೆ ಸಾಧ್ಯ ಎಂಬುದನ್ನು ಯೋಚನೆ ಮಾಡಬೇಕು. ೭,೮ ಅಥವಾ ೯ನೇ ತರಗತಿಯ ಪುಸ್ತಕಗಳನ್ನು ಓದಿದ ಹುಡುಗನು ಮಹಾಭಾರತವನ್ನು ಓದಿ ಅರ್ಥ ಮಾಡಿಕೊಳ್ಳಲು ಸಾಧ್ಯವೇ?, ರಾಮಾಯಣ ದರ್ಶನವನ್ನು ಓದಿ ಅರ್ಥ ಮಾಡಿಕೊಳ್ಳಲು ಸಾಧ್ಯವೇ ? ಪಂಪಭಾರತ, ಅಶ್ವತ್ಥಾಮ, ಓದಲು ಸಾಧ್ಯವೇ ಈಗ ಇಂತಹ ಪರಿಸ್ಥಿತಿ ಇದೆ. ಇದು ಆಗಬೇಕಾದರೆ ಯುವಕ ಯುವತಿಯರಿಗೆ ಕನ್ನಡ ಪದ ಸಂಪತ್ತು ಬರತಕ್ಕ ರೀತಿಯಲ್ಲಿ ನಾವು ಪುಸ್ತಕಗಳನ್ನು ಇಡುವುದು ಅವಶ್ಯಕವಾಗಿದೆ. ಯಾವರೀತಿಯ ಪುಸ್ತಕಗಳನ್ನು ಇಡಬೇಕೆಂಬುದರ ಬಗ್ಗೆ ಶ್ರೀ ಇದಿನಬ್ಬನವರು ಹೇಳಿದ್ದಾರೆ. ಈ ಪುಸ್ತಕಗಳ ಸೆಲೆಕ್ಷನ್ ಕಮಿಟಿಯಲ್ಲಿ ವಿದ್ವಾಂಸರುಗಳು ಹಾಗೂ ಎಲ್ಲಾ ವರ್ಗದ ಪ್ರತಿನಿಧಿಗಳು ಇರಬೇಕೆಂದು ಸಲಹೆ ಮಾಡಿದ್ದಾರೆ. ಅದು ಒಂದು ಉತ್ತಮವಾದ ಸಲಹೆಯಾಗಿದೆ. ಅದನ್ನು ಗಮನದಲ್ಲಿಟ್ಟುಕೊಂಡು ಬದಲಾವಣೆ ಮಾಡಬೇಕಾಗುತ್ತದೆ. ಶ್ರೀಮತಿ ಮೊಟ್ಟಮ್ಮನವರು ಟಿ. ಸಿ. ಹೆಚ್. ಪಾಸ್ ಮಾಡಿ ೭–೮ ವರ್ಷವಾದರೂ ಅವರಿಗೆ ಕೆಲಸ ಸಿಕ್ಕಿಲ್ಲವೆಂದು ಹೇಳಿದ್ದಾರೆ. ೧೦ ಸಾವಿರ ೧೨ ಸಾವಿರ ಜನರನ್ನು ನೇಮಕಮಾಡುವಾಗ ಇದರಲ್ಲಿ ಐದು ಸಾವಿರ ಜನರಿಗೆ ಮೆರಿಟ್ ಇಲ್ಲದಿದ್ದರೂ ಇವರ ಬಗ್ಗೆ ಪರಿಶೀಲನೆ ಮಾಡತಕ್ಕ ಮಾತನ್ನು ಹೇಳಿದ್ದಾರೆ.

ಶ್ರೀಮತಿ ಮೊಟಮ್ಮ.—ಏಜ್ ಬಾರ್ ಆಗಿರುವುದರಿಂದ ನಾನು ಹೇಳಿದ್ದುದು, ಅದರಲ್ಲಿ ಕೆಲವರಿಗೆ ಮೆರಿಟ್ ಇದೆ. ಈ ವರ್ಷ ಟಿ. ಸಿ. ಹೆಚ್. ಪಾಸ್ ಮಾಡಿ ಬಂದಿರತಕ್ಕವರು ಇರುತ್ತಾರೆ. ಆದರೆ ೫–೬ ವರ್ಷಗಳ ಹಿಂದೆ ಪಾಸ್ ಮಾಡಿರುವವರು ಬಹಳ ಜನ ಇದ್ದಾರೆ. ಅವರ ಬದುಕಿನ ಬಗ್ಗೆ ಯೋಚನೆ ಮಾಡಬೇಕೆಂದು ನಾನು ಹೇಳಿದ್ದುದು.

ಶ್ರೀ ಕೆ. ಹೆಚ್. ರಂಗನಾಥ್.—ಈ ಬಗ್ಗೆ ನನಗೆ ಚೆನ್ನಾಗಿ ಗೊತ್ತಿದೆ. ಇವರ ಬಗ್ಗೆ ಕಳಕಳಿ ಇದೆ, ಇಲ್ಲವೆಂದು ಅಲ್ಲ, ಆದರೆ ಸಮಸ್ಯೆ ಏನೆಂಬುದನ್ನು ನಾವೆಲ್ಲರೂ ಅರ್ಥಮಾಡಿಕೊಳ್ಳಬೇಕು, ೬೭ ಲಕ್ಷ ಮಕ್ಕಳ ಭವಿಷ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡು ನಾವು ಯೋಚನೆ ಮಾಡಬೇಕು. ಅದು ಈ ಸದನದ ಹೊಣೆಗಾರಿಕೆಯಾಗಿದೆ. ಕೊಡಬೇಕು. ಕೊಡಬಾರದೆಂಬ ವಿಷಯ ಅಲ್ಲ, ಸಿ. ಪಿ. ಎಡ್ ಬಿ. ಎಡ್. ಕಾಲೇಜುಗಳನ್ನು ಬಹಳ ಕೊಟ್ಟಿದ್ದಾರೆ. ಇವುಗಳಲ್ಲಿ ತರಬೇತಿ ಹೊಂದಿರುವವರು ಬಹಳ ಜನರಿದ್ದಾರೆ. ೪೦–೪೫ ಸಾವಿರ ಜನ ಸಿ. ಪಿ. ಎಡ್. ಮಾಡಿರುವವರು ಇದ್ದಾರೆ. ನಮ್ಮನ್ನು ಕೆಲಸಕ್ಕೆ ತೆಗೆದು ಕೊಳ್ಳಿಯೆಂದು ಕೇಳುತ್ತಿದ್ದಾರೆ. ಅವರು ಪೋಲೀಸ್ ಇಲಾಖೆಗೆ ಸೇರಿಕೊಳ್ಳುವ ಬಗ್ಗೆ ಶ್ರೀ ರಾಜಶೇಖರ ಮೂರ್ತಿಯವರಿಗೆ ನಾನು ಸಲಹೆ ಮಾಡಬೇಕಾಗಿದೆ. ನಮ್ಮಲ್ಲಿ ಜಾಗ ಇಲ್ಲ ಏನು ಮಾಡುವುದು.

ಅಧ್ಯಕ್ಷರು.—ಬಾರ್ಡರ್ ಸೆಕ್ಯೂರಿಟಿ ಪೋಸ್ಟ್‌ಗೆ ಕಳುಹಿಸಿ

ಶ್ರೀಮತಿ ಮೋಟಮ್ಮ.—ಪಾಠ ಮಾಡುವುದು ಒಂದು ಕಲೆ ಪಿ.ಹೆಚ್.ಡಿ. ಮಾಡಿರುವ ಲೆಕ್ಚರರು ಪಾಠ ಮಾಡಿದರೆ ನಾವು ಓದುತ್ತಿದ್ದಾಗ ನಿದ್ರೆ ಬರುತ್ತಿತ್ತು. ಅದೇ ಎಂ. ಎ. ಮಾಡಿದಂತಹ ಲೆಕ್ಚರರ್ ಬಹಳ ಅಟ್ರ್ಯಾಕ್ಟಿವ್ ಆಗಿ ಪಾಠ ಮಾಡುತ್ತಿದ್ದರು ಮೆರಿಟ್ ಮೇಲೆ ತೆಗೆದುಕೊಂಡ ಟಿ. ಸಿ. ಹೆಚ್. ಶಿಕ್ಷಕರೆಲ್ಲರೂ ಉತ್ತಮ ಶಿಕ್ಷಕರೆಂದು ಹೇಳಲು ಆಗುವುದಿಲ್ಲ. ಅವರಿಗಿಂತ ಪ್ರತಿಭಾವಂತರು ಪಾಠ ಮಾಡುವುದರಲ್ಲಿ ಇದ್ದಾರೆ. ಇಂತಹವರಿಗೆ ಅವಕಾಶ ಮಾಡಿಕೊಡಬೇಕೆಂಬ ದೃಷ್ಟಿಯಿಂದ ಹೇಳುತ್ತಿದ್ದೇನೆ.

ಶ್ರೀ ಬಿ. ಹೆಚ್. ಬನ್ನಿಕೋಡ್.—ಅನೇಕ ವರ್ಷಗಳಿಂದ ಆಯ್ಕೆಯಾಗದಿದ್ದುದರಿಂದ, ಅರ್ಜಿ ಕರೆಯದಿದ್ದುದರಿಂದ ಟಿಸಿಎಚ್, ಬಿಎಡ್ ಮಾಡಿರುವವರಿಗೆ ಅವಕಾಶಸಿಕ್ಕಿಲ್ಲ. ಇಂತಹವರಿಗೆ ವಯಸ್ಸಿನ ನಿರ್ಬಂಧ ಮಾಡುವುದು ಏಕೆ ? ಅವರಿಗೂ ಅವಕಾಶ ಕೊಡಬೇಕು.

ಶ್ರೀ ಕೆ ಹೆಚ್. ರಂಗನಾಥ್.—ಶ್ರೀಮತಿ ಮೋಟಮ್ಮನವರು ಅವರ ಕಾಲದಲ್ಲಿ ಇದ್ದಂತಹ ರೀಡರ್ಸ್ ಪ್ರೊಫೆಸರ್ಸ್ ಬಗ್ಗೆ ಪ್ರಸ್ತಾಪ ಮಾಡಿದರು. ಅಂತಹವರು ನಮ್ಮ ಕಾಲದಲ್ಲೂ ಇದ್ದರು. ಮಾನ್ಯ ರಾಜಶೇಖರಮೂರ್ತಿಯವರ ಕಾಲದಲ್ಲೂ ಇದ್ದರು ಘೋರ್ಪಡೆಯವರ ಕಾಲದಲ್ಲೂ ಇದ್ದರು ಸದಾ ಕಾಲದಲ್ಲೂ ಅಂತಹವರು ಇರುತ್ತಾರೆ.

ಶ್ರೀ ಎಂ. ಮಹದೇವ್.—ನಮ್ಮದು ನಿಮ್ಮದು ಕಾಲ ಬೇರೆ ಬೇರೆಯೋ ? ನಮ್ಮೆಲ್ಲರದ್ದೂ ಒಂದೇ ಕಾಲ

ಶ್ರೀ ಕೆ. ಹೆಚ್. ರಂಗನಾಥ್.—ಫಸ್ಟ್ ಕ್ಲಾಸ್ ಆದವರೆಲ್ಲರೂ ಪಾಠ ಮಾಡುವುದಕ್ಕಾಗುವುದಿಲ್ಲ ಕೆಲವರು ವಿದ್ವಾಂಸರಿರುತ್ತಾರೆ, ಕೆಲವರು ಏನೂ ರ್‍ಯಾಂಕ್ ಪಡೆಯದಿದ್ದರೂ ಚೆನ್ನಾಗಿ ಪಾಠ ಮಾಡುತ್ತಾರೆ. ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಹೀಗೆಂದಾಗ ನಾನು ತಕ್ಷಣ ಅವರು ಹೇಳಿದ್ದನ್ನು ನಿರಾಕರಣೆ ಮಾಡುತ್ತೇನೆಂದಲ್ಲ ಮತ್ತೆ ನಾವು ಇದಕ್ಕೆ ಬೇಕಾಗಿರತಕ್ಕ ರೆಕ್ರೂಟ್‌ಮೆಂಟ್ ರೂಲ್ಸ್ ಮಾಡುತ್ತಿದ್ದೇವೆ. ಅದನ್ನು ಮಾಡುವಾಗ ಅವರಿಗೆ ಅನುಕೂಲ ಆಗುವ ರೀತಿಯಲ್ಲಿ ಒಂದು ಸಲಹೆ ಮಾಡಿದ್ದೇವೆ. ಅದು ಇನ್ನೂ ಲಾ ಡಿಪಾರ್ಟ್‌ಮೆಂಟ್ ಮುಂದೆ ಇದೆ ಒಂದು ಹುದ್ದೆಗೆ ೫ ಜನರನ್ನು ಇಂಟರ್‌ವ್ಯೂಗೆ ಕರೆಯುತ್ತಿದ್ದು ಅದಕ್ಕೆ ಬದಲು ೧೦ ಜನರನ್ನು ಕರೆಯಬೇಕೆಂದು ಮಾಡಿದ್ದೇವೆ. ಮತ್ತೆ ವಯೋಮಿತಿಯನ್ನು ೪೦ ವರ್ಷದವರೆಗೆ ಜಾಸ್ತಿ ಮಾಡಬೇಕೆಂದು ಮಾಡಿದ್ದೇವೆ. ಇದು ಜಾರಿಗೆ ಬಂದರೆ ಅದರೊಳಗೆ ಇವರೆಲ್ಲಾ ಬರುತ್ತಾರೆ. ಇನ್ನೂ ಎಷ್ಟು ಮಾಡಬೇಕು ? ೫೦ಕ್ಕೆ ಮಾಡೋಣವೇ? ೫೦ಕ್ಕೆ ಒಪ್ಪಿದರೆ ಅದನ್ನೂ ಮಾಡೋಣ. ಇಷ್ಟು ಮಾಡಬೇಕೆಂದು ಮಾಡಿದ್ದೇವೆ.

ಶ್ರೀಮತಿ ಮೋಟಮ್ಮ.—೫೦ ಪರ್ಸೆಂಟ್ ಮೆರಿಟ್‌ನವರಿಗೆ ಹಾಗೂ ೫೦ ಪರ್ಸೆಂಟ್ ಏಜ್‌ಬಾರ್ ಆದವರಿಗೆ ಕೊಡಿ.

ಶ್ರೀ ಕೆ. ಹೆಚ್. ರಂಗನಾಥ್.—ಏಜ್‌ಬಾರ್ ಆಗಿರುವವರಿಗೆ ಮೆರಿಟ್ ನೋಡುವುದೇ ಬೇಡ ಎಂದರೆ ಅದು ಸ್ವಲ್ಪ ಕಷ್ಟ ಆಗಬಹುದು.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ.—ಟೀಚರ್ಸ್ ಟ್ರೈನಿಂಗ್ ಆದಮೇಲೆ ಅವರಿಗೆ ಕೆಲಸ ಕೊಡುವುದು ಸರ್ಕಾರದ ಜವಾಬ್ದಾರಿ ಇದೆ. ೫೦ ಪರ್ಸೆಂಟ್ ಮೆರಿಟ್‌ನವರಿಗೆ ಕೊಟ್ಟು ೫೦ ಪರ್ಸೆಂಟ್ ಏಜ್ ಆದವರಿಗೆ ಕೊಡಿ. ಹೀಗೆ ತಾವು ಮಾಡದೇ ಏಜನ್ನು ೪೦ ಅಲ್ಲ ೫೦ಕ್ಕೆ ಏರಿಸಿದರೂ ಏನೂ ಪ್ರಯೋಜನ ವಾಗುವುದಿಲ್ಲ. ಇಲ್ಲದಿದ್ದರೆ ಈ ಶಾಲೆಗಳನ್ನೇ ಮುಚ್ಚಿಸಿಬಿಡಿ.

ಶ್ರೀ ಕೆ. ಹೆಚ್. ರಂಗನಾಥ್.—ಶಾಲೆ ಮುಚ್ಚುವುದಕ್ಕೆ ಸದನ ಒಪ್ಪುವುದಿಲ್ಲ. ಆ ಜನರಿಗೂ ನಾವು ಅನುಕೂಲ ಮಾಡುತ್ತಿದ್ದೇವೆ. ನಿವೃತ್ತಿ ವಯಸ್ಸು ೫೫ ರಿಂದ ೫೮ಕ್ಕೆ ಹೋಯಿತು. ಅನಂತರ ನೇಮಕ ಮಾಡುವುದು ಮುಂದೆ ಹೋಯಿತು. ಈ ಕಾರಣದಿಂದ ೫–೬ ವರ್ಷಗಳಿಂದ ನೇಮಕ ಆಗಿಲ್ಲ

ಮತ್ತೆ ಹಿಂದೆ ೪೦–೫೦ ಪರ್ಸೆಂಟ್ ಮಾರ್ಕ್ಸ್ ತೆಗೆದುಕೊಂಡಿದ್ದವರು ಇಂದು ೬೦ ಪರ್ಸೆಂಟ್ ಮಾರ್ಕ್ಸ್ ತೆಗೆದುಕೊಂಡಿರುವವರ ಜೊತ ಕಾಂಪೀಟ್ ಮಾಡುವುದಕ್ಕೆ ತೊಂದರೆ ಇದೆ ಎನ್ನುವ ಅಭಿಪ್ರಾಯ ಕೂಡಾ ಇದೆ.

ಶ್ರೀಮತಿ ಚಂದ್ರಪ್ರಭಾ ಅರಸ್.—ನಮ್ಮ ಹಣಕಾಸಿನ ಮಂತ್ರಿಗಳು ಮನಸ್ಸು ಮಾಡಿದರೆ ಈಗ ನಿವೃತ್ತಿ ವಯಸ್ಸನ್ನು ೫೮ ರಿಂದ ೫೫ಕ್ಕೆ ಇಳಿಸಬಹುದು. ಇದರಿಂದ ನೇಮಕ ಮಾಡುವುದಕ್ಕೆ ನಿಮಗೂ ಅನುಕೂಲವಾಗುತ್ತದೆ.

ಶ್ರೀ ಕೆ. ಹೆಚ್. ರಂಗನಾಥ್.—ನನಗೆ ಈ ಮೇಸ್ತ್ರಿ ಕೆಲಸವೇ ಅಧಿಕವಾಗಿದೆ. ಇದನ್ನೇ ನಿಭಾಯಿಸ ಬೇಕಾದ್ದರಿಂದ ಅದೂ ನನಗೆ ಏಕೆ ಹೇಳುತ್ತೀರಿ ? ಇದರ ಗೋಳೆ ನನಗೆ ಸಾಕಾಗಿದೆ.

ಅಧ್ಯಕ್ಷರು.—ಅವರ ಕುತ್ತಿಗೆಗೆ ಅದನ್ನೂ ಏಕೆ ಕಟ್ಟುತ್ತೀರಿ ?

ಶ್ರೀ ವಾಟಾಳ್ ನಾಗರಾಜ್.—ತಮಗೆ ಈ ಕೆಲಸ ಸಾಕಾಗಿದೆಯೋ ?

ಶ್ರೀ ಕೆ. ಹೆಚ್. ರಂಗನಾಥ್.—ಇಲ್ಲ.

ಶ್ರೀ ಕೆ. ಪ್ರತಾಪ್‌ಚಂದ್ರಶೆಟ್ಟಿ.—ಮಾನ್ಯ ಗುಂಡೂರಾಯರು ಮುಖ್ಯಮಂತ್ರಿಗಳಾಗಿದ್ದಾಗ ವಯಸ್ಸನ್ನು ಆಧಾರವಾಗಿ ಇಟ್ಟುಕೊಂಡು ಕೆಲಸಕ್ಕೆ ತೆಗೆದುಕೊಂಡಿದ್ದಾರೆ. ಅದೇ ರೀತಿ ಈ ಸಾರಿಯೂ ೫೦ ಪರ್ಸೆಂಟ್ ವಯಸ್ಸಿನ ಆಧಾರದ ಮೇಲೆ ಮತ್ತು ೫೦ ಪರ್ಸೆಂಟನ್ನು ಮೆರಿಟ್ ಮೇಲೆ ತೆಗೆದು ಕೊಂಡರೆ ಹೆಚ್ಚಿನವರಿಗೆ ಅವಕಾಶ ಸಿಗುತ್ತದೆಂದು ಹೇಳುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್ ೧೯೮೨ರಲ್ಲಿ ಒಂದು ಸಾರಿ ನೇಮಕಾತಿಯನ್ನು ಈ ರೀತಿ ಮಾಡಿದ್ದಾರೆ ಮತ್ತೆ ಅದು ಸಮಸ್ಯೆ ಇದೆ ಅವರಿಗೆ ಅನಾನುಕೂಲ ಆಗಬಾರದು ಎಂದು ವಯಸ್ಸನ್ನು ಜಾಸ್ತಿ ಇಟ್ಟಿದ್ದೇವೆ. ಅವರಿಗೆ ನೌಕರಿ ಸಿಗುವ ವ್ಯವಸ್ಥೆಯನ್ನು ಮಾಡಿದ್ದೇವೆ. ಮೂರು ಜನರ ಒಂದು ಅಫೀಸಿಯಲ್ ಕಮಿಟಿ ಇದೆ. ಆ ಕಮಿಟಿಗೆ ನಾಲ್ಕು ಜನ ನಾನ್ ಆಫೀಸಿಯಲ್ಸ್ ಹಾಕಿ ಅವರ ಕಷ್ಟ ಸುಖಗಳನ್ನು ನೋಡತಕ್ಕ ವಿಚಾರ ಸರ್ಕಾರಕ್ಕೆ ಇದೆ.

ಇನ್ನು ವಿಶ್ವವಿದ್ಯಾನಿಲಯಗಳ ಬಗ್ಗೆ ಬಹಳ ಜನ ಸದಸ್ಯರುಗಳು ಪ್ರಸ್ತಾಪ ಮಾಡಲಿಲ್ಲ. ಮಾನ್ಯ ಕೌಜಲಗಿಯವರು ಒಂದು ವಿಚಾರವನ್ನು ಪ್ರಸ್ತಾಪ ಮಾಡಿದರು. ಮಾನ್ಯ ಶಿವಮೂರ್ತಿಯವರು ಪೋಟಮ್ಮನವರು ಮುರ್ನಾಲ್ಕು ಜನರು ಪ್ರಸ್ತಾಪಮಾಡಿದ್ದಾರೆ. ನಮ್ಮ ರಾಜ್ಯದಲ್ಲಿ ಆರು ವಿಶ್ವವಿದ್ಯಾನಿಲಯಗಳಿವೆ. ಕನ್ನಡ ವಿಶ್ವವಿದ್ಯಾನಿಲಯ ಮಾಡಬೇಕೆಂದು ಹೇಳಿ ಅದಕ್ಕಾಗಿ ೧ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ. ಕೆಲವು ಕಡೆ ವಿಶ್ವವಿದ್ಯಾನಿಲಯಗಳು ಪ್ರಾರಂಭವಾಗಲಿವೆ. ಬೆಳಗಾಂನಲ್ಲಿ ಟೆಕ್ನಿಕಲ್ ವಿಶ್ವವಿದ್ಯಾನಿಲಯವನ್ನು ಮಾಡಬೇಕೆಂದು ಇದ್ದೇವೆ. ಆದರೆ ಈ ವರ್ಷ ಅದನ್ನು ಪ್ರಾರಂಭ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಆ ವಿಷಯವನ್ನು ಹಿಂದಕ್ಕೆ ನಾವು ಹಾಕಿಲ್ಲ ಆ ವಿಚಾರವನ್ನು ಸರ್ಕಾರ ಕೈಬಿಟ್ಟಿಲ್ಲ. ಮಾನ್ಯ ಸದಸ್ಯರಾದ ಕೌಜಲಗಿಯವರು ಬೆಳಗಾಂನಲ್ಲಿ ವಿಶ್ವವಿದ್ಯಾನಿಲಯ ಸ್ಥಾಪನೆ ಮಾಡಲಿಕ್ಕೆ ಹಣವನ್ನು ಒದಗಿಕೊಡುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಅದರ ಬಗ್ಗೆ ಒಂದು ಪ್ರಾಜೆಕ್ಟ್ ಅನ್ನು ಕೊಟ್ಟರೆ ಬಹಳ ಒಳ್ಳೆಯದು. ಅದರ ಬಗ್ಗೆ ಸರ್ಕಾರ ಗಮನಹರಿಸುತ್ತದೆಂದು ಹೇಳುತ್ತೇನೆ.

ಇನ್ನು ವಿಶ್ವವಿದ್ಯಾನಿಲಯಗಳಲ್ಲಿ ಮೀಸಲಾತಿ ಸರಿಯಾಗಿ ಜಾರಿಯಾಗುತ್ತಿಲ್ಲವೆಂದು ಹೇಳಿದ್ದಾರೆ

ಶ್ರೀ ಡಿ. ಬಿ. ಚಂದ್ರೇಗೌಡ.—ಮಾನ್ಯ ಅಧ್ಯಕ್ಷರೆ, ಹಿಂದೆ ಹೆಲ್ತ್ ಯೂನಿವರ್ಸಿಟಿ ಮಾಡ ಬೇಕೆಂದಿದ್ದರು, ಅದರ ಬಗ್ಗೆ ಸರ್ಕಾರ ಏನಾದರೂ ಯೋಚನೆ ಮಾಡಿದೆಯೆ?

ಶ್ರೀ ಎಂ.ವಿ. ವೆಂಕಟಪ್ಪ.— ಈ ಬಗ್ಗೆ ಮಾನ್ಯ ಸಿದ್ದವೀರಪ್ಪನವರು ಆರೋಗ್ಯ ಮಂತ್ರಿ ಗಳಾಗಿದ್ದಾಗ ಒಂದು ಬಿಲ್ ಅನ್ನು ಕೂಡ ರೆಡಿ ಮಾಡಿದ್ದರು.

ಶ್ರೀ ಕೆ. ಹೆಚ್. ರಂಗನಾಥ್.—ರಾತ್ರಿಯೆಲ್ಲ ರಾಮಾಯಣ ಕೇಳಿ, ಬೆಳಗ್ಗೆ ಎದ್ದು ರಾಮನಿಗೂ ಸೀತೆಗೂ ಏನಾಗಬೇಕು ಎಂದಾಗಾಯಿತು. ಪ್ರಾಥಮಿಕಶಾಲೆಗಳಿಗೆ ಮೇಸ್ಟ್ರುಗಳಿಲ್ಲ. ಕಟ್ಟಡಗಳಿಲ್ಲ, ಹೈಸ್ಕೂಲ್‌ಗಳಿಗೆ ಮೇಸ್ಟ್ರುಗಳಿಲ್ಲ, ಕಟ್ಟಡಗಳಿಲ್ಲವೆಂದು ಗೋಳೋ ಎನ್ನುತ್ತಿರುವಾಗ ಹೆಲ್ತ್ ಯೂನಿವರ್ಸಿಟಿ ಮಾಡಿ ಅಂದರೆ ನಾನೇನು ಮಾಡಲಿ ? ಸ್ವಲ್ಪ ವಿಧಾನ ಮಾಡಿ. ಸ್ವಲ್ಪ ನನ್ನ ಭಾಷೆ ಅರ್ಥಮಾಡಿಕೊಳ್ಳಬೇಕು.

ಶ್ರೀ ಡಿ. ಬಿ. ಚಂದ್ರೇಗೌಡ.—ವಿಶ್ವವಿದ್ಯಾನಿಲಯಗಳ ಬಗ್ಗೆ ಹೇಳುತ್ತಾ ಹೇಳಿದಿರಿ. ತಾಂತ್ರಿಕ ವಿಶ್ವವಿದ್ಯಾನಿಲಯವನ್ನು ಮಾಡುತ್ತೇವೆಂದು ಹೇಳಿದ್ದೀರಿ. ನಮ್ಮ ಭಾಷೆ ತಿಳಿಯದಿದ್ದರೆ ನಾವೇನು ಮಾಡಬೇಕೆ ?

ಶ್ರೀ ಕೆ. ಹೆಚ್. ರಂಗನಾಥ್.—ನನ್ನ ಭಾಷೆ ನಿಮಗೆ ತಿಳಿಯುತ್ತದೆ. ನಿಮ್ಮ ಭಾಷೆ ನನಗೆ ತಿಳಿಯುತ್ತದೆ.

ಶ್ರೀ ಎಸ್. ಹೆಚ್. ಕೌಜಲಗಿ.—ಹೋದವರ್ಷ ರಾಜ್ಯಪಾಲರ ಭಾಷಣದಲ್ಲಿ ಬೆಂಗಳೂರಿನಲ್ಲಿ ಹೆಲ್ತ್ ಯೂನಿವರ್ಸಿಟಿ ಸ್ಥಾಪನೆ ಮಾಡುತ್ತೇವೆಂದು. ಹೇಳಿದ್ದರು ಅದರ ಫಲವಾಗಿ ನಾವು ಕೇಳುತ್ತೇವೆ.

ಶ್ರೀ ಕೆ ಹೆಚ್. ರಂಗನಾಥ್.—ರಾಜ್ಯದ ಜನತೆಯ ಮುಂದೆ ಆ ವಿಚಾರಗಳಿವೆ.

ಶ್ರೀ ಎಸ್. ಹೆಚ್. ಕೌಜಲಗಿ.—ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ ಏನು ಆಶ್ವಾಸನೆಯನ್ನು ಕೊಟ್ಟಿದ್ದಾರೆ ಅದನ್ನು ಈಡೇರಿಸುತ್ತೀರಾ ಎಂದು ಕೇಳುತ್ತಿದ್ದೇನೆ.

ಶ್ರೀ ಕೆ.ಹೆಚ್. ರಂಗನಾಥ್.—ನಾನು ನಿಮ್ಮನ್ನು ರಾಜಕೀಯವಾಗಿ ಚುಚ್ಚಲಿಲ್ಲ. ಅಷ್ಟು ತೊಂದರೆಕೊಟ್ಟಿದ್ದೀರಿ ನೀವು. ೧೨ ಸಾವಿರ ಉಪಾಧ್ಯಾಯರುಗಳನ್ನು ನೇಮಕ ಮಾಡಬೇಕಾಗಿದೆ. ಅರ್ಥಮಂತ್ರಿಗಳು ಹೇಳುತ್ತಿದ್ದರು ೨೦ ಸಾವಿರ ಶಿಕ್ಷಕರನ್ನು ನೇಮಕ ಮಾಡಿಕೊಂಡರೆ ೪೦ ಕೋಟಿ ರೂಪಾಯಿ ಕಮಿಟ್‌ಮೆಂಟ್ ಮಾಡುತ್ತೀರಿ ಎಂದು ಈಗಲೂ ಹೇಳುತ್ತಿದ್ದಾರೆ. ರಾಜ್ಯದಲ್ಲಿ ಹೆಲ್ತ್ ವಿಶ್ವವಿದ್ಯಾನಿಲಯ ಮತ್ತು ತಾಂತ್ರಿಕ ವಿಶ್ವವಿದ್ಯಾನಿಲಯಗಳನ್ನು ಮಾಡಬೇಕೆಂದು ಉದ್ದೇಶವಿದೆ ಸಧ್ಯಕ್ಕೆ ಅದನ್ನು ಮುಂದಕ್ಕೆ ಹಾಕಿದ್ದೇವೆಂದು ಹೇಳಿದ್ದೇನೆ. ರಿಸರ್ವೇಶನ್ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದೆ. ಮೀಸಲಾತಿ ನೀತಿ ಏನಿದೆ ಅದು ಸರ್ಕಾರದ ನೀತಿ. ಯಾರು ಈ ಸಮಾಜದಲ್ಲಿ ಬಹಳ ದಿವಸಗಳಿಂದ ವಂಚಿತರಾಗಿದ್ದಾರೆ, ಅವರಿಗೆ ಅನುಕೂಲ ಮಾಡಿಕೊಡಬೇಕು. ಅದರ ಬಗ್ಗೆ ಬಹಳ ಕಠಿಣವಾದ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇನೆ. ಶಾಲಾ ಕಾಲೇಜುಗಳಿಗೆ ಅನುದಾನ ಕೇಳಲಿಕ್ಕೆ ಬರುತ್ತಾರೆ ಯಾರು ಮೀಸಲಾತಿಯನ್ನು ಪಾಲನೆ ಮಾಡಿಲ್ಲ ಅಂತಹವರ ಅನುದಾನವನ್ನು ನಿಲ್ಲಿಸಿದ್ದೇನೆ. ಅನುದಾನ ಮಂಜೂರು ಮಾಡುತ್ತಿಲ್ಲ. ದುರದೃಷ್ಟವಶಾತ್ ಏಕೋ ಏನೋ ಭಿಕ್ಷೆ ಕೊಡುತ್ತಿದ್ದೇವೆ ಎನ್ನುವ ಭಾವನೆ ನಮ್ಮಲ್ಲಿದೆ, ಮೊದಲು ಅದು ತಪ್ಪಬೇಕು. ಅದರ ಮೂಲಕ್ಕೆ ಹೋಗುವುದಾದರೆ ಈ ಮೀಸಲಾತಿ ಏತಕ್ಕೆ ಬಂತು ? ಇವತ್ತು ನಾವು ೧೯೯೦ನೇ ಇಸವಿಯಲ್ಲಿದ್ದೇವೆ. ಈಗ ನಮ್ಮಲ್ಲಿ ಅಕ್ಷರಸ್ಥರ ಸಂಖ್ಯೆ ನೂರಕ್ಕೆ ೩೮ ಇದೆ. ಏತಕ್ಕೆ ಈ ಪರಿಸ್ಥಿತಿ ? ಶ್ರಮಜೀವಿಗಳ ವರ್ಗ ಬಹಳ ವರ್ಷಗಳಿಂದ ವಿದ್ಯೆಯಿಂದ ವಂಚಿತರಾಗಿದ್ದರಿಂದ ಇವತ್ತು ಅವರು ಹೆಬ್ಬೆಟ್ಟು ಒತ್ತುತ್ತಿದ್ದಾರೆ. ಇದು ಒಬ್ಬರ ಪ್ರಶ್ನೆಯಾದರೆ, ಇನ್ನು ಈ ಅಸ್ಪೃಶ್ಯರ ಪರಿಸ್ಥಿತಿ ಏನಾಗಿದೆ ಎಂದರೆ ಇವರು ಎಲ್ಲದರಲ್ಲೂ ವಂಚಿತರಾಗಿದ್ದರು, ದುಡಿಮೆಯಿಂದ ಜೀವನ ಮಾಡುವುದಕ್ಕೆ ಅನುಕೂಲವಾದಂಥ ವಾತಾವರಣದಿಂದ ವಂಚಿತರಾದಂಥ ಜನ ಇವರು. ಹೀಗಿರುವುದರಿಂದ ಇವತ್ತು ಸ್ವಾತಂತ್ರ್ಯ ಬಂದಾಗಿನಿಂದ ರಾಜ್ಯಾಂಗದಲ್ಲಿ ಏನು ಹೇಳಿಕೊಂಡಿದ್ದೇವೆ? ಜವಾಬ್ದಾರಿ ಇರತಕ್ಕಂಥ ಜನರಾದ ನಾವು ರಾಜ್ಯಾಂಗದಲ್ಲಿ ಏನುಹೇಳಿದ್ದೇವೆ? ಈ ಒಂದು ವರ್ಗದ ಜನ ಏನಿದ್ದಾರೆ ಹರಿಜನರು ಮತ್ತು ಗುಡ್ಡಗಾಡುಗಳಲ್ಲಿ ಇರತಕ್ಕಂಥ ಜನರನ್ನು ಆದಷ್ಟು ಜಾಗ್ರತೆ ಮುಂದಕ್ಕೆ ತರಬೇಕು. ಸ್ವಾಮಿ, ನಾವು ಇಟ್ಟಿರತಕ್ಕಂಥ ಮೀಸಲಾತಿ ಏನಿದೆ ಅದು ಮಿನಿಮಮ್ ರೆಪ್ರಸೆಂಟೇಶನ್ ಅದಕ್ಕಿಂತ ಜಾಸ್ತಿ ಬಂದರೆ ತಪ್ಪೇನೂ ಆಗುವುದಿಲ್ಲ. ಅದನ್ನು ವಿಚಾರ ಮಾಡಬೇಕಾಗಿದೆ. ಇವತ್ತು ಹರಿಜನರಿಗೆ ಇರತಕ್ಕಂಥ ಮೀಸಲಾತಿ ಮತ್ತು ಗುಡ್ಡಗಾಡುಗಳಲ್ಲಿ ಇರತಕ್ಕಂಥ ಜನರಿಗೆ ಇರತಕ್ಕಂಥ ಮೀಸಲಾತಿ ಸರಿಯಾದ ರೀತಿಯಲ್ಲಿ ಇಲ್ಲದೇ ಇದ್ದುದರಿಂದ ಅವರು ತೊಂದರೆ ಒಳಗಾಗಿದ್ದಾರೆ. ಅದೇರೀತಿ ಇವತ್ತು ಅವರು ವಿದ್ಯಾವಂತರಾಗುತ್ತಿದ್ದಾರೆ. ಆದರೆ ಅವರು ಕೇಳುವುದಕ್ಕೆ ಮುಂಚಿತವಾಗಿ ಕಾನೂನು ಪ್ರಕಾರ ನಾವು ಏನು ಮಾಡಬೇಕೋ ಅದನ್ನು ಮಾಡಿಮುಗಿಸಬೇಕಾಗುತ್ತದೆ. ಅದನ್ನು ಮಾಡಿಮುಗಿಸದೇ ಹೋದರೆ ತಪ್ಪು ಮಾಡಿದಂತಾಗುತ್ತದೆ, ರಾಜ್ಯಾಂಗಕ್ಕೆ ಅಪಚಾರ ಮಾಡಿದಂತಾಗುತ್ತದೆ. ನಾವು ಮಾಡಿರತಕ್ಕ ಕಾನೂನನ್ನು ನಾವು ಪಾಲನೆ ಮಾಡದ ಹಾಗೆ ಆಗುತ್ತದೆ. ಹೀಗಿರುವಾಗ ಯಾರು ಅದನ್ನು ಯೋಚನೆ ಮಾಡಬೇಕಾಗಿತ್ತೋ ಅವರು ಮಾಡದೇ ಇರತಕ್ಕಂಥ ನೀತಿಯನ್ನು ಅನುಷ್ಠಾನ ಮಾಡಿದರೆ ಅಥವಾ ಬುದ್ಧಿಪೂರ್ವಕವಾಗಿ ಮಾಡಿದರೆ ಏನು ಹೇಳಬೇಕು ? ಮಾನ್ಯ ಕೌಜಲಗಿಯವರು ಒಂದು ವಿಚಾರವನ್ನು ಪ್ರಸ್ತಾಪ ಮಾಡಿದರು. ಪ್ರತಿ ಸಬ್ಜೆಕ್ಟ್‌ನಲ್ಲಿ ರಿಸರ್ವೇಶನ್ ಇದೆ, ಇದರಿಂದ ಸ್ವಲ್ಪ ತೊಂದರೆಯಾಗುತ್ತದೆಎಂದು ಪ್ರಸ್ತಾಪ ಮಾಡಿದ್ದಾರೆ ನಾನು ಅಧಿಕಾರಿಗಳಜೊತೆ ಪ್ರಸ್ತಾಪ ಮಾಡಿ ಅದನ್ನು ಯೋಚನೆ ಮಾಡುತ್ತೇನೆ. ಕೆಲವು ಸಾರಿ ಏನು ಮಾಡುತ್ತಾರೆ ಎಂದರೆ ಸಂಸ್ಕೃತದೊಳಗೆ ಪೋಸ್ಟ್ ಇದ್ದರೆ ಅದನ್ನು ರಿಸರ್ವ್‌ಮಾಡಿಬಿಡುವುದು. ಯಾವನು ಅದನ್ನು ಮಾಡಿಕೊಂಡುಬಂದಿರುತ್ತಾನೆ ? ಖಾಸಗಿ ಶಾಲೆಗಳು ಕೂಡ ಸ್ವಲ್ಪ ವಿಚಾರ ಮಾಡಬೇಕಾಗುತ್ತದೆ. ಹೀಗೆ ಮಾಡಿ ಸ್ವಲ್ಪ ಕಾಲ ದೂರ ಸರಿಯಬಹುದೇ ವಿನಹ ಅವನಿಗೆ ಇವತ್ತು ತಿಳುವಳಿಕೆಬರುತ್ತಿದೆ. ಯಾರನ್ನು ವಂಚಿತರನ್ನಾಗಿ ಮಾಡುತ್ತಿದ್ದೇವೆ, ಆತನಿಗೆ ಇವತ್ತು ಜ್ಞಾನ ಬಂದಿದೆ ತಿಳುವಳಿಕೆ ಬಂದಿದೆ. ನಾನು ಈ ದೇಶದಲ್ಲಿ, ಭರತಖಂಡದಲ್ಲಿ ಇರಬೇಕಾದರೆ ನಾನು ಬೇರೆಯವರಂತೆ ಬಾಳಬೇಕು ಎನ್ನತಕ್ಕಂಥ ತಿಳುವಳಿಕೆ ಆತನಿಗೆ ಬಂದಿರುವುದರಿಂದ ಇವತ್ತು ಅವನಿಗೆ ಅರ್ಥವಾಗುತ್ತದೆ ನಾಳೆ ಅದಕ್ಕಾಗಿ ಆತ

ಹೋರಾಟ ಮಾಡುತ್ತಾನೆ, ಹೋರಾಟ ಮಾಡುವಾಗ ಶ್ರೀ ವಾಟಾಳ್ ನಾಗರಾಜ್ ಅವರು ಪ್ರಸ್ತಾಪ ಮಾಡಿದಂತೆ ಅಸ್ಸಾಂನಲ್ಲಿ ಅದಂಥ ಪರಿಸ್ಥಿತಿ ಆಗಬಾರದು, ಈ ಪರಿಸ್ಥಿತಿಗೆ ನಮ್ಮನ್ನು ನಾವು ತೆಗೆದು ಕೊಂಡುಹೋದರೆ ಅದು ಸರಿಯಾಗುವುದಿಲ್ಲ. ಈ ದೃಷ್ಟಿಯಿಂದ ಹೊಣೆಗಾರಿಕೆ ಸ್ಥಾನದಲ್ಲಿರತಕ್ಕಂಥ ಜನ ಏನಿದ್ದಾರೆ, ಈ ಜನರು ಕೇಳುವುದಕ್ಕೆ ಸಂಕುಚಿತವಾಗಿಯೇ ಇದನ್ನು ಮಾಡಿಸಿಕೊಡತಕ್ಕಂಥ ಮನೋಭಾವನೆಯನ್ನು ಬೆಳೆಸಿಕೊಳ್ಳಬೇಕು ಎಂದು ಸದನದ ಮುಂದೆ ಹೇಳುತ್ತಾ, ನನಗನ್ನಿಸುತ್ತದೆ ಇವತ್ತು ಏನು ಕಠಿಣವಾದ ಕ್ರಮ ತೆಗೆದುಕೊಂಡಿದ್ದೇನೆ. ಅದನ್ನು ನಿಲ್ಲಿಸುತ್ತೇನೆ ಎಂದು. ಇದೇನೂ ನಾನು ಸಂತೋಷದಿಂದ ನಿಲ್ಲಿಸಿದ್ದೇನೆ ಎಂದಲ್ಲ, ಅವರಿಗೆ ನಾನು ಹೇಳಿದ್ದೇನೆ, ಬುದ್ಧಿಪೂರ್ವಕವಾಗಿ ಹೀಗೆ ಮಾಡಿದರೆ ನಾವು ಅನಿವಾರ್ಯವಾಗಿ ಮಾಡಬೇಕಾಗುತ್ತದೆ ಎಂದು ಹೇಳಿ. ಆದ್ದರಿಂದ ಅವರು ಮುಂದುವರೆಸಿಕೊಂಡು ಹೋದರೆ ಕೊಡುವುದಿಲ್ಲ. ಅದನ್ನು ಬದಲಾವಣೆ ಮಾಡಿದರೆ ಕೊಡುತ್ತೇವೆ ಎಂಬ ಮಾತನ್ನು ಹೇಳುತ್ತಾ, ಶ್ರೀ ಶಿವಮೂರ್ತಿಯವರು ಹೇಳಿದರು ಅನುದಾನ ಕೊಡಬೇಕಾದರೆ ಎಸ್ ಸಿ. ಎಸ್.ಟಿ. ವರ್ಗಗಳಿಗೆ ಸೇರಿದವರು ಶಾಲೆಗಳನ್ನು ಏನು ಪ್ರಾರಂಭ ಮಾಡಿದ್ದಾರೆ ಅವರಿಗೆ ಅನುದಾನವನ್ನು ಮೊದಲನೆಯ ವರ್ಷದಿಂದಲೇ ಕೊಡಬೇಕು ಎಂದು ಈಗ ಕಳೆದವರ್ಷದಿಂದ ಅನುದಾನವನ್ನು ನಿಲ್ಲಿಸಿದ್ದರು. ಈಗ ಕೊಡುವುದಕ್ಕೆ ಪ್ರಾರಂಭ ಮಾಡಿದ್ದೇವೆ. ಅನುದಾನ ಕೊಡಬೇಕೆಂದು ಸರ್ಕಾರದ ಆರ್ಡರ್ ಪ್ರಾಸ್ಪೆಕ್ಟಿವ್ ಆಗಿರುತ್ತದೆ. ರೆಟ್ರಾಸ್ಪೆಕ್ಟಿವ್ ಆಗಿ ಇರುವುದಕ್ಕೆ ಸಾಧ್ಯವಿಲ್ಲ. ಅಂತೆಯೇ ಯಾವಾಗ ಆರ್ಡರ್ ಮಾಡುತ್ತೇವೆ, ಅವೊತ್ತಿನಿಂದ ಅದು ಜಾರಿಗೆ ಬರುತ್ತದೆ. ಹಿಂದೆ...

ಶ್ರೀ ಕೆ. ಶಿವಮೂರ್ತಿ.—ಅಧ್ಯಕ್ಷರೇ, ಹೀಗೆ ಮಾಡಿದರೆ ಅವರಿಗೆ ಅನ್ಯಾಯವಾಗುತ್ತದೆ...

ಶ್ರೀ ಕೆ. ಎಚ್. ರಂಗನಾಥ್.—ತಾವು ಆಮೇಲೆ ಕೇಳಿ.

ಅಧ್ಯಕ್ಷರು.—ಶ್ರೀ ಶಿವಮೂರ್ತಿಯವರೇ, ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಕೆ. ಹೆಚ್. ರಂಗನಾಥ್.—

ಮತ್ತೆ ಏನಾದರೂ ಪ್ರಶ್ನೆ ಇದ್ದರೆ ನನ್ನ ಗಮನಕ್ಕೆ ತರಲಿ......

ಶ್ರೀ ಕೆ. ಶಿವಮೂರ್ತಿ.—ಅವರು ಹಣಕಾಸಿನ ವಿಷಯದಲ್ಲಿ ಸೌಂಡ್ ಇಲ್ಲ. ಅವರು ಸಂಬಳ ಕೊಟ್ಟು ಟೀಚರ್ಸ್ ನೇಮಕ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ. ಇದನ್ನು ಕ್ಯಾಬಿನೆಟ್ ಮುಂದೆ ತರದೇ ಮಾಡಿರತಕ್ಕ ತೀರ್ಮಾನ. ದಯಮಾಡಿ ಎಕಾನಮಿ ಮೆಂಜರ್ ಅಪ್ಲೈ ಮಾಡಿ, ತಾವು ಪ್ರಾಸ್ಪೆಕ್ಟೀವ್ ಆಗಿ ಎಫೆಕ್ಟಿಗೆ ಕೊಡದೇ ಹೋದರೆ ತಪ್ಪಾಗುತ್ತದೆ.

ಶ್ರೀ ಕೆ. ಹೆಚ್. ರಂಗನಾಥ್.—ನಾವು ಈ ವಿಚಾರಗಳನ್ನು ಪ್ರಸ್ತಾಪ ಮಾಡಿ, ಇದಕ್ಕಾಗಿ ಕೆಲಸ ಮಾಡಿಕೊಂಡು ಬಂದಂಥ ಜನಕ್ಕೆ, ತಾವು ಪ್ರಸ್ತಾಪ ಮಾಡುತ್ತಿರುವ ವಿಷಯ ಗೊತ್ತಾಗುತ್ತದೆ. ಕಾನೂನು ಪ್ರಕಾರ ಪ್ರಾಸ್ಪೆಕ್ಟೀವ್ ಆಗಿದೆ, ಆದ್ದರಿಂದ ಅವತ್ತಿನಿಂದ ಜಾರಿಗೆ ಬರುತ್ತದೆ ಎಂದು ಹೇಳಿದ್ದೇವೆ. ಮುಂದೆ ಯಾವತ್ತಾದರೂ ಕನ್‌ಸಿಡರ್ ಮಾಡುವುದಕ್ಕೆ ಸರ್ಕಾರಕ್ಕೆ ಅವಕಾಶ ಇದೆ.

ಶ್ರೀ ಕೆ. ಶಿವಮೂರ್ತಿ.—ಮಾನ್ಯ ಅಧ್ಯಕ್ಷರೇ, ಹಿಂದಿನವರು......

ಅಧ್ಯಕ್ಷರು.— ಸಾಧ್ಯವಿಲ್ಲ, ತಾವು ದಯವಿಟ್ಟು ಕುಳಿತುಕೊಳ್ಳಬೇಕು, ನೀವು ಏನೇ ಮಾತನಾಡಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ ಮಂತ್ರಿಗಳ ಉತ್ತರ ಮುಗಿದ ಮೇಲೆ ಕ್ಲಾರಿಫಿಕೇಷನ್ ಕೇಳಬೇಕು.

ಶ್ರೀ ಕೆ. ಹೆಚ್. ರಂಗನಾಥ್.—ಕಾರಣಾಂತರಗಳಿಂದ ಖಾಯಂ ಆಗಿ ಕೊಡಬಾರದೆಂದು ಹೇಳಿ ಇವತ್ತು ಸ್ಯಾಂಕ್ಷನ್ ಮಾಡಿದ್ದಾರೆ. ಕೊಡುವಂತಹ ಪ್ರಯತ್ನವನ್ನು ಸರ್ಕಾರ ಮಾಡಿದೆ, ಕೊಡುತ್ತಾ ಇದ್ದೇವೆ. ಮುಂದೆ ಕೊಡುವುದರ ಬಗ್ಗೆ ಏನಾದರೂ ತೊಂದರೆ ಆದರೆ, ಅದನ್ನು ನೋಡುತ್ತೇನೆ ಎನ್ನುವ ಮಾತನ್ನು ಹೇಳುತ್ತೇನೆ. ಮತ್ತು ಈ ಶಾಲೆಗಳೂ ಕಡಿಮೆ ಇವೆಯೆಂದು ತಿಳಿದುಕೊಳ್ಳಬೇಡಿ ಎಸ್-ಸಿ. ಎಸ್.ಟಿ. ವಿದ್ಯಾಸಂಸ್ಥೆಗಳು ಒಂದು ಸಾವಿರಕ್ಕೂ ಮೇಲ್ಪಟ್ಟು ಇವೆ. ಒಂದೆರೆಡಲ್ಲ, ಮಾನ್ಯ ಖರ್ಗೆಯವರು ಎಜುಕೇಷನ್ ಮಿನಿಸ್ಟರಾಗಿದ್ದಾಗ, ೧೯೭೬ರಲ್ಲಿ ಒಂದು ನೀತಿಯನ್ನು ತೆಗೆದುಕೊಂಡು ಬಂದಾಗ ಇವುಗಳನ್ನು ಪ್ರಾರಂಭ ಮಾಡಿದರು. ಮಾನ್ಯ ಕೆ.ಹೆಚ್. ಪಾಟೀಲರೂ ಇದ್ದಾರೆ, ನಾವು ಅರ್ಧ, ಅರ್ಧ ಮಾಡಿದ್ದೆವು. ಅರ್ಧ ಸವರ್ಣೀಯರಿಗೆ ಇರಬೇಕು. ಅರ್ಧ ಹರಿಜನ ಮ್ಯಾನೇಜಮೆಂಟ್ ಇಡಬೇಕೆಂದು ಮಾಡಿದ್ದೆವು. ನೂರಕ್ಕೆ ನೂರು ಅವರೇ ಇರಬೇಕೆಂದು ಮಾನ್ಯ ಪಾಟೀಲರು ಹೇಳಿದರು. ಇದೂ ಕೂಡ ತಪ್ಪು ಮಾಡುತ್ತಿದ್ದೇವೆ. ಮಾನ್ಯಸದಸ್ಯರು ಇದರ ಬಗ್ಗೆ ಗಮನಹರಿಸಬೇಕು. ಕೆಲವು ಸವರ್ಣೀಯರು, ಇವರ ಹೆಸರನ್ನಿಟ್ಟುಕೊಂಡು ಶಾಲಾ ಕಾಲೇಜುಗಳನ್ನು ಪ್ರಾರಂಭ ಮಾಡುತ್ತಿದ್ದಾರೆ.

ನನಗೆ ಇದು ಗೊತ್ತಿಲ್ಲವೆಂದು ತಿಳಿದುಕೊಳ್ಳಬಾರದು. ರಂಗೋಲಿ ಕೆಳಗೆ ನುಸುಳುವ ವಿಚಾರಗಳೆಲ್ಲವೂ ನನಗೆ ಗೊತ್ತಾಗುತ್ತದೆ, ಅರ್ಥವಾಗುತ್ತದೆ. ಇದನ್ನು ಸರಿ ಮಾಡುವುದು ಬೇರೆ. ಇವತ್ತು ಈ ಸದನದಲ್ಲಿ ನಾವು ಏನು ಪ್ರಸ್ತಾಪ ಮಾಡುತ್ತಿದ್ದೇವೆ ಸಮಾಜದ ಬಗ್ಗೆ ಕಳಕಳಿ ಇರತಕ್ಕ ಈ ಸದನ, ಸಮಾಜಕ್ಕೆ ಏನು ತೊಂದರೆ ಇದೆ ಎಂಬುದನ್ನೂ ಗಮನಿಸಿ ಪ್ರಸ್ತಾಪ ಮಾಡಬೇಕು. ಯಾರೇ ಆಗಲಿ ತಪ್ಪು ಮಾಡಿದರೆ, ಅದಕ್ಕೆ ಏನು ಮಾಡಬೇಕೆಂಬುದನ್ನು ತದನಂತರ ನೋಡೋಣ. ಇವತ್ತು ಪ್ರಾಸ್ಪೆಕ್ಟೀವ್ ಆಗಿ ಆರ್ಡರ್ ಕೊಟ್ಟಿದ್ದರಿಂದಲೇ ಸುಮಾರು ೯೦ ಕೋಟಿಯಷ್ಟು ಕೊಡಬೇಕಾಗುತ್ತಿದೆ, ಒಂದೆರಡಲ್ಲ. ಇನ್ನು ರೆಟ್ರಾಸ್ಪೆಕ್ಟೀವ್ ಆಗಿ ಕೊಟ್ಟರೆ ಏನಾಗುತ್ತದೆ? ಇದನ್ನೂ ಕೂಡ ಅಂಕಿಅಂಶ ತರಿಸೋಣ ಎನ್ನುವ ಮಾತನ್ನು ಹೇಳುತ್ತೇನೆ. ಇನ್ನು ಬಹಳವಾಗಿ ಪ್ರಸ್ತಾಪ ಮಾಡಿದಂಥ ಒಂದು ವಿಚಾರ ಎಂದರೆ, ಈ ಖಾಸಗೀ ಕಾಲೇಜುಗಳು ಮತ್ತು ದೇಣಿಗೆ, ಇದರಲ್ಲಿ ತೊಂದರೆ ಆಗುತ್ತಿರುವುದರ ಬಗ್ಗೆ ಸರ್ಕಾರ ಏನು ಮಾಡಬೇಕು. ಈ ಒಂದು ವಿಚಾರವನ್ನು ಎಲ್ಲಾರೂ ಪ್ರಸ್ತಾಪ ಮಾಡಿದರು. ಸರ್ಕಾರ ಕಣ್ಣು ಮುಚ್ಚಿಕೊಂಡು ಕುಳಿತಿರುತ್ತದೆ, ಸರ್ಕಾರ ನಿರ್ವೀರ್ಯವಾಗಿದೆ. ನಿಮಗೆ ಶಕ್ತಿ ಇಲ್ಲ, ಇವತ್ತು ಇದು ಹೆಮ್ಮರವಾಗಿ ಬೆಳೆದುಕೊಂಡು ಹೋಗಬೇಕೇ ಎನ್ನುವಂಥ ಪ್ರಶ್ನೆ ಇವತ್ತಿನದಿವಸ ಬಂದಿದೆ. ಈ ಒಂದು ಸ್ಥಿತಿಯನ್ನು ನಿವಾರಣೆ ಮಾಡುವುದಕ್ಕೆ ಎಜುಕೇಷನ್ ಬಿಲ್ಲಿನಲ್ಲಿ ಪ್ರಸ್ತಾಪವಾಗಿದೆ. ಇದು ಜಾರಿಗೆ ಬಂದರೆ ಬಹಳಮಟ್ಟಿಗೆ ಈ ಕಷ್ಟಗಳು ಏನಿವೆ ಇದನ್ನು ತಡೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ೧೯೭೨ನೇ ಇಸವಿಯಲ್ಲಿ ಜೆ. ಬಿ. ಮಲ್ಲಾರಾಧ್ಯ ಅವರ ನೇತೃತ್ವದಲ್ಲಿ ಇದು ಪ್ರಾರಂಭವಾದುದ್ದು, ಮೊನ್ನೆ ಮೊನ್ನೆ ೧೯೮೬ನೇ ಇಸವಿಯಲ್ಲಿ ಪಾಸಾಗಿದೆ. ಪಾಸಾಗಿ ಕೇಂದ್ರ ಸರ್ಕಾರಕ್ಕೆ ಹೋಗಿತ್ತು, ಅಲ್ಲಿಂದ ಕೆಲವು ಕ್ವೆರಿಗಳಾಗಿ ಮತ್ತೆ ನಮಗೆ ವಾಪಸ್ ಬಂದಿತ್ತು. ಅದರಲ್ಲಿ ಕೆಲವು ತೀರ್ಮಾನ ತೆಗೆದುಕೊಂಡು ಕಳುಹಿಸಿದ್ದೇವೆ. ಇದು ವ್ಯಾಪಕವಾಗಿ ಜಾರಿಗೆ ಬಂದರೆ, ಬಹಳಮಟ್ಟಿಗೆ, ಈ ತೊಂದರೆಗಳನ್ನು ನಿವಾರಣೆ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ಮಾತನ್ನು ಪ್ರಸ್ತಾಪ ಮಾಡುತ್ತೇನೆ.

೧-೩೦ ಪಿ. ಎಂ.

ಸ್ವಾಮಿ, ಕಾಲದ ಅಭಾವದಿಂದ ಹೆಚ್ಚು ಸಮಯ ತೆಗೆದುಕೊಳ್ಳುವುದಕ್ಕೆ ನಾನು ಇಷ್ಟಪಡಲಿಲ್ಲ. ಮಾನ್ಯ ಸದಸ್ಯರು ಏನು ಪ್ರಸ್ತಾಪ ಮಾಡಿದ್ದಾರೆ ಅದನ್ನೆಲ್ಲಾ ನೋಟ್ ಮಾಡಿಕೊಂಡಿದ್ದೇನೆ. ಅವರು ಮತ್ತೆ ಕಾಗದ ಬರೆದರೆ ಅದನ್ನು ಗಮನಿಸುತ್ತೇನೆ. ಎರಡು ಇಲಾಖೆಗಳ ಬಗ್ಗೆ ಪ್ರಸ್ತಾಪ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬಗ್ಗೆ ಮಾನ್ಯ ವಾಟಾಳ್ ನಾಗರಾಜ್ ಅವರು ಪ್ರಸ್ತಾಪ ಮಾಡಿದ್ದಾರೆ. ಸನ್ಮಾನ್ಯ ಸದಸ್ಯರು ಏನು ಪ್ರಸ್ತಾಪ ಮಾಡಿದರು ಆ ದಾರಿಯಲ್ಲಿ ಕೆಲಸ ನಡೆಯುತ್ತಿದೆ. ಬಹಳ ಮಟ್ಟಿಗೆ ನನಗನ್ನಿಸುತ್ತದೆ, ಮಾನ್ಯ ಸದಸ್ಯರ ನಿರೀಕ್ಷೆ ಏನಿದೆ ಆ ಮಟ್ಟದಲ್ಲಿ ಆ ಇಲಾಖೆ ಕೆಲಸ ಮಾಡದಿರಬಹುದು. ಅದಕ್ಕೆ ಹಣ ಕೂಡಾ ಬಹಳ ಕಡಿಮೆ ಇದೆ. ೩ ಕೋಟಿ ಹಣ ಇದೆ. ಯುವಜನ ಖಾತೆಗೂ ೩ ಕೋಟಿ ಇದೆ. ವಿದ್ಯಾ ಇಲಾಖೆಯಲ್ಲೂ ನಾವು ವರ್ಷಕ್ಕೆ ಪರ್‌ಕ್ಯಾಪಿಟಾ ೩೦೦ ರೂಪಾಯಿ ಖರ್ಚು ಮಾಡುತ್ತಿದ್ದೇವೆ. ಯುವಜನ ಖಾತೆಯಲ್ಲೂ ಹೀಗೆಯೇ ಇದೆ. ನಮ್ಮಲ್ಲಿ ಒಂದು ಕೋಟಿ ಇಪ್ಪತ್ತೈದು ಲಕ್ಷ ಯುವಜನರು ಇದ್ದಾರೆ. ಇವತ್ತು ಅವರಿಗೆ ನಾವು ಖರ್ಚು ಮಾಡುತ್ತಿರುವುದು ವರ್ಷಕ್ಕೆ ನಾಲ್ಕೂವರೆ ರೂಪಾಯಿ. ೩೬೫ ದಿವಸಕ್ಕೆ ಲೆಕ್ಕ ಹಾಕಿದರೆ ಒಂದು ದಿನಕ್ಕೆ ಒಂದು ಪೈಸೆ ಬರುತ್ತದೆ. ಬಹಳ ಕಡಿಮೆ ಇದೆ. ಅದು ಕೆಲಸ ಮಾಡತಕ್ಕಂಥ ಸ್ಟ್ರಕ್ಚರ್ ಕೂಡಾ ಸರಿಯಾಗಿಲ್ಲ. ಮಾನ್ಯ ಉಪನಾಯಕರು ವಿವರವಾಗಿ ಮಾತನಾಡಬೇಕೆಂದಿದ್ದರು ಸ್ಟೇಡಿಯಂಗಳ ಬಗ್ಗೆ ಅವರು ಪ್ರಸ್ತಾಪ ಮಾಡಿದ್ದಾರೆ. ಹೆಚ್ಚಾಗಿ ಎಲ್ಲಾ ಸ್ಟೇಡಿಯಂಗಳೂ ಅರ್ಧಂಬರ್ಧವಾಗಿ ನಿಂತಿದೆ. ನಾವೂ ನೋಡುತ್ತಿದ್ದೇವೆ, ಅವರೂ ನೋಡುತ್ತಿದ್ದಾರೆ. ಬೆಂಗಳೂರಿನ ಫುಟ್‌ಬಾಲ್ ಸ್ಟೇಡಿಯಂ ಅರ್ಧ ಆಗಿದೆ. ಅದರ ಬಗ್ಗೆ ವ್ಯಾಜ್ಯ. ಇದೇ ತರಹದ ವ್ಯಾಜ್ಯಗಳು ಆಗಿವೆ. ಬೇರೆ ಬೇರೆ ಜಿಲ್ಲೆಯಲ್ಲೂ ಸ್ಟೇಡಿಯಂಗಳು ಅರ್ಧ ಆಗಿವೆ. ಚಿಕ್ಕಮಂಗಳೂರಿನದರ ಬಗ್ಗೆ ಶ್ರೀಮತಿ ಮೋಟಮ್ಮನವರು ಹೇಳಿದರು. ಹಾಗೆ ಬಹಳ ಇವೆ. ಬೇರೆ ಬೇರೆ ಊರುಗಳ ಹೆಸರುಗಳು ನನ್ನ ಹತ್ತಿರ ಇವೆ. ಕಾಲದ ಅಭಾವದಿಂದ ನಾನು ಓದುವುದಕ್ಕೆ ಹೋಗುವುದಿಲ್ಲ. ಜನಪ್ರಿಯ ಸಾಹಿತ್ಯ ಪ್ರಕಟಣೆಗಳ ಬಗ್ಗೆ, ಕನ್ನಡ ಶಿಕ್ಷಣಕ್ಕೆ ಗ್ರಾಂಟ್ ಕೊಡುವ ಬಗ್ಗೆ, ಸಾಹಿತಿಗಳ ಬಗ್ಗೆ ಏನೇನು ಕ್ರಮ ತೆಗೆದುಕೊಳ್ಳಬೇಕೆಂದು ಇದೆ. ನನಗೂ ಕೂಡಾ ಇದು ಸಮಾಧಾನವಾಗಿಲ್ಲ. ಅದನ್ನು ಹೆಚ್ಚು ಸಮಾಧಾನವಾಗುವ ರೀತಿಯಲ್ಲಿ ಕೆಲಸ ಮಾಡೋಣ. ಇದಕ್ಕೆ ಮುಂದೆ ಹಣ ಒದಗಿಸೋಣ ಎಂದು ಹೇಳುತ್ತೇನೆ. ಯುವಜನ ಇಲಾಖೆ ಏನಿದೆ ಇದರಲ್ಲಿ ಎರಡು ಭಾಗ ಇದೆ. ಎರಡು ಭಾಗವಾಗಿ ಇದನ್ನು ನೋಡಬೇಕಾಗುತ್ತದೆ. ಸ್ಪೋರ್ಟ್ಸ್‌ದೇ ಬೇರೆ, ಯೂಥ್ ಸರ್ವೀಸಸ್‌ದೇ ಬೇರೆ. ಇವತ್ತು ಯುವಜನರನ್ನು ವ್ಯವಸ್ಥಿತವಾಗಿ ಒಳ್ಳೆಯ ದಾರಿಯಲ್ಲಿ ತೆಗೆದುಕೊಂಡು ಹೋಗುವುದಕ್ಕೆ ಏನೇನು

ಮಾಡಬೇಕು ಅದರ ಬಗ್ಗೆ ವಿಚಾರ ಮಾಡತಕ್ಕಂಥಾ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ. ನಮ್ಮ ನಿರೀಕ್ಷೆ ಮಟ್ಟಕ್ಕೆ ಬಹಳ ಜಾತ್ರ್ಯಯಾಗಿ ಬರುವುದಕ್ಕೆ ಅನುಕೂಲ ಆಗುವ ರೀತಿಯಲ್ಲಿ ಕಾರ್ಯಕ್ರಮಗಳು ಇಲ್ಲ. ಈ ದಿಸೆಯಲ್ಲಿ ಕೆಲಸ ಮಾಡುತ್ತಿದ್ದೇವೆ. ಐ.ಜಿ.ಪಿ. ಗ್ರೇಡ್‌ನ ಒಬ್ಬ ಅಧಿಕಾರಿ ಇದರ ಡೈರೆಕ್ಟರ್ ಆಗಿದ್ದಾರೆ. ಆದರೆ ಅವರ ಕೆಳಮಟ್ಟದಲ್ಲಿರತಕ್ಕಂಥ ಅಧಿಕಾರಿಗಳು ಇಲ್ಲ. ಎಲ್ಲಾ ಜಿಲ್ಲೆಯಲ್ಲೂ ಕೂಡಾ ಇಲ್ಲ. ೮೬ ಜನ ಅಧಿಕಾರಿಗಳು ೧೭೫ ತಾಲ್ಲೂಕುಗಳನ್ನು ನೋಡಿಕೊಳ್ಳುತ್ತಿದ್ದಾರೆ. ಸ್ಪೋರ್ಟ್ಸ್ ಕೌನ್ಸಿಲ್ ಇದೆ. ಅಲ್ಲೂ ಒಂದೊಂದು ಸಲ ರಾಜಕೀಯವಾಗಿ ನಮಗೆ ಬೇಕಾದವರನ್ನು ನೇಮಕ ಮಾಡುತ್ತೇವೆ. ಎಂದಾದರೂ ಅವನು ಆಟವಾಡಿದ್ದಾನೆಯೋ ಅದರ ಬಗ್ಗೆ ಅಭಿರುಚಿ ಇದೆಯೋ ಎಂಬುದನ್ನು ನೋಡುವುದಿಲ್ಲ. ಹಿಂದೆ ಮುಂದೆ ಓಡಾಡುತ್ತಾನೆ ಎಂದು ಅವನನ್ನು ತೆಗೆದುಕೊಂಡು ಹೋಗಿ ಅಲ್ಲಿ ಕೂಡಿಸಿಬಿಡುತ್ತೇವೆ. ಅವನಿಗೂ ಡೈರೆಕ್ಟರ್‌ಗೂ ದಿನಾ ಘರ್ಷಣೆ ಆಗಬೇಕು, ವ್ಯಾಜ್ಯ ಆಗಬೇಕು. ಆ ರೀತಿ ಮಾಡಿಟ್ಟು ಏನೂ ಪ್ರಯೋಜನ ಆಗದಿರುವಂತಹ ರೀತಿಯಲ್ಲಿ ಮಾಡಿರುತ್ತೇವೆ. ಮಾನ್ಯ ಸದಸ್ಯರು ಏನು ಪ್ರಸ್ತಾಪ ಮಾಡಿರುತ್ತಾರೆ ಅದನ್ನು ಗಮನದಲ್ಲಿಟ್ಟುಕೊಂಡಿರುತ್ತೇವೆ. ಮತ್ತು ಆ ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ ಎಂದು ಹೇಳುತ್ತೇನೆ. ಸ್ವಾಮಿ, ಇನ್ನು ಪುಸ್ತಕಗಳ ಬಗ್ಗೆ ಒಂದು ಮಾತನ್ನು ನನ್ನ ಹೇಳಿ ಮಾತನ್ನು ಮುಗಿಸುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ಎಲ್ಲಾ ಜಿಲ್ಲೆಯಲ್ಲೂ ಕೂಡಾ ಪುಸ್ತಕಗಳು ಇವೆ. ಬೈಲಹೊಂಗಲದಲ್ಲಿ ಪುಸ್ತಕ ಬಂದಿಲ್ಲ ಎಂದು ಮಾನ್ಯ ಕೌಜಲಗಿಯವರು ಹೇಳಿದರು. ಅವರು ಯಾರನ್ನು ಕೇಳಿದರೋ ಏನೋ ? ನಾನು ಲಘುವಾಗಿ ಹೇಳುತ್ತಿದ್ದೇನೆ. ಇದನ್ನು ಸೀರಿಯಸ್ ಆಗಿ ತೆಗೆದುಕೊಳ್ಳಬೇಡಿ. ನಮ್ಮ ಡೈರೆಕ್ಟರ್ ಪ್ರತಿದಿವಸ ನಮಗೆ ಮಾನಿಟರಿಂಗ್ ಮಾಡುತ್ತಿದ್ದಾರೆ. ವಿದ್ಯಾ ಇಲಾಖೆಯ ಕಾರ್ಯದರ್ಶಿಗಳು, ಡೈರೆಕ್ಟರ್ ಆಫ್ ಪ್ರಿಂಟಿಂಗ್ ಪ್ರೆಸ್. ಡೈರೆಕ್ಟರ್ ಆಫ್ ಟೆಕ್ಸ್ಟ್ ಬುಕ್ಸ್ ಇವರು ಪ್ರತಿದಿವಸ ನಮಗೆ ಮಾನಿಟರಿಂಗ್ ಮಾಡುತ್ತಿದ್ದಾರೆ. ಎಷ್ಟಾಗುತ್ತಿದೆ, ಎಷ್ಟು ಹೋಯಿತು ಎಲ್ಲಾ ಹೇಳುತ್ತಿದ್ದಾರೆ. ನನ್ನ ಹತ್ತಿರ ಅಂಕಿ ಅಂಶಗಳು ಇವೆ. ಈಗ ಟೋಟಲ್ ಬುಕ್ಸ್ ಅವೈಲಬಲ್ ಅಟ್ ಬುಕ್ ಡಿಪೋಸ್ ೧ ಕೋಟಿ ೭೪ ಲಕ್ಷ, ೧೮ ಸಾವಿರ, ೫೧೬. ಈ ಕಾಲಕ್ಕೆ ಇಷ್ಟು ನಮ್ಮಲ್ಲಿ ಸ್ಟಾಕ್ ಇದೆ. ಬುಕ್ ಡಿಪೋಗಳಲ್ಲಿ ಇವೆ.

ಈವರೆಗೆ ಸುಮಾರು ೮೭ ಲಕ್ಷ ಪುಸ್ತಕಗಳನ್ನು ನಾವು ಡಿಸ್‌ಪ್ಯಾಚ್ ಮಾಡಿದ್ದೇವೆ. ಇನ್ನು ೮೭ ಲಕ್ಷ ಪುಸ್ತಕಗಳು ನಮ್ಮ ಕೈಯಲ್ಲಿ ಇವತ್ತಿಗೆ ಇವೆ. ಆಮೇಲೆ ೮೫ ಬೇರೆ ಬೇರೆ ಖಾಸಗಿ ಪ್ರಿಂಟಿಂಗ್ ಪ್ರೆಸ್‌ಗಳನ್ನು ಇದಕ್ಕೆ ಬಳಸಿಕೊಂಡಿದ್ದೇವೆ. ಸರ್ಕಾರದ ಪ್ರಿಂಟಿಂಗ್ ಪ್ರೆಸ್ ಮೈಸೂರು, ಗುಲ್ಬರ್ಗ ಮತ್ತು ಬೆಂಗಳೂರು ಹಾಗೂ ಧಾರವಾಡ ಹಾಗೂ ಇತರೆ ಎಲ್ಲಾ ಪ್ರೆಸ್‌ಗಳಲ್ಲಿ ಆದಷ್ಟು ಕೊಟ್ಟು ಪುಸ್ತಕಗಳನ್ನು ಪ್ರಿಂಟ್ ಮಾಡಿ ಸಕಾಲದಲ್ಲಿ ಪುಸ್ತಕಗಳನ್ನು ಕೊಡುವಂತಹ ವ್ಯವಸ್ಥೆ ಮಾಡಿದ್ದೇವೆ. ಇನ್ನು ಮಾನ್ಯ ಸದಸ್ಯರು ಏನಾದರೂ ಸಲಹೆಗಳನ್ನು ಕೊಟ್ಟಿದ್ದು ಅವುಗಳಿಗೆ ನಾನು ಉತ್ತರ ಕೊಡುವುದನ್ನು ಬಿಟ್ಟಿದ್ದರೆ ನನಗೆ ಅವರು ಬರೆದು ಕಳುಹಿಸಿದರೆ ನಾನು ಆ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ ಎಂದು ಹೇಳಿ ನನ್ನ ಇಲಾಖಾ ಬೇಡಿಕೆಗಳಿಗೆ ಈ ಸದನ ಒಮ್ಮತದಿಂದ ಒಪ್ಪಿಗೆ ಕೊಡಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಎಚ್. ಬನ್ನಿಕೋಡ್.—ಮಾನ್ಯ ಅಧ್ಯಕ್ಷರೇ ಮಾನ್ಯ ಸಚಿವರು ಹೇಳಿದ ಪ್ರಕಾರ ಗ್ರಾಮಾಂತರ ಪ್ರದೇಶದ ಸ್ಕೂಲ್ ಮತ್ತು ಕಾಲೇಜುಗಳಲ್ಲಿ ಪ್ರಯೋಗಾಲಯಗಳು ಇರುವುದಿಲ್ಲ ಲೈಬ್ರರಿ ಸರಿಯಾಗಿ ಇರುವುದಿಲ್ಲ ಅದಕ್ಕೆ ನಾನು ಮಾನ್ಯ ಮಂತ್ರಿಗಳಿಗೆ ಒಂದು ಸಲಹೆಯನ್ನು ಕೊಡುತ್ತೇನೆ. ತಾಂತ್ರಿಕ ಶಿಕ್ಷಣ ಮೆಡಿಕಲ್ ಮತ್ತು ಇಂಜನಿಯರಿಂಗ್ ಕಾಲೇಜುಗಳು ಮತ್ತು ಅಗ್ರಿಕಲ್ಚರ್ ಕಾಲೇಜುಗಳಲ್ಲಿ ಗ್ರಾಮಾಂತರ ಪ್ರದೇಶದಿಂದ ಬಂದಂತಹ ಮಕ್ಕಳಿಗೆ ನೂರಕ್ಕೆ ೫೦ ಪರ್ಸೆಂಟ್ ರಿಜರ್ವ್ ಮಾಡಬೇಕು ಮತ್ತು ಅಂಕಗಳನ್ನು ಕೊಡುವಾಗ ನೂರಕ್ಕೆ ೨೦ ಅಂಕಗಳನ್ನು ಹೆಚ್ಚು ಸೇರಿಸಿ ಕೊಟ್ಟರೆ ತಾಂತ್ರಿಕ ಶಿಕ್ಷಣದಲ್ಲಿ ಅವರಿಗೆ ಅನುಕೂಲವಾಗುತ್ತದೆ. ಇದನ್ನು ಮಾಡುತ್ತೀರಾ ?

ಶ್ರೀ ಕೆ. ಎಚ್. ರಂಗನಾಥ್.—ಹಿಂದೆ ಅಗ್ರಿಕಲ್ಚರ್ ಕಾಲೇಜುಗಳಲ್ಲಿ ಮಾತ್ರ ಮೀಸಲಾತಿ ಇತ್ತು ನಿಮ್ಮ ಸಲಹೆ ಪ್ರಕಾರ ನಾವು ಮಾಡಿದರೆ ಅದು ಕೋರ್ಟಿನಲ್ಲಿ ಊರ್ಜಿತವಾಗಬೇಕಲ್ಲ ಅದು ಊರ್ಜಿತವಾಗದಿದ್ದರೆ ಏನು ಪ್ರಯೋಜನ ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೇ ಹಿರಿಯ ಸಚಿವರು ನಿಜವಾಗಿ ಶಿಕ್ಷಣದ ಬಗ್ಗೆ, ವಿಚಾರಗಳ ಬಗ್ಗೆ ತುಂಬಾ ಚೆನ್ನಾಗಿ ಸದನದ ಸದಸ್ಯರ ದೃಷ್ಟಿಕೋನ ಇಟ್ಟುಕೊಂಡು ಅವರು ತುಂಬಾ ಮಹತ್ವದ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ ಅವರಿಗೆ ನಾನು ಅಭಿನಂದಿಸುತ್ತೇನೆ ಇನ್ನು ಅವರು ತಮ್ಮ ಇಲಾಖೆಯ ಬಗ್ಗೆ ಒಂದೆರಡು ಮಾತುಗಳನ್ನು ನಾನು ಹೇಳಬೇಕೆಂದು ಇದ್ದೆ. ಆದರೆ ಸಮಯದ

ಅಭಾವವನ್ನು ಅರ್ಥ ಮಾಡಿಕೊಂಡು ಎರಡು ಕ್ಲಾರಿಫಿಕೇಶನ್ಸ್ ಮಾತ್ರ ನಾನು ಕೇಳಬಯಸುತ್ತೇನೆ ಈ ಮಂತ್ರಿಗೆ ಬಗ್ಗೆ ಎರಡೂ ಕಡೆಯ ಮಾನ್ಯ ಸದಸ್ಯರು ಸರ್ಕಾರದ ಗಮನಕ್ಕೆ ತಂದಿದ್ದಾರೆ. ನಾವು ನಿಜವಾಗಿಯೂ ಇದನ್ನು ತಡೆಗಟ್ಟಲಿಕ್ಕೆ ಆಗದೆ ಇರಬಹುದು ಅದಕ್ಕೆ ನಾನಾ ರೀತಿಯ ರಾಜಕೀಯ ತೊಂದರೆಗಳು ನಮಗೆ ಇದ್ದವು ಈ ವರ್ಷ ಫ್ರೀ ಯೂನಿವರ್ಸಿಟಿಯಲ್ಲಿ ಸೈನ್ಸ್ ಅಥವಾ ಕಾಮರ್ಸ್ ಸೆಕ್ಷನ್ ಬೇಕಾದರೆ ಬಹಳ ತೊಂದರೆಯಾಗಿದೆ. ಇದನ್ನು ನಾವು ನೀವು ಎಲ್ಲಾ ಸೇರಿ ತಡೆಗಟ್ಟಬೇಕಾಗುತ್ತದೆ. ಅದಕ್ಕೆ ಒಂದು ಇತಿಮಿತಿಯನ್ನು ಹಾಕಬೇಕಾಗುತ್ತದೆ ಅದಕ್ಕೆ ಈ ಸದನಕ್ಕೆ ಬೆಳಕು ಚೆಲ್ಲಬೇಕಾದರೆ ನಾನು ಒಂದು ಸಲಹೆಯನ್ನು ತಮಗೆ ಕೊಡುತ್ತೇನೆ ಅದೇನೆಂದರೆ ತಾವು ಒಂದು ಸದನದ ಸಮಿತಿಯನ್ನು ನೇಮಕ ಮಾಡಿ ಇದು ಬಹಳ ಮಹತ್ವವಾದ ವಿಚಾರ. ಪ್ರಾಥಮಿಕ ಶಾಲೆಗಳಿಂದ ಹಿಡಿದು ಫ್ರೀ ಯೂನಿವರ್ಸಿಟಿ ಮೆಡಿಕಲ್ ಮತ್ತು ಇಂಜಿನಿಯರಿಂಗ್ ಟೆಕ್ನಿಕಲ್ ಕೋರ್ಸ್‌ಗಳ ವರೆಗೂ ಮಂತಿಗೆ ಹಬ್ಬಿದೆ ಆದ್ದರಿಂದ ತಾವು ಸದನದ ಸಮಿತಿಯನ್ನು ಮಾಡುವುದಾದರೆ ನಾವು ಸಹ ಸರ್ಕಾರದ ಜೊತೆ ನಿಲ್ಲುತ್ತೇವೆ ಅದಕ್ಕೆ ತಾವು ಒಂದು ದೃಢ ಸಂಕಲ್ಪ ಮಾಡಲೇಬೇಕು ತಾವು ಒಂದು ರಾಜಕೀಯ ತೀರ್ಮಾನ ತೆಗೆದುಕೊಳ್ಳಿ ತಾವು ದಯಮಾಡಿ ಸದನದ ಸಮಿತಿಯನ್ನು ಮಾಡಬೇಕು ಸದನಕ್ಕೆ ಬೆಳಕು ಚೆಲ್ಲಬೇಕು ಅದಕ್ಕೆ ಅವಕಾಶ ಆಗುತ್ತದೆ ಇನ್ನು ಎರಡನೆಯದಾಗಿ ಈ ಸ್ಪೋರ್ಟ್ಸ್ ಇಲಾಖೆಗೆ ನಿಮ್ಮಂತಹವರ ಅಗತ್ಯ ಇತ್ತು ಹಿಂದೆ ಮಂತ್ರಿಮಂಡಲದಲ್ಲಿ ಹೋದಾಗಿ ಸೇರಿಕೊಳ್ಳತಕ್ಕಂಥವರಿಗೆ ಯೂತ್ ಸರ್ವೀಸಸ್ ಮತ್ತು ಸ್ಪೋರ್ಟ್ಸ್ ಅನ್ನು ಮುಂಚಿತವಾಗಿ ಕೊಟ್ಟುಬಿಡುತ್ತಿದ್ದರು. ಈಗ ಇದು ನಿಮ್ಮ ಕೈಯಲ್ಲಿ ಇದೆ. ಅವರು ಈ ಖಾತೆಗೆ ೨೦ ಲಕ್ಷ ರೂಪಾಯಿ ಹೆಚ್ಚು ತರಬೇಕಾದರೂ ಕಷ್ಟ ಇದೆ ಮತ್ತೊಂದು ಸಂದರ್ಭದಲ್ಲಿ ನಾನು ಅದನ್ನು ತಮ್ಮ ಗಮನಕ್ಕೆ ತರುತ್ತೇನೆ ನನಗೆ ಒಂದು ಸಂತೋಷವಾಗುತ್ತದೆ ತಾವು ಬಹಳ ಬೇಗ ಈ ಇಲಾಖೆಯನ್ನು ಅರ್ಥ ಮಾಡಿಕೊಂಡು ಹೇಳಿದಿರಿ. ತಮ್ಮ ಇಲಾಖೆಗೆ ಒಬ್ಬ ಒಳ್ಳೆಯ ಅಧಿಕಾರಿಯನ್ನು ಹಾಕಿಸಿಕೊಂಡಿದ್ದೀರಿ ಇನ್ನು ಕೆಲವು ಅಸೋಸಿಯೇಶನ್ಸ್‌ಗೆ ಜಾಗ ಕೊಟ್ಟಿದ್ದೀರಿ ಅವರು ಸರ್ಕಾರ ಮಾಡುವುದಕ್ಕಿಂತ ಚೆನ್ನಾಗಿ ಕೆಲಸ ಮಾಡುತ್ತಾರೆ ಅವರಿಗೆ ಜಾಗ ಕೊಟ್ಟು ಹಣ ಕೊಡುವುದಕ್ಕೆ ನಿಮ್ಮ ಕೈಯಲ್ಲಿ ಆಗಲಿಲ್ಲ. ಅವರಿಗೆ ಹೆಚ್ಚಿನ ಹಣ ಕೊಡಲಿಕ್ಕೆ ವ್ಯವಸ್ಥೆ ಮಾಡಿ ಆ ಹಣ ನೇರವಾಗಿ ಕೊಟ್ಟರೆ ಸರ್ಕಾರ ಮಾಡುವ ಕೆಲಸಕ್ಕಿಂತ ಉತ್ತಮ ಕೆಲಸ ಅವರು ಮಾಡುತ್ತಾರೆ. ಇದು ನನ್ನ ಅಭಿಪ್ರಾಯ ತಾವು ಬಹಳ ಕಡಿಮೆ ಸಮಯದಲ್ಲಿ ಅರ್ಥ ಮಾಡಿಕೊಂಡು ಒಂದು ಮಾತು ಹೇಳಿದಿರಿ ಅದೇನೆಂದರೆ ಸ್ಪೋರ್ಟ್ಸ್ ಕೌನ್ಸಿಲ್ ಅಧ್ಯಕ್ಷರಿಗೂ ಮತ್ತು ಡೈರೆಕ್ಟರ್‌ಗೆ ಇರತಕ್ಕಂಥ ಜಗಳ. ಮಾನ್ಯ ಅಧ್ಯಕ್ಷರೇ ನಮ್ಮ ಸರ್ಕಾರ ಇದ್ದಾಗ ಸ್ಪೋರ್ಟ್ಸ್ ಕೌನ್ಸಿಲ್‌ಗೆ ಒಬ್ಬರನ್ನು ಅಧ್ಯಕ್ಷರನ್ನಾಗಿ ಮಾಡಿದರು ಅವರು ಬಹಳ ಅವ್ಯವಹಾರ ನಡೆಸಿದರು. ಕೊನೆಯಲ್ಲಿ ಅಂದರೆ ನಮ್ಮ ಸರ್ಕಾರ ಹೋಗತಕ್ಕಂಥ ಕಾಲದಲ್ಲಿ ಸ್ಪೋರ್ಟ್ಸ್ ಖಾತೆ ಮಿನಿಸ್ಟರ್ ಆಗಿದ್ದೆ. ಆ ಸಂದರ್ಭದಲ್ಲಿ ನಾನು ನೋಡಿದ್ದೇನೆ. ತನಿಖೆ ಮಾಡಿಸಬೇಕೆಂದೂ ಸಹ ಇದ್ದೆ ಆದರೆ ತನಿಖೆಯಾಗಲಿಲ್ಲ. ಯಾವತ್ತೂ ಸ್ಪೋರ್ಟ್ಸ್ ಆಪದೇ ಇದ್ದವರು ನಮ್ಮ ಸರ್ಕಾರ ಬರುತ್ತದೆ ಎನ್ನುವ ವಾಸನೆ ಕಂಡು ಹಿಡಿದು ನಮ್ಮ ಪಕ್ಷಕ್ಕೆ ಸೇರಿಕೊಂಡು ಸ್ಪೋರ್ಟ್ಸ್ ಮಂಡಳಿಯ ಅಧ್ಯಕ್ಷರಾದರು. ಈಗ ನಿಮ್ಮ ಸರ್ಕಾರ ಬಂದ ಮೇಲೆ ನಿಮ್ಮ ಪಕ್ಷಕ್ಕೆ ಸೇರಿಕೊಂಡುಬಿಟ್ಟಿದ್ದಾರೆ ನಾನು ಮಾನ್ಯ ಮಂತ್ರಿಯವರಿಗೆ ಹೇಳುತ್ತಿದ್ದೇನೆ ತಾವು ದಯವಿಟ್ಟು ಕಳೆದ ೫ ವರ್ಷಗಳಿಂದ ಸ್ಪೋರ್ಟ್ಸ್ ಕೌನ್ಸಿಲ್‌ನಲ್ಲಿ ಯಾವ ರೀತಿ ದುಡ್ಡು ಖರ್ಚಾಗಿದೆ. ಯಾವುದಕ್ಕೆ ಖರ್ಚಾಗಿದೆ ಎನ್ನುವುದರ ಬಗ್ಗೆ ಡಿಪಾರ್ಟ್‌ಮೆಂಟಲ್ ಎನ್‌ಕ್ವೈರಿಯನ್ನು ಮಾಡಿಸಿ ಅನ್–ನೆಸಸರಿಯಾಗಿ ಎಕ್ಸ್‌ಪೆಂಡಿಚರ್ ಮಾಡಿದ್ದರೆ ಅವರಿಗೆ ಶಿಕ್ಷೆ ಮಾಡಬೇಕೆಂದು ಹೇಳುತ್ತೇನೆ. ಪ್ರಸನ್ನ ಚಂದ್ರಶೇಖರ್ ಅಂಥವರು ಕ್ರಿಕೆಟಿಯರ್ಸ್‌ಗಳು ಇದ್ದಾರೆ, ಇವರುಗಳು ಅಂತರ ರಾಷ್ಟ್ರೀಯ ಮಟ್ಟದಲ್ಲಿ ಕೀರ್ತಿ ತಂದಿರತಕ್ಕವರು. ಇನ್ನೂ ಹಲವಾರು ಒಳ್ಳೆಯ ಕ್ರೀಡಾ ಪಟುಗಳು ಇದ್ದಾರೆ. ಅವರನ್ನು ಈ ಸ್ಪೋರ್ಟ್ಸ್ ಮಂಡಳಿಯ ಅಧ್ಯಕ್ಷರನ್ನಾಗಿ ಮಾಡಿದರೆ ತಮಗೂ ಮತ್ತು ಸರ್ಕಾರಕ್ಕೂ ಕೀರ್ತಿ ಬರುತ್ತದೆ.

ಶ್ರೀ ರಮಾನಾಥ ರೈ.—ನೀವು ಸ್ಪೋರ್ಟ್ಸ್ ಮಿನಿಸ್ಟರ್ ಆಗಿದ್ದಾಗ ಈ ಕೆಲಸಗಳನ್ನು ಏಕೆ ಮಾಡಲಿಲ್ಲ ?

ಶ್ರೀ ಪಿ.ಜಿ.ಆರ್. ಸಿಂಧ್ಯ.—ನಾನು ಸ್ಪೋರ್ಟ್ಸ್ ಮಿನಿಸ್ಟರ್ ಆದ ತಕ್ಷಣವೇ ಎಲ್ಲಾ ಫೈಲುಗಳನ್ನು ತಡೆ ಹಿಡಿದಿದ್ದೇನೆ. I have done it

ಶ್ರೀ ಎಂ.ಪಿ. ವೆಂಕಟೇಶ್.—ನಾನು ತಪ್ಪು ಮಾಡಿದ್ದೇನೆ, ನೀವು ಆ ತಪ್ಪನ್ನೇ ಮಾಡಬೇಡಿ ಎಂದು ಹೇಳಿದ್ದಾರೆ.

SRI P.G.R. SCINDIA—I have done that

ಶ್ರೀ ಕೆ. ಗಂಗಾಧರ ಗೌಡ.—ಸ್ಪೋರ್ಟ್ಸ್ ಕೌನ್ಸಿಲ್‌ನ್ನು ಯೂತ್ ಸರ್ವೀಸ್ ಬೋರ್ಡ್‌ನಲ್ಲಿ ನಾನು ಸ್ಪೋರ್ಟ್ಸ್ ಮಂತ್ರಿಯಾಗಿದ್ದಾಗ ಮಾಡಿದ್ದೆ ನಿಮ್ಮ ಸರ್ಕಾರ ಬಂದ ಮೇಲೆ ಅದನ್ನು ವಿಂಗಡಣೆ

ಮಾಡಿ ಅವ್ಯವಹಾರ ಆಗುವುದಕ್ಕೆ ಅವಕಾಶ ಮಾಡಿಕೊಟ್ರಿ ಈಗಲೂ ಸ್ಪೋರ್ಟ್ಸ್ ಕೌನ್ಸಿಲ್‌ನ್ನು ಯೂತ್ ಸರ್ವೀಸ್ ಬೋರ್ಡ್‌ನಲ್ಲಿ ಮರ್ಜ್ ಮಾಡಿದರೆ ಒಳ್ಳೆಯದು ಅವ್ಯವಹಾರವಾಗಿದೆಯೆಂದು ಮಾನ್ಯ ಸದಸ್ಯರು ಏನು ಹೇಳಿದ್ದಾರೋ ಅದು ನೂರಕ್ಕೆ ನೂರರಷ್ಟು ಸತ್ಯವಾಗಿದೆ. ಆದ್ದರಿಂದ ಅದನ್ನು ಮರ್ಜ್ ಮಾಡುವುದೇ ಒಳ್ಳೆಯದು ಹೀಗೆ ಮಾಡುವುದರಿಂದ ಗ್ರಾಮಾಂತರ ಮಟ್ಟದ ಕ್ರೀಡಾ ಪಟುಗಳಿಗೆ ಅದರಿಂದ ಸಹಾಯ ಮಾಡಿದ ಹಾಗಾಗುತ್ತದೆ ಆಮೇಲೆ, ಯುವ ಜನ ಸೇವೆ ಇಲಾಖೆ ಏನಿದೆ ಈ ಇಲಾಖೆ ಮೂಲಕ ಯುವ ಜನರುಗಳಿಗೆ ಸ್ಪೋರ್ಟ್ಸ್ ಆಡಿಸುವುದು ಏನಿತ್ತೋ ಅದು ಬರು ಬರುತ್ತಾ ಕಡಿಮೆಯಾಗಿ ಬರೀ ಕಲ್ಚರಲ್ ಪ್ರೋಗ್ರಾಮ್‌ಗಳನ್ನು ಮಾಡುತ್ತಿದ್ದಾರೆ ಇದನ್ನು ಚೇಂಜ್ ಮಾಡುವುದಕ್ಕೆ ಸಾಧ್ಯವೇ ಎಂಬುದನ್ನು ನೋಡಬೇಕು ಆಮೇಲೆ, ಸ್ಪೋರ್ಟ್ಸ್ ಇಲಾಖೆಯನ್ನೇ ಬೇರೆ ಮಾಡಬೇಕೆಂದು ನನ್ನ ಅಭಿಪ್ರಾಯ ಇದೆ ಅದನ್ನು ಮಾಡುವುದಕ್ಕೆ ಸಾಧ್ಯವಿದೆಯೋ ಎಂಬುದನ್ನು ಮಾನ್ಯ ಮಂತ್ರಿಯವರು ಹೇಳಬೇಕು.

ಶ್ರೀ ಕೆ.ಹೆಚ್. ರಂಗನಾಥ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಿಂಧ್ಯಾರವರು ಸ್ಪೋರ್ಟ್ಸ್ ಮಂಡಳಿಯಲ್ಲಿ ಅವ್ಯವಹಾರವಾಗಿದೆಯೆಂದು ಏನು ಪ್ರಸ್ತಾಪ ಮಾಡಿದ್ದಾರೋ ಅದರ ಬಗ್ಗೆ ನೋಡಿಸುತ್ತೇನೆ. ಆಮೇಲೆ ಮಾನ್ಯ ಗಂಗಾಧರ ಗೌಡರು ಪ್ರಸ್ತಾಪ ಮಾಡಿದಂಥ ವಿಷಯ ಅಂದರೆ ಮರ್ಜ್ ಮಾಡುವುದರ ಬಗ್ಗೆ ಪರಿಶೀಲನೆ ಮಾಡಬೇಕಾಗುತ್ತದೆ ಇದರ ಜೊತೆಗೆ ಕ್ರೀಡಾ ಪಟುಗಳಿಗೆ ನಿವೇಶನ ಕೊಡಬೇಕಾಗುತ್ತದೆ. ಕ್ರೀಡಾ ಪಟುಗಳಿಗೆ ಎಲ್ಲಾ ರೀತಿಯ ಅನುಕೂಲಗಳನ್ನು ಕಲ್ಪಿಸಿಕೊಡುವ ಬಗ್ಗೆ ಮಾನ್ಯ ಮುಖ್ಯ ಮಂತ್ರಿಯವರ ಜೊತೆಗೆ ಪ್ರಸ್ತಾಪ ಮಾಡಿ ಏನು ಅನುಕೂಲ ಮಾಡಬೇಕೋ ಅದನ್ನು ಮಾಡುತ್ತೇನೆ ಮತ್ತು ನ್ಯಾಷನಲ್ ಅವಾರ್ಡ್ ಬಂದಿರತಕ್ಕ ಅರ್ಜುನ್ ಅವಾರ್ಡ್ ಬಂದಿರತಕ್ಕವರೂ ಇದ್ದಾರೆ. ಅವರಿಗೆಲ್ಲಾ ಸರ್ಕಾರ ಅನುಕೂಲ ಮಾಡಬೇಕಾಗುತ್ತದೆ.

ನಮ್ಮ ರಾಜ್ಯದವರು ರಾಷ್ಟ್ರೀಯ ಮಟ್ಟದಲ್ಲಿ ನಾಲ್ಕನೆಯ ಸ್ಥಾನದಲ್ಲಿದ್ದಾರೆ ಎಂದು ನಮ್ಮ ಯುವಜನ ಇಲಾಖೆಯ ಡೈರೆಕ್ಟರ್‌ರವರು ಹೇಳುತ್ತಾ ಇದ್ದರು.

ಅಧ್ಯಕ್ಷರು.—ಯು. ಎ. ಇ. ಯವರು ವಿಶ್ವಕಪ್ ಟೂರ್ನಮೆಂಟ್‌ನಲ್ಲಿ ಪ್ರತಿಯೊಂದು ಗೋಲ್ ಹೊಡೆದವರಿಗೂ ರೋಲ್ಸ್‌ರಾಯ್ ಕಾರನ್ನು ಕೊಡುತ್ತೇವೆ ಎಂದು ಹೇಳಿದ್ದಾರೆ.

ಶ್ರೀ ಕೆ. ಹೆಚ್. ರಂಗನಾಥ್.—ಹೌದು ಇಂಥ ಕ್ರೀಡಾ ವಿಷಯದಲ್ಲಿ ನಾವು ಪ್ರೋತ್ಸಾಹ ಕೊಡಬೇಕಾಗುತ್ತದೆ. ಅದನ್ನು ಸರಕಾರದವರು ಗಮನದಲ್ಲಿಟ್ಟುಕೊಂಡಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಕ್ಯಾಪಿಟೇಶನ್ ಶುಲ್ಕದ ವಿಚಾರದಲ್ಲಿ ಪರಿಶೀಲಿಸಲು ಸದನದ ಸಮಿತಿಯೊಂದನ್ನು ಮಾಡಿ ಎಂದು ಕೇಳಿಕೊಂಡಿದ್ದೇನೆ.

ಶ್ರೀ ಕೆ. ಹೆಚ್. ರಂಗನಾಥ.—ಕ್ಯಾಪಿಟೇಶನ್ ವಿಚಾರದಲ್ಲಿ ಮಾನ್ಯ ಸದಸ್ಯರುಗಳು ಪ್ರಸ್ತಾಪ ಮಾಡಿದ್ದಾರೆ. ಈ ವರ್ಷ ೫೪ ಪರ್‌ಸೆಂಟ್‌ನಷ್ಟು ಎಸ್.ಎಸ್.ಎಲ್.ಸಿ.ಯಲ್ಲಿ ಪಾಸ್ ಆಗಿದ್ದಾರೆ ಆದುದರಿಂದ ಪಿಯುಸಿ ಶಿಕ್ಷಣಕ್ಕೆ ಹೆಚ್ಚಿನ ಪ್ರವೇಶಾವಕಾಶ ಬೇಕಾಗುತ್ತದೆ. ಇವೊತ್ತು ಇರುವ ಕಾಲೇಜುಗಳಲ್ಲಿ ಹೆಚ್ಚಿನ ಸೆಕ್ಷನ್ಸ್ ತೆಗೆಯುವುದಾದರೆ ಅದಕ್ಕೆ ಅವಕಾಶವನ್ನು ಕೊಡುತ್ತೇವೆ. ಬೆಳಿಗ್ಗೆ ಒಂದು ಶಿಫ್ಟ್ ಮಧ್ಯಾಹ್ನ ಒಂದು ಶಿಫ್ಟ್ ಮಾಡುವುದಾದರೂ ಅದಕ್ಕೆ ಸರಕಾರ ಸೂಕ್ತ ವ್ಯವಸ್ಥೆಯನ್ನು ಮಾಡುತ್ತದೆ. ಇಂಥ ವಿಷಯಗಳಲ್ಲಿ ನಮ್ಮ ಪ್ರೋತ್ಸಾಹ ಇದೆ. ಹೊಸ ಕಾಲೇಜುಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಅವಶ್ಯಕವಿದ್ದಲ್ಲಿ ಕೊಡಬೇಕೆಂದು ವಿಚಾರ ಮಾಡುತ್ತಾ ಇದ್ದೇವೆ. ಅದು ಸರಕಾರದ ತೀವ್ರ ಗಮನದಲ್ಲಿದೆ. ಹಾಗೆ ಮಾಡುವಾಗ ಅದಕ್ಕೆ ಯಾವ ಪ್ರಮಾಣದಲ್ಲಿ ಅಧ್ಯಾಪಕ ವರ್ಗದವರನ್ನು ಒದಗಿಸಬೇಕೆಂದು ನೋಡಿಕೊಂಡು ಆ ಬಗ್ಗೆ ವಿಚಾರ ಮಾಡುತ್ತಾ ಇದ್ದೇವೆ. ಬೆಂಗಳೂರು, ಮೈಸೂರು, ಬೆಳಗಾಂಗಳಲ್ಲಿ ಇಂಥ ಸಂಖ್ಯೆ ಹೆಚ್ಚು ಇದೆ. ಇದನ್ನು ಪರಿಶೀಲಿಸಿ ಅಗತ್ಯತೆಗಳನ್ನು ನೋಡಿಕೊಂಡು ಸೂಕ್ತ ವ್ಯವಸ್ಥೆಯನ್ನು ಆ ದಿಸೆಯಲ್ಲಿ ಮಾಡುತ್ತೇವೆ. ಎಜುಕೇಶನ್ ಬಿಲ್ ಜಾರಿಗೆ ಬಂದರೆ, ಶೈಕ್ಷಣಿಕ ವಿಚಾರದಲ್ಲಿ ಒಂದು ಹಿಡಿತವನ್ನು ಇಟ್ಟುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಅದರಲ್ಲಿ ಸಾಕಷ್ಟು ಅನುಕೂಲಗಳು ಕೂಡ ಇದ್ದಾವೆ. The Government will have the powers to regulate the establishment and maintenance of the educational institutions permit private body, local authorities to establish institutions according to the norms prescribed, recognise such private institutions and grant, grant-in-aid regulate the admissions, Intake, fees curriculum, and conduct o Examination etc, exercise control over management with particular

reference to appointment, retrenchment of staff, collection of donations, utilisation of funds etc., prescribe code of conduct for management, close down erring managements. ಇಷ್ಟೆಲ್ಲಾ ಅದರಲ್ಲಿ ಅವಕಾಶ ಇದೆ. ಆದುದರಿಂದ ಈ ಬಿಲ್ ಒಪ್ಪಿಗೆ ಪಡೆದು ಬಂದರೆ ಈ ದಿಸೆಯಲ್ಲಿ ಅನುಕೂಲವಾಗುತ್ತದೆ. ಒಂದು ವೇಳೆ ಈ ವಿಚಾರದಲ್ಲಿ ಬಿಲ್ ಬಂದ ಮೇಲೂ ಬ್ರಹ್ಮರಾಕ್ಷಸರು ಏನಿದ್ದಾರೆ ಅವರು ಇನ್ನೂ ಬೆಳೆದರೆ ಮುಂದೆ ಒಂದು ಸಮಿತಿ ಮಾಡಿ ಆ ಕುರಿತು ವಿಚಾರ ಮಾಡೋಣ. ಅದಕ್ಕಾಗಿ ತತ್‌ಕ್ಷಣವೇ ಸದನದ ಸಮಿತಿ ಮಾಡುವುದು ಸರಿಯಲ್ಲ. ಇದು ನಾವುಗಳೇ ಹಾಕಿದ ಶಿಶು. ಈಗ ದೊಡ್ಡದಾಗಿ ಬೆಳೆದಿದೆ. ದಾವಣಗೆರೆಯಲ್ಲಿ ಮೆಡಿಕಲ್ ಕಾಲೇಜು ಕೊಟ್ಟಿದ್ದು ಯಾವತ್ತು ಎಂದು ನಮಗೆ ಗೊತ್ತಿಲ್ಲ. ಅದು ಒಂದು ಆಗಿದ್ದು ಇವತ್ತು ಎಷ್ಟು ಆಗಿದೆ ಎಂದೂ ಕೂಡ ಗೊತ್ತು. ಸರಕಾರಿ ಪಾಲಿಟೆಕ್ನಿಕ್‌ಗಳು ಸುಮಾರು ೨೫ ಇದ್ದರೆ ಖಾಸಗಿ ಪಾಲಿಟೆಕ್ನಿಕ್‌ಗಳು ಎಷ್ಟು ಇವೆ ಎಂಬುದೂ ಗೊತ್ತಿಲ್ಲವೆ? ಪಾಲಿಟೆಕ್ನಿಕ್‌ಗಳು ಸುಮಾರು ೧೦೦ ಕ್ಕೂ ಹೆಚ್ಚಿಗೆ ಇವೆ. ಏನಿದ್ದರೂ ಇವುಗಳನ್ನೆಲ್ಲಾ ಕಂಟ್ರೋಲ್ ಮಾಡತಕ್ಕಂಥ ಒಂದು ಶಕ್ತಿ-ಸಾಮರ್ಥ್ಯವು ಈ ಘನ ಸದನಕ್ಕೆ ಇದೆ. ಆ ಬಗ್ಗೆ ಸಂದರ್ಭ ಬಂದಾಗ ವಿಚಾರ ಮಾಡೋಣ.

ಶ್ರೀ ಕೆ. ಸೋಮಪ್ಪ ಸುವರ್ಣ.—ಮಾನ್ಯ ಅಧ್ಯಕ್ಷರೆ, ಡಿಎಲ್‌ಆರ್‌ಸಿ ಸೆಲೆಕ್ಷನ್‌ನಲ್ಲಿ ಸ್ವಲ್ಪ ಬದಲಾವಣೆ ಮಾಡುವ ಆಲೋಚನೆಯನ್ನು ಮಾನ್ಯ ಸಚಿವರ ಸದನದ ಮುಂದೆ ವ್ಯಕ್ತಪಡಿಸಿದ್ದಾರೆ. ಪ್ರಾಥಮಿಕ ಹಂತದಲ್ಲಿ ಇರುವ ಶಾಲೆಗಳಲ್ಲಿ ಉಪಾಧ್ಯಾಯರುಗಳನ್ನು ನೇಮಿಸುವಾಗ ಜಿಲ್ಲಾಮಟ್ಟದಲ್ಲಿರುವ ಅಧ್ಯಾಪಕರುಗಳನ್ನು ನೇಮಿಸಿಕೊಂಡಾಗ ಮಾತ್ರ ಅದು ಬಹಳ ಸೂಕ್ತವಾಗುತ್ತದೆ ಎಂದು ನಾನು ಅಭಿಪ್ರಾಯ ಪಡುತ್ತೇನೆ. ಹೀಗೆ ಆದಲ್ಲಿ ಮಕ್ಕಳಲ್ಲಿ, ಉಪಾಧ್ಯಾಯರುಗಳಲ್ಲಿ, ಪೋಷಕರಲ್ಲಿ ಉತ್ತಮ ಬಾಂಧವ್ಯವೂ ಕೂಡ ಏರ್ಪಡಲು ಸಹಕಾರಿಯಾಗುತ್ತದೆ. ಉದಾಹರಣೆಗೆ ನನ್ನ ಕ್ಷೇತ್ರದಲ್ಲಿರುವ ಸಸಿಹಿತ್ಲುವಿನಲ್ಲಿರುವ ಪ್ರಾಥಮಿಕ ಶಾಲೆಯಲ್ಲಿ ಬೀದರ್‌ನಿಂದ ಬಂದ ಒಬ್ಬ ಹೆಡ್‌ಮಾಸ್ಟರ್ ಇದ್ದಾರೆ. ಅವರಿಗೆ ಕನ್ನಡವೇ ಸರಿಯಾಗಿ ಬರುವುದಿಲ್ಲ. ಅವರನ್ನು ಕೇಳಿದರೆ "ಮೈ ಕನ್ನಡ್ ನಹೀ ಜಾನ್‌ತಾಹುಂ, ಅಂಗ್ರೇಜಿ ನಹೀ ಜಾನ್‌ತಾಹುಂ, ಹಿಂದಿ ಸಿಕಾ ಸಕ್ತಾಹುಂ ಮರಾಠಿ ಬತಾ ಸಕ್ತಾಹುಂ" ಎಂದು ಹೇಳುತ್ತಾರೆ. ಇಂಥ ಅಧ್ಯಾಪಕರು ನಮ್ಮ ಹಳ್ಳಿಯ ಶಾಲೆಗಳಿಗೆ ಬಂದರೆ ವಿದ್ಯಾಭ್ಯಾಸದ ಗತಿ ಏನಾದೀತು? ಡಿಎಲ್‌ಆರ್‌ಸಿ ಯಲ್ಲಿರುವ ಕಾನೂನು ದೋಷದಿಂದ ನಮ್ಮ ಮಕ್ಕಳ ಭವಿಷ್ಯವು ಹಾಳಾಗುತ್ತಾ ಇದೆ. ದಯವಿಟ್ಟು ಹೀಗಾಗದಂತೆ ಗಮನ ಕೊಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್.—ತಮ್ಮ ಸಲಹೆಯನ್ನು ಗಮನದಲ್ಲಿಟ್ಟುಕೊಳ್ಳುತ್ತೇನೆ. ಅಂಥ ವಿಚಾರಗಳು ಕಾನೂನಿನ ಊರ್ಜಿತಕ್ಕೆ ಒಳಪಟ್ಟಿರಬೇಕಾಗುತ್ತದೆ. ಆ ಬಗ್ಗೆ ಅಭಿಪ್ರಾಯ ನಮ್ಮ ಮುಂದೆ ಇದೆ ಮುಂದೆ ನೋಡೋಣ.

ಶ್ರೀ ಎ.ವಿ. ಉಮಾಪತಿ.—ಮಾನ್ಯ ಅಧ್ಯಕ್ಷರೇ, ನಾನು ಒಬ್ಬ ಕ್ರೀಡಾಪಟುವಾಗಿ ಆ ಕ್ಷೇತ್ರದಲ್ಲಿ ಇರತಕ್ಕಂಥ ಅನೇಕ ಸಮಸ್ಯೆಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ರಾಜ್ಯದಲ್ಲಿ ಜಿಲ್ಲಾ ಮಟ್ಟದಲ್ಲಿ ಯುವಜನ ಸೇವಾ ಮಂಡಳಿ ಇರುತ್ತದೆ. ಅಲ್ಲಿ ಕೋಚ್‌ಗಳನ್ನು ನೇಮಕ ಮಾಡಿದ್ದಾರೆ. ಆದರೆ ಯಾವ ಜಿಲ್ಲೆಯಲ್ಲಿ ಇಂಥ ಒಂದು ಆಟ ಜನಪ್ರಿಯವಾಗಿದೆ ಅಲ್ಲಿಯ ಜನರಿಗೆ ಇಂಥ ಆಟದ ಮೇಲೆ ಹೆಚ್ಚಿನ ಆಸಕ್ತಿ ಇದೆ ಎಂದು ನೋಡಿಕೊಂಡು ಅದಕ್ಕೆ ಸಂಬಂಧಪಟ್ಟ ಕೋಚ್‌ಗಳನ್ನು ನೇಮಕ ಮಾಡುವುದಿಲ್ಲ. ಉದಾಹರಣೆಗೆ ವಾಲಿಬಾಲ್ ಹೆಚ್ಚು ಜನಪ್ರಿಯವಾಗಿದ ಜಿಲ್ಲೆಗೆ ಕಬ್ಬಡಿ ಕೋಚ್‌ನ್ನು ನೇಮಿಸುತ್ತಾರೆ. ಕಬ್ಬಡಿ ಇರುವಲ್ಲಿ ಪುಟ್‌ಬಾಲ್ ಕೋಚ್‌ನ್ನು ನೇಮಿಸುತ್ತಾರೆ. ಆದುದರಿಂದ ಆಸಕ್ತಿ ಮತ್ತು ಜನಪ್ರಿಯತೆಯನ್ನು ಗಮನದಲ್ಲಿಟ್ಟುಕೊಂಡು ಕೋಚ್‌ಗಳನ್ನು ನೇಮಿಸಬೇಕು. ಮತ್ತು ಒಂದು ಜಿಲ್ಲೆಗೆ ೪-೫ ಜನ ಕೋಚ್‌ಗಳನ್ನು ವಿವಿಧ ಆಟಗಳಿಗೆ ಸಂಬಂಧಪಟ್ಟ ಹಾಗೆ ನೇಮಕ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್.—ಮಾನ್ಯ ಅಧ್ಯಕ್ಷರೇ, ಈಗ ಕೋಚ್‌ಗಳ ಅಭಾವ ಇದೆ. ಕೆಲವೇ ಕೆಲವು ಜನ ಕೋಚ್‌ಗಳು ನಮ್ಮ ರಾಜ್ಯದಲ್ಲಿ ಸಧ್ಯಕ್ಕೆ ಇದ್ದಾರೆ. ನನ್ನ ದೃಷ್ಟಿಯಲ್ಲಿ ಯೂನಿವರ್ಸಿಟಿಗಳಲ್ಲಿ ಇಂಥ ರೆಪ್ರಸೆಂಟ್ ಇರುತ್ತದೆ. ಮತ್ತು ಅಲ್ಲಿ ಕೆಲವರು ವಿವಿಧ ಆಟಗಳಲ್ಲಿ ಕ್ಯಾಪ್ಟನ್ ಆಗಿ ಕೂಡ ಆಸಕ್ತಿ ವಹಿಸಿ ಕ್ರೀಡೆಗಳಲ್ಲಿ ಮುಂಚೂಣಿಯಲ್ಲಿರುವವರು ಇದ್ದಾರೆ. ವಾಲಿಬಾಲ್, ಕ್ರಿಕೆಟ್ ಮುಂತಾದ ಆಟಗಳಲ್ಲಿ ನೈಪುಣ್ಯತೆಯನ್ನು ಪಡೆದುಕೊಂಡವರು ಇದ್ದಾರೆ. ಅಂಥವರನ್ನು ಗುರುತಿಸಿ ಇಂಥ ಕೋಚ್‌ಗಳನ್ನಾಗಿ ಮಾಡಿದರೆ ಅನುಕೂಲವಾದೀತು ಎಂದು ಭಾವಿಸುತ್ತೇನೆ. ಆದರೆ

ನಿರ್ದಿಷ್ಟವಾಗಿ ಈ ಬಗ್ಗೆ ಈಗ ಏನನ್ನೂ ಹೇಳ ಬಯಸುವುದಿಲ್ಲ. ಮಾನ್ಯ ಸದಸ್ಯರ ಸಲಹೆಯನ್ನು ಗಮನದಲ್ಲಿಟ್ಟುಕೊಳ್ಳುತ್ತೇನೆ.

ಶ್ರೀ ಜಿ. ಎಸ್. ಶಿವನಂಜಪ್ಪ.—ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ "The Karnataka Private Educational Institution Discipline and Control Act," 1975 ಬಂದಿದೆ. ಆದರೆ ಇದುವರೆಗೂ ಕೂಡ ಅದಕ್ಕೆ ಒಂದು ರೂಲ್ಸ್ ಆಗಿಲ್ಲ. ಸೆಕ್ಷನ್ ೩೮ ಪ್ರಕಾರ ರೂಲ್ಸ್ ಮಾಡಬೇಕೆಂದು ಮ್ಯಾಂಡೇಟರಿ ಇದೆ. ಹೈಕೋರ್ಟ್‌ನಿಂದ ಎರಡು ಸಾರಿ ಈ ಬಗ್ಗೆ ಡೈರೆಕ್ಷನ್ ಕೊಟ್ಟಿದ್ದರೂ ಕೂಡ ಇನ್ನೂ ರೂಲ್ಸ್ ಮಾಡಿಲ್ಲ. ಮಾನ್ಯ ಸಚಿವರು ಇದರ ಬಗ್ಗೆ ಗಮನಹರಿಸಬೇಕು.

ಶ್ರೀ ಕೆ.ಹೆಚ್. ರಂಗನಾಥ್.—ಮಾನ್ಯ ಸದಸ್ಯರು ಹೇಳಿದ ವಿಚಾರವನ್ನು ನಾನು ನೋಡುತ್ತೇನೆ.

ಶ್ರೀ ಎಚ್. ಎಂ. ರೇವಣ್ಣ.—ಸರಕಾರಿ ಶಾಲೆಗಳಲ್ಲಿ ಫಲಿತಾಂಶ ಶೇಕಡಾವಾರು ಕಡಿಮೆಯಾಗಿರುವುದು ತಿಳಿದಿರುವ ವಿಚಾರವಾಗಿದೆ. ಮಾಗಡಿ ತಾಲ್ಲೂಕಿನ ಸರಕಾರಿ ಸ್ಕೂಲ್‌ನ ಸೈನ್ಸ್ ವಿಭಾಗದಲ್ಲಿ ಒಬ್ಬರೂ ಪಾಸ್ ಆಗಿಲ್ಲ. ಇಂಥ ಜ್ಯೂನಿಯರ್ ಕಾಲೇಜ್‌ಗಳಿಗೆ ಯಾರು ಕೂಡ ಹೋಗುವುದಕ್ಕೆ ಬಯಸುವುದಿಲ್ಲ. ಇದಕ್ಕೆ ಕಾರಣರಾದಂಥ ಅಧ್ಯಾಪಕವರ್ಗದವರನ್ನು ಸಾಮೂಹಿಕವಾಗಿ ವರ್ಗ ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಂಡು ಅಲ್ಲಿಗೆ ತಜ್ಞ ಅಧ್ಯಾಪಕರನ್ನು ನೇಮಕ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಜೊತೆಗೆ ಇತ್ತೀಚಿಗೆ ಸರಕಾರದವರು ಪಠ್ಯಪುಸ್ತಕಗಳನ್ನು ಬಿಡುಗಡೆ ಮಾಡಿದ್ದಾರೆ. ಇವುಗಳನ್ನು ಪುಕ್ಕಟೆಯಾಗಿ ಕೊಡುತ್ತಾರೋ ಅಥವಾ ಹಣಕೊಟ್ಟು ಪಡೆದುಕೊಳ್ಳಬೇಕೋ ಎಂಬ ಬಗ್ಗೆ ಮಾನ್ಯ ಸಚಿವರು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್.—ಪಠ್ಯಪುಸ್ತಕಗಳನ್ನು ಹಣಕೊಟ್ಟು ಪಡೆದುಕೊಳ್ಳಬೇಕಾಗುತ್ತದೆ. ಅಂತೆಯೇ ಹಳೆಯ ಪ್ರಿಂಟ್‌ಗಳಿಗೆ ಹಳೆಯ ರೇಟ್‌ನ್ನು ನಿಗದಿ ಮಾಡಿದ್ದೇವೆ. ಆದರೆ ಹೊಸದಾಗಿ ಪ್ರಿಂಟ್ ಮಾಡಿದ ಪುಸ್ತಕಗಳಿಗೆ ಸ್ವಲ್ಪ ಬೆಲೆಯನ್ನು ಹೆಚ್ಚಿಗೆ ಮಾಡಿದ್ದೇವೆ. ಅಂದರೆ ೨೦–೩೦ ಪೈಸೆಗಳಷ್ಟು ಹೆಚ್ಚಿಗೆ ಮಾಡಿದ್ದೇವೆ.

ಶ್ರೀ ಎಚ್. ಎಂ. ರೇವಣ್ಣ.—ಹಳೆಯ ಪುಸ್ತಕಗಳಿಗೂ ಕೂಡ ಒಂದು ರೂಪಾಯಿ ಹೆಚ್ಚಿಗೆ ಮಾಡಿದ್ದಾರೆ.

ಶ್ರೀ ಕೆ.ಹೆಚ್. ರಂಗನಾಥ್.—ಹಳೆಯ ಪುಸ್ತಕಗಳಿಗೆ ದರವನ್ನು ಹೆಚ್ಚಿಗೆ ಮಾಡಿಲ್ಲ. ಹಾಗೆಯೇ ಯಾರಾದರೂ ಹೆಚ್ಚಿಗೆ ಬೆಲೆಗೆ ಮಾರಾಟ ಮಾಡುತ್ತಿದ್ದರೆ ಅದನ್ನು ಸರಕಾರದ ಗಮನಕ್ಕೆ ತರಬಹುದು. ಅಂತೆಯೇ ಮಾನ್ಯ ಸದಸ್ಯರು ವಿದ್ಯಾರ್ಥಿಗಳು ಅನುತ್ತೀರ್ಣರಾದ ಬಗ್ಗೆ ಹೇಳಿದ್ದಾರೆ. ಯೂನಿವರ್ಸಿಟಿ ಸ್ಕೇಲ್‌ನ್ನು ನಾವು ಇವೊತ್ತು ವಿಶ್ವವಿದ್ಯಾನಿಲಯದ ಉಪಾಧ್ಯಾಯರುಗಳಿಗೆ ಕೊಟ್ಟಿದ್ದೇವೆ. ಅದೇ ರೀತಿಯಲ್ಲಿ ಪದವಿ ಕಾಲೇಜಿನವರಿಗೆ ಹೆಚ್ಚಿಗೆ ಸಂಬಳ ಕೊಟ್ಟಿದ್ದೇವೆ. ಪ್ರೊಫೆಸರ್‌ಗೆ ಸುಮಾರು ೭,೩೦೦ ರೂಪಾಯಿಗಳ ಸಂಬಳ ಇದೆ. ಕೆಲವರು ಐದು ಸಾವಿರ ರೂಪಾಯಿಗಳಷ್ಟು ಸಂಬಳ ತೆಗೆದುಕೊಳ್ಳುತ್ತಾ ಇದ್ದಾರೆ. ಇಂಥ ಒಳ್ಳೆಯ ಸಂಬಳವನ್ನು ಅವರಿಗೆ ಕೊಡುತ್ತಿರುವಾಗ ಅವರೂ ಕೂಡ ತಮ್ಮ ಜವಾಬ್ದಾರಿಯನ್ನರಿತು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಬೇಕಾಗುತ್ತದೆ. ಅದೇ ರೀತಿಯಲ್ಲಿ ಹೈಸ್ಕೂಲ್ ಅಧ್ಯಾಪಕರುಗಳಿಗೂ ಸಂಬಳ ಜಾಸ್ತಿಯಾಗುತ್ತಾ ಇದೆ. ಅವರು ಕೂಡ ಸರಿಯಾದ ರೀತಿಯಲ್ಲಿ ಕೆಲಸ ಮಾಡಬೇಕಾಗುತ್ತದೆ. ಇದು ಅವರ ನೈತಿಕ ಜವಾಬ್ದಾರಿ ಕೂಡ ಆಗಿದೆ.

ಅದಕ್ಕೆ ಏನು ಮಾಡಬೇಕು, ಮುಂದೆ ಅವರ ಬಡ್ತಿಗೆ ತೊಂದರೆ ಆಗತಕ್ಕಂಥ ರೀತಿಯಲ್ಲಿ ಯೋಚನೆ ಮಾಡುತ್ತಿದ್ದೇವೆ. ಸರಿಯಾಗಿ ಪಾಠ ಮಾಡದಿದ್ದರೆ ಯಾವ ಯಾವ ಶಾಲೆಯಲ್ಲಿ ಡಿಸಿಪ್ಲಿನ್ ಇರುತ್ತದೆಯೋ ಎಲ್ಲಿ ಸರಿಯಾಗಿ ರಿಸಲ್ಟ್ ಬಾರದೇ ಹೋದರೆ ಅವರಿಗೆ ನಾವು ಪನಿಷ್‌ಮೆಂಟ್ ಮಾಡಿ ಅವರಿಗೆ ಜವಾಬ್ದಾರಿಯನ್ನು ನಾವು ಹೊರಿಸಬೇಕಾಗುತ್ತದೆ. ಇಲ್ಲದಿದ್ದರೆ ತಿಂಗಳ ಸಂಬಳವನ್ನು ತೆಗೆದುಕೊಂಡು ಕೈ ಬೀಸಿಕೊಂಡು ಹೋಗುತ್ತಾರೆ. ಫೇಲಾದ ಹುಡುಗರು ಮನೆಗೆ ಹೋಗುತ್ತಾರೆ. ಇವತ್ತು ನಾವು ಯೂನಿವರ್ಸಿಟಿ ಯು.ಜಿ.ಸಿ. ಸಂಬಳವನ್ನು ಜಾಸ್ತಿ ಮಾಡಿದಾಗ ಅವರಿಗೆ ಹೇಳಿದೆವು, ಒಬ್ಬ ಪ್ರೊಫೆಸರರಿಗೆ ೧೨ ಗಂಟೆ ಕೆಲಸ. ೧೪ ಗಂಟೆಗಳ ಕಾಲ ಒಂದು ವಾರಕ್ಕೆ ಎಂದು ಇದೆ, ಇಂಥ ಪರಿಸ್ಥಿತಿ ಇರುವುದರಿಂದ ನಾವು we are in a developing stage. He has to sacrifice a lot.

ನಾನು ಸಂಬಳವನ್ನು ಜಾಸ್ತಿ ಮಾಡುವಾಗ ಅವರನ್ನು ಕೇಳಿಕೊಂಡೆ. ನೀವು ಸ್ವಲ್ಪ ಕೆಲಸವನ್ನು ಜಾಸ್ತಿ ಮಾಡಬೇಕು ಎಂದು ಹೇಳಿ ಅಸೋಸಿಯೇಷನ್‌ನವರು ಒಪ್ಪಿಕೊಂಡಿದ್ದಾರೆ. ಲ್ಯಾಬೋರೇಟರಿ, ರಿಸರ್ಚ್ ಇದೆಲ್ಲಾ ಎಂದು ಹೇಳುತ್ತಾರೆ. ಅದನ್ನು ನಾವು ಪುನರ್‌ವಿಮರ್ಶೆ ಮಾಡಬೇಕಾಗುತ್ತದೆ.

ಸ್ವಾಮಿ ಇನ್ನೊಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಸಮಯದ ಅಭಾವದಿಂದ ಹೇಳಲಿಲ್ಲ. ಈ ವಿಶ್ವವಿದ್ಯಾನಿಲಯ ಎಂದು ನಾವು ಮಾಡಿದ್ದೇವೆ. ಈ ವಿಶ್ವವಿದ್ಯಾನಿಲಯ ಯಾರದು ಸ್ವಾಮಿ? ಈ ಸದನದ ಒಂದು ಕೂಸು ಅದು ನಾವು ಇವತ್ತು ಆಕ್ಟ್ ಮಾಡಿದರೆ ಆ ಆಕ್ಟ್‌ನಲ್ಲಿ ಇವತ್ತು ವಿಶ್ವವಿದ್ಯಾನಿಲಯ ಬಂದಿದೆ. ಆ ಆಕ್ಟ್‌ನಲ್ಲಿ ಇಂಥಿಂಥ ಅಧಿಕಾರ ಎಂದು ಕೊಟ್ಟಿದ್ದೇವೆ. ಹಾಗೆಂದು ಹೇಳಿ ಈ ಸದನವನ್ನು ಗಮನಕ್ಕೆ ತೆಗೆದುಕೊಳ್ಳದೇ ಸದನ ಏನು ಸರ್ಕಾರ ನೇಮಕ ಮಾಡಿಕೊಳ್ಳುತ್ತದೆ, ಅದನ್ನು ಗಮನಕ್ಕೆ ತೆಗೆದುಕೊಳ್ಳದೇ ನಡೆದು ಕೊಳ್ಳುವುದಾದರೆ ಅದಕ್ಕೆ ಹಿಡಿತ ಹಾಕತಕ್ಕಂಥ ವಿಚಾರವನ್ನೇ ನಾವು ಮಾಡಬೇಕಾಗುತ್ತದೆ. We cannot allow them to just freely go on in whatever manner they like.

ಅದು ಸಾಧ್ಯವಾಗುವುದಿಲ್ಲ. ನಾವು ಅದಕ್ಕೆ ಅಲ್ಲಿ ಕಡಿವಾಣವನ್ನು ಹಾಕಲೇಬೇಕಾಗುತ್ತದೆ. ಮಾನ್ಯ ಸದಸ್ಯರು ಹೇಳಿದರು, ಈ ಸೆನೆಟ್, ಸಿಂಡಿಕೇಟ್ ನಾಮಿನೇಷನ್ಸ್ ಈ ದಿಸೆಯಲ್ಲಿ ಏನೋ ಆಗುತ್ತದೆ. ಎಂದು ಹೇಳಿದರು. ಇದು ನಮಗೂ ಸ್ವಲ್ಪ ಕಷ್ಟ ಇದೆ. ಈಗ ಅವರ ಛಾನ್ಸಲರ್ ಗೌರ್ನರ್ ಆಗಿರುತ್ತಾರೆ, ಅವರ ಹೆಸರನ್ನು ನಾವು ತೆಗೆದುಕೊಂಡು ಮಾತನಾಡುವುದು ಇದೆಲ್ಲಾ ಏನೇನೋ ಕಷ್ಟ ಇದೆ. ಆದರೆ ಒಂದು ವಿಷಯವನ್ನು ಈ ಸದನದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾವು ಅನುಮತಿಯನ್ನು ಕೊಟ್ಟಿರುವುದರಿಂದ ಯೂನಿವರ್ಸಿಟಿಗಳು ಅಸ್ತಿತ್ವಕ್ಕೆ ಬಂದಿವೆ. ಅದಕ್ಕೆ ಹಣವನ್ನು ಕೊಡುತ್ತೇವೆ, ಬ್ಲಾಕ್ ಗ್ರ್ಯಾಂಟ್ಸ್‌ನ್ನು ಕೊಡುತ್ತೇವೆ. ಕೇಂದ್ರ ಸರ್ಕಾರ ಹಣವನ್ನು ಕೊಡುತ್ತಾರೆ. ಅದೂ ಕೂಡಾ ಸಾರ್ವಜನಿಕರ ಹಣ. ಆದುದರಿಂದ ನಮ್ಮ ಅಭಿಪ್ರಾಯವನ್ನು ಕೂಡಾ ಅವರು ಗಮನಕ್ಕೆ ತೆಗೆದುಕೊಳ್ಳುತ್ತಾರೆ. ಮಾನ್ಯ ಸದಸ್ಯರಾದ ಕಾಜಲಗಿಯವರು ಕೆಲವು ಇಲಾಖೆಗಳಲ್ಲಿ ಜಾಸ್ತಿ ಪ್ರೊಫೆಸರ್‌ಗಳನ್ನು ನೇಮಕ ಮಾಡಿದ್ದಾರೆಂದು ಹೇಳಿದರು. ಇದು ಆಗಕೂಡದು. ಜವಾಬ್ದಾರಿಯನ್ನು ನೋಡಿಕೊಂಡು ಕೆಲಸ ಮಾಡಬೇಕಾಗುತ್ತದೆ. ಜವಾಬ್ದಾರಿಯನ್ನು ಮೀರಿದರೆ ಮುಂದೆ ಆಕ್ಟ್‌ನ್ನು ತಿದ್ದುಪಡಿ ಮಾಡುವುದಾದರೂ ಆ ರೀತಿ ತಿದ್ದುಪಡಿ ಮಾಡುವುದಕ್ಕೆ ಕೂಡಾ ನಾವು ಹಿಂದುಮುಂದೆ ನೋಡುವುದಿಲ್ಲ. ಇದು ಸ್ವಾಯತ್ತ ಸಂಸ್ಥೆ ಇಂಟರ್‌ನಲ್ ಡೆಮಾಕ್ರಸಿ, ಡೆಮಾಕ್ರಸಿ ಎಂದು ಹೇಳಿಕೊಂಡು ಏನು ಬೇಕಾದರೂ ಮಾಡುವುದರೆ ಅದನ್ನು ನೋಡಿ ನಾವು ಸಹಿಸುವುದಕ್ಕೆ ಆಗುವುದಿಲ್ಲ.

† ಶ್ರೀ ಕೆ. ಹೆಚ್. ಹನುಮೇಗೌಡ:— ಮಾನ್ಯ ಅಧ್ಯಕ್ಷರೇ, ಪ್ರೌಢಶಾಲೆಗಳನ್ನು ಯಾರು ಪ್ರೈವೇಟ್ ಆಗಿ ಮಾಡುತ್ತಾರೆ. ಅವರಿಗೆ ಹಿಂದೆ ೫ ವರ್ಷಕ್ಕೆ ಗ್ರ್ಯಾಂಟ್‌ನ್ನು ಕೊಡುತ್ತಿದ್ದರು. ಈಗ ಏಳು ವರ್ಷಕ್ಕೆ ಮಾಡಿದ್ದೀರಿ. ಪಟ್ಟಣಗಳಲ್ಲಿರುವವರು ಅನುಕೂಲಸ್ಥರು. ಗ್ರಾಮಾಂತರ ಪ್ರದೇಶಗಳಲ್ಲಿ ಬಡವರು ಇರುವ ಜಾಗದಲ್ಲಿ ಒಂದು ಪ್ರೈವೇಟ್ ಶಾಲೆಗಳು ಎಂದರೆ ಏಳು ವರ್ಷಕ್ಕೆ ಗ್ರ್ಯಾಂಟ್ ಎಂದು ಮಾಡಿದ್ದೀರಿ. ಏಳು ವರ್ಷಗಳವರೆಗೆ ಆ ಬಡವರು ಇರತಕ್ಕಂಥ ಜಾಗದಲ್ಲಿ ಮಾಷ್ಟರರುಗಳಿಗೆ ಸಂಬಳವನ್ನು ಕೊಡುವವರು ಯಾರು? ಸಂಬಳ ಇಲ್ಲದೇ ಇರುವ ಮಾಸ್ತರು ಬಂದು ಹೇಗೆ ಪಾಠ ಮಾಡುತ್ತಾರೆ? ಇದು ಬಹಳ ಶೋಚನೀಯ ಸ್ಥಿತಿದಯಮಾಡಿ ಸರ್ಕಾರದವರು ಇದನ್ನು ಪುನಃ ಕನ್‌ಸಿಡರ್ ಮಾಡಿ ಮೊದಲಿದ್ದ ಹಾಗೆ ಐದು ವರ್ಷಕ್ಕೆ ಅನುದಾನವನ್ನು ಕೊಡಬೇಕು. ಈ ಏರ್ಪಾಡನ್ನು ಕೂಡ ಮಾಡಬೇಕು. ಇದು ಒಂದು ಪ್ರೈವೇಟ್ ಹೈಸ್ಕೂಲ್‌ಗಳಿಗೆ ಗ್ರ್ಯಾಂಟನ್ನು ಕೊಡುವುದಕ್ಕೆ ಏಳು ವರ್ಷ ಎಂದು ಮಾಡಿದ್ದೀರಿ. ಈಗ ಗ್ರ್ಯಾಂಟ್ ಇಲ್ಲದೆ ಇರತಕ್ಕಂಥ ಶಾಲೆಗಳನ್ನು ಯಾರು ತೆಗೆದುಕೊಳ್ಳುತ್ತಾರೆ. ಬಡವರು ಇರತಕ್ಕಂಥ ಜಾಗದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ತೆಗೆಯತಕ್ಕಂಥ ಸಂಸ್ಥೆಗಳಲ್ಲಿ ನೀವು ಏಳು ವರ್ಷ ಎಂದು ನಿಗದಿ ಮಾಡಿಬಿಟ್ಟರೆ ಅಲ್ಲಿಯ ಗತಿಯೇನೇ? ದಯಮಾಡಿಟ್ಟು ಇದನ್ನು ಪುನಃ ಮೊದಲಿದ ಹಾಗೆ ಐದು ವರ್ಷಕ್ಕೆ ಮಾಡಬೇಕು. ಎರಡನೇ ವಿಚಾರವೆಂದು ಹೇಳಿದರೆ ಗ್ರಾಮಾಂತರ ಪ್ರದೇಶಗಳಲ್ಲಿ ಪ್ರೈಮರಿ ಶಾಲೆಗಳಲ್ಲಿ ಎಜುಕೇಷನ್‌ನನ್ನು ನೋಡಿದರೆ ಖಂಡಿತವಾಗಿಯೂ ಕರುಳುಕಿತ್ತು ಬರುತ್ತದೆ. ಅಲ್ಲಿ ಓದತಕ್ಕಂಥ ಮಕ್ಕಳು ಮತ್ತು ಬಡವರ ಸ್ಥಿತಿ ಗತಿಗಳನ್ನು ನೋಡಿದರೆ ಕರುಳು ಕಿತ್ತು ಬರುತ್ತದೆ. ಕೆಲವು ಶಾಲೆಗಳಿಗೆ ಪ್ರೈಮರಿ ಟೀಚರ್ಸ್‌ಗಳು ಹೋಗುವುದಿಲ್ಲ. ಅದರಲ್ಲಿಯೂ ಜಿಲ್ಲಾ ಪರಿಷತ್ತಿನವರು ವಹಿಸಿಕೊಂಡ ಮೇಲೆ ಜಿಲ್ಲಾ ಪರಿಷತ್ತಿನ ಮೆಂಬರ್ಸ್, ಪ್ರೆಸಿಡೆಂಟ್ ಅವರು ಇವರನ್ನು ಅನುಸರಿಸಿಕೊಂಡು ಬಿಟ್ಟರೆ ೧೫_೨೦ ದಿವಸಕ್ಕೆ ಒಂದು ಸಾರಿ ಮಾಸ್ತರರು ಹೋಗಿ ರುಜು ಹಾಕಿ ವಾಪಸ್ ಬಂದು ಬಿಡುತ್ತಾರೆ. ನೀವು ಯಾವ ಶಾಲೆಗಾದರೂ ಹೋಗಿ, ನಾಲ್ಕನೇ ಕ್ಲಾಸಿನ ಮಕ್ಕಳಿಗೆ ಎರಡನೇ ಮಗ್ಗಿ ಹೇಳಿ ಎಂದು ಕೇಳಿದರೆ ಹೇಳುವುದಕ್ಕೆ ಬರುವುದಿಲ್ಲ. ಇಂಥ ಹೀನಾಯವಾದ ಪರಿಸ್ಥಿತಿ ಇವೆ. ಅಲ್ಲಿಯ ರೈತರು ಒಂದು ಸಾರಿ ಹೇಳುತ್ತಾರೆ, ಹನುಮೇಗೌಡರೇ, ಶಾಲೆಗೆ ಕಳುಹಿಸುತ್ತೇವೆ, ಓದುವುದಕ್ಕೆ ಬರುವುದಿಲ್ಲ. ಸಣ್ಣಪುಟ್ಟ ಕೆಲಸಗಳನ್ನು ಮಾಡಿಕೊಂಡು ಮನೆಯಲ್ಲಿ ಜೀವನವನ್ನು ಮಾಡುತ್ತಿದ್ದೆವು. ಕೆಲಸವನ್ನುಕೂಡ ಈಗ

ಮಾಡುವುದನ್ನು ಬಿಟ್ಟು, ಮತ್ತೆ ಓದುವುದಕ್ಕೂ ಬರುವುದಿಲ್ಲ. ನಮ್ಮ ಹುಡುಗ ಸರ್ವನಾಶವಾಗಿದ್ದಾನೆ, ಇದಕ್ಕೆ ಕೊನೆ ಮೊದಲು ಇಲ್ಲವೇ ಎನ್ನುವ ಮಾತನ್ನು ಹೇಳುತ್ತಾರೆ. ನನಗನ್ನಿಸುತ್ತದೆ, ಇದೇ ಪರಿಸ್ಥಿತಿ ಮದ್ರಾಸ್ ಸ್ಟೇಟ್‌ನಲ್ಲಿಯೂ ಇತ್ತಂತೆ ಪ್ರೈಮರಿ ಶಾಲೆಗಳಿಗೆ ಹೆಣ್ಣುಮಕ್ಕಳನ್ನು ಟೀಚರ್ಸ್ ಆಗಿ ಹಾಕಬೇಕು ಎಂದು ಅಲ್ಲಿ ಮಾಡಿದಮೇಲೆ ಬಹಳ ಪರಿಸ್ಥಿತಿ ಉತ್ತಮವಾಗಿದೆ ಎಂದು ಹೇಳುವುದನ್ನು ಕೇಳಿದ್ದೇನೆ. ಈಗ ಗ್ರಾಮಾಂತರ ಪ್ರದೇಶಗಳಲ್ಲಿ ಚಿಕ್ಕ ಮಕ್ಕಳಿಗೆ ಹೆಂಗಸರು ಪ್ರೀತಿಯಿಂದ, ಮಮತೆಯಿಂದ ಪಾಠ ಹೇಳತಕ್ಕಂಥ ಒಂದು ಪ್ರವೃತ್ತಿ ಏನು ಇವೆ, ಅದು ಗಂಡಸರಿಗೆ ಬರುವುದಿಲ್ಲ. ಇನ್ನೊಂದು ವಿಶ್ವಾಸದಿಂದ ಇವರು ಪಾಠ ಮಾಡುವುದಿಲ್ಲ ಎನ್ನತಕ್ಕಂಥ ಮಾತನ್ನು ಕೇಳಿದ್ದೇವೆ.

೨–೦೦ ಪಿ. ಎಂ.

ಹೆಣ್ಣು ಮಕ್ಕಳಷ್ಟು ಗಂಡಸರಿಗೆ ಪಾಠ ಮಾಡುವುದಕ್ಕೆ ಬರುವುದಿಲ್ಲ. ಅವರು ಅಷ್ಟೊಂದು ವಿಶೇಷವಾಗಿ ಪಾಠ ಮಾಡುವುದಿಲ್ಲ ದಯವಿಟ್ಟು ನೀವು ಏನಾದರೂ ಮಾಡಿ, ಒಟ್ಟಿನಲ್ಲಿ ಯಾರನ್ನಾದರೂ ಹಾಕಿ ಗ್ರಾಮಾಂತರ ಪ್ರದೇಶದಲ್ಲಿ ಹಳ್ಳಿ ಮಕ್ಕಳು ೪ ಅಕ್ಷರ ಕಲಿತುಕೊಂಡು ಬರೆಯುವರ ಹಾಗೆ ಜೀವನದಲ್ಲಿ ಮೇಲೆ ಬರುವುದಕ್ಕೆ ಒಂದು ವ್ಯವಸ್ಥೆಯನ್ನು ಮಾಡಬೇಕು. ೭ನೇ ಕ್ಲಾಸ್‌ನಲ್ಲಿ ಓದಿ ೮ನೇ ತರಗತಿ ಅಂದರೆ ಹೈಸ್ಕೂಲ್‌ಗೆ ಬರುತ್ತಾರೆ. ಅವರಿಗೆ ಏನೂ ಬರುವುದಿಲ್ಲ. ಎಲ್ಲಾ ಪಾಸ್. ಹಾಗಾದರೆ ಎಜುಕೇಶನ್ ಸ್ಟಾಂಡರ್ಡ್ ಏನು? ಅವರಿಗೆ ಓದುವುದಕ್ಕೆ ಬರುವುದಿಲ್ಲ. ಇಂಗ್ಲೀಷ್ ಮ್ಯಾಥ್‌ಮ್ಯಾಟಿಕ್ಸ್ ಬರುತ್ತದೆಯೇ ಎಂದು ಏನೂ ವೆರಿಫಿಕೇಶನ್ ಇಲ್ಲ. ಎಷ್ಟು ಜನ ಸ್ಕೂಲ್ ಇನ್ಸ್‌ಪೆಕ್ಟರ್, ಇದ್ದಾರೆ. ಎ.ಇ.ಓ. ಇದ್ದಾರೆ, ಡಿ.ಡಿ.ಪಿ.ಐ. ಇದ್ದಾರೆ ಇವರೆಲ್ಲಾ ಏನು ಮಾಡುತ್ತಿರುತ್ತಾರೆ? ಯಾರು ಎಲ್ಲೋ ಹೋಗುತ್ತಾರೆ, ಬರುತ್ತಾರೆ. ಒಂದು ಕೂಡ ಅರ್ಥವಾಗುವುದಿಲ್ಲ.

ಶ್ರೀ ಕೆ:ಹೆಚ್. ರಂಗನಾಥ್:— ಈಗಾಗಲೇ ಎರಡು ಗಂಟೆ ಆಗಿದೆ. ಮಾನ್ಯ ಹನುಮೇಗೌಡರು ಕೇಳಿದ್ದಕ್ಕೆಲ್ಲಾ ಹೇಳಬೇಕು ಎಂದರೆ ಅದಕ್ಕೆ ಸ್ಪೆಷಲ್ ಸೆಷನ್ ಮಾಡಬೇಕಾಗುತ್ತದೆ. ಇದು ಅವರಿಗೂ ಗೊತ್ತು. ಜಿಲ್ಲಾ ಪರಿಷತ್ತಿನ ವಿಚಾರವನ್ನು ಶಿವರಾಮೇಗೌಡರೂ ಸಹ ಪ್ರಸ್ತಾಪ ಮಾಡಿದರು ನಾನು ಉದ್ದೇಶ ಪೂರ್ವಕವಾಗಿ ಅದನ್ನು ಕೈಬಿಟ್ಟು ಇವೊತ್ತು ವಿದ್ಯಾ ಇಲಾಖೆಯ ಮಾನ್ಯ ಕೌಜಲಗಿಯವರು ಏನು ಪ್ರಸ್ತಾಪ ಮಾಡುವರು, ಅದು ನನ್ನ ವೈಯಕ್ತಿಕವಾದ ಅಭಿಪ್ರಾಯ ಎಂದು ಅವರು ಅಂದಿದ್ದಾರೆ, ಅದರಲ್ಲಿ ಸ್ವಲ್ಪ ವಾಸ್ತವಾಂಶ ಇದೆ. ನಾವು ಬಯಸಿದಷ್ಟು, ನಾವು ಏನು ನಿರೀಕ್ಷಣೆ ಮಾಡಿದ್ದೇವೋ ಆ ದಿಕ್ಕಿನಲ್ಲಿ ಈಗ ಅವರು ಕೆಲಸ ಮಾಡಲಿಲ್ಲ. ಅವರದೇ ಒಂದು ತರಹ. ನಾನು ವಿಶ್ವವಿದ್ಯಾನಿಲಯಕ್ಕೆ ಹೇಳಿದೆ. ಅದನ್ನು ಇವರ ಬಗ್ಗೆಯೂ ಪ್ರಸ್ತಾಪ ಮಾಡಬೇಕಾಗುತ್ತದೆ. ನಾನು ಏನು ಹೇಳಿದೆ. ಆಕ್ಟ್‌ನಲ್ಲಿ ನಾವು ಪಾಸ್ ಮಾಡಿದ್ದೇವೆ ಆದ್ದರಿಂದ ಅವರು ಅಸ್ತಿತ್ವಕ್ಕೆ ಬಂದಿದ್ದಾರೆ. ಅದು ಇರಲಿ, ವಿವಾದಗ್ರಸ್ತವಾಗಿ ಆ ವಿಚಾರ ಕುಳಿತಿದೆ. ಇವೊತ್ತಿನ ದಿವಸ ಉಪಾಧ್ಯಾಯರ ಅಸೋಸಿಯೇಷನ್ ಇದೆ. ನಾನು ಧಾರವಾಡಕ್ಕೆ ಹೋಗಿದ್ದೆ, ಬಿಜಾಪುರಕ್ಕೆ ಹೋಗಿದ್ದೆ, ಬೆಳಗಾಂಗೆ ಹೋಗಿದ್ದೆ. ಗುಲ್ಬರ್ಗಾಕ್ಕೆ ಹೋಗಿದ್ದೆ. ಎಲ್ಲಾ ಕಡೆ ಕೇಳಿದ್ದುದು ಉಪಾಧ್ಯಾಯರು ನಮ್ಮನ್ನು ಇವರಿಂದ ಬಿಡುಗಡೆ ಮಾಡಿ ಎಂದು ಇಂತಹ ಪರಿಸ್ಥಿತಿಯಲ್ಲಿ ಇದ್ದಾಗ ಅದನ್ನು ಪುನರ್ ಉಚ್ಚಾರ ಮಾಡತಕ್ಕ ಅವಕಾಶ, ಸಮಯ ಬಂದಿದೆ. ಮತ್ತೆ ಈ ಸದನದ ಅಭಿಪ್ರಾಯ ಹಾಗೆ ಆಗುವುದಾದರೆ ಅದನ್ನು ತೆಗೆದುಕೊಳ್ಳಬೇಕಾಗುತ್ತದೆ. ತೆಗೆದುಕೊಳ್ಳುವುದಕ್ಕೆ ಸರ್ಕಾರ ಹಿಂದು ಮುಂದೆ ನೋಡುವುದಿಲ್ಲ.

MR. SPEAKER.—Are you suggesting views by mutual consent ?

ಶ್ರೀ ಕೆ. ಹೆಚ್. ರಂಗನಾಥ್.— No, no. ಆ ಗೊಂದಲಕ್ಕೆ ನಾನು ತಳ್ಳುವುದಿಲ್ಲ. ನಾನು ಸದನದ ಮುಂದೆ ವಿಷಯ ಇಟ್ಟಿದ್ದೇನೆ. ತತ್‌ಕ್ಷಣ ನಾವು ಇದನ್ನು ಗಮನಿಸಬೇಕು, ನಮ್ಮ ಏರಿಯಾ ಎಷ್ಟು ಎಂದು. They should not cross the border. ಇದನ್ನು ಅವರು ವಿಚಾರ ಮಾಡಬೇಕಾಗುತ್ತದೆ. ನಾವು ಇಷ್ಟು ಜವಾಬ್ದಾರಿ ಕೊಟ್ಟಿದ್ದೇವೆ. ಪ್ರಾಥಮಿಕ ಶಾಲೆಗಳಲ್ಲಿ ಆಗಲಿ ಅಥವಾ ಮಾಧ್ಯಮಿಕ ಶಾಲೆಗಳನ್ನಾಗಲೀ ನಡೆಸತಕ್ಕ ಹೊಣೆಗಾರಿಕೆಯನ್ನು ಅವರಿಗೆ ಕೊಟ್ಟಿದ್ದೇವೆ. ಇದರ ಇನ್ಸ್‌ಪೆಕ್ಷನ್ ಮಾಡತಕ್ಕದ್ದರ ಬಗ್ಗೆ ಎ.ಇ.ಓ. ಮೇಲೆ ಕಂಟ್ರೋಲ್, ಡಿ.ಡಿ.ಪಿ.ಐ. ಮೇಲೆ ಕಂಟ್ರೋಲ್, ಜಾಯಿಂಟ್ ಡೈರೆಕ್ಟರ್ ಮೇಲೆ ಕಂಟ್ರೋಲ್ ಕೊಟ್ಟಿದ್ದೇವೆ. ಇವರಿಗೆ ಬೇರೆ ಬೇರೆ ಫಂಕ್ಷನ್‌ಗಳು. ಬೇರೆ ಬೇರೆ ಇದ್ದರೂ ಕೂಡ ಇವೊತ್ತು ಸರೆಂಡರ್ ಆಗಿದೆ. ಸರ್ಕಾರಕ್ಕೂ ಅವರಿಗೂ ಗೊಂದಲ ಬರತಕ್ಕ ಪರಿಸ್ಥಿತಿ ಇವೊತ್ತಿನ ದಿವಸ ಇದೆ. ನಾನು ಮೊದಲುಗೊಂಡು ಇಲ್ಲಿರತಕ್ಕ ಸಿ.ಪಿ.ಐ ಮೊದಲಗೊಂಡು ಜಿಲ್ಲಾ ಮಟ್ಟದಲ್ಲಿ ಹೋದರೆ ಒಬ್ಬ ಜಿಲ್ಲಾ ಅಧ್ಯಕ್ಷರು ಡಿ.ಡಿ.ಪಿ.ಐ.ಅನ್ನು ಅಲ್ಲಿಗೆ ಏಕೆ ಹೋಗುತ್ತೀರಿ, ಎಂದು ಹೇಳಿ ಇನ್ಸ್‌ಪೆಕ್ಷನ್ ಅಥಾರಿಟಿಯನ್ನು ನೋಡುವುದಕ್ಕೆ ಬಿಡದ ರೀತಿಯಲ್ಲಿ ಅವರು ಇಟ್ಟುಕೊಂಡಿರತಕ್ಕ ಪರಿಸ್ಥಿತಿ ಇದೆ. ಇದೆಲ್ಲಾ ಗಮನಕ್ಕೆ ಬಂದಿದೆ. ಎಲ್ಲೆಲ್ಲಿ ವಿಚಾರ

ಮಾಡುತ್ತಿದ್ದೇವೆ, ನಾವು ಸುಲಭವಾಗಿ ಮಾತನಾಡಬಹುದು. ಪತ್ರಿಕೆಗಳಲ್ಲಿ ಪ್ರಸಿದ್ಧವಾಗಿ ಹೇಳಿಕೆಗಳು ಬರುತ್ತವೆ. ಇಷ್ಟು ಜನರಿಗೆ ಮನ ಮೆಚ್ಚುವ ರೀತಿಯಲ್ಲಿ ಅವರು ಕೆಲಸ ಮಾಡುತ್ತಿಲ್ಲ. ಎಂದು ತಮಗೂ ಅರ್ಥ ಆಗಿದೆ. ನಮ್ಮ ನಮ್ಮ ಕ್ಷೇತ್ರಕ್ಕೆ ಹೋದಾಗ ಈ ವಿಚಾರ ಗೊತ್ತಾಗುತ್ತದೆ. ಆದ್ದರಿಂದ ಇದರ ಬಗ್ಗೆ ಪುನರ್ ಪರಿಶೀಲನೆ ಮಾಡಬೇಕಾದ ಅವಶ್ಯಕತೆ ಇದೆ. ಇದರ ಬಗ್ಗೆ ಯೋಚನೆ ಮಾಡಬೇಕು. ಮಾನ್ಯ ಗ್ರಾಮೀಣಾಭಿವೃದ್ಧಿ ಮಂತ್ರಿಗಳು ಇದ್ದಾರೆ, ಇದರ ಬಗ್ಗೆ ಅವರೂ ವಿಚಾರ ಮಾಡಬೇಕಾಗಿದೆ. With one stroke of a pen we have given them a lot of powers. ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್ ಅವರಿಗೆ ಕೊಟ್ಟಿದ್ದೇವೆ. ಕೋ ಆಪರೇಷನ್ ಡಿಪಾರ್ಟ್‌ಮೆಂಟ್ ಅವರಿಗೆ ಕೊಟ್ಟಿದ್ದೇವೆ. ವಿದ್ಯಾ ಇಲಾಖೆ ಅವರಿಗೆ ಕೊಟ್ಟಿದ್ದೇವೆ. ಇಂಜಿನಿಯರಿಂಗ್ ಇಲಾಖೆ ಕೊಟ್ಟಿದ್ದೇವೆ. ಎಲ್ಲಾ ಇಲಾಖೆಗಳನ್ನು ಕೊಟ್ಟು ನಾವು ಇವೊತ್ತು...

ಶ್ರೀ ಕೆ.ಎಸ್. ಹನುಮೇಗೌಡ.— ನೋಟು ಒತ್ತುವುದನ್ನೂ ಕೊಟ್ಟುಬಿಡಿ. ಭಾರೀ ಕಷ್ಟಪಟ್ಟಿ ದುಡ್ಡು ಹೊಡೆಯುತ್ತಿದ್ದಾರೆ..

ಶ್ರೀ ಬಿ.ಎಂ. ಇದಿನಬ್ಬ,— ಎಲ್ಲವನ್ನೂ ಅವರಿಗೆ ಕೊಟ್ಟುಬಿಡಿ...

ಶ್ರೀ ಕೆ.ಹೆಚ್. ರಂಗನಾಥ್.— ನೋಟು ಒತ್ತುವುದು ನಮ್ಮ ಕೈಯಲ್ಲಿ ಇಲ್ಲ. ನಮಗೆ ಅದು ಇದ್ದಿದ್ದರೆ ಅದನ್ನು ಕೊಟ್ಟು ಬಿಡುತ್ತಿದ್ದೆವು. ಒಂದು ಪ್ರಶ್ನೆಗೆ ನಾನು ತಪ್ಪು ಮಾಹಿತಿ ಕೊಟ್ಟಿದ್ದೇನೆ. ಮಾನ್ಯ ಸದಸ್ಯರಾದ ರೇವಣ್ಣನವರು ಹಳೇ ಪುಸ್ತಕವನ್ನು ಮಾರುತ್ತಿದ್ದಾರೆ ಎಂದು ಹೇಳಿದರು. ನಾವೇ ಅದಕ್ಕೆ ಅನುಮತಿಯನ್ನು ಕೊಟ್ಟಿದ್ದೇವೆ ಎಂದು ನಮ್ಮ ಅಧಿಕಾರಿಗಳು ಹೇಳುತ್ತಿದ್ದಾರೆ. ಅದನ್ನು ಪುನರ್ ಪರಿಶೀಲನೆ ಮಾಡುತ್ತೇನೆ.

ಶ್ರೀ ಕೆ. ಎಸ್. ಹನುಮೇಗೌಡ.— ಪ್ರೈವೇಟ್ ಇನ್‌ಸ್ಟಿಟ್ಯೂಷನ್‌ಗೆ, ಹೈಸ್ಕೂಲ್‌ಗಳಿಗೆ ೭ ವರ್ಷದ ಬದಲು ೫ ವರ್ಷ ಮಾಡಿ, ಅನುದಾನವನ್ನು ಕೊಡುವುದಕ್ಕೆ ಪುನರ್ ಪರಿಶೀಲನೆ ಮಾಡಬೇಕೆಂದು ನಾನು ಕೇಳಿಕೊಂಡಿದ್ದೆ. ಬಡವರು ಇರುವ ಜಾಗ ಅದು. ಬಡವರು ನಡೆಸತಕ್ಕ ಸ್ಕೂಲ್ ಆಗಿರುವುದರಿಂದ ಸರ್ಕಾರದ ನಿಲುವು ಇದರ ಬಗ್ಗೆ ಏನು ಇದೆ...

ಶ್ರೀ ಕೆ.ಹೆಚ್. ರಂಗನಾಥ್.— ಮಾನ್ಯ ಸದಸ್ಯರ ಸೂಚನೆಯನ್ನು ಕೇಳಿದ್ದೇನೆ.

SRI QUMARUL ISLAM.— There is a very long pending demand for the Urdu Chair in the Bangalore University. I would like to know as to whether the Government is going to have the Urdu Chair in the Bangalore University ?

SRI K.H. RANGANATH.— I will suggest to the University. It is the University which has to do.

SRI QUAMRUL ISLAM.— Secondly, recently the Kannada teacher posts have already been filled up in the Gulbarga by DLRC. But, 19 Urdu Teacher posts and 9 Physical Instructors posts were not filled up. The Urdu minority students are suffering on account of that.

ಶ್ರೀ ಕೆ.ಹೆಚ್. ರಂಗನಾಥ್.— ಮಾನ್ಯ ಸದಸ್ಯರು ಕನ್ನಡ ಉಪಾಧ್ಯಾಯರನ್ನು ಉರ್ದು ಶಾಲೆಗಳಿಗೆ ಕೊಡಬೇಕು ಎನ್ನುವ ಮಾತನ್ನು ಹೇಳಿದರು, ನಾನು ಮರೆತುಬಿಟ್ಟೆ. ನಾವು ಕೊಟ್ಟಿದ್ದೇವೆ ಆದರೆ ಉರ್ದು ಶಾಲೆಗಳವರು ಒಂದು ಕಷ್ಟ ಮಾಡಿದ್ದಾರೆ. ಏನೆಂದರೆ, ಅವರು ಶಾಲೆಗಳಿಗೆ ೧೦ ಉಪಾಧ್ಯಾಯರು ಬೇಕಾದರೆ ೧೦ ಪ್ಲಸ್ ಒಬ್ಬ ಕನ್ನಡ ೧೧ ಮಾಡಿದ್ದಾರೆ. ಹಾಗೆ ಆಗುವುದಿಲ್ಲ. That Kannada teacher must also be a part of the staff that you are suggesting. He should be within 10 or 5 or whatever may be the number. ಹಾಗೆ ಆಗಬೇಕು. ಎಕ್ಸ್‌ಟ್ರಾ ಕೊಡಬೇಕು ಅಂದರೆ ಅದು ಕಷ್ಟವಾಗುತ್ತದೆ, ಕೆಲವು ಕಡೆ ಅದು ಆಗಿಲ್ಲ. ಇಲ್ಲದೇ ಹೋದರೆ ಏನು ಮಾಡಬೇಕು, ನಿಮ್ಮದು ಒಂದನ್ನು ಕಡಿಮೆ ಮಾಡಬೇಕಾಗುತ್ತದೆ, ಕನ್ನಡ ಮೇಸ್ಟರನ್ನು ಡೆಪ್ಯೂಟ್ ಮಾಡಬೇಕಾಗುತ್ತದೆ.

SRI QUMARUL ISLAM.— There are grant-in.aid schools and government schools, you have not created Kannada Teacher posts.

After the Gokak Report to learn Kannada, you have not created posts in the grant-in-aid schools. I want to know why it is not done. When we want to learn Kannada nobody is there. Others are getting a handsome salary. Why Kannada teacher is not given? Kannada was made a compulsory Subject. We all welcome it. Why the posts have not been created in the grant-in-aid schools? Why the Urdu posts have not been filled recently in Gulbarga District DLRC ?

SRI K.H. RANGANATH.— I will look into it.

ಒಬ್ಬ ಮಾನ್ಯ ಸದಸ್ಯರು.— ಮಾನ್ಯ ಸಚಿವರು ಮಾತನಾಡುತ್ತಾ, ಎಸ್. ಎಸ್. ಎಲ್. ಸಿ. ಮೆರಿಟ್ ಮೇಲೆ ಪಿ. ಯು. ಸಿ.ಗೆ ಅಡ್ಮಿಷನ್ ಕೊಡುವ ಯೋಚನೆ ಮಾಡುತ್ತಾ ಇದ್ದೇನೆ ಎಂದು ಹೇಳಿದರು ನಾನು ಗ್ರಾಮಾಂತರ ಪ್ರದೇಶದಿಂದ ಬಂದವನಾಗಿ ತಿಳಿದುಕೊಂಡಿದ್ದೇನೆ. ಪ್ರೌಢಶಾಲೆಗಳಲ್ಲಿ ಮೆರಿಟ್ ತೆಗೆದುಕೊಳ್ಳುವುದರಿಂದ ಹಳ್ಳಿಯ ಹುಡುಗರಿಗೆ ಬಹಳ ಕಷ್ಟವಾಗುತ್ತದೆ. ಈ ಆಲೋಚನೆ ಏನಾದರೂ ಅವರಿಗೆ ಇದ್ದರೆ ಇದನ್ನು ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಬೇಕಾಗುತ್ತದೆ. ಏಕೆಂದರೆ, ಪಿ.ಯು.ಸಿ.ಗೆ ಹೋಗುವುದಕ್ಕೆ ಹಳ್ಳಿಯ ಮಕ್ಕಳಿಗೆ ಏನಾದರೂ ಅಡಚಣೆ ಮಾಡುತ್ತೇವೆ ಸರ್ಕಾರದ ನೀತಿಯಲ್ಲಿ ಅಂದರೆ ಅದು ನಮ್ಮ ದುರಂತ ಎಂದು ಭಾವಿಸುತ್ತೇನೆ. ಮತ್ತೆ ಹಣಕಾಸಿನ ಅಡಚಣೆಯಿಂದಾಗಿ ಕೆಲವು ಕಾರ್ಯಕ್ರಮಗಳನ್ನು ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳಿದರು. ಓಪನ್ ಯೂನಿವರ್ಸಿಟಿ ಸ್ಕೀಂ ತಮ್ಮದು ಏನಾಯಿತು ಎಂದು ತಿಳಿಯಲಿಕ್ಕೆ ನಾನು ಬಯಸುತ್ತೇನೆ. ಏಕೆಂದರೆ, ನನಗೆ ಗೊತ್ತಿರುವ ಹಾಗೆ, ಮೈಸೂರಿನ ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆಯವರು ಓಪನ್ ಯೂನಿವರ್ಸಿಟಿಗೆ ಹಣಕಾಸಿನ ಅಡಚಣೆ ಇಲ್ಲ, ನಮಗೆ ಬೇಕಾದಷ್ಟು ಹಣಕಾಸು ಇದೆ. ಅದಕ್ಕೆ ಪರ್ಮಿಷನ್ ಕೊಡಿ ಎಂದು ಕೇಳಿದ್ದರು ಎಂದು ನಾನು ತಿಳಿದುಕೊಂಡಿದ್ದೇನೆ, ಈ ಬಗ್ಗೆ ತಮ್ಮ ಆಲೋಚನೆ ಏನಾದರೂ ಇದ್ದರೆ ಹೇಳಬೇಕು.

ಶ್ರೀ ಕೆ.ಹೆಚ್. ರಂಗನಾಥ್.— ಸ್ವಾಮಿ, ನಾನು ಒಂದು ಅಭಿಪ್ರಾಯ ಏನು ಹೇಳಿದೆ ಅಂದರೆ, ಸರ್ಕಾರ ತೀರ್ಮಾನ ತೆಗೆದುಕೊಂಡಿಲ್ಲ, ಅವರನ್ನು ಇಷ್ಟಕ್ಕೇ, ಇಷ್ಟು ಪರ್ಸೆಂಟೇಜ್‌ಗೆ ನಿಲ್ಲಿಸಿದ್ದೇವೆ ಎಂದು, ಆ ರೀತಿ ಮಾಡಬೇಕಾಗುತ್ತದೆಯೇನೊ, ಎಲ್ಲರಿಗೂ ಕಾಲೇಜಿಗೆ ಹೋಗತಕ್ಕಂಥ ಅವಕಾಶ ಕೊಡತಕ್ಕಂಥಾದ್ದು ಸಾಧುವಾಗಲಾರದು ಎಂಬ ಅಭಿಪ್ರಾಯ ಹೇಳಿದೆ. ತಾವು ಆಗಲೇ ದುರಂತದ ಶಬ್ದಕ್ಕೆ ಹೋಗಿಬಿಟ್ಟಿರಿ.

ಒಬ್ಬ ಮಾನ್ಯ ಸದಸ್ಯರು.— ಹಳ್ಳಿಯಲ್ಲಿ ಪರ್ಸೆಂಟೇಜ್ ಬರುವುದಕ್ಕೆ ಸಾಧ್ಯವಿಲ್ಲ.

ಶ್ರೀ ಕೆ. ಹೆಚ್. ರಂಗನಾಥ್.— ನನಗೆ ಗೊತ್ತಿದೆ, ನನಗೂ ಹಳ್ಳಿಯ ಗ್ರಾಮಾಂತರ ಪ್ರದೇಶದ ಪರಿಚಯವಿದೆ. ಅಷ್ಟೇ ಅಲ್ಲ, ಬೇರೆ ಸಾಧಾರಣ ವೀಕರ್ ಸೆಕ್ಷನ್ ಇದ್ದಾರೆ, ದುರ್ಬಲವರ್ಗದವರು ಇದ್ದಾರೆ, ಅವರಿಗೆ ಇದರಿಂದ ಅಡ್ಡಿ ಮಾಡುತ್ತೇವೇನೋ, ಅವರು ಮುಂದಕ್ಕೆ ಹೋಗದೇ ಇರತಕ್ಕ ರೀತಿಯಲ್ಲಿ ಅಡಚಣೆ ಆಗಬಹುದೇನೋ ಎನ್ನತಕ್ಕ ಅರಿವು ಕೂಡ ನನಗೆ ಇದೆ. ಆದರೂ ಕೂಡ ಏನಾದರೂ ಒಂದು ಅಭಿಪ್ರಾಯಕ್ಕೆ ಬರಬೇಕಾಗುತ್ತದೆ. ಇವತ್ತು ನಾನು ಹೇಳುವಾಗ ಅದಕ್ಕೆ ಹಿನ್ನೆಲೆ ಹೇಳಿದೆ. ಮೆಡಿಕಲ್‌ಗೆ ಷೆಡ್ಯೂಲ್‌ಕ್ಯಾಸ್ಟ್ ಕಟ್‌ಆಫ್ ಪರ್ಸೆಂಟೇಜ್ ೭೦ ಎಂದು ಇದೆ. ಆ ಮೇಲೆ ಎಂ. ಬಿ. ಬಿ. ಎಸ್. ಆಗಿರತಕ್ಕವರು ಮೆನಿ ಆರ್ ಅನ್‌ಎಂಪ್ಲಾಯ್ಡ್. ಷೆಡ್ಯೂಲ್‌ಕ್ಯಾಸ್ಟ್‌ನಲ್ಲಿ ಬಿ.ಇ. ಫಸ್ಟ್‌ಕ್ಲಾಸ್ ಬಂದಿರತಕ್ಕವರು ಇವತ್ತು ಅನ್ ಎಂಪ್ಲಾಯ್ಡ್ ಆಗಿ ಒಂದು ವರ್ಷ ಮಾತ್ರವಲ್ಲ ಒಂದು ವರ್ಷಕ್ಕಿಂತ ಜಾಸ್ತಿ ಇದ್ದಾರೆ. ಇಂತಹ ಸಿಚುಯೇಷನ್ ಕೂಡ ಬಂದಿದೆ. ಇದು ಎಲ್ಲಾ ವರ್ಗದಲ್ಲೂ ಬರುತ್ತಾ ಇರುವಾಗ ಏನು ಮಾಡಬೇಕು ಎಂದು ನಾನು ಹೇಳಿದೆ ಅಷ್ಟೆ.

ಶ್ರೀ ಬಿ. ಹೆಚ್. ಬನ್ನಿಕೋಡ್.— ಗ್ರಾಮಾಂತರ ವಿದ್ಯಾರ್ಥಿಗಳಿಗೆ ೧೦೦ಕ್ಕೆ ೫೦ ರಷ್ಟು ರಿಸರ್ವೇಷನ್ ಕೊಡಬೇಕು ಎಂದು ಹೇಳಿದೆ. ಆ ಮೇಲೆ ಅವರು ಪಡೆಯುವಂಥ ಅಂಕಿಗಳಿಗೆ ೨೫ ಹೆಚ್ಚಿಗೆ ಸೇರಿಸಬೇಕು ಎನ್ನುವ ಮಾತನ್ನು ಹೇಳಿದೆ, ಅದಕ್ಕೆ ಉತ್ತರ ಕೊಡಲಿಲ್ಲ.

ಶ್ರೀ ಕೆ. ಹೆಚ್, ರಂಗನಾಥ್.— ಕಾನೂನು ಪ್ರಕಾರ ತಜ್ಞರನ್ನು ವಿಚಾರಿಸಬೇಕು.

ಡಾ॥ ಎನ್. ಬಿ. ನಂಜಪ್ಪ.— ಮಾನ್ಯ ಅಧ್ಯಕ್ಷರೆ, ನಾವು ಎಲಿಮೆಂಟರಿ ಅಂಡ್ ಸೆಕೆಂಡರಿ ಎಜುಕೇಷನ್ ನೂರಕ್ಕೆ ನೂರು ಭಾಗಕ್ಕೂ ಕೊಡಬೇಕು ಎನ್ನುವುದು ನ್ಯಾಷನಲ್ ಪಾಲಿಸಿ ಆಗಿದೆ. ಇದು ಆಗಿರತಕ್ಕ ಸಂದರ್ಭದಲ್ಲಿ, ಆಗಿರತಕ್ಕ ಸ್ಕೂಲ್ಸ್ ಮತ್ತು ಕಾಲೇಜುಗಳ ಸಂಖ್ಯೆಯನ್ನು

ನೋಡಿದರೆ ನಮ್ಮ ಟೋಟಲ್ ಸ್ಟೂಡೆಂಟ್ಸ್ ಪಾಪ್ಯುಲೇಷನ್ ನೋಡಿದರೆ ಸರ್ಕಾರದ ವತಿಯಿಂದ ಎಲ್ಲರಿಗೂ ಕೂಡ ಸರ್ಕಾರದ ಕಾಲೇಜುಗಳಲ್ಲಿ ಮತ್ತು ಶಾಲೆಗಳಲ್ಲಿ ವಿದ್ಯಾಭ್ಯಾಸವನ್ನು ಕೊಡಿಸುವುದಕ್ಕೆ ಸಾಧ್ಯವೇ ?

ಇಂತಹ ಒಂದು ಪರಿಸ್ಥಿತಿ ಇರತಕ್ಕಂಥ ಸಂದರ್ಭದಲ್ಲಿ ಪ್ರೈವೇಟ್ ಎಜುಕೇಷನ್ ಇರಬಾರದು ಎನ್ನತಕ್ಕ ಕೂಗನ್ನು ನಾನು ಕೇಳುತ್ತಿದ್ದೇನೆ. ಪ್ರೈವೇಟ್ ಎಜುಕೇಷನ್ ಸಿಸ್ಟಮ್ ಇಲ್ಲದೇ ಪ್ರೈವೇಟ್ ನವರೇ ಇನ್‌ಸ್ಟಿಟ್ಯೂಷನ್ ನಡೆಸದೇ ಉತ್ತಮ ಶಿಕ್ಷಣವನ್ನು ಕೊಡುವುದಕ್ಕೆ ಸಾಧ್ಯವೇ ಎಂದು ಕೇಳುತ್ತೇನೆ. ಇನ್ನು ಎರಡನೆಯದು ಎಂದರೆ ಸುಮಾರು ೨೦ ವರ್ಷಗಳಿಂದ ಈ ರಾಜ್ಯದಲ್ಲಿ ೧೦–೧೫ ಬಿ.ಎಡ್. ಕಾಲೇಜುಗಳು ನಡೆಯುತ್ತಿವೆ. ಅದರಲ್ಲಿ ಪ್ರೈವೇಟ್ ಇನ್‌ಸ್ಟಿಟ್ಯೂಷನ್‌ನಲ್ಲಿ ಎಲ್ಲಾ ಟೀಚರ್ಸ್‌ಗೆ ಅಲ್ಲಿರತಕ್ಕ ಸ್ಟಾಫ್‌ಗೆ ಕೇವಲ ೨೫೦, ೩೦೦ ೪೦೦, ೫೦೦ ರೂಪಾಯಿಗಳನ್ನು ಕೊಟ್ಟು ಅವರಿಂದ ಪಾಠಪ್ರವಚನ ನಡೆಯುತ್ತಿದೆ. ಆ ಇನ್‌ಸ್ಟಿಟ್ಯೂಷನ್‌ಗೆ ಇಲ್ಲಿಯವರೆಗೆ ಯಾವ ಅನಂದಾನವನ್ನು ಕೂಡ ಕೊಟ್ಟಿಲ್ಲ. ಸರ್ಕಾರದ ನೀತಿ ಪ್ರಕಾರ ಎಲ್ಲದಕ್ಕೂ ಕೂಡ ಅನುದಾನ ಕೊಟ್ಟಿದರೂ ಕೂಡ ಇವುಗಳಿಗೆ ಏತಕ್ಕೆ ಕೊಟ್ಟಿಲ್ಲ ಎಂದು ಕ್ಲಾರಿಫಿಕೇಷನ್ ಕೇಳುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್ :—ಎಲ್ಲದಕ್ಕೂ ಅನುದಾನ ಕೊಡಬೇಕೆಂದು ಸರ್ಕಾರದ ನೀತಿ ಇಲ್ಲ. ಸರ್ಕಾರ ಕೊಡುವಾಗ ಯೋಚಿಸಿ ಅನುದಾನ ಕೊಡುತ್ತದೆ. ನಾನು ಆಗಲೇ ಹೇಳಿದ್ದೇನೆ. ಈಗ ಬಿ.ಎಡ್. ಕಾಲೇಜುಗಳು ತುಂಬಾ ಜಾಸ್ತಿಯಾಗಿವೆ. ಮತ್ತೆ ಮಾನ್ಯ ಸದಸ್ಯರು ಏನು ಹೇಳುತ್ತಿದ್ದರು ಅಂದರೆ ಟೀಚರ್‌ಗಳಿಗೆ ೩೦೦, ೪೦೦ ರೂಪಾಯಿಗಳನ್ನು ಕೊಡುತ್ತಿದ್ದಾರೆ ಎಂದು ಹೇಳಿದರು. ಶಾಲೆಗಳನ್ನು ಪ್ರಾರಂಭ ಮಾಡಿರುವವರು ಆ ರೀತಿಯಲ್ಲಿ ಎಕ್ಸ್‌ಪ್ಲಾಯ್ಟ್ ಮಾಡುತ್ತಿರುವುದರಿಂದಲೇ ಆ ಬಗ್ಗೆ ಯೋಚನೆ ಮಾಡುವ ವಿಚಾರ ಇದೆ, ತಕ್ಷಣಕ್ಕೆ ಅದಕ್ಕೆ ಉತ್ತರ ಹೇಳಲಿಕ್ಕೆ ಇಷ್ಟಪಡುವುದಿಲ್ಲ. ಇನ್ನು ಪ್ರೈವೇಟ್ ಶಾಲೆಗಳ ಬಗ್ಗೆ ತಾವು ಸದನಕ್ಕೆ ಹೇಳಿದ್ದೀರಿ.

ಶ್ರೀ ಬಿ. ಹೆಚ್. ಲಕ್ಷ್ಮಣಯ್ಯ :—ಸರ್ಕಾರದವರು ಶಾಲೆಗಳನ್ನು ಪ್ರಾರಂಭ ಮಾಡುವುದಕ್ಕೆ ಪರ್ಮಿಷನ್ ಕೊಡುವಾಗ ಆ ಏರಿಯಾದ ಜನರಿಗೆ, ಆ ಏರಿಯಾದ ಮಕ್ಕಳಿಗೆ, ಆ ಶಾಲೆಯು ಅನುಕೂಲ ಆಗಬೇಕು ಎನ್ನುವ ದೃಷ್ಟಿಯಿಂದ ಪರ್ಮಿಷನ್ ಕೊಡುತ್ತಿದ್ದೀರಿ. ಈಗ ಕೆಲವೊಂದು ಪ್ರತಿಷ್ಠಿತ ಶಾಲೆಗಳು ಏನಿವೆ ಅವು ನೂರಕ್ಕೆ ೮೦, ೮೫, ೯೦, ೯೫ ಮಾರ್ಕ್ಸ್ ತೆಗೆದುಕೊಂಡಿರತಕ್ಕ ಮಕ್ಕಳಿಗೆ ಮಾತ್ರ ಸೀಟುಗಳನ್ನು ಕೊಡುತ್ತಾರೆ. ಬೇರೆ ಮಕ್ಕಳಿಗೆ ಕೊಡುವುದಿಲ್ಲ. ಬೇರೆ ಮಕ್ಕಳು ಆ ಒಂದು ಬಡಾವಣೆಯ ಮಕ್ಕಳು ಅಲ್ಲವೇ ? ಈ ರಾಜ್ಯದ ಮಕ್ಕಳು ಅಲ್ಲವೆ, ಆದುದರಿಂದ, ಎಲ್ಲಾ ಶಾಲೆಗಳಲ್ಲೂ ಕಡ್ಡಾಯವಾಗಿ ಆವರೇಜ್ ಅಂಕಗಳನ್ನು ತೆಗೆದುಕೊಂಡು ಪಾಸ್ ಮಾಡಿರತಕ್ಕ ಮಕ್ಕಳಿಗೆ ೨೫ ಪರ್ಸೆಂಟ್ ಸೀಟುಗಳನ್ನು ಕೊಡಲಿಕ್ಕೆ ಸರ್ಕಾರ ಪ್ರಯತ್ನ ಮಾಡಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್ :—ತಾವು ಹೇಳುವಂತೆ ಕೊಡುವುದು ಬಹಳ ಕಷ್ಟವಾಗುತ್ತದೆ. ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಮಹದೇವ್ ಅವರು ಒಂದು ಪ್ರಮುಖವಾದ ಪ್ರಶ್ನೆಯನ್ನು ಪ್ರಸ್ತಾಪ ಮಾಡಿದ್ದರು, ನಾನು ಅದನ್ನು ಮರೆತ್ತಿದ್ದೆ. ಅವರು ಇಂಗ್ಲೀಷ್ ಶಾಲೆಗಳ ಬಗ್ಗೆ ಹೇಳಿದ್ದುದು. ಅದು ಪತ್ರಿಕೆಗಳಲ್ಲೆಲ್ಲಾ ಬಂದಿದೆ, ಇಂಗ್ಲೀಷ್ ಶಾಲೆಗಳ ಬಗ್ಗೆ ಅದು ಹಾಗೆ ಆಯಿತು, ಹೀಗೆ ಆಯಿತು ಎಂದು ಎಲ್ಲಾ ಹೇಳಿದ್ದಾರೆ. ಇವೊತ್ತು ರಾಜ್ಯದಲ್ಲಿ ೧,೫೪೬ ಇಂಗ್ಲೀಷ್ ಮೀಡಿಯಂ ಪ್ರಾಥಮಿಕ ಶಾಲೆಗಳು ಇರತಕ್ಕಂತಾದು. ಅದರಲ್ಲಿ ೪೮೮ ಅನ್‌ಆಥರೈಸ್ಡ್ ಇವೆ. ಸ್ವಾಮಿ, ಈ ಅನ್‌ಆಥರೈಸ್ಡ್ ಎಂದು ಶಬ್ದ ಬಳಸುತ್ತಿದ್ದೇವೆ ಅಷ್ಟೆ. ಅವರು ಅರ್ಜಿಕೊಟ್ಟಿದ್ದಾರೆ, ಅರ್ಜಿ ಇವರು ತೆಗೆದುಕೊಂಡಿದ್ದಾರೆ. ಎಲ್ಲವನ್ನೂ ಹಾಗೆ ಇಟ್ಟುಕೊಂಡು ಕಣ್ಣುಮುಚ್ಚಿಕೊಂಡು ಕುಳಿತುಕೊಂಡಿದ್ದಾರೆ ಇವರು ಸಹ ಕೆಲವು ಕಡೆ ಹೋಗಿ ಇನ್‌ಸ್ಪೆಕ್ಷನ್ ಕೂಡ ಮಾಡಿಕೊಂಡು ಬಂದಿದ್ದಾರೆ. ಈ ರೀತಿ ಎಲ್ಲಾ ಆಗಿ ಆಲ್‌ಮೋಸ್ಟ್ ಕನ್‌ಸೆಂಟ್ ಎನ್ನುವ ಪರಿಸ್ಥಿತಿ ಬಂದು ಈ ಒಂದು ವ್ಯವಹಾರ ನಡೆದಿದೆ. ಆದ್ದರಿಂದ ಮುಂದಿನ ವಾರ ತೀರ್ಮಾನ ತೆಗೆದುಕೊಂಡು ಇದಕ್ಕೆ ಏನಾದರೂ ಒಂದು ಗತಿ ಕಾಣಿಸಿಕೊಳ್ಳಲೇ ಬೇಕಾಗುತ್ತದೆ. ಆ ಪರಿಸ್ಥಿತಿಗೆ ನಾವು ತಳ್ಳಲ್ಪಟ್ಟಿದ್ದೇವೆ. ಅದರ ಬಗ್ಗೆ ನಾವು ಯೋಚನೆ ಮಾಡುತ್ತೇವೆ. ಆದರೆ ನಂತರ ಮುಂದಿನ ವರ್ಷದಿಂದ ೧೯೯೦–೯೧ ರಿಂದ ಏನು ಪ್ರಾರಂಭವಾಗುತ್ತದೆ ಯಾವುದೇ ಅಧಿಕಾರಿ ಅವನು ಈ ತರಹ ಕೆಲಸ ಮಾಡಿದರೆ ಅವನಿಗೆ ಉಗ್ರ ಶಿಕ್ಷೆಗೆ ಒಳಗಾಗುವುದು ಮಾಡಬೇಕಾಗುತ್ತದೆ. ಇನ್ನು ಮಾಲ್ ಪ್ರಾಕ್ಟೀಸ್‌ದು ಒಂದು ಇದೆ. ಕಾಪಿ ಮಾಡುವಂಥವರು ಚಾಕು, ಚೂರಿ ಹಿಡಿದುಕೊಂಡು ಬರತಕ್ಕವರಿದ್ದರು. ಪಾಪ, ಒಬ್ಬ ಪ್ರೊಫೆಸರ್‌ಗೆ ಹೊಡೆದು ಮಾಡಿರುವುದು ಎಲ್ಲಾ ಪತ್ರಿಕೆಯಲ್ಲಿ ತಾವೆಲ್ಲ ಓದಿರಬಹುದು. ಇದೆಲ್ಲಾ ಮಾಡಿದ್ದಾರೆ. ಕೆಲವು ಪ್ರಿನ್ಸಿಪಾಲರನ್ನು, ಲೆಕ್ಚರರನ್ನು ಕೆಲವು ಕಡೆ ಟ್ರಾನ್ಸ್‌ಫರ್ ಮಾಡಿದ್ದೇನೆ. ನನ್ನ ಕಿವಿಗೆ ಬಿದ್ದಿದೆ,

ಸತ್ಯಾಂಶ ಗೊತ್ತಿಲ್ಲ. ಇವರು ಕೂಡ ಇದಕ್ಕೆ ಸಹಾಯಕರಾಗಿದ್ದರೂ ಎನ್ನುವುದು ಬಂದಿದೆ. ಅದನ್ನು ತಡೆಗಟ್ಟಲಿಕ್ಕೆ ಏನು ಮಾಡಬೇಕೋ ಅದನ್ನು ಮಾಡಬೇಕಾಗುತ್ತದೆ. ಮತ್ತೆ ಖಾಸಗಿ ಶಾಲೆಗಳಲ್ಲಿಯೂ ಕೂಡ ಬಾಗಿಲು ಮುಚ್ಚಿ ಬರೆಸತಕ್ಕಂತಾದನ್ನು ಕೂಡ ನಾನು ಕೇಳಿದ್ದೇನೆ' ಪ್ರಶ್ನೆಪತ್ರಿಕೆಗಳು ಬಂದ ತಕ್ಷಣ ಹೊರಗಡೆ ಹೋಗುತ್ತವೆಯಂತೆ, ಹತ್ತು ನಿಮಿಷಗಳಲ್ಲಿಯೇ ರೆಡಿಮಾಡಿ ಜೆರಾಕ್ಸ್‌ಮಾಡಿ ಹಂಚಿಕೆ ಮಾಡುತ್ತಾರೆನ್ನುವ ವಿಷಯ ನನ್ನ ಗಮನಕ್ಕೆ ಬಂದಿದೆ''. ಇದನ್ನೆಲ್ಲ ನಿಲ್ಲಿಸಬೇಕಾಗುತ್ತದೆ. ಇದನ್ನು ದೊಡ್ಡ ಪ್ರಮಾಣದಲ್ಲಿ ನಿಲ್ಲಿಸಲಿಕ್ಕೆ ಏನಾದರೂ ಹೊಸದಾಗಿ ಕಾನೂನನ್ನು ತರಬೇಕಾಗುತ್ತದೆ. ಸರಕಾರ ಈ ಬಗ್ಗೆ ಯೋಚನೆ ಮಾಡುತ್ತದೆ.

ಅಧ್ಯಕ್ಷರು :—ಈಗ ಬೇಡಿಕೆಗಳನ್ನು ಮತಕ್ಕೆ ಹಾಕುತ್ತೇನೆ.

ಅಭಿಯಾಚನೆ ಕ್ರಮಾಂಕ 11—ಲೇಖನ ಸಾಮಗ್ರಿ ಮತ್ತು ಮುದ್ರಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೧ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಲೇಖನ ಸಾಮಗ್ರಿ ಮತ್ತು ಮುದ್ರಣಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೪,೦೮,೦೭,೦೦೦ ರೂಗಳಿಗಿಂತ ಮೀರಿದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೧೨—ಉಚ್ಚ ಶಿಕ್ಷಣ.

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೧ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಉಚ್ಚ ಶಿಕ್ಷಣಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೯೭,೮೩.೧೧,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೨೫,೦೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೧೩—ಯುವಜನ ಸೇವೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೦ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಯುವಜನ ಸೇವೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕೆ ರಾಜಸ್ವ ಖಾತೆಯಲ್ಲಿ ೧೨,೭೦,೫೩ ೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವು ಸೇರಿದಂತೆ ಮಂಜೂರು ಮಾಡಬೇಕೆಂದು.

ಅಭಿಯಾಚನೆ ಕ್ರಮಾಂಕ ೧೪—ಕಲೆ, ಸಂಸ್ಕೃತಿ ಮತ್ತು ಕನ್ನಡಾಭಿವೃದ್ಧಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೧ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕಲೆ, ಸಂಸ್ಕೃತಿ ಮತ್ತು ಕನ್ನಡಾಭಿವೃದ್ಧಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೫,೧೬,೧೫,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೧೫—ಪ್ರಾಥಮಿಕ ಶಿಕ್ಷಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೧ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೪,೩೬,೯೬,೬೨,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೧೬— ಸೆಕೆಂಡರಿ ಶಿಕ್ಷಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೧ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸೆಕೆಂಡರಿ ಶಿಕ್ಷಣಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೨,೩೪,೮೪,೫೧,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

ಪ್ರಸ್ತಾವವು ಅಂಗೀಕಾರವಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು.

ಅಧ್ಯಕ್ಷರು :—ಈಗ ಸದನ ಎದ್ದು ಮತ್ತೆ ಒಂದು ಗಂಟೆಯ ನಂತರ ಮತ್ತೆ ಸಮಾವೇಶಗೊಳ್ಳುವುದು.

(ಮಧ್ಯಾಹ್ನ ೨–೧೦ಕ್ಕೆ ಮುಕ್ತಾಯವಾಗಿ ಮತ್ತೆ ೩–೧೦ಕ್ಕೆ ಸೇರಲು ನಿಶ್ಚಯಿಸಿತು.)

ಸದನವು ೩–೩೦ಕ್ಕೆ ಸಮಾವೇಶಗೊಂಡಿತು

ಅಧ್ಯಕ್ಷರು.—ಶ್ರೀ ಎಸ್. ಎಂ. ಕೃಷ್ಣ ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ನೀಡಲಾದ ಮೌಖಿಕ ಉತ್ತರಗಳು

ಜಿಲ್ಲಾ ಪರಿಷತ್ತುಗಳಿಂದ ಅಧಿಕಾರಗಳನ್ನು ಹಿಂತೆಗೆದುಕೊಳ್ಳುವುದು

೭೯೯ ಶ್ರೀ ಕೆ. ಲಕ್ಕಪ್ಪ (ಕುಣಿಗಲ್).—ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್, ವಾರ್ತಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ಸರ್ಕಾರವು ಜಿಲ್ಲಾ ಪರಿಷತ್ತುಗಳಲ್ಲಿ ಹಣವಿಲ್ಲವೆಂಬ ಕಾರಣಕ್ಕಾಗಿ ಅವುಗಳಿಗೆ ವಹಿಸಿದ ಇಲಾಖೆಗಳನ್ನು ಹಿಂತೆಗೆದುಕೊಳ್ಳುವ ಉದ್ದೇಶವಿದೆಯೆ ?

ಆ) ಹಾಗಿದ್ದಲ್ಲಿ ಹಿಂತೆಗೆದುಕೊಳ್ಳುವ ಇಲಾಖೆಗಳು ಯಾವುವು ?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಕೆ. ಲಕ್ಕಪ್ಪ.—ಮಾನ್ಯ ಸಚಿವರು ನನ್ನ ಪ್ರಶ್ನೆಗೆ 'ಇಲ್ಲ' ಉದ್ಭವಿಸುವುದಿಲ್ಲ ಎಂದು ಹೇಳಿದ್ದಾರೆ. ಅದು ಉತ್ತರವಲ್ಲ,

ಶ್ರೀ ಎಂ. ವೈ. ಘೋರ್ಪಡೆ.—ಸ್ವಾಮಿ ತಮ್ಮ ಪ್ರಶ್ನೆಗೆ ಅದೇ ಉತ್ತರ.

ಶ್ರೀ ಕೆ. ಲಕ್ಕಪ್ಪ —ಉತ್ತರದಲ್ಲಿ . ಉದ್ಭವಿಸುವುದಿಲ್ಲ ' ಎಂದು ಹೇಳುವುದು ಉತ್ತರವಲ್ಲ,

ಶ್ರೀ ಎಂ. ವೈ. ಘೋರ್ಪಡೆ.—ಮಾನ್ಯ ಸದಸ್ಯರ ಪ್ರಶ್ನೆಗೆ ತಕ್ಕಂಥ ಉತ್ತರ ಕೊಟ್ಟಿದ್ದೇನೆ.

ಶ್ರೀ ಕೆ. ಲಕ್ಕಪ್ಪ.—ಮಾನ್ಯ ಸಚಿವರು ನನ್ನ ಪ್ರಶ್ನೆಯನ್ನು ಅರ್ಥ ಮಾಡಿಕೊಂಡಿಲ್ಲ ಎಂದು ಕಾಣುತ್ತದೆ.

ಶ್ರೀ ಎಂ. ವೈ. ಘೋರ್ಪಡೆ.—ಜಿಲ್ಲಾ ಪರಿಷತ್ತಿನಿಂದ ಕೆಲವು ಇಲಾಖೆಗಳನ್ನು ವಾಪಸ್ಸು ಪಡೆಯತಕ್ಕಂಥ ವಿಚಾರವು ಸರಕಾರಕ್ಕೆ ಇದೆಯೇ ? ಎಂದು ಕೇಳಿದ್ದಾರೆ. ಅದಕ್ಕೆ ಇಲ್ಲ ಎಂದು ಉತ್ತರದಲ್ಲಿ ಹೇಳಿದ್ದೇನೆ. ಆದರೂ ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗೆ ಉತ್ತರ ಕೊಟ್ಟಿದ್ದರೂ ಅವರು ಇನ್ನೂ ಹೆಚ್ಚು ಉತ್ತರವನ್ನು ನನ್ನವತಿಯಿಂದ ಅಪೇಕ್ಷೆ ಮಾಡಿರುವುದರಿಂದ ಕೆಲವು ಮಾತುಗಳನ್ನು ಹೇಳುತ್ತಾ ಇದ್ದೇನೆ. ಇದೊಂದು ಸಿದ್ಧಾಂತದ ಪ್ರಶ್ನೆ ಇದೆ. ಆ ಮಟ್ಟದಲ್ಲಿ ಯಾವ ಯಾವ ಕೆಲಸಗಳು ಆಗಬೇಕು, ಯಾವ ಯಾವ ಕೆಲಸಗಳನ್ನು ಅವರಿಗೆ ಕೊಡಬೇಕು ಅದನ್ನು ಕೊಟ್ಟಿದ್ದೇನೆ. ಒಂದು ವೇಳೆ ಜಿಲ್ಲಾ ಪರಿಷತ್ತಿನವರು ಕೆಲಸ ಮಾಡುವುದರಲ್ಲಿ ದೋಷ ಇದ್ದರೆ ಅದನ್ನು ಸೂಕ್ತ ರೀತಿಯಲ್ಲಿ ಸರಿಪಡಿಸುವಂಥ ಶಕ್ತಿ ಸಾಮರ್ಥ್ಯ ಸರಕಾರಕ್ಕೆ ಇದೆ. ಆ ದಿಸೆಯಲ್ಲಿ ತಕ್ಷಣ ಯಾವ ಮಟ್ಟದಲ್ಲಿ ಯಾವ ಕೆಲಸ ನಡೆಯಬೇಕು ಅದನ್ನು ಭದ್ರವಾಗಿ ಕಾಪಾಡಿಕೊಂಡು ಹೋಗುವ ಕೆಲಸ ಸರಕಾರದ್ದು. ಯಾವುದೇ ಕೆಲಸಗಳು ಜನರ ಸಮ್ಮುಖದಲ್ಲಿ ನಡೆದರೆ ಅಂಥ ಕೆಲಸಗಳು ಇನ್ನಷ್ಟು ದಕ್ಷತೆಯಿಂದ ನಡೆಯಲ್ಪಡುತ್ತವೆ, ಕಾರ್ಯಗತವಾಗುತ್ತವೆ ಎಂಬ ದೃಷ್ಟಿಯಿಂದ ನಾವು ಇದರಲ್ಲಿ ಏನಾದರೂ ದೋಷ ಬಂದ ತಕ್ಷಣ ಅದರ ಮೇಲೆ ಶೀಘ್ರ ಕ್ರಮ ತೆಗೆದುಕೊಳ್ಳುವುದು ಸರಿಯಲ್ಲ. ಇದು ಆ ಸಿದ್ಧಾಂತದ ಧೋರಣೆಯೂ ಅಲ್ಲ. ಪಂಚಾಯಿತ್ ರಾಜ್ಯ ಸಂಸ್ಥೆಗಳು ಬರುವುದಕ್ಕಿಂತ ಮುಂಚೆ ಹಳ್ಳಿಗಳ ಮಟ್ಟದಲ್ಲಿ ಒಂದು ಕಣ್ಣು ಇತ್ತು. ಅಲ್ಲಿಯ ಎಂ. ಎಲ್. ಎ. ಯವರು ಮಾತ್ರ ತಮ್ಮ ಕ್ಷೇತ್ರದ ಪ್ರತಿಯೊಂದು ಕೆಲಸವನ್ನು ನೋಡಿಕೊಳ್ಳುವಂಥ ಪ್ರಮೇಯ